ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಪ್ರೌಢ ಶಾಲಾ ಶಿಕ್ಷಕರಾಗಿ ಬಡ್ತಿ

ಶ್ರೀ ಮನೋಹರ ಐನಾಪೂರ : ಮಾನ್ಯ ಅಧ್ಯಕ್ಷಿಣಿಯವರೆ, ಪದವೀಧರ ತರಬೇತಿ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಪ್ರೌಢಶಾಲಾ ಸಹಾಯಕರ ಶಿಕ್ಷಕರ ಹುದ್ದೆಗೆ ಪದೋನ್ನತಿ (ಬಡ್ತಿ) ಕೊಡುವ ನಿಯಮವು ಜಾರಿಯಲ್ಲಿರುವುದು ನಿಜವೆ? ಹಾಗಿದ್ದರೆ ಈ ಬಡ್ತಿ ನೀಡುವ ಸಂಬಂಧಗಳಲ್ಲಿ ರೋಸ್ಟರ್ ನಿಯಮವನ್ನು ಪಾಲಿಸಲಾಗುತ್ತಿದೆಯೇ? ಇಲ್ಲದಿದ್ದರೆ ಇದಕ್ಕೆ ಕಾರಣಗಳೇನು? ರೋಸ್ಟರ್ ನಿಯಮಗಳನ್ನು ಎಂದಿನಿಂದ ಜಾರಿಗೆ ತರಲಾಗುವುದು?

ಶ್ರೀ ಎಂ. ವೀರಪ್ಪಮೊಯಿಲಿ : (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷಿಣಿಯವರೆ, ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರುಗಳ ಜೇಷ್ಠತಾ ಪಟ್ಟಿಯನ್ನು ವಿಭಾಗ ಮಟ್ಟದಲ್ಲಿ ವಿಭಾಗೀಯ ಸಹ ನಿರ್ದೇಶಕರುಗಳು ತಯಾರಿಸಿ ಬಡ್ತಿಗೆ ಮೀಸಲಿರುವ ಶೇಕಡ 25ರಷ್ಟು ಬಡ್ತಿಯನ್ನು ಅವರ ಜೇಷ್ಠತೆ ಹಾಗೂ ವಿದ್ಯಾರ್ಹತೆ ಮೇಲೆ ಪ್ರೌಢ ಶಾಲಾ ಶಿಕ್ಷಕರಾಗಿ ಬಡ್ತಿ ನೀಡಲಾಗುತ್ತಿದೆ.

ಈ ಬಡ್ತಿಗಳನ್ನು ನೀಡುವಾಗ ರೋಸ್ಟರ್ ಪದ್ಧತಿಯನ್ನು ಪಾಲಿಸಲಾಗುತ್ತಿಲ್ಲ. ಏಕೆಂದರೆ, ಸರ್ಕಾರಿ ಆದೇಶ ಸಂಖ್ಯೆ ಡಿಪಿಎಆರ್ 29 ಎಸ್‌ಪಿಸಿ 77 ದಿನಾಂಕ 27-4-78ರ ಪ್ರಕಾರ ನೇರವಾಗಿ ನೇಮಕಾತಿಯು ಶೇಕಡಾ $66\frac{2}{3}$ಹುದ್ದೆಗಳನ್ನು ಮಾಡುವಾಗ ಮಾತ್ರ, ಉಳಿದ ಶೇಕಡಾ $33\frac{1}{3}$ ಹುದ್ದೆಗಳಿಗೆ ರೋಸ್ಟರ್ ಪದ್ಧತಿಯನ್ನು ಪಾಲಿಸಬೇಕಾಗುತ್ತದೆ. ಆದರೆ ಪ್ರಸ್ತುತ ನೇಮಕಾತಿಗಳಲ್ಲಿ ನೇರ ನೇಮಕಾತಿ ಶೇಕಡಾ 75ರಷ್ಟು ಇದ್ದು, ಉಳಿದ ಶೇಕಡಾ 25ರ ಅಂಶವನ್ನು ಮಾತ್ರ ಬಡ್ತಿಯಿಂದ ತುಂಬಲಾಗುತ್ತಿರುವುದರಿಂದ ಸರ್ಕಾರಿ ಆದೇಶದ ಪ್ರಕಾರ ಈ ಹುದ್ದೆಗಳಿಗೆ ರೋಸ್ಟರ್ ಪದ್ಧತಿಯನ್ನು ಅನ್ವಯಿಸಲು ಬರುವುದಿಲ್ಲ.

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾ ನಿರ್ಣಯದ ಮೇಲಿನ ಚರ್ಚೆ

+ ಶ್ರೀ ಸಿ. ಬೈರೇಗೌಡ (ವೇಮಗಲ್) ಸನ್ಮಾನ್ಯ ಅಧ್ಯಕ್ಷಿಣಿಯವರೆ, ನಾನು ಶುಕ್ರವಾರ ಎನ್‌ಜಿಇಎಫ್ ಕಾರ್ಖಾನೆಯಲ್ಲಿ ನಡೆದಿರತಕ್ಕ ಕೆಲವು ವಿಚಾರಗಳ ಬಗ್ಗೆ ಮಾತನಾಡುತ್ತಿದ್ದೆ. ಕಾಸ್ಟ್ ಆಫ್ ಟ್ರೈನಿಂಗ್ ಚಾಪ್ಟರ್‌ನಲ್ಲಿ ಪುಟ-45ರಲ್ಲಿ ಓದುತ್ತಿದ್ದೆ. ವೇಳೆಯ ಅಭಾವದಿಂದ ಅಷ್ಟನ್ನೂ ಓದುವುದಕ್ಕೆ ಹೋಗುವುದಿಲ್ಲ. ಆದರೆ ಒಂದು ಮಾತ್ರ ಹೇಳುತ್ತೇನೆ. ಕಮಿಟಿಯವರು ಏನು ರೆಕ್‌ಮೆಂಡ್ ಮಾಡಿದ್ದಾರೆ ಅದರ ಬಗ್ಗೆ ಸದನದ ಗಮನವನ್ನು ಸೆಳೆಯುವುದಕ್ಕೆ ಇಷ್ಟಪಡುತ್ತೇನೆ. ಅಬ್ಸರ್ವೇಶನ್ಸ್ ಅಂಡ್ ರೆಕಮೆಂಡೇಶನ್ಸ್ ಪುಟ-49 ರಲ್ಲಿ ಈ ರೀತಿ ಇದೆ.

"The committee is distressed to note the infructuous expenditure of Rs.20.60 lakhs involving foreign exchange out go as a result of non-productionising the collabarated products.

A review of the reasons for such non-productionising indicated that adequate and authentic market survey was not conducted before going in for collaborations the economic ability was not properly assessed and technology colaborated was far from upgraded.

Such large number of cases of infructuous expenditure especially in a company manned by adequately qualified technical personnel including functional directors on the board reflects either the technical incompetency of there personnal or extranesous considerations prompting such collaborations.

ನಾನು ಇಲ್ಲಿ ಒತ್ತು ಕೊಡಬೇಕಾಗಿರತಕ್ಕಂಥಾದ್ದು ಏನೆಂದರೆ, ಏನು ಈ ಕೊಲಾಬರೇಷನ್ಸ್ ಮಾಡತಕ್ಕಂಥ ಸಂದರ್ಭದಲ್ಲಿ ಇವರು ಕೇವಲ ಅಲ್ಲಿರತಕ್ಕಂಥ ತಾಂತ್ರಿಕ ಅಭಿಪ್ರಾಯಗಳು ಮತ್ತು ತಾಂತ್ರಿಕತೆಯನ್ನು ಬಿಟ್ಟು ಬೇರೆ ಇದಕ್ಕೆ ಒತ್ತು ಕೊಟ್ಟು ಕೊಲಾಬರೇಶನ್ಸ್ ಅಗ್ರೀಮೆಂಟ್‌ನ್ನು ಮಾಡಿದ್ದಾರೆ ಎನ್ನತಕ್ಕಂಥಾದ್ದನ್ನು ತಮ್ಮ ಅಬ್ಸರ್ವೇಶನ್ಸ್ ಅಂಡ್ ರೆಕ್‌ಮಂಡೇಶನ್ಸ್‌ನಲ್ಲಿ ಕಮಿಟಿ ಆನ್ ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನವರು ಹೇಳಿದ್ದಾರೆ. ಇದರಲ್ಲಿ ಮುಖ್ಯವಾಗಿ ಗಮನಿಸಬೇಕಾದದ್ದು ಏನೆಂದರೆ, ಫಾರಿನ್ ಎಕ್ಸ್‌ಚೇಂಜ್ ಸುಮಾರು 20.60 ಲಕ್ಷ ರೂಪಾಯಿಗಳಷ್ಟು ಫಾರಿನ್ ಎಕ್ಸ್‌ಛೇಂಜನ್ನು ಇಲ್ಲಿ ದುರ್ವ್ಯವಹಾರ ಮಾಡಿದ್ದಾರೆ ಎನ್ನತಕ್ಕಂಥ ಮಾತನ್ನು ಕೂಡ ಕಮಿಟಿಯವರು ಹೇಳಿದ್ದಾರೆ. ಮತ್ತು extraneous consideration prompting such collaborations ಎನ್ನತಕ್ಕಂಥ ಮಾತನ್ನು ಸಹ ಹೇಳಿದ್ದಾರೆ. ಮಾನ್ಯ ಶ್ರೀ ಅನಂತಕೃಷ್ಣ ಅವರು ಇಲ್ಲಿ ಇದ್ದಾರೋ ಇಲ್ಲವೋ ಗೊತ್ತಿಲ್ಲ. ಏಕೆಂದರೆ, ಫೂಲಿಷ್ ಎನ್ನತಕ್ಕಂಥ ಪದವನ್ನು ಸಮಿತಿಯಲ್ಲಿ ಉಪಯೋಗಿಸಿದ್ದಾರೆ. ಹಿಂದೆ ಮಾತನಾಡುವಾಗ foolishness is not a criminal Act. ಎನ್ನತಕ್ಕಂಥ ಮಾತನ್ನು ಮಾನ್ಯ ಸದಸ್ಯರಾದ ಶ್ರೀ ಅನಂತಕೃಷ್ಣ ಅವರು ಹೇಳಿದರು. ಆದರೆ ಇಲ್ಲಿ - There is a criminal Act involving both foreign exchange and extraneous consideration also. This a criminal act - such is the chairman and managing director of NGEF.

Further the report says

The committee is astonished over the conflicting statements made by the company's representative during oral evidence and the written note in the matter of compensating lumpsum payment made to AEG in the collaboration for manufacture of Modular high voltage induction motors. While the oral evidence waw that the infructuous payment was compensated by AEG themselves while negotiating collaboration agreement for RCP Motors, the written stated that such compensation was from Toshiba while negotiating collaboration for Modular Motors. There is no logic or reason why an altogether different collaborator from a different country compensates an infructuous expenditure in another agreement. Moreover, as submitted to the Board of directors, reduction of fee payable to Toshiba was achieved for altogether different reasons. Hence committee believes that not only the infructuous expenditure was not compensated by anybody as claimed but the committee also was fed with factually incorrect information. Hence, the committee recommends that this should be viewed seriously and the guilty be properly punished seriously and the guilty be properly punished so that the tendency to mislead the committee with factually incorrect statements may altogether curbed.

Personal responsibility be fixed for payment of instalment fee even before the receipt of Technical documents for manufacture of thyrister convertors contravening the provisions in the agreement which authorised such payments only after receipt of technical documents vide clause 5(i)

ಈ ರೀತಿ ಬಹಳ ಗುರುತರವಾಗಿರತಕ್ಕಂಥ ಒಂದು ಆರೋಪವನ್ನು ಅಥವಾ ಒಂದು ವಿಷಯವನ್ನು, ಸತ್ಯಾಂಶವನ್ನು ಈ ಕಮಿಟಿ ಆನ್ ಪಬ್ಲಿಕ್ ಅಂಡರ್‌ಟೇಕಿಗ್ಸ್‌ನವರು ಇದರಲ್ಲಿ ಮಾಡಿದ್ದಾರೆ. ಮಾನ್ಯ ಅಧ್ಯಕ್ಷರೇ, ಇದರಲ್ಲಿ ಎರಡು ಕಂಪನಿಗಳು ಇವೆ. ಒಂದು ಜಪಾನ್ ದೇಶದ ಕಂಪನಿ ಮತ್ತು ಇನ್ನೊಂದು ಜರ್ಮನಿ ದೇಶದ ಕಂಪನಿ. ಜರ್ಮನಿ ದೇಶದ ಕಂಪನಿಗೆ 20.60 ಲಕ್ಷ ರೂಪಾಯಿಗಳನ್ನು ಫಾರೀನ್ ಎಕ್ಸ್‌ಚೇಂಚ್ ಕೊಟ್ಟಿರತಕ್ಕಂಥ ಹಣ ಏನಿದೆ ಅದನ್ನು ಜಪಾನ್ ದೇಶದ ಕಂಪನಿಯವರು ಕಾಂಪನ್‌ಸೇಟ್ ಮಾಡಿದ್ದಾರೆ ಎನ್ನತಕ್ಕಂಥ ವಾದವನ್ನು ಈ ಸಮಿತಿಯ ಮುಂದೆ ಹೇಳಿದ್ದಾರೆ ಎನ್ನತಕ್ಕಂಥ್ಥದನ್ನು ಈ ಸಮಿತಿಯವರು ಹೇಳಿದ್ದಾರೆ. ಶ್ರೀಮಾನ್ ಎನ್.ಕೆ. ಪ್ರಭಾಕರರಾವ್ ಅವರು ಯಾರನ್ನು ಬೇಕಾದರೂ ಕೂಡ, ಯಾವ ಸಂದರ್ಭದಲ್ಲಿ ಬೇಕಾದರೂ ಕೂಡ ಎಲ್ಲರನ್ನೂ ಮಿಸ್‌ಲೀಡ್ ಮಾಡತಕ್ಕದ್ದು, ಅದಕ್ಕೆ ಈ ಸದನದ ಉಪಸಮಿತಿ ಕೂಡ ಹೊರತಾಗಿಲ್ಲ. ಯಾರನ್ನು ಬೇಕಾದರೂ ಯಾವ ಸಂದರ್ಭದಲ್ಲಿ ಬೇಕಾದರೂ ಮಿಸ್‌ಲೀಡ್ ಮಾಡುವುದು ಮತ್ತು ತಪ್ಪು ಅಂಕಿ ಅಂಶಗಳನ್ನು ಕೊಡತಕ್ಕದ್ದು ಇವರಿಗೆ ಅಭ್ಯಾಸ್ಯವಾಗಿ ಬಂದಿದೆ. ಇಲ್ಲಿ ಆಶ್ಚರ್ಯ ಏನೆಂದರೆ, ಮೊನ್ನೆ ಈ ವಿಜಯನಗರ ಉಕ್ಕಿನ ಕಾರ್ಖಾನೆಯನ್ನು ಜಾಯಿಂಟ್ ಸೆಕ್ಟರ್‌ನಲ್ಲಿ ತೆಗೆದುಕೊಳ್ಳುವುದಕ್ಕೆ ಪಾರ್ಟನರ್ ಆಗಿ ತೆಗೆದುಕೊಳ್ಳುವುದಕ್ಕೆ ಶ್ರೀ ಪ್ರಭಾಕರರಾವ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿ ಆ ಸಮಿತಿಯ ವರದಿಯನ್ನು ಸರ್ಕಾರ ಒಪ್ಪತಕ್ಕಂಥಾದ್ದಕ್ಕೆ ನಾವು ಕೈಹಾಕಿದ್ದೇವೆ ಎನ್ನುವ ಮಾತನ್ನು ಹೇಳಿದ್ದಾರೆ. ಇವರು ಎಂತಹ ಪ್ರಭಾಕರ ರಾಯರು. ಸಮಿತಿಯವರು ಹೇಳಿದ್ದಾರೆ. ಅವರಿಗೆ ಲೆಕ್ಕವೇ ಇಲ್ಲ, ಯಾರನ್ನು ಬೇಕಾದರೂ ಮಿಸ್‌ಲೀಡ್ ಮಾಡಬಹುದು. ಫಾರಿನ್ ಎಕ್ಸ್‌ಚೇಂಜ್ ಅದು ಜಪಾನ್ ದೇಶವಾಗಬಹುದು, ಜರ್ಮನಿ ದೇಶವಾಗಬಹುದು. ಇವರು ಒಂದಕ್ಕೊಂದು ತದ್ವಿರುದ್ಧವಾದ ಹೇಳಿಕೆಗಳನ್ನು, ತದ್ವಿರುದ್ಧವಾದ ಮಾಹಿತಿಗಳನ್ನು ಸಮಿತಿಯ ಮುಂದೆ ಕೊಡತಕ್ಕವರು, ಇನ್ನು ಸಂಪುಟಕ್ಕೆ ಯಾವರೀತಿಯಾದ ವರದಿಯನ್ನು ಕೊಡುತ್ತಾರೆ ಎಂಬುದೇ ಸಂಶಯವಾಗಿದೆ. ಈ ವರದಿಯಲ್ಲಿ ಸಮಿತಿಯವರು ಏನು ಹೇಳಿದ್ದಾರೆ. ಇದಕ್ಕೆ ಸಂಪೂರ್ಣವಾದ ತನಿಖೆ ಮಾಡುವುದು ಅವಶ್ಯಕ. ಇದರ ಬಗ್ಗೆ ಇನ್ನೂ ಮುಂದೆ ಹೇಳುತ್ತೇನೆ. ಇವತ್ತಿನ ದಿವಸ ಅವರು ಮುಖ್ಯ ಕಾರ್ಯದರ್ಶಿಯಾಗಿದ್ದಾರೆ. ಯಾವ ಅಧಿಕಾರಿಯೂ ಕೂಡ ಇದರ ಬಗ್ಗೆ ತನಿಖೆ ಮಾಡುವ ಹವ್ಯಾಸಕ್ಕೆ ಕೈಹಾಕದಿರತಕ್ಕ ಪರಿಸ್ಥಿತಿ ಇದೆ. ಅದಕ್ಕೆ ನನ್ನ ಹತ್ತಿರ ಸಾಕಷ್ಟು ಉದಾಹರಣೆಗಳು ಇವೆ. ಅದನ್ನು ಮುಂದೆ ಹೇಳಲಿದ್ದೇನೆ. ಅದೇ ರೀತಿ ಬಹಳ ಗುರುತರವಾದ ಹೊಣೆಗಾರಿಕೆಯನ್ನು ಈ ಸಮಿತಿಯವರು ಇವರ ಮೇಲೆ ವಹಿಸಿದ್ದಾರೆ. ಇಲ್ಲಿ ಮತ್ತೊಂದು ಪ್ರಮುಖವಾದ ವಿಚಾರವನ್ನು ಹೇಳುತ್ತೇನೆ. ನಾನು ಎಲ್ಲವನ್ನೂ ಹೇಳುವುದಕ್ಕೆ ಹೋಗುವುದಿಲ್ಲ. ನಾನು ಕೊಟ್ಟಂಥ ಹೇಳಿಕೆಗೆ, ಡಿ.ಪಿ.ಎ.ಆರ್ ನಿಂದ ಒಂದು ತಪ್ಪು ಹೇಳಿಕೆಯನ್ನು ಕೊಡತಕ್ಕ ತಪ್ಪು ಮಾಹಿತಿಯನ್ನು ಕೊಡತಕ್ಕ ಸಾರ್ವಜನಿಕರನ್ನು ತಪ್ಪುದಾರಿಗೆ ಎಳೆಯತಕ್ಕ, ವಂಚನೆ ಮಾಡತಕ್ಕ ಪ್ರಯತ್ನ ನಡೆದಿದೆ. ಇದಕ್ಕೆ ಸಾರ್ವಜನಿಕರನ್ನು ತಪ್ಪುದಾರಿಗೆ ಎಳೆಯತಕ್ಕ, ವಂಚನೆಮಾಡತಕ್ಕ ಪ್ರಯತ್ನ ನಡೆದಿದೆ. ಇದಕ್ಕೆ ಸಂಬಂಧಪಟ್ಟಂತೆ, ಮತ್ತೊಂದು ಪ್ಯಾರಾವನ್ನು ಈ ಸದನದ ಗಮನಕ್ಕೆ ತರುತ್ತಿದ್ದೇನೆ.

ಪ್ಯಾರ 5.14 ಪುಟ 73 ರಲ್ಲಿ ಈರೀತಿ ಇದೆ.

The offer of AEG to transfer equity shares of the value of Rs.13.60 lakhs in AEG-GEF limited was not put up to the board of directors of NGEF ltd., for a collective decision after due discussion of the merits and de-merits. Neither Government was consulted before refusing acceptance of the offer.

ಇದಕ್ಕೆ ಬೋರ್ಡು ಮತ್ತೊಂದು ಏನೂ ಇಲ್ಲ. ಅವರೇ ಸರ್ವಾಧಿಕಾರಿ, ಅವರೇ ಸ್ವತಃ ತೀರ್ಮಾನ ತೆಗೆದುಕೊಳ್ಳುತ್ತಾರೆ. ಇವರಿಗೆ ಬೋರ್ಡು ಬೇಕಾಗಿಲ್ಲ. ಇನ್ನೂ ಮುಂದೆ ಓದಿದರೆ ಬಹಳ ಚೆನ್ನಾಗಿದೆ. The proposal of the shares was not put up to the board. The board is not aware of such a thing. Even the Government was not involved in the matter. ಸರ್ಕಾರವೂ ಇಲ್ಲ, ಬೋರ್ಡ್ ಆಫ್ ಡೈರೆಕ್ಟರ್‌ಸೂ ಇಲ್ಲ. ಬಹಳ ಗುರುತರವಾದ ವಿಚಾರವನ್ನು ಈ ಸಮಿತಿಯವರು ಹೇಳಿದ್ದಾರೆ.

In view of the vital implications involved, prudency demanded that decision on the important aspect affecting the very status of AEG-NGEF limited vis-a-vis NGEF Ltd., should have been correctly taken by the board of directors in a meeting . The committee strongly recomends that the imprudent decision of the MD should be enquiree in to

ಮಾನ್ಯ ಅಧ್ಯಕ್ಷರೆ, ನಾನಾಗಲೇ ಹೇಳಿದೆ. ನಾನು ದುರ್ವ್ಯವಹಾರ ನಡೆದಿರುತ್ತದೆ ಎಂದು ಕೊಟ್ಟಂಥ ಹೇಳಿಕೆಗೆ, ಇವರನ್ನು ಮುಖ್ಯ ಕಾರ್ಯದರ್ಶಿಯಾಗಿ, ಮಾಡಿದ್ದರ ತಪ್ಪಿಗೆ ಅದನ್ನು ಬಚ್ಚಿಡುವುದಕ್ಕೋಸ್ಕರ, ಆ ತಪ್ಪನ್ನು ಸಮರ್ಥನೆ ಮಾಡಿಕೊಳ್ಳುವುದಕ್ಕೋಸ್ಕರ ಫ್ಯಾಕ್ಟುಯಲಿ ಇನ್‌ಕರೆಕ್ಟ್ ಸ್ಟೇಟ್‌ಮೆಂಟನ್ನು ಕೊಟ್ಟಿದ್ದಾರೆ. The committee strongly recommends that the imprudent decision of the M.D should be enquired into. That is what they have said. ಇದಕ್ಕೆ ವಿಚಾರಣೆ ನಡೆಸಿದ್ದೀರಾ? ಇವತ್ತಿಗೂ ಏನಾಯಿತು ಎಂದು ಗೊತ್ತಿಲ್ಲ. ವಿಚಾರಣೆ ನಡೆಸಬೇಕೆಂದು ಈ ಸದನದ ಸಮಿತಿ ಹೇಳಿದೆ. ಅಂದರೆ, ಅದು ಈ ಸದನದ ಅಭಿಪ್ರಾಯ. ಇದನ್ನು ತಿರಸ್ಕಾರ ಮಾಡುವವರೆಗೆ ಆ ಸಮಿತಿಯ ವರದಿ ಈ ಸದನದ ಅಭಿಪ್ರಾಯವಾಗುತ್ತದೆ.

ಆದರೆ ಇಲ್ಲಿಯವರೆಗೆ ಈ ವರದಿಯನ್ನು ಈ ಸದನ ತಿರಸ್ಕಾರ ಮಾಡತಕ್ಕ ಕೆಲಸ ಮಾಡಿಲ್ಲ. ತಿರಸ್ಕಾರ ಮಾಡದೆ ಇರತಕ್ಕ ಸಂದರ್ಭದಲ್ಲಿ. ಅದು ಈ ಸದನದ ಅಭಿಪ್ರಾಯವಾಗುತ್ತದೆ, ಸದನದ ತೀರ್ಮಾನವೂ ಆಗುತ್ತದೆ. ಆದರೆ ಸರ್ಕಾರ ಮಾತ್ರ ನಿದ್ದೆ ಮಾಡುತ್ತಿದೆ. ಇವರನ್ನು ಮುಖ್ಯ ಕಾರ್ಯದರ್ಶಿಯಾಗಿ ಮಾಡಿರುವ ಕಾರಣದಿಂದ, ಕುಂಭಕರ್ಣನ ಜೊತೆಗೆ ಸ್ಪರ್ಧೆ ಮಾಡತಕ್ಕ ರೀತಿಯಲ್ಲಿ ಸರ್ಕಾರ ನಿದ್ದೆ ಮಾಡುತ್ತಿದೆ.

ಮಾನ್ಯ ಅಧ್ಯಕ್ಷರೇ ಇದೇ ಮುಂದಿನ ವಾರದಲ್ಲಿ ಹೇಳುತ್ತದೆ.

"If either NGEF of the Govrnment of Karnataka had accepted the offer of AEG, the AEG NGEF Ltd., would have then become a Government Company under section 617 of the Companies Act thereby subject to Legislative Review. By declining the offer of AEG, it has been effectively ensured that AEG NGEF Ltd., does not come under the Legislative Review"

ಇದಕ್ಕಿಂತ ಹೀನಾಯವಾಕದ ವಿಚಾರ, ಇದಕ್ಕಿಂತ ಹೀನಾಯವಾದ ಕೆಲಸ ಮಾಡಬೇಕಾಗಿಲ್ಲ ಕಾರಣವೇನೆಂದರೆ ಆ ಶೇರ್‌ಗಳನ್ನು ರಿಜೆಕ್ಟ್ ಮಾಡುವುದಕ್ಕೆ ಸರಕಾರಕ್ಕೂ ತಿಳಿಸದೇ ಬೋರ್ಡ್ ಆಫ್ ಡೈರೆಕ್ಟರ್ಸ್‌ಗೂ ತಿಳಿಸದೆ ಯಾರ ಗಮನಕ್ಕೂ ಕೂಡಾ ತರದೇ ಸ್ವತಃ ಇವರೇ ಅಂದರೆ ಮಾನ್ಯ ಪ್ರಭಾಕರರಾಯರೇ ತೀರ್ಮಾನ ಮಾಡಿದ್ದಾರೆ.

ಕಾರಣ ಇದು ಸರಕಾರದ ವಶಕ್ಕೆ ಬರುವಂತಹ ಕಂಪನಿ. ಕಂಪೆನಿ ಆಕ್ಟ್ ಪ್ರಕಾರ ಈ ಸದನಕ್ಕೆ ಅಂದರೆ ಲೆಜಿಸ್ಲೇಚರ್‌ಗೆ ಅದರ ಮೇಲೆ ವಿಚಾರಣೆ ನಡೆಸತಕ್ಕ ಅದರ ಆಗುಹೋಗುಗಳನ್ನು ಸ್ಕ್ರೂಟಿನಿ ಮಾಡತಕ್ಕ ಅಧಿಕಾರ ಬರುತ್ತಿತ್ತು. ಆದರೆ ಆ ಅವಕಾಶವನ್ನು ಕಳೆಯಬೇಕೆಂದು ಉದ್ದೇಶಪೂರ್ವಕವಾಗಿ ಯಾರಿಗೂ ತಿಳಿಸದೇ ಇವರೇ ಸ್ವತಃ ತೀರ್ಮಾನ ಮಾಡಿರುವುದರ ಬಗ್ಗೆ ಇಲ್ಲಿಯವರೆಗೆ ಸರಕಾರ ಏನು ಕ್ರಮ ತೆಗೆದುಕೊಂಡಿದೆ. ಮಾನ್ಯ ಬಸವಲಿಂಗಪ್ಪನವರು ನಗುತ್ತಿದ್ದಾರೆ. ಇದನ್ನೆಲ್ಲಾ ಓದಿನೋಡಬೇಕು ಇದೆಲ್ಲಾ ಏತಕ್ಕೆ ಎಂದು ತಿಳಿದುಕೊಂಡಿದ್ದೀರಿ. ಎಷ್ಟು ಹಣ ಖರ್ಚಾಗಿದೆ ಒಂದು ಸಮಿತಿ ಕೆಲಸ ಮಾಡಬೇಕಾಗಿದ್ದರೆ ಇದೆಲ್ಲಾ ಹುಡುಕಿ ಮಾಹಿತಿ ತರಿಸಿ ವರದಿ ತಯಾರು ಮಾಡಬೇಕಾದರೆ ಎಷ್ಟು ಸಾರ್ವಜನಿಕರ ಹಣ ಖರ್ಚಾಗಿದೆ. ಸಾರ್ವಜನಿಕರ ಹಣ ಅಲ್ಲಿ ಪೋಲಾಗುತ್ತಿದೆ. ಅಲ್ಲಿ ಹಣ ಪೋಲಾಗುತ್ತಿದ್ದರೆ ಅದನ್ನು ನೋಡಿ ನಗುತ್ತ ಕುಳಿತಿರತಕ್ಕಂಥಾದ್ದು ಮಾನ್ಯ ಬಸವಲಿಂಗಪ್ಪನವರ ಕೆಲಸ ಈ ಸರ್ಕಾರಕ್ಕೂ ಕೂಡ ಅದು ಈ ಹಣ ಪೋಲು ಮಾಡಬೇಕು, ಈ ರೀತಿ ಪೋಲಾದರೂ ಕೂಡಾ ಅದು ನಮಗೆ ಸಂಬಂಧಪಟ್ಟ ವಿಚಾರ ಅಲ್ಲ ಆ ವಿಚಾರದಲ್ಲಿ ನಾವು ವಿಚಾರ ಮಾಡಬೇಕಾಗಿರತಕ್ಕಂಥಾದ್ದು ಅನಾವಶ್ಯಕ ವಿಚಾರಣೆ ನಡೆಸಬೇಕಾಗಿರತಕ್ಕಂಥದ್ದು ಅನಾವಶ್ಯಕ ಎಂಬ ತೀರ್ಮಾನಕ್ಕೆ ಸರಕಾರದವರು ಇವತ್ತಿನ ದಿವಸ ಬಂದಿದ್ದಾರೆ. ಅದೇ ರೀತಿಯಲ್ಲಿ ಇಲ್ಲಿ ಉಪಯೋಗಿಸಿರತಕ್ಕಂಥಾದ್ದು ಕಾಂಪಿಟೇನ್ಸಿ. ಅವರ ಕಾಂಪಿಟೆನ್ಸಿ ನೋಡಿ ಮುಖ್ಯ ಕಾರ್ಯದರ್ಶಿಯವರನ್ನಾಗಿ ಮಾಡಿದ್ದಾರೆ. ಅವರ ಕಾಂಪಿಟೆನ್ಸಿ ಬಗ್ಗೆ ಈ ವರದಿಯಲ್ಲಿ ಹೇಳಿದ್ದಾರೆ. ವರದಿಯ ಪ್ಯಾರಾ 6:1:1 ರಲ್ಲಿ ಈ ರೀತಿ ಇದೆ.

"The Committee regrets to state that the Board of Directors of the Company have not brought credit to themselves by merely commenting repeatedly on high labour cost, excessive manpower and urging the need to scientifically study and assess the actual manpower requirements but did not ensure that these directions are actually executed by their subordinates authority charged with the duty and responsibility of simply implementing fully the collective decision of the Board"

Not only the C&MD and other members, the Board

ಇದಕ್ಕಿಂತ ಇನ್ನು ಯಾವರೀತಿಯಲ್ಲಿ ಹೇಳಬೇಕು. ಅಲ್ಲಿರತಕ್ಕಂಥ ಬೋರ್ಡ್ ಆಫ್ ಡೈರೆಕ್ಟರ್ಸ್ ಯಾವರೀತಿ ಕೆಲಸ ಮಾಡಿದೆ ಎಂಬುದನ್ನು ಹೇಳಿದ್ದಾರೆ. ಮ್ಯಾನೇಜಿಂಗ್ ಡೈರೆಕ್ಟರ್ ಮಾತ್ರವಲ್ಲ ಅಲ್ಲಿರತಕ್ಕಂಥವರು ಸರ್ಕಾರಿ ಅಧಿಕಾರಿಗಳು. ಅವರ ಹೆಸರುಗಳನ್ನು ಮುಂದೆ ಹೇಳುತ್ತೇನೆ. ಅದರಲ್ಲಿ ಸರ್ಕಾರದ ಸೀನಿಯರ್ ಸ್ಕೇಲ್ ಐ.ಎ.ಎಸ್. ಅಧಿಕಾರಿಗಳಾಗಿರತಕ್ಕಂಥವರು ಇದ್ದಾರೆ. ಅವರ ಹೆಸರುಗಳನ್ನು ಮುಂದೆ ಹೇಳುತ್ತೇನೆ. ಇವರಿರತಕ್ಕಂಥ ಬೋರ್ಡ್ ಬಗ್ಗೆ ಇಡೀ ನಮ್ಮ ರಾಜ್ಯದಲ್ಲಿರತಕ್ಕಂತ ಇಂಡಿಯನ್ ಅಡ್ಮಿನಿಸ್ಟ್ರೇಟೀವ್ ಸರ್ವೀಸ್ ಅಧಿಕಾರಿಗಳು ಏನಿದ್ದಾರೆ ಅವರ ನಡವಳಿಕೆಗಳ ಬಗ್ಗೆ ಘನತೆಯ ಬಗ್ಗೆ, ಕಾಂಪಿಟೆನ್ಸಿ ಬಗ್ಗೆ ಈ ಸಮಿತಿಯ ವರದಿಯಲ್ಲಿ ಬೆಳಕನ್ನು ಚೆಲ್ಲಿರತಕ್ಕಂಥದ್ದು ಇದೆ. ಮುಂದಕ್ಕೆ ಯಾವರೀತಿ ಪ್ರೊಡಕ್ಷನ್‌ನಲ್ಲಿ ಶಾರ್ಟ್‌ಫಾಲ್ ಆಗುತಿತ್ತು ಎನ್ನುವುದರ ಬಗ್ಗೆ ಸಮಿತಿ ಹೇಳಿದೆ ಪುಟ 83 ಪ್ಯಾರಾ 6.2.2 ನಲ್ಲಿದೆ ಇದರ ಬಗ್ಗೆ ನಾನು ಹಿಂದೆ ಹೇಳಿದ್ದೇನೆ. ವರ್ಷದ ಪ್ರಾರಂಭದಲ್ಲಿ ಅಂದರೆ ಮೊದಲ ಅರ್ಧ ವರ್ಷದಲ್ಲಿ ಅಲ್ಲಿ ಲೇಬರ್ ಫೋರ್ಸ್ ಟೆಕ್ನಿಕಲ್ಲಾಗಿ ಕಾಂಪಿಟೆನ್ಸ್, ಟ್ರೈನಿಂಗ್ ಇದ್ದರೂ ಕೂಡ ಉದ್ದೇಶಪೂರ್ವಕವಾಗಿ ಪ್ರೊಡಕ್ಷನ್ ಕಡಿಮೆ ಮಾಡತಕ್ಕಂಥಾದ್ದು ಮತ್ತು

ವರ್ಷದ ಇನ್ನುಳಿದ ಅರ್ಧ ಭಾಗದಲ್ಲಿ ಅದೇ ಕೆಲಸಕ್ಕೆ ಓವರ್ ಟೈಮ್ ಎಂದು ಕೆಲಸಗಾರರಿಗೆ ಕೊಡತಕ್ಕಂಥ ಅಭ್ಯಾಸ ಮಾಡಿದ್ದಾರೆ.

"6.22. Inspite of such heavy over time payments, the actual production (physical) in EHV Transformers, Switchgear Division, Silicon Power Diodes and Thyristor convertors fell-short of the annual targets fixed for acheivement whithout involving over time as indicated in para 2.07 and 2.13."

ಇದೇ ವಿಚಾರವನ್ನು ನಾನು ಹಿಂದೆ ಪ್ರಸ್ತಾಪ ಮಾಡಿದ್ದೇನೆ. ಓವರ್ ಟೈಮ್ ಕೊಟ್ಟರೂ ಸಹ ಏನು ಟಾರ್‌ಗೆಟ್ ಫಿಕ್ಸ್ ಮಾಡಿದ್ದರು ಆ ಟಾರ್‌ಗೆಟ್ ಕೂಡ ಫುಲ್ ಫಿಲ್ ಮಾಡುವುದಕ್ಕೆ ಆಗಲಿಲ್ಲ ನಾನು ಮೊದಲೇ ಹೇಳಿದ ಹಾಗೆ ಅದು ಸಾರ್ವಜನಿಕರ ಹಣ ಅಂದರೆ ಕಸ, ಕಸಕ್ಕಿಂತ ಕಡಿಮೆ ಅಂತಹ ರೀತಿಯಲ್ಲಿ ಈ ಕಂಪನಿಯನ್ನು ನಡೆಸಿಕೊಂಡು ಬಂದಂತಹ ಕೀರ್ತಿ ಶ್ರೀ ಮಾನ್ ಪ್ರಭಾಕರರಾವ್‌ರವರದ್ದು. ಅದೇ ರೀತಿಯಲ್ಲಿ ಇನ್ನು ಮುಂದಕ್ಕೆ ಬಹಳ ಸ್ವಾರಸ್ಯಕರವಾದ ವಿಚಾರಗಳನ್ನು ಹೇಳಿದ್ದಾರೆ. ಅದರಲ್ಲಿ ಒಂದನ್ನು ಮಾತ್ರ ನಾನು ಈ ಸಭೆಯ ಗಮನಕ್ಕೆ ತರುತ್ತೇನೆ. ಪುಟ 108ರಲ್ಲಿ ಪ್ಯಾರಾ 9.16ರಲ್ಲಿ ಈ ರೀತಿ ಇದೆ.

"It is most unfortunate that the Board of Directors merely derived satisfaction with repeatedly cautioning the Executive about the high inventory holdings and urging the need to bring down the levels without taking it to the logical conclusions. It was the primary duty of the Board to ensure that its Executive hears and implements its decisions taken for the good health of the Company. The Board has miserably failed in ensuring Management of the Company on the right lines. The committee recommends that Government should sufficiently caution all their Nominee Directors on the Board of public sector taht their duty does not end with merely cautioning or expressing apprehensions or technical teaching gospels but in ensuring proper implementation of the decisions taken in their collective wisdom and failure to do so would mean dereliction of their duty".

ಇದು ನಿಮಗೆ 1989ರಲ್ಲಿ ಬಂದಿದೆ ಎರಡು ಎರಡೂವರೆ ವರ್ಷಗಳು ಆಯಿತು. ಏನು ಮಾಡಿದ್ದೀರಿ. ಒಂದು ಸಣ್ಣ ಕಂಪೆನಿ ಕಿಯೋನಿಕ್ಸ್ ಈ ಕಂಪನೆಯ ವರದಿಯನ್ನು ನಿನ್ನೆ ನಮಗೆಲ್ಲಾ ಕೊಟ್ಟಿದ್ದಾರೆ. ಈ ವಿಷಯಕ್ಕೆ ನಾನು ಆ ಮೇಲೆ ಬರುತ್ತೇನೆ. ಆ ಒಂದು ಸಣ್ಣ ಕಂಪೆನಿಯಲ್ಲಿಯೂ ಕೂಡ ದೊಡ್ಡ ದೊಡ್ಡ ಅಧಿಕಾರಿಗಳು ಇದ್ದಾರೆ, ಭಾರಿ ಭಾರಿ ಅಧಿಕಾರಿಗಳು ಇದ್ದಾರೆ. ಮಾನ್ಯ ಬಸವಲಿಂಗಪ್ಪನವರನ್ನು ನಶ್ಯ ಮಾಡಿಕೊಂಡು ಮೂಗಿಗೆ ಏರಿಸಿಕೊಳ್ಳತಕ್ಕಂಥ ಶಕ್ತಿ ಇರತಕ್ಕ ಅಧಿಕಾರಿಗಳು ಕೂಡ ಇದ್ದಾರೆ. ನಶ್ಯ ಮಾಡಿಕೊಂಡು ಮೂಗಿಗೆ ಏರಿಸಿಕೊಳ್ಳತಕ್ಕಂಥ ಅಧಿಕಾರಿಗಳು ಇದ್ದಾರೆ. ಅದರಲ್ಲಿ ಮೊದನೆಯವರು ಶ್ರೀ ಮಾನ್ ಪ್ರಭಾಕರ್‌ರಾವ್‌ರವರು. ಅವರು ನಿಮ್ಮನ್ನು ನಶ್ಯ ಮಾಡಿಕೊಂಡು ಮೂಗಿಗೆ ಏರಿಸಿಕೊಂಡು ಬಿಡುತ್ತಾರೆ. ಇದನ್ನು ತಿಳಿದುಕೊಂಡು ನೀವು ಹುಷಾರಾಗಿರಿ. ಮಾನ್ಯ ಅಧ್ಯಕ್ಷರೇ ಇದೇ ರೀತಿಯಾದ ವರದಿಯನ್ನು 1971ರಲ್ಲಿ ಕೊಟ್ಟಿದ್ದಾರೆ. ಮತ್ತೆ 1974ರಲ್ಲಿ ಒಂದು ವರದಿ ಕೊಟ್ಟಿದ್ದಾರೆ. ಇವೆಲ್ಲವನ್ನು ಕೊಟ್ಟಿದ್ದರೂ ಕೂಡ ಸರ್ಕಾರ ಒಂದೊಂದು ಸಾರಿ ಒಂದು ಸುತ್ತೋಲೆಯನ್ನು ಹೊರಡಿಸುವುದು. ಅಷ್ಟಕ್ಕೆ ಸೀಮಿತ ಮಾಡಿದೆಯೇ ವಿನಃ ಸರಿಯಾದ ಕ್ರಮ ತೆಗೆದುಕೊಳ್ಳುವುದಕ್ಕೆ ಹೋಗಲೇ ಇಲ್ಲ. ಈ ರೀತಿ ಇಷ್ಟು ಕಠಿಣವಾದ ಭಾಷೆಯನ್ನು ಈ ಸಮಿತಿಯವರು

ಉಪಯೋಗಿಸಿದ್ದರೂ ಸಹ ಸರ್ಕಾರ ಎಚ್ಚೆತ್ತುಕೊಳ್ಳತಕ್ಕಂಥ ಪರಿಸ್ಥಿತಿಗೆ ಇನ್ನೂ ಹೋಗಿಲ್ಲ. ಇದನ್ನು ಓದುತ್ತಾ ಹೋದರೆ ಕೋಪ ಸಿಟ್ಟು ಜಾಸ್ತಿಯಾಗುತ್ತಾ ಹೋಗುತ್ತದೆ. ಮಾನ್ಯ ಬಸವಲಿಂಗಪ್ಪನವರಿಗೆ ಇದೆಲ್ಲ ಬರುವುದಿಲ್ಲ ಅವರು ಕೇಳುವುದಕ್ಕೆ ತಯಾರಿದ್ದಾರೆಂದು ಕಾಣುತ್ತದೆ. ಇದನ್ನು ನಾನು ಓದುತ್ತೇನೆ. ಪುಟ 109ರಲ್ಲಿ ಪ್ಯಾರ 9.18ರಲ್ಲಿ ರೀತಿ ಇದೆ.

"Avoidable dealys in despatches upto October, 1987 of manufactured goods valued Rs 120.00 lakhs treated as finished goods on 31st March 1987 ...."

1.05 ಪಿ.ಎಂ.

ಜಯರಾಮನ್ ಸಮಿತಿ ವರದಿಯಲ್ಲಿ ಕೂಡ ಹೇಳಿದ್ದಾರೆ.

"As per delivery schedules committed with customers have caused the Company an avoidable loss of interest estimated at not less than Rs. 61 lakhs. Similar delays in despatches between April, 1988 and December of goods treated as manufactured as on 31st March, 1988 as per delivery schedules committed with customers have also caused an avoidable loss of interest estimated at not less than Rs 75 lakhs. In view of this being an annual unhealthy phenomenon and the huge losses involved the need of the hour is not complacency bringing in procedural formalities but constructive efforts to persuade the customers to minimise the delays on their part while concurrently avoiding delays on the Company's part".

ಒಂದು ವರ್ಷದಲ್ಲಿ ಯಾವುದರಲ್ಲಿ ಉತ್ಪಾದನೆಯಾಗಿರಲಿಲ್ಲವೋ ಅದರಲ್ಲಿ ಉತ್ಪಾದನೆಯಾಗಿದೆಯೆಂದು ತೋರಿಸಿ ಬೇರೆ ಕಡೆಯಿಂದ ಹಣ ತರಿಸಿ, ಒಂದು ಅಕೌಂಟಿನಲ್ಲಿ 61 ಲಕ್ಷ ಮತ್ತೊಂದು ಅಕೌಂಟಿನಲ್ಲಿ 75 ಲಕ್ಷ ಒಟ್ಟು ಸುಮಾರು 1 ಕೋಟಿ 35 ಲಕ್ಷ ರೂಪಾಯಿಯಷ್ಟು ಹಣವನ್ನು ಇಲ್ಲಿ ನದಿಗೆ ಹಾಕಿದ್ದಾರೆ. ಅಂದರೆ ಕಸಕ್ಕೆ ಹಾಕಿದ್ದಾರೆ. ಆಗಲೆ ಹೇಳಿದ ಹಾಗೆ ಹಣ ಅಂದರೆ ಅವರು ಕಸವೆಂದು ತಿಳಿದುಕೊಂಡಿದ್ದಾರೆ. ಇದೇ ರೀತಿ ಈ ವರದಿಯಲ್ಲಿ ಇನ್ನೂ ಮುಖ್ಯವಾದಂಥ ಅಂಶಗಳಿದ್ದರೂ ಸಹಾ ನಾನು ಅದನ್ನೆಲ್ಲಾ ಹೇಳುವುದಕ್ಕೆ ಹೋಗುವುದಿಲ್ಲ. ಇವರಿಗೆ ಮತ್ತೊಂದು ಹವ್ಯಾಸ ಇದೆ. ಹಿಂದೆ ರಾಜ ಮಹಾರಾಜರ ಕಾಲದಲ್ಲಿ ಒಳ್ಳೆಯ ಸಂಗೀತ ಹಾಡಿದರೆ ನೃತ್ಯ ಮಾಡಿದರೆ ಜಹಗೀರು ಕೊಡುತ್ತಿದ್ದರು. ಅದೇ ರೀತಿ ಎನ್.ಕೆ. ಪ್ರಭಾಕರರಾವ್ ಅವರಿಗೂ ತಾವು ಜಹಗೀರು ಕೊಟ್ಟಿದ್ದೀರಿ ಬೆಂಗಳೂರು ಕನ್‌ಸಲ್ಟೆನ್ಸಿ ಕಂಪನಿ ಎನ್ನತಕ್ಕಂತಾದ್ದು ಅವರ ಜಹಗೀರು. ಅದು ಯಾವುದಕ್ಕೆ ಕನ್‌ಸಲ್ಟೆನ್ಸಿ ಅಂದರೆ

"The Company appointed the Bangalore Consultancy Group Private Limited as Consultant to the Company initially for a period of six months from 1st June, 1984 to advise on setting up a corporate planning system and for training programmes. The assignments on which advice and assistance were called for were broadly training programme on corporate planning including intiating a carporate planning programme selection of new projects, raising of debentures, organising training programmes for various departments, HRD

Development, tax planning, Company's relationship with AEG, a detailed study and recommendations for manpower planning etc.,"

ಇದು ಇದರ ಉದ್ದೇಶ. ಈ ಉದ್ದೇಶವನ್ನು ಸಾಧಿಸಲಿಕ್ಕಾಗಿ ಇವರನ್ನು ಅಪಾಯಿಂಟ್ ಮಾಡಿದ್ದಾರೆ. ಪ್ರಾರಂಭದಲ್ಲಿ ಕೇವಲ 6 ತಿಂಗಳಿಗೆ ಮಾತ್ರ ಇವರನ್ನು ಅಪಾಯಿಂಟ್ ಮಾಡಿದರು. ಇದರಲ್ಲಿ ಬಹಳ ಸ್ವಾರಸ್ಯ ಇದೆ. ಈ ಕಂಪೆನಿಯಲ್ಲಿ ಅಡ್ವೈಸ್ ಮಾಡತಕ್ಕಂಥವರು ಎಕ್ಸ್‌ಪರ್ಟ್ಸ್ ಇರಬೇಕು ಅವರಿಗೆ ಹಣ ಕೊಡುತ್ತಿದ್ದಾರೆ. ಎಕ್ಸ್‌ಪರ್ಟ್ ಕೊಡತಕ್ಕಂಥವರು ಅಡ್ವೈಸ್ ಯಾರೆಂದರೆ ಅದು ಬಹಳ ಸ್ವಾರಸ್ಯವಾಗಿದೆ. ಇದರ ಮೇಲೆ ಇನ್ನೂ ಒಂದಿದೆ. ಇದು ಗಿಣಿ ರಾಮನ ಕಥೆ ಇದ್ದಹಾಗೆ ಇದೆ. ಈ ಪ್ರಭಾಕರರಾವ್ ಅವರು ಏನು ಹೇಳುತ್ತಾರೋ ಅದಕ್ಕೆ ಹೌದು ಎಂದು ಅವರ ಕೆಳಗೆ ಇರತಕ್ಕವರು ಹೇಳುತ್ತಿದ್ದರು. ಇವರು ಕರಿಯದನ್ನು ಬಿಳಿ ಎಂದರೆ ಹೌದು ಸ್ವಾಮಿ ಎಂದು ಅವಿರಿಗಿಂತ ಎಫೆಕ್ಟೀವ್ ಆಗಿ ಹೇಳುತ್ತಾರೆ ಇವರು ಏನು ಹೇಳುತ್ತಾರೋ ಅದೇ ಹಾಡನ್ನು ಜನರಲ್ ಮ್ಯಾನೇಜರ್ ಹಾಡಿದ್ದಾರೆ.

"All the General Managers opined that the Bangalore Consultancy Group had rendered valuble assistance and given advise which was necessary and useful to NGEF

ಎನ್ನತಕ್ಕ ಮಾತನ್ನು ಜನರಲ್ ಮ್ಯಾನೇಜರ್ ಅವರು ಹೇಳಿದ್ದಾರೆ. ಅಂದರೆ ಇವರು ಯಾರು ಅಂತ?

"A review of the brief write-up on the profile of the Directors furnished to the Committee by the Company discloses that the Consultancy firm has three Directors. One of the Directors Sri PC Nayak a retired IAS officer does not possess any professional qualification or expertise, apart from his experience as a Senior Officer in the Government of India. Another Director Sri V.R. Gupta, is a retired Member of the Indian Revenue Services. His professional qualifications stated is a study of Contract Law at Horward University USA."

ಇವರು ಹಾರ್ಡ್‌ವರ್ಡ್ ಯೂನಿವರ್ಸಿಟಿಯಲ್ಲಿ ಕಾಂಟ್ರಾಕ್ಟ್ ಲಾ ಓದಿಕೊಂಡು ಬಂದಿದ್ದಾರಂತೆ

"Sri. P.R. Rao, the third Director is an experienced Engineer having retaired as Chairman and Managing Director of a public Sector Unit of Government of India."

ಇವರು ಅವರಿಗೆ ಎಕ್ಸ್‌ಪರ್ಟ್ ಒಪೀನಿಯನ್ ಕೊಡತಕ್ಕವರು ಬೇವಿನ ಮರಕ್ಕೆ ಹೊಂಗೆ ಮರ ಸಾಕ್ಷಿ, ಹೊಂಗೆ ಮರಕ್ಕೆ ಬೇವಿನ ಮರ ಸಾಕ್ಷಿ. ಇಲ್ಲಿ ಬೇಕಾಗಿರತಕ್ಕಂಥಾದ್ದು ಬೇರೆ. ನಾನು ಆಗಲೇ ಹೇಳಿದ್ದೇನೆ. ಇವರು ಕನ್ಸಲ್ಟೆನ್ಸಿಯನ್ನು ಯಾವ ಯಾವ ವಿಚಾರದಲ್ಲಿ ಮಾಡಬೇಕಾಗಿರತಕ್ಕಂಥಾದ್ದು ಎನ್ನುವುದನ್ನು ತಿಳಿಸಿದ್ದೇನೆ. ಆದರೆ ಈ ವಿಚಾರದಲ್ಲಿ ಪರಿಣತಿ ಇರತಕ್ಕಂಥವರು ಈ ಮೂವರಲ್ಲಿ ಯಾರೂ ಇಲ್ಲ. ಇದನ್ನು ನಾನು ಹೇಳುತ್ತಾ ಇಲ್ಲ. ವರದಿಯಲ್ಲಿ ಇದನ್ನು ಹೇಳುತ್ತಿದ್ದಾರೆ. ಅವರಿಗೆ ಬೇಕಾದಷ್ಟು ದುಡ್ಡು ಕೊಟ್ಟಿದ್ದಾರೆ. ಇದರ ಬಗ್ಗೆ ಕಮಿಟಿಯವರು ವರದಿಯ 123ನೇ ಪುಟ ಪ್ಯಾರಾ 10.32ರಲ್ಲಿ ಈ ರೀತಿ ಹೇಳುತ್ತಾರೆ.

"In the opinion of the Committee the suggestion of the Bangalore Consultancy Group to go in for debentures instead of cash credit from Nationalised Banks with Savings in interest does not involve any Ingenuity which is not available to any professionally qualified Finance Officer working within the Company"

ಇವರು ಸಲಹೆ ಮಾಡಿದ್ದು ಏನು ಅಂದರೆ ಎಲ್ಲಿಂದ ಹಣ ತರಬೇಕು ಎಂದರೇ ನೀವು ನ್ಯಾಷನಲೈಸ್ ಬ್ಯಾಂಕಿನಿಂದ ಸಾಲ ತೆಗೆದುಕೊಳ್ಳುವುದಕ್ಕೆ ಬದಲಾಗಿ ಡಿಬೆಂಚರ್ಸ್‌ಗೆ ಕೈ ಹಾಕಿ ಎಂದು ಹೇಳಿದ್ದಾರೆ. ಇದು ದೊಡ್ಡ ವಿಚಾರ ಅದ್ಭುತ ಪ್ರಪಂಚದ ಅದ್ಭುತಗಳಲ್ಲಿ ಅದ್ಭುತವನ್ನು ಸೃಷ್ಟಿ ಮಾಡತಕ್ಕಂಥ ಒಂದು ಅಡ್ವೈಸನ್ನು ಬೆಂಗಳೂರಿನ ಕನ್ಸಲ್ಟೆನ್ಸಿ ಗ್ರೂಪ್ ಎನ್.ಜಿ.ಇ.ಎಫ್. ಕೊಟ್ಟಿದ್ದಾರೆ. ಅದೇ ರೀತಿ ಮುಂದಿನ ಪ್ಯಾರಾದಲ್ಲಿ ಈ ರೀತಿ ಹೇಳುತ್ತಾರೆ.

"Continued retention of Bangalore Consultancy Group from January, 1985 to assist and advise substantially on the same subjects, in the opinion of the Committee, is only an act of giving them a gainfull Employment" ಇದನ್ನು ನಾನು ಹೇಳುತ್ತಾ ಇರತಕ್ಕದ್ದು ಖುಷಿ ಬಂದವರಿಗೆ ಜಹಗೀರು ಕೊಡಬೇಕು. ಕಂಪನಿ ದುಡ್ಡು ಎಲ್ಲಾದರೂ ಹೋಗಲಿ. ಸಾರ್ವಜನಿಕರ ದುಡ್ಡು ಎಲ್ಲಾದರೂ ಹೋಗಲಿ ಏನಾದರೂ ಆಗಲಿ. ಇವರಿಗೆ ಖುಷಿ ಬಂದವರಿಗೆ ಜಹಗೀರು ಕೊಡಬೇಕು.

"The Committee hopes that the Government would immediately take steps to avoid wasteful expenditure on such appointments. And direct the company to discontinue the services of Bangalore Consultancy Group Private Limited immediately." ಎನ್ನತಕ್ಕದ್ದನ್ನು ಕಮಿಟಿಯವರು ಕೇಳಿದ್ದಾರೆ. ಈಗ ಮಾಡಿದ್ದಾರೋ ಅಥವಾ ಲೇಟೆಸ್ಟಾಗಿ ಮಾಡಿದ್ದಾರೋ ನನಗೆ ಗೊತ್ತಿಲ್ಲ. ಎನ್.ಜಿ.ಇ.ಎಫ್.ನಲ್ಲಿ ನಡೆದಿರತಕ್ಕ ಎಲ್ಲ ವ್ಯವಹಾರಗಳ ಚಿತ್ರಗಳನ್ನು ಕೊಡುವುದಕ್ಕೆ ನಾನು ಹೋಗಿಲ್ಲ. ಸ್ವಲ್ಪ ಸ್ವಲ್ಪ ತುಣುಕುಗಳನ್ನು ಮಾತ್ರ ಕೊಡತಕ್ಕ ಪ್ರಯತ್ನ ಮಾಡಿದ್ದೇನೆ. ಇದಕ್ಕೆ ಸಂಬಂಧಪಟ್ಟ ಹಾಗೆ ಇನ್ನೂ ಒಂದು ಅಂದರೆ ಸಬ್ ಮರ್ಸಿಬಲ್ ಪಂಪಗಳ್ನು ಪಿ.ಹಚ್.ಇ. ಇಲಾಖೆಗೆ ಕೊಡತಕ್ಕಂಥ ಪ್ರಯತ್ನವನ್ನು ಎನ್.ಜಿ.ಇ.ಎಫ್. ಮಾಡಿತು. ಸಬ್ ಮರ್ಸಿಬಲ್ ಪಂಪನ್ನು ಎನ್.ಜಿ.ಇ.ಎಫ್.ನಲ್ಲಿ ತಯಾರು ಮಾಡಲಿಲ್ಲ. ಅದು ತಯಾರು ಆಗಿದ್ದು ದೂರದ ಅಹಮದಾಬಾದಿನಲ್ಲಿ. ಬೆಂಗಳೂರಿನಲ್ಲಿ ತಯಾರು ಮಾಡಿಸಿದ್ದರೆ ಹೋಗಲಿ ನಮ್ಮ ರಾಜ್ಯದ ಕನ್ನಡಿಗರಿಗೆ ಕೆಲಸ ಸಿಕ್ಕಿತು ಲಾಭ ಮಾಡಿರಬಹುದು ಎಂಬ ಸ್ಯಾಟಿಸ್‌ಫ್ಯಾಕ್ಷನ್ ಆದರೂ ಇರುತ್ತಾ ಇತ್ತು. ಆದರೆ ಇದನ್ನು ಇಲ್ಲಿ ಕೊಡಲಿಲ್ಲ. ಅಹಮದಾಬಾದಿನಲ್ಲಿರತಕ್ಕಂಥ ಈ ಪಂಪ್‌ಗಳನ್ನು ಸರಬರಾಜು ಮಾಡಿದರು. ಅವರು ಎನ್.ಜಿ.ಇ.ಎಫ್. ನೇಮ್‌ಪ್ಲೇಟ್ ಹಾಕುವುದು ಅದನ್ನು ಇಲಾಖೆಗಳಿಗೆ ಒದಗಿಸತಕ್ಕಂಥದ್ದು. ಇದರಲ್ಲಿ ದುರ್ವ್ಯವಹಾರ ನಡೆದು ಲೋಕಾಯುಕ್ತಕ್ಕೆ ಹೋಯಿತು. ಈ ಬಗ್ಗೆ ಲೋಕಾಯುಕ್ತದಲ್ಲಿರತಕ್ಕಂಥ ವರದಿಯ ತುಣುಕನ್ನು ಇಲ್ಲಿ ನಾನು ಉಲ್ಲೇಖ ಮಾಡುವುದಕ್ಕೆ ಇಷ್ಟಪಡುತ್ತೇನೆ.

"Sri N.K.Prabhakar Rao has abused his position as Managing Director, NGEF Bangalore to obtain gain to M/s Pullen pump Industires, ahmedabad by purchasing submersible pumps at a total price of Rs 2.3 crores and he has said that allegation under section 2(2) (a) of the Karnataka Lokayukta

Act has been substantiated and has recommended to the Government to intitiate disciplinary proceedings".

ಎನ್ನತಕ್ಕಂಥ ಮಾತನ್ನು ಲೋಕಾಯುಕ್ತದವರು ತಿಳಿಸಿದ್ದಾರೆ. ಆದರೆ ನಾನು ಇದನ್ನು ಸಾರ್ವಜನಿಕರ ಗಮನಕ್ಕೆ ತಂದಾಗ ಏನೂ ಇಲ್ಲ ಎಂದು ಹೇಳುತ್ತಾರೆ. ಇ ವಿಚಾರವನ್ನು ಬೇರೆ ರೀತಿಯಲ್ಲಿ ತಿರುಗಿಸುವುದಕ್ಕೆ ಕೂಡ ಪ್ರಯತ್ನ ನಡೆಯಿತು. ಇದನ್ನು ಅಡ್ವೋಕೇಟ್ ಜನರಲ್‌ರವರಿಗೆ ಕಳುಹಿಸೋಣ ಅವರ ಅಭಿಪ್ರಾಯಗಳನ್ನು ಪಡೆದುಕೊಳ್ಳೋಣ ಎಂಬ ಒಂದು ಪ್ರಯತ್ನವೂ ನಡೆಯಿತು. ಆದರೆ ಏನಾಯಿತೆಂದರೆ ಆ ವರದಿಯನ್ನು ಅಡ್ವೋಕೇಟ್ ಜನರಲ್‌ರವರಿಗೆ ಕಳುಹಿಸಿದರೋ ಇಲ್ಲವೋ ಗೊತ್ತಿಲ್ಲ ಆದರೆ ಇದರ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಂಡಿಲ್ಲ. ಲೋಕಾಯುಕ್ತ ಅವರ ಮೇಲೆ he has abused his position. ಎನ್ನುತಕ್ಕಂಥ ಮಾತನ್ನು ಹೇಳಿದ್ದಾರೆ. ಹೀಗಿರುವಾಗ ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳಲು ಇನ್ನೇನು ಕಾರಣಗಳು ಬೇಕಾಗಿವೆ? ಹಾಗಿದ್ದಲ್ಲಿ ಇವರ ಮೇಲೆ ಏಕೆ ಕ್ರಮವನ್ನು ತೆಗೆದುಕೊಳ್ಳಲಿಲ್ಲ ಎನ್ನುವುದು It is a million dollar question.

ಈ ಸರಕಾರ ಮಿಲಿಯನ್‌ಡಾಲರ್ ಪ್ರಶ್ನೆಯನ್ನು ಸಾಲ್ವ್ ಮಾಡತಕ್ಕಂಥ ಪರಿಸ್ಥಿತಿಯಲ್ಲಿ ಇಲ್ಲ. ಮತ್ತು ಇನ್ನೊಂದು ಬಹಳ ಗುರುತರವಾಗಿರತಕ್ಕಂಥ ವಿಷಯವೆಂದರೆ ನಾನು ಆಗಲೇ ಹೇಳಿದ್ದೇನೆ. ಪ್ರಭಾಕರರಾವ್‌ರವರು ಯಾವ ಸಂದರ್ಭದಲ್ಲಿ ಯಾರಬಗ್ಗೆ ಯಾವ ರೀತಿಯ ವರದಿಯನ್ನು ಬೇಕಾದರೂ ಹೇಳುತ್ತಾರೆ ಎಂದು ನಾನು ಹೇಳಿದ ಅದೇ ರೀತಿಯಲ್ಲಿ ಈ ಎ.ಇ.ಜಿ.ಇಂದ, ನಮ್ಮ ಡಿಫೆನ್ಸ್‌ಗೆ ಸಪ್ಲೈ ಆಗಿರತಕ್ಕಂಥ ಟಾರ್ಪೆಡೋಸ್ ಬಗ್ಗೆ ರಾಷ್ಟ್ರ ಮಟ್ಟದಲ್ಲಿಯೂ ಚರ್ಚೆಯಾಗಿದೆ ಮತ್ತು ಇಲ್ಲಿಯೂ ಕೂಡ ಚರ್ಚೆಯಾಗಿದೆ. ಅದರ ವಿವರಗಳ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಈ ಸದನದಲ್ಲಿ ಮತ್ತು ಮೇಲ್ಮನೆಯಲ್ಲಿ ಕೂಡ ಪ್ರಥಮವಾಗಿ ಏನು ಹೇಳಿದರು ಅಂದರೆ ಎ.ಇ.ಜಿ.ಯಿಂದ ನಮಗೆ ಕಮಿಷನ್ ಬರಬೇಕಾಗಿಲ್ಲ ಎಂದು ಹೇಳಿದರು. ಅದೇ ರೀತಿಯಲ್ಲಿ ಸರಕಾರ ಬದಲಾವಣೆಯಾದ ಮೇಲೆ ಒಂದು ಮಾತು ಬಂತು. ಮಾನ್ಯ ಮೊಯಿಲಿಯವರು ಈಗ ಇಲ್ಲಿ ಉಪಸ್ಥಿತರಿಲ್ಲ. ಅವರು ಇದ್ದಿದ್ದರೆ ಚೆನ್ನಾಗಿತ್ತು. ಅವರೇ ಹೇಳಿದ್ದಾರೆ. ಎ.ಇ.ಜಿ.ಯಿಂದ 2.63 ಕೋಟಿ ರೂಪಾಯಿಗಳಷ್ಟು ಕಮಿಶನ್ ನಮಗೆ ಬರಬೇಕಾಗಿದೆ ಎಂದು ಹೇಳಿದ್ದಾರೆ. ಅದನ್ನು ಅವರ ಪುಸ್ತಕದಲ್ಲಿ ಕೂಡ ತೋರಿಸಿದ್ದಾರೆ. ನನಗೆ ಇದೇ ಸದನದಲ್ಲಿ ಉತ್ತರ ರೂಪದಲ್ಲಿ ಕೂಡ ಬಂದಿದೆ. 2.63ಕೋಟಿ ರೂಪಾಯಿಗಳಷ್ಟು ಹಣ ನಮಗೆ ಕಮಿಶನ್ ಬರಬೇಕಾಗಿದೆ ಎಂದು ಅದರಲ್ಲಿ ಹೇಳಿದ್ದಾರೆ. ಇದನ್ನು ನೋಡಿದರೆ ಯಾರನ್ನು ಯಾವ ಸಂದರ್ಭದಲ್ಲಿ ಬೇಕಾದರೂ ಕೂಡಾ ಮಿಸ್‌ಲೀಡ್ ಮಾಡಬಹುದು ಎಂದು ಹೇಳಿದೆ. ಒಂದು ಸಂದರ್ಭ ಕಮಿಶನ್ ಬರಬೇಕಾಗಿಲ್ಲ ಎಂದೂ ಮತ್ತೊಂದು ಸಂದರ್ಭದಲ್ಲಿ ಹೌದು ಹಣ ಬರಬೇಕೆಂಬ ಮಾತನ್ನು ಹೇಳುತ್ತಾರೆ. ಅಂಥವರನ್ನು ಇವೊತ್ತಿನ ದಿವಸ ಮುಖ್ಯಕಾರ್ಯದರ್ಶಿಗಳನ್ನಾಗಿ ಮಾಡಿಕೊಂಡಿದ್ದೀರಿ. ಅಷ್ಟೇ ಅಲ್ಲ, ನನಗೆ ಇದೇ ಸದನದಲ್ಲಿ ಉತ್ತರಗಳು ಬಂದಿದ್ದಾವೆ. ಅವುಗಳು ಬಹಳ ಸ್ವಾರಸ್ಯಕರವಾಗಿವೆ. ಅದನ್ನು ಈ ಸಭೆಯ ಗಮನಕ್ಕೆ ತರಬೇಕಾದುದು ನನ್ನ ಕೆಲಸ ಎಂದು ಭಾವಿಸುತ್ತೇನೆ. ಅನ್‌ಸ್ಟಾರ್ಡ್ ಎಲ್.ಎ. ಕ್ವಶ್ಚನ್ ನಂಬರ್: 453 ಅದು 1989-90ನೇ ಇಸವಿಯದು ಆ ಪ್ರಶ್ನೆಯು ಈ ತರಹ ಇದೆ.

"What is the total value of product manufactured by NGEF, Bangalore during 1987-88 1988-89 and 1989-90? what is the total loss or profit earned during this period?" ಈ ಮೂರು ವರ್ಷಗಳಲ್ಲಿನ ಲಾಭ ಮತ್ತು ನಷ್ಟವನ್ನು ನಾನು ಕೇಳಿದ್ದೇನೆ. ಅದಕ್ಕೆ ಸರಕಾರದವರು ಉತ್ತರವನ್ನು ಕೊಟ್ಟಿದ್ದಾರೆ. 1989-90ಕ್ಕೆ 366.14 ಲಕ್ಷ ರೂಪಾಯಿಗಳ ಲಾಭ ಬಂದಿದೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ.

ಆದರೆ ನಗೆ ಒದಗಿಸಿರುವ ಮತ್ತೊಂದು ಉತ್ತರದಲ್ಲಿ 1989-90ಕ್ಕೆ ಎನ್.ಜಿ.ಇ.ಎಫ್.ದು 2466.95 ಲಕ್ಷ ಇದು ನನಗೆ ಅರ್ಥವಾಗುತ್ತಿಲ್ಲ ಏಕೆಂದರೆ ನಾವೆಲ್ಲ ರೈತರು ಹಳ್ಳಿಯಿಂದ ಬಂದವರು. ನನಗೆ ಕೊಟ್ಟಿರುವ ಉತ್ತರದಲ್ಲಿ 366.04 ಲಕ್ಷ ರೂಪಾಯಿಗಳು ಲಾಭ ಬಂದಿದೆ ಎಂದು ಒಂದು ಕಡೆ ಹೇಳುತ್ತಾರೆ ಇನ್ನೊಂದು ಕಡೆ ಅಂದರೆ ಮಾನ್ಯ ಬಸವರಾಜಪಾಟೀಲರಿಗೆ ವಿಧಾನಪರಿಷತ್ತಿನಲ್ಲಿ ಪ್ರಶ್ನೆ ಸಂಖ್ಯೆ 394ಕ್ಕೆ ತಾ-7-3-91ರಂದು ಉತ್ತರ ಆ ರೀತಿ ಕೊಡುತ್ತಾರೆ. ಅದರಲ್ಲಿ NGEF has earned a profit of 2466.95 lakhs in the year 1989-90 ಈಗ ಇವರ ಮೇಲೆ ಹಕ್ಕುಚ್ಯುತಿ ನಿರ್ಣಯವನ್ನು ನಾವು ತರಬೇಕಾಗುತ್ತದೆ. ಇದಕ್ಕೆ ನೋಟೀಸ್ ಕೊಡಬೇಕಾಗುತ್ತದೆ. ಈ ರೀತಿ ಉತ್ತರ ಕೊಡುವುದರಲ್ಲಿ ಆ ಸದನದಲ್ಲಾಗಲಿ ಇಲ್ಲಾಗಲಿ ಸದನಗಳನ್ನು ತಪ್ಪುದಾರಿಗೆ ಎಳೆಯತಕ್ಕಂಥ ಹವ್ಯಾಸ ಎನ್.ಜಿ.ಇ.ಎಫ್.ಗೆ ಹುಟ್ಟಿ ಬಂದಿರತಕ್ಕಂಥಾದ್ದು ಅದರಲ್ಲೇ? ಮುಳುಗಿ ಬಂದಿರತಕ್ಕಂಥಾದ್ದು ಎಂದು ಈ ಉತ್ತರ ಹೇಳಿರುವುರಿಂದ ಗೊತ್ತಾಗುತ್ತಿದೆ. ಆಮೇಲೆ ಇದರ ಇನ್ನೊಂದು ಕಂಪೆನಿ ಇದೆ. ಅದಕ್ಕೆ ಕರ್ನಾಟಕ ಟೆಲಿಕಾಂ ಲಿಮಿಟೆಡ್ ಎಂದು ಹೇಳುತ್ತಾರೆ ಕಿಯೋನಿಕ್ಸ್‌ನಲ್ಲಿ ಯಾವ ರೀತಿ ನಡೆದಿದೆಯೋ ಅದಕ್ಕಿಂತ ಹೊಲಸಾಗಿ ಕರ್ನಾಟಕ ಟೆಲಿಕಾಂನಲ್ಲೂ ನಡೆದಿದೆ. ಅಲ್ಲಿರುವವರೆಲ್ಲ ಕಾಂಟ್ರಾಕ್ಟ್‌ನಲ್ಲಿರುವವರು. ಅವರಿಗೆಲ್ಲ 6 ವರ್ಷ 7 ವರ್ಷ ಸರ್ವೀಸ್ ಆಗಿದೆ ಅವರಿಗೆ ಬೇಕಾದವರೇ ಕೋಳಿ ತನ್ನ ಮರಿಗಳನ್ನು ಹೇಗೆ ಕಾಪಾಡುತ್ತದೋ ಆ ರೀತಿ ಪ್ರಭಾಕರರಾಯರು ಯಾವ ಕಡೆ ಹೋದರೂ ಅಲ್ಲಲ್ಲಿ ಮರಿಗಳನ್ನು ಹಾಕುತ್ತಾರೆ. ಆ ಮರಿಗಳನ್ನು ಪೋಷಣೆ ಮಾಡುವುದೇ ಅವರ ಮುಖ್ಯವಾದ ಕೆಲಸ. ಆ ಮರಿಗಳು ಕರ್ನಾಟಕ ಟೆಲಿಕಾಂ ಲಿಮಿಟೆಡ್ 6 ವರ್ಷ 7 ವರ್ಷ ದಿಂದ ಕಾಂಟ್ರಾಕ್ಟಿನಲ್ಲಿದೆ. ನಾನು ಆ ಕಂಪನಿ ಬಗ್ಗೆ ಅಧ್ಯಯನ ಮಾಡಿಲ್ಲ ಬ್ಯಾಲೆನ್ಸ್ ಶೀಟನ್ನೂ ಅಧ್ಯಯನ ಮಾಡುವುದಕ್ಕೆ ಹೋಗಿಲ್ಲ. ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್ ಬಗ್ಗೆ ಬಂದಾಗ ನೋಡೋಣ ಇದೇ ರೀತಿ ಬಹಳ ಗುರುತರವಾದುದ್ದೆಂದರೆ 1988-89ಕ್ಕೆ ಇಲ್ಲಿ ನನಗೆ ಕೊಟ್ಟಿರುವ ಉತ್ತರದಲ್ಲಿ ನಷ್ಟ ಎಷ್ಟಿದೆ ಎಂದರೆ ಕೇವಲ 13 ಕೋಟಿ ಎಂದು ಹೇಳಿದ್ದಾರೆ ಆದರೆ ಇನ್‌ಕಂಟ್ಯಾಕ್ಸ್ ಇಲಾಖೆಗೆ ಇವರು ರಿಟರ್ನ್ಸ್ ಫೈಲ್ ಮಾಡಿದ್ದಾರೆ. ಇದು ಅದರ ಕಾಪಿ ಅದನ್ನು ಇಲ್ಲಿ ಓದಬೇಕಾದ ಅವಶ್ಯಕತೆ ಇದೆ.

"Consequent upon the revision of accounts for the financial year 1988-89, the income tax return has to be revised and filed with the Deputy Commissioner of Income Tax, Special Range II, Bangalore. Accordingly, a revised return prepared. As per the revised return the loss for the year 1988-89 as per income tax rules, works out to Rs. 28,89,01,546/-

ಇದು ಫೈಲ್‌ನಲ್ಲಿರತಕ್ಕಂಥ ಇನ್‌ಕಂ ಟ್ಯಾಕ್ಸ್ ರಿಟರ್ನ್ ಕಾಫಿ. ಆದರೆ ಈ ಸದನಕ್ಕೆ ಹೇಳಿರತಕ್ಕಂಥದ್ದು ಮತ್ತು ಅವರು ಪುಸ್ತಕದಲ್ಲಿ ಅಚ್ಚು ಹಾಕಿಸಿಕೊಂಡಿರತಕ್ಕಂಥದ್ದು ಕೇವಲ 13 ಚಿಲ್ಲರೆ ಕೋಟಿ ರೂಪಾಯಿ ಮಾತ್ರ ನಷ್ಟವಾಗಿದೆ ಎನ್ನತಕ್ಕಂಥದ್ದು ಅವರ ಲೆಕ್ಕದ ಪ್ರಕಾರ ಈ 28 ಕೋಟಿ ರೂಪಾಯಿಗಳ ಜೊತೆಗೆ ಹಿಂದಿನ ವರ್ಷ ನಾಲ್ಕು ಕೋಟಿ ರೂಪಾಯಿಯಷ್ಟು ಲಾಭ ಬಂದಿದೆ. ಆ ಲಾಭವನ್ನೂ ತೆಗೆದುಕೊಂಡರೆ ನೆಟ್ ಲಾಸ್ 32 ಕೋಟಿ ರೂಪಾಯಿಗಳು 1988-89ನೇ ಸಾಲಿಗೆ ಆಗಿದೆ. 32 ಕೋಟಿ ರೂಪಾಯಿಗಳಷ್ಟು ನಷ್ಟವಾಗಿದ್ದರೆ. ಈ ಸದನಕ್ಕೂ ಮತ್ತು ಸಾರ್ವಜನಿಕರಿಗೂ ತಿಳಿಸಿರುವುದು ಎಷ್ಟು ಎಂದರೆ ಕೇವಲ 13 ಕೋಟಿ ರೂಪಾಯಿ ಚಿಲ್ಲರೆ ಹಣ ನಷ್ಟವಾಗಿದೆ ಎನ್ನತಕ್ಕಂಥ ಮಾತನ್ನು ತಪ್ಪು ಮಾಹಿತಿಯನ್ನು ತಪ್ಪು ವರದಿಯನ್ನು ಸದನಕ್ಕೆ ನೀಡಿದ್ದಾರೆ ಸಾರ್ವಜನಿಕರಿಗೂ ನೀಡಿದ್ದಾರೆ. ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇ ರೀತಿ ಜಯರಾಮನ್

ಕಮಿಟಿ ರಿಪೋರ್ಟ್ ಬಗ್ಗೆ ಇತ್ತೀಚೆಗೆ ಬೋರ್ಡ್ ಆಫ್ ಡೈರೆಕ್ಟರ್ಸ್ ಮೀಟಿಂಗ್‌ನಲ್ಲಿ ಕೂಡಾ ಚರ್ಚೆಯಾಗಿದೆ ಅವರು ತೀರ್ಮಾನವನ್ನು ಮಾಡಿದ್ದಾರೆ ಅವರು ಏನು ತೀರ್ಮಾನ ಮಾಡಿದ್ದಾರೆ. ಎಂದರೆ ಅವತ್ತಿನ ದಿವಸ ಮೀಟಿಂಗ್‌ಗೆ ಯಾರ್‍ಯಾರು ಅಟೆಂಡ್ ಆಗಿದ್ದರು ಎಂದರೆ

"proceedings of the 195th meeting of the Board of Directors of NGEF Ltd., held on friday the 15th February 1991 at 3.00 P.M., in the Board of NGEF Bangalore Sales Office, Kasturb Road, Bangalore-560001. ಎಂದು ಇದರಲ್ಲಿ ಹಾಕಿದ್ದಾರೆ. Members present

Sri B.S.Muddappa, chairman and Managing Director, J.Alexander, C.Gopal Reddy, K.K.Taneja, R.M.Agarwal, B.Sundara Rao, G.R.Sarma, T.R.Krishana Gowda And A.N. Srivathsa ಇವರುಗಳು ಆ ಬೋರ್ಡ್ ಮೀಟಿಂಗ್‌ನಲ್ಲಿ ತೀರ್ಮಾನ ಮಾಡಿದ್ದಾರೆ. ಏನು ತೀರ್ಮಾನ ಮಾಡಿದ್ದಾರೆ ಅದನ್ನು ಕೂಡ ಓದತಕ್ಕಂಥದ್ದು ಸೂಕ್ತ ಎಂದು ನನಗನ್ನಿಸುತ್ತದೆ. I quote "subject No.2570 recommendations of Shri. S.Jayaraman's Committee report regarding The Chairman informed the Board that the Establishment Committee had recommended to drop further disciplinary proceedings initiated against Sriyuths: K.G.Shanumukhappa, K.Heeralal, C.L.Vishwanath and B.R.Shanth Kumar, Executive Directors, on the basis of the report of Shri S.Jayaraman having regard to the following

1) Advance crediting and accounting of production was on account of not following appropriate systems and procedures. This has been due to the practices that were adopted over a period of years.

2) there was no malafide on the part of any individual officer of the Company nor had anybody benefitted by the system of advance crediting and accounting of production.

3) Officers who had put in more than 20 to 25 years of service and had reached the highest levels in the Company were sought to be proceeded against at the very end of their service in the company. This had resulted in the considerable demoralisation among the officers;

4) To avoid recurrence of such practices necessary steps had been taken to modify the systems and procedures.

After some discussion Board accepted the recommendations of the Establishment Committee and accordingly decided to drop further disciplinary proceedingsinrespectofSriyuths; K.G.Shanmukhappa, K.Heeralal, C.L.Vishwanath and B.R.Shanthakumar. The Board further desired that measures taken to implement the suggestion of Shri. S.Jayaraman in his report for avoidance of advance crediting should be reported to the Board." ಇದಕ್ಕೆ ನಾನು ಏನು ಹೇಳಬೇಕೋ ಗೊತ್ತಿಲ್ಲ, 32 ಕೋಟಿ ರೂಪಾಯಿಯಷ್ಟು ಹಣ ಅಲ್ಲಿ ನಷ್ಟವಾಗಿದೆ ಅದಕ್ಕೆ ಕಾರಣ ಕರ್ತರು ಯಾರು ಎನ್ನುತಕ್ಕದ್ದನ್ನು ಕೇವಲ ಜಯರಾಮ್‌ರವರು ಕೊಟ್ಟಿರತಕ್ಕ ವರದಿ ಮಾತ್ರವಲ್ಲ ಪಬ್ಲಿಕ್ ಅಂಡರ್ ಟೇಕಿಂಗ್ಸ್ ಕಮಿಟಿಯ ವರದಿಯು

ಸಹ ಇದೆ. ಇಷ್ಟೆಲ್ಲ ಇದ್ದರೂ ಕೂಡ ವಿಚಾರಣೆ ವರದಿ ಇದ್ದರೂ ಕೂಡ ಮತ್ತು ಈ ಸದನದ ಸಮಿತಿಯ ವರದಿ ಇದ್ದರೂ ಕೂಡ ಇವತ್ತು ಇಲ್ಲಿ ಇರತಕ್ಕಂಥಹ ಅಧಿಕಾರಿಗಳನ್ನು ಕ್ಷಮಿಸಬೇಕಂತೆ ಅವರಿಗೆ 25-30 ವರ್ಷ ಸರ್ವೀಸ್ ಆಗಿದೆಯಂತೆ ಕತ್ತೆಗೂ ಕೂಡ ವಯಸ್ಸು ಸಾಕಷ್ಟು ಆಗುತ್ತದೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಹೆಲ್ಮೆಟ್ ಇಲ್ಲದೇ ಹೋದರೆ 100 ರೂಪಾಯಿ ದಂಡವನ್ನು ಸ್ಪಾಟ್‌ನಲ್ಲಿ ಹಾಕುತ್ತಾರೆ. ಆಗ ಲಾಸ್ ಆಗಿರುವುದನ್ನು ಬಿಟ್ಟುಬಿಟ್ಟು ಈಗ ಹಿಡಿಯುವದಕ್ಕೆ ಬಂದಿದ್ದರಲ್ಲಾ ಇದಕ್ಕೆ ಏನು ಕಾರಣ?

ಶ್ರೀ ಸಿ. ಬೈರೇಗೌಡ : ಅಲ್ಲಿ ಬೋರ್ಡ್ ಮೀಟಿಂಗ್‌ನಲ್ಲಿ ಮುದ್ದಪ್ಪನವರು ಇದ್ದರು. ನೋಡುವುದಕ್ಕೆ ಅವರು ಮುದ್ದುಮುದ್ದಾಗಿ ಕಾಣುತ್ತಾರೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆಮೇಲೆ J Alexander, he is not Mr. J.Alexander he is Alexander the great. ಏಕೆಂದರೆ ಲೋಕಾಯುಕ್ತದ ಬಲೆಗೆ ಸಿಕ್ಕಿದವರಲ್ಲಿ ಇಡೀ ಇಂಡಿಯಾದಲ್ಲಿ ಅವರದೇ highest case ಮತ್ತೇ ಗೋಪಾಲರೆಡ್ಡಿಯವರು ಅವರು ಮಾತನಾಡಿದರೆ ಹೇಗೋ ಎಂದು ಅವರು ಬಾಯಿಯನ್ನೇ ಬಿಡುವುದಿಲ್ಲ. ಗೋಪಾಲ ರೆಡ್ಡಿಯವರು ಮಾತನಾಡಿದರೆ ಬಾಯಿಯಲ್ಲಿ ಮುತ್ತು ಉದುರುತ್ತದೆ. ಆಮೇಲೆ ತನುಜಾ ಅಗರ್‌ವಾಲ್ ಸುಂದರರಾವ್ ಇವರುಗಳು ಯಾರು ಎಂದು ನನಗೆ ಗೊತ್ತಿಲ್ಲ. ಆಮೇಲೆ ಜಿ.ಆರ್. ಶರ್ಮಾ ಅವರ ವಿಚಾರ ಹೇಳಬೇಕಾಗುತ್ತದೆ. ಏಕೆಂದರೆ ಇವರು ಎನ್‌ಜಿಇಎಫ್‌ನಲ್ಲಿ ಬೋರ್ಡ್ ಆಫ್ ಡೈರೆಕ್ಟರ್ ಆಗಿದ್ದರು. ಮತ್ತೆ ಪ್ರಭಾಕರರಾವ್ ರವರ ಕೃಪಾಕಟಾಕ್ಷದಿಂದ ಎಇಜಿ, ಎನ್‌ಜಿಎಫ್‌ಅನ್ನು ಯಾವ ರೀತಿ ಮಾಡಿ ಇದನ್ನು ಕೊಟ್ಟಿದ್ದಾರೋ ಅದರಲ್ಲಿ ಇವರು ವೆಸ್ಟ್ ಜರ್ಮನ್ ಫರ್ಮ್ಸ್‌ಗೆ ಆಲ್ಟರ್‌ನೇಟಿವ್ ಡೈರೆಕ್ಟರ್ ಆಗಿದ್ದಾರೆ. ಇವರೆಲ್ಲರಿಗೂ 12 ಕತ್ತೆಗಳಿಗೆ ಆಗಿರುವ ವಯಸ್ಸು ಆಗಿದೆ. ಇವರ ಮೇಲೆ ಏನೂ ಕ್ರಮ ತೆಗೆದುಕೊಳ್ಳುವುದು ಬೇರೆ ಎಂದು ಈ ಕಾರ್ಖಾನೆಯಲ್ಲಿ ಇಷ್ಟೊಂದು ಅನಾಹುತ ಮಾಡಿದ್ದರೂ ಇವರನ್ನು ಕ್ಷಮಿಸಬೇಕಂತೆ, ಮಾನ್ಯ ಬಸವಲಿಂಗಪ್ಪನವರೇ ನೀವು ಇದನ್ನು ಒಪ್ಪುತ್ತೀರಾ? ಇದರಲ್ಲಿ ಯಾರ್ಯಾರೂ ಇದ್ದಾರೆ ಇವರನ್ನು ಮೊದಲು ಕಿತ್ತುಹಾಕಿ. ಇಲ್ಲಿ ಪೋಲಾಗಿರತಕಕ್ಕಾಂಥಾದ್ದು ನಷ್ಟವಾಗಿರತಕ್ಕಂಥಾದ್ದು ಸಾರ್ವಜನಿಕರ ಹಣ. ಈ ಕೆಲಸವನ್ನು ಮಾಡುವುದಕ್ಕೆ ನಿಮಗೆ ತಾಕತ್ತು ಇಲ್ಲ. ಈ ಸರ್ಕಾರ ಮಾಡುವುದಿಲ್ಲ.

ಶ್ರೀ ಬಿ. ಸ್ವಾಮಿರಾವ್ : ಬರೀ ಐ.ಎ.ಎಸ್. ಆಫೀಸರ್‌ನೇ ಹಿಡಿದುಕೊಂಡು ಬಿಟ್ಟಿದ್ದೀರಿ. ಅವರನ್ನು ಈ ಸರ್ಕಾರ ಬಂದಮೇಲೆ ನಾಮಿನೇಟ್ ಮಾಡಿಕೊಂಡಿದ್ದಿರೋ ಅಥವಾ ಮೊದಲಿಂದ ನಿಮ್ಮ ಸರ್ಕಾರ ಇದ್ದಾಗಲೂ ಅವರು ಇದ್ದರೂ?

ಶ್ರೀ ಸಿ. ಬೈರೇಗೌಡ : ಆದರೆ ಅವರನ್ನು ಚೀಫ್ ಸೆಕ್ರೆಟರಿಯನ್ನಾಗಿ ಮಾಡಿರಲಿಲ್ಲ, ತಿಳಿದುಕೊಳ್ಳಿ

ಛೇರ್ಮನ್ : ನೀವು ಇಂಟರ್‌ಫಿಯರ್ ಮಾಡಬೇಡಿ. ಅವರು ಬೇಗ ಮುಗಿಸಬೇಕು

ಶ್ರೀ ಎಲ್. ಆರ್. ಶಿವರಾಮೇಗೌಡ : ಸಾರ್ವಜನಿಕ ಉದ್ದಿಮೆಗಳು ಯಾವುದು ಸಹ ಲಾಭದಾಯಕವಾಗಿ ನಡೆಯುತ್ತಿಲ್ಲ. ಎಲ್ಲವೂ ಸಹ ಈ ರಾಜ್ಯವನ್ನು ಮುಳುಗಿಸುತ್ತಿವೆ. ಆದರೆ ಅವರು ಹಿಂದೆ ತಿಂದರಲ್ಲ ಆಗಲೇ ಬಲಿಹಾಕುವುದನ್ನು ಬಿಟ್ಟು ಈಗ ಹಿಡಿದುಕೊಂಡಿದೀರಲ್ಲ ಎಂದು ಮಾನ್ಯ ಸ್ವಾಮಿ ರಾವ್‌ರವರು ಕೇಳುತ್ತಿರುವುದು. ಚೀಫ್ ಸೆಕ್ರೆಟರಿಯವರನ್ನಾಗಿ ಮಾಡಿದ್ದು ಉದ್ದೇಶಪೂರ್ವಕವಾಗಿ ಅಲ್ಲ. ಸೀನಿಯಾರಿಟಿ ಮೇಲೆ ಮಾಡಬೇಕಾಗಿತ್ತು ಮಾಡಿದ್ದಾರೆ.

ಶ್ರೀ ಬಿ. ಸ್ವಾಮಿರಾವ್ : ಏನಾದರೂ ಶಂಕರ್ ನಾರಾಯಣ್‌ರವರು ನಿಮಗೆ ಹೇಳಿದ್ದಾರ?

ಶ್ರೀ ಸಿ ಬೈರೇಗೌಡ : ಬಾಲ ಹಿಡಿದುಕೊಂಡು ಹೋಗುವ ಅಭ್ಯಾಸವನ್ನು ನಿಮಗೆ ಬಿಟ್ಟುಬಿಡುತ್ತೇವೆ. ಬಾಲ ಹಿಡಿದುಕೊಂಡು ಹಿಂದೆ ಮುಂದೆ ಹೋಗುವ ಅಭ್ಯಾಸ ನಿಮಗೆ ಮನಾಪಲಿ ಎಂದು ತಿಳಿದುಕೊಂಡಿದ್ದೇವೆ.

ಶ್ರೀ ಗೋಪಾಲ ಮುಕುಂದ ಕಾನಡೆ ; ಅವರು ಬಾಲಹಿಡಿದುಕೊಂಡು ಹೋಗುತ್ತಾರೆ, ನೀವು ಅಧಿಕಾರಿ ಹಿಡಿದುಕೊಂಡುಹೋಗುತ್ತೀರಿ.

(ಗೊಂದಲ)

ಶ್ರೀ ಸಿ. ಬೈರೇಗೌಡ : ರಾಜಕೀಯದಲ್ಲಿ ಇರತಕ್ಕಾಂಥಾದ್ದು ಅಧಿಕಾರಕ್ಕೋಸ್ಕರ. ಇವತ್ತಿನ ದಿವಸ ಇವರ ಮೇಲೆ ಕ್ರಮ ತೆಗೆದುಕೊಳ್ಳುವುದಾಗಲಿ, ಸಾರ್ವಜನಿಕ ಉದ್ಯಮಗಳನ್ನು ರಕ್ಷಣೆ ಮಾಡುವುದಾಗಲಿ ಈ ಸರ್ಕಾರಕ್ಕೆ ಬೇಕಾಗಿಲ್ಲ. ಎನ್‌ಜಿಇಎಫ್ ಆದಮೇಲೆ ಮೈಸೂರು ಪೇಪರ್ಸ್ ಮಿಲ್ಸ್ ಮೈಸೂರು ಪೇಪರ್ ಮಿಲ್ಸ್‌ನಲ್ಲಿ ಅನಾಹುತ ಎಂದರೆ ಅನಾಹುತ ನಾನು ಆ ಎಲ್ಲಾ ವಿವರಗಳಿಗೆ ಹೋಗುವುದಿಲ್ಲ, ಮುಂದೆ ಬಜೆಟ್ ಮೇಲೆ ಮಾತನಾಡುವಾಗ ನೋಡೋಣ. ಆದರೆ ಒಂದನ್ನು ಮಾತ್ರ ಹೇಳುತ್ತೇನೆ. ಅಲ್ಲಿ ಶ್ರೀ ಕೆ.ಕೆ. ಮಿಶ್ರ ಎಂಬುವರು ದೊಡ್ಡ ಅಧಿಕಾರಿಗಳಾಗಿದ್ದಾರೆ

ಛೇರ್ಮನ್ : ಈಗ ಸಭೆ ಮುಂದುವರಿದು ಪುನಃ 2.35 ಗಂಟೆಗೆ ಸೇರುತ್ತದೆ.

(ಸದನವು 2.50 ನಿಮಿಷಕ್ಕೆ ಪುನಃ ಸಮಾವೇಶ ಗೊಂಡಿತು)

ಅಧ್ಯಕ್ಷರ ಪೀಠವನ್ನು ಶ್ರೀಮತಿ ನಾಗಮ್ಮ ಕೇಶವಮೂರ್ತಿಯವರು ಅಲಂಕರಿಸಿದ್ದರು).

+ ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷಿಣಿಯವರೆ, ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಮಾನ್ಯ ಬೈರೇಗೌಡರನ್ನು ಕೂಡ ಕೇಳಿದ್ದೇನೆ. ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಈ ಸಭೆಯಲ್ಲಿ ಬೆಂಗಳೂರು ನಗರದ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಮತ್ತು ಬೇರೆ ಬೇರೆ ವಿವಿಧ ತಾಲ್ಲೂಕುಗಳಲ್ಲಿ ಇರುವ ಕುಡಿಯುವ ನೀರಿನ ಸಮಸ್ಯೆಯನ್ನು ಹೇಳಿ ಹೇಳಿ ಶಂಖ ಹೊಡೆದದ್ದು ಆಯಿತು. ನಾನು ಮತ್ತು ಮಾನ್ಯ ಸಿಂಧ್ಯರವರು ಬೆಳಿಗ್ಗೆ ಸುಮಾರು ಒಂದೂವರೆ ಗಂಟೆ ಬೆಂಗಳೂರಿನ ಕೆಲವು ಪ್ರದೇಶಗಳನ್ನು ಸುತ್ತಿಕೊಂಡು ಬಂದಿದ್ದೇವೆ. ಇಡೀ ನಗರದಲ್ಲಿ ಸಂಪೂರ್ಣವಾಗಿ ಎಲ್ಲಿಯೂ ನೀರು ಇಲ್ಲ. ನಮ್ಮ ಮನಗೆ ನೀರು ಬಂದು ನಾಲ್ಕು ದಿನಗಳು ಆಯಿತು. ಇನ್ನು ಜನಸಾಮಾನ್ಯರ ಪಾಡೇನು? ಕೆಂಪಾಪುರ ಅಗ್ರಹಾರ, ವಿಜಯನಗರ, ಮುಂತಾಗಿ ಇಡೀ ಬೆಂಗಳೂರು ನಗರವನ್ನು ಸುತ್ತುಹಾಕಿದ್ದೇವೆ. ಎಲ್ಲಾ ಕಡೆಗಳಲ್ಲಿ ನೀರಿಲ್ಲದ ಬಗ್ಗೆ ಜನರು ಹೇಳುತ್ತಿದ್ದಾರೆ. ಸರಕಾರದವರು ಈ ಕುಡಿಯುವ ನೀರಿನ ಸಮಸ್ಯೆಯನ್ನು ನಾವು ಸರಿಪಡಿಸುತ್ತೇವೆ ಎಂದು ಹೇಳಿದರೂ ಬಜೆಟ್ ಭಾಷಣದಲ್ಲಿಯೂ ಕೂಡ ಹೇಳಿದ್ದಾರೆ? ಎಲ್ಲಾ ಕಡೆಗಳಲ್ಲಿ ಕೊಳವೆ ಬಾವಿಗಳನ್ನು ತೆಗೆಯತ್ತೇವೆ ಎಂದು ಹೇಳಿದ್ದಾರೆ. ಆದರೂ ಕೂಡ ನೀರು ಮಾತ್ರ ಯಾರಿಗೂ ಸರಿಯಾಗಿ ಸಿಗುತ್ತಾ ಇಲ್ಲ. ಜನರು ಕಣ್ಣೀರು ಹಾಕುತ್ತಾ ಇದ್ದಾರೆ. ನೀವು ಮದ್ಯದ ದರವನ್ನು ಇಳಿಸಿ ಧಾರಾಳವಾಗಿ ಸಿಗುವಂತೆ ಮಾಡಿದ್ದೀರಿ, ಆದರೆ ನೀರು ಮಾತ್ರ ಸಿಗುತ್ತಾ ಇಲ್ಲ.

ಉಪಾಧ್ಯಕ್ಷಿಣಿಯವರು : ಇದು ಬಹಳ ಮುಖ್ಯವಾದ ವಿಚಾರ ಎಂಬುದು ನನಗೆ ಗೊತ್ತಿದೆ. ಇದನ್ನು ಬೇರೆ ರೂಪದಲ್ಲಿ ತಾವು ಕಳುಹಿಸಿದರೆ ಪ್ರಸ್ತಾಪಕ್ಕೆ ತೆಗೆದುಕೊಳ್ಳಬಹುದು. ಆಗ ಅದರ ಬಗ್ಗೆ ವಿವರವಾಗಿ ಚರ್ಚಿಸಲು ಅನುಕೂಲವಾಗುತ್ತದೆ. ಈಗ ಸಂಬಂಧಪಟ್ಟ ಮಂತ್ರಿಯವರು ಕೂಡ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷಿಣಿಯವರೆ, ಎಲ್ಲಾ ರೂಪದಲ್ಲಿಯೂ ನಾವು ಕೇಳಿದ್ದಾಯಿತು. ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದ್ದಾಯಿತು, ನಿಲುವಳಿ ಸೂಚನೆಯನ್ನು ನೀಡಿದ್ದಾಯಿತು, ಸಭೆಯಲ್ಲಿ ಉತ್ತರವನ್ನು ಕೂಡ ಕೊಟ್ಟಿದ್ದಾರೆ.

ಆದರೂ ಕೂಡ ಇವತ್ತು ನೀರಿನ ಬರ ಇರಲಿಲ್ಲ. ತಿಪ್ಪಗೊಂಡನಹಳ್ಳಿ ಕೆರೆಯಲ್ಲಿ ಇನ್ನು ಕೇವಲ 8 ದಿವಸಗಳಾಗುವಷ್ಟು ಮಾತ್ರ ನೀರು ಇದೆ. ಆ ಮೇಲೆ ಏನು ಮಾಡುತ್ತೀರಿ?

ಶ್ರೀ ಎಸ್. ರಮೇಶ್ : ಮಾನ್ಯ ಸದಸ್ಯರು ನಗರದಲ್ಲಿ ಸುತ್ತುಕೊಂಡು ಬಂದು ಏನು ಹೇಳುತ್ತಿದ್ದಾರೆ ಅದು ಈಗಾಗಲೇ ಸರಕಾರದ ಗಮನಕ್ಕೆ ಬಂದಿದೆ. 300 ಕೊಳವೆ ಬಾವಿಗಳನ್ನು ನಗರದಲ್ಲಿ ತೋಡಬೇಕೆಂದು ತೀರ್ಮಾನ ತೆಗೆದುಕೊಂಡಿದೆ. ಆದರೆ ಒಂದೇ ದಿವಸ ತೋಡಿ ಎಂದರೆ ಆಗುವುದಿಲ್ಲ. ಸರಕಾರದ ವತಿಯಿಂದ ಕ್ರಮ ತೆಗೆದುಕೊಂಡಿದ್ದೇವೆ. ಸ್ವಲ್ಪ ಅವಕಾಶ ಕೊಡಿ, ಆದಷ್ಟು ಜಾಗ್ರತೆ ಆಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ ; ನಾನು ಈ ಸದನದ ಸಮಯವನ್ನು ವ್ಯರ್ಥ ಮಾಡಬಯಸುವುದಿಲ್ಲ. ಈ ಸದನವು ಪ್ರಾರಂಭವಾದ ದಿವಸದಿಂದ ನಾವು ವಿರೋಧಪಕ್ಷದವರು ಮತ್ತು ಆಡಳಿತ ಪಕ್ಷದ ಕೆಲವು ಗೌರವಾನ್ವಿತ ಸದಸ್ಯರು ಸಹಿತ ಬೆಂಗಳೂರಲ್ಲಿ ಕುಡಿಯುವ ನೀರಿನ ಅಭಾವದ ತೀವ್ರತೆಯನ್ನು ಸರಕಾರದ ಗಮನಕ್ಕೆ ತಂದಿದ್ದೇವೆ. ಇನ್ನು ನಾಲ್ಕೈದು ದಿವಸಗಳಲ್ಲಿ ಈ ಸಮಸ್ಯೆಯು ಇನ್ನೂ ಹೆಚ್ಚು ತೀವ್ರತೆಯನ್ನು ಹೊಂದ ಬಹುದಾಗಿದೆ. ಸರಕಾರದವರು 300 ಕೊಳವೆ ಬಾವಿಗಳನ್ನು ಹಾಕಿಸುತ್ತೇವೆಂದು ಹೇಳುತ್ತಾರೆ ಅದು ಯಾವಾಗ? ಒಂದು ದಿವಸದಲ್ಲಿ ಹತ್ತು ಬಾವಿಗಳನ್ನು ಹಾಕಿಸಬಹುದು, ಹಾಗಾದರೆ ಅದರಿಂದ ಏನು ಉಪಯೋಗವಾಗಲಾರದು. ನಾವು ಸರಕಾರಕ್ಕೆ ಒಂದು ಎಚ್ಚರಿಕೆಯನ್ನು ಕೊಡಬಯಸುತ್ತೇವೆ, ಇನ್ನು 2-3 ದಿವಸಗಳಲ್ಲಿ ಈ ಸಮಸ್ಯೆಯನ್ನು ಸರಿಮಾಡತಕ್ಕಂಥ ಭರವಸೆಯನ್ನು ಈ ಸದನಕ್ಕೆ ಸರಕಾರದವರು ಕೊಡಬೇಕು. ಇಲ್ಲದಿದ್ದರೆ ನಾವು ಈ ಸದನದ ಕಲಾಪಗಳನ್ನು ನಡೆಸುವುದಕ್ಕೂ ಸಹ ಅಡ್ಡಿಪಡಿಸತಕ್ಕಂಥ ಪ್ರಸಂಗ ಬರಬಹುದು ಎನ್ನತಕ್ಕಂಥ ಒಂದು ಎಚ್ಚರಿಕೆಯ ಮಾತನ್ನು ಈ ಸಂದರ್ಭದಲ್ಲಿ ನಾನು ಸರಕಾರಕ್ಕೆ ಕೊಡಬಯಸುತ್ತೇನೆ.

ಉಪಾಧ್ಯಕ್ಷಿಣಿಯವರು : ಈಗ ಮಾನ್ಯ ಸದಸ್ಯರುಗಳು ಬೆಂಗಳೂರಿನಲ್ಲಿರುವ ಕುಡಿಯುವ ನೀರಿನ ಪರಿಸ್ಥಿತಿಯ ಬಗ್ಗೆ ಮಾತನಾಡುತ್ತಿದ್ದಾರೆ. ಮಾನ್ಯ ಅನಂತಕೃಷ್ಣರವರು ಈ ಬಗ್ಗೆ ಸ್ಥಳೀಯವಾದ ವಿಚಾರವನ್ನು ಹೇಳುತ್ತಾರೆ. ....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಈ ನೀರಿನ ಸಮಸ್ಯೆ ಕೇವಲ ಬೆಂಗಳೂರಿಗೆ ಮಾತ್ರ ಸೀಮಿತವಾಗಿಲ್ಲ, ಇದು ಇಡೀ ರಾಜ್ಯದ ಸಮಸ್ಯೆಯಾಗಿದೆ. ಇನ್ನು ಒಂದೆರಡು ದಿವಸಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಸರಕಾರದವರು ಪರಿಣಾಮಕಾರಿಯಾದ ಕ್ರಮವನ್ನು ತೆಗೆದುಕೊಳ್ಳದಿದ್ದರೆ ಈ ಸಭೆಯಲ್ಲಿ ಖಾಲಿ ಬಿಂದಿಗೆ ತಂದು ಧರಣಿ ಮಾಡುತ್ತೇವೆ.

(ಗೊಂದಲ)

ಶ್ರೀ ಎ.ಕೆ. ಅನಂತಕೃಷ್ಣ : ಬೆಂಗಳೂರು ನಗರದ ನೀರಿನ ಕೊರತೆ ಬಗ್ಗೆ ಬೆಂಗಳೂರು ನಗರದಿಂದ ಚುನಾಯಿತರಾದ ಈ ಸಭೆಯ ಎಲ್ಲ ಸದಸ್ಯರು ತೀವ್ರವಾಗಿ ಗಮನಿಸಿಕೊಂಡಿದ್ದೇವೆ. ಈ ವಿಷಯವನ್ನು ನಗರಸಭೆ ಕೂಡ ತೀವ್ರವಾಗಿ ಗಮನಿಸಿಕೊಂಡಿದೆ. ಸರ್ಕಾರ ಕೂಡ ಗಮನಕ್ಕೆ ತೆಗೆದುಕೊಂಡಿದೆ. ಜಲ ಮಂಡಲಿ ಕೂಡ ತೀವ್ರವಾದ ಗಮನಕ್ಕೆ ತೆಗೆದುಕೊಂಡಿದ್ದಾರೆ. ನಮ್ಮ ಹೆಚ್‌ಯುಡಿ ಸಚಿವರೂ ಕೂಡ ಸಾಕಷ್ಟು ಸಭೆಗಳನ್ನು ಕರೆದು ಈ ವಿಷಯವನ್ನು ಚರ್ಚೆ ಮಾಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ ; ಇದರಿಂದೆಲ್ಲ ಪರಿಹಾರ ಏನು ಸ್ವಾಮಿ? ಬರೀ ಕಣ್ಣೀರು, ನೀರು ಸಿಗುತ್ತಿಲ್ಲ.

ಶ್ರೀ ಎ.ಕೆ. ಅನಂತಕೃಷ್ಣ ; ಈಗಾಗಲೇ 300 ಕೊಳವೆಬಾವಿಗಳನ್ನು ತೆಗೆಯಬೇಕೆಂದು ಏನು ಹೇಳಿದ್ದಾರೆ, ಅದನ್ನು ಒಂದೇ ಸಲಕ್ಕೆ ಡ್ರಿಲ್ ಮಾಡಲು ಸಾಧ್ಯವಿಲ್ಲ. ಅದಕ್ಕಾಗಿ ಬೆಂಗಳೂರು ನಗರಸಭೆಯ ಸದಸ್ಯರು ಅವರವರ ಕ್ಷೇತ್ರಗಳಲ್ಲಿ ಮೂರು ಮೂರು ಬಾವಿಗಳನ್ನು ತೆಗೆಸಿಕೊಳ್ಳಬಹುದೆಂದು ಮಾಡಿ, ಆ ಏರಿಯಾಗಳನ್ನು ಐಡೆಂಟಿಫೈ ಮಾಡಿ ಈಗಾಗಲೇ ಜಲಮಂಡಲಿಗೆ ಆ ಲಿಸ್ಟ್ ಕೊಟ್ಟಿದ್ದಾರೆ. ಅಷ್ಟೇ ಅಲ್ಲದೆ ನಗರಸಭೆಯ ಸದಸ್ಯರುಗಳಿಗೆ ಸಾಕಷ್ಟು ಅವಕಾಶವನ್ನು ಕೊಟ್ಟಿದ್ದಲ್ಲದೆ ಈ ಮನೆಯ 12ಜನ ಸದಸ್ಯರೇನಿದ್ದಾರೆ ಅವರ ಅಧ್ಯಕ್ಷತೆಯಲ್ಲಿ ನಗರಸಭೆಯ ಸದಸ್ಯರ ಒಂದು ಸಮಿತಿ ಮಾಡಿ ಎಲ್ಲೆಲ್ಲಿ ನೀರಿನ ಕೊರತೆಯಾಗಿದೆ ಎಂಬುದನ್ನು ತಿಳಿಸಲು ಸೂಚಿಸಿದ್ದಾರೆ. ನಾನು ಕೂಡ ನನ್ನ ಕ್ಷೇತ್ರದಲ್ಲಿ ಸಂಬಂಧಪಟ್ಟ ಇಂಜಿನಿಯರ್‌ಗಳನ್ನು ಕರೆದುಕೊಂಡು ಮೂರು ದಿನಗಳ ಕೆಳಗೆ ಇಡೀ ಕ್ಷೇತ್ರದಲ್ಲಿ ಓಡಾಡಿ ಎಲ್ಲೆಲ್ಲಿ ಮುಖ್ಯವಾಗಿ ನೀರಿನ ಕೊರತೆ ಇದೆ ಎಂದು ನೋಡಿದ್ದೇನೆ. ಇನ್ನೊಂದು ಬೋರ್‌ವೆಲ್‌ಗಳನ್ನು ಡಿಗ್ ಮಾಡುವಂಥ ರಿಗ್‌ಗಳ ಮೂಲಕ ಮಾಡಬೇಕಾಗುತ್ತದೆ, ಬರೀ ಮಾತಿನಿಂದ ಆಗುವುದಿಲ್ಲ. 300 ಬೋರ್‌ವೆಲ್‌ಗಳನ್ನು ಸಂಪೂರ್ಣವಾಗಿ ತೀವ್ರವಾಗಿ ತೆಗೆಯುತ್ತೇವೆ. ಒಂದೇ ಸಲಮಾಡುವುದಕ್ಕೆ ಆಗುವುದಿಲ್ಲ. ಇನ್ನೊಂದು ವಾರದಲ್ಲಿ ಈ ಎಲ್ಲ ಕೆಲಸ....

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಇಡೀ ರಾಜ್ಯಕ್ಕೆ ನೀರಿಲ್ಲ, ಇಲ್ಲಿ ಬೆಂಗಳೂರಿನಲ್ಲಿ 300 ಬೋರ್‌ವೆಲ್ ತೆಗೆಯುವುದಕ್ಕೆ ಆಗುವುದಿಲ್ಲ ಎಂದರೆ....

ಉಪಾಧ್ಯಕ್ಷರು : ಸಂಬಂಧಪಟ್ಟ ಮಂತ್ರಿಗಳಲ್ಲಿ, ಬೈರೇಗೌಡರೇ ನೀವು ಮಾತನಾಡಿ.

(ಗದ್ದಲ)

ಶ್ರೀ ಎಸ್. ರಮೇಶ್ : ಬೆಂಗಳೂರು ನಗರದ ಬಗ್ಗೆ ಅವರು ಎಷ್ಟು ತಲೆಕೆಡಿಸಿಕೊಂಡಿದ್ದಾರೋ ಅಷ್ಟೇ ಸರ್ಕಾರವೂ ತಲೆಕೆಡಿಸಿಕೊಂಡಿದೆ. ಒಂದೇ ರಾತ್ರಿಯಲ್ಲಿ 300 ಕೊಳವೆಭಾವಿಗಳನ್ನು ತೋಡಿ ಅಂದರೆ ಅದು ಆಗದೆ ಇರುವ ಕೆಲಸ. ಸದಸ್ಯರು ಏನು ಸಲಹೆ ಕೊಟ್ಟಿದ್ದಾರೆ ಅವನ್ನು ಮಾನ್ಯ ಹೆಚ್‌ಯುಡಿ ಸಚಿವರ ಗಮನಕ್ಕೆ ತಂದು ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಕೋರುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನನ್ನ ಚಾಮರಾಜನಗರದಲ್ಲಿ 15 ದಿವಸದಿಂದ ಒಂದು ಕೊಳವೆಬಾವಿ ತೆಗೆಯುವುದಕ್ಕೆ ಆಗುತ್ತಿಲ್ಲ. ನಾವು ನಮ್ಮ ಕ್ಷೇತ್ರಕ್ಕೆ ಹೋದರೆ ಅಲ್ಲಿನ ಜನ ನೀರಿಗಾಗಿ ನಮಗೆ ಗಂಟುಬೀಳುತ್ತಾರೆ, ಬೆಂಗಳೂರಿಗೆ ಬಂದರೆ ಇಲ್ಲಿನ ಜನ ನೀರು ಕೇಳುತ್ತಾರೆ.

ಉಪಾಧ್ಯಕ್ಷರು : ನಾಳೆ ದಿವಸ ನೀವು ಇದನ್ನು ಯಾವುದಾದರೂ ರೂಲ್ಸ್ ಕೆಳಗೆ ತನ್ನಿ. ಆಮೇಲೆ ವಿವರವಾಗಿ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ ; ಇದು ಕುಡಿಯುವ ನೀರಿನ ಪ್ರಶ್ನೆ, ಇದು ಬಹಳ ಮುಖ್ಯವಾದುದು. ನಾನು ನನ್ನ ತಾಲ್ಲೂಕಿಗೆ ನಿನ್ನ ತಾನೆ ಹೋಗಿದ್ದೆ ಅಲ್ಲಿ ನೀರಿಲ್ಲ. ಬೆಂಗಳೂರಿನಲ್ಲಿ ನೀರಿಲ್ಲ ಈ ರಾಜ್ಯದಲ್ಲಿ ಸರ್ಕಾರ ಇದೆಯೇ ಎಲ್ಲಿದೆ? ಎಂದು ಕೇಳುತ್ತಿದ್ದೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಉಪಾಧ್ಯಕ್ಷಿಣಿಯವರೇ, ನನ್ನದೊಂದು ಕ್ರಿಯಾಲೋಪ ಇದೆ. ಎರಡೂವರೆ ಗಂಟೆಗೆ ಸಭೆ ಸೇರಬೇಕಾಗಿತ್ತು. ಎರಡೂವರೆ ಗಂಟೆಗೆ ಸಭೆ ಸೇರಿದ್ದೇವೆ. ಬಹುಶಃ ನಾವುಗಳೆಲ್ಲ ಒಂದು ಒಪ್ಪಂದಕ್ಕೆ ಬಂದಿರುವುದರಿಂದ ಮಧ್ಯಾಹ್ನ ಆದಮೇಲೆ ಕೋರಂನ್ನು ಇನ್‌ಸಿಸ್ಟ್ ಮಾಡುವುದಿಲ್ಲ ಎಂದು ಹೇಳಿ ಏನಾದರೂ ನಡೆದುಕೊಂಡು ಹೋಗುತ್ತಿದೆ. ಆದರೆ ಕೊನೆಯ ಪಕ್ಷ ಸರ್ಕಾರವೆಂದರೇನು? ಸರ್ಕಾರ ಎಂದರೆ ಮಂತ್ರಿಗಳು. ಮಾನ್ಯ ರಾಜ್ಯ ಸಚಿವರುಗಳಾದ ಮಾನ್ಯ ರಮೇಶ್‌ರವರು

ಮತ್ತು ಶಂಬುನಾಥ್‌ರವರು ಗೌರವಾನ್ವಿತ ರಾಜ್ಯಮಂತ್ರಿಗಳಿದ್ದಾರೆ. ಇವರುಗಳನ್ನು ಕ್ಯಾಬಿನೆಟ್ ಮೀಟಿಂಗ್‌ಗೆ ಕರೆಸುವುದಿಲ್ಲ ಎಂದು ನಿಯಮಾವಳಿ ನಿಮಗೂ ಕೂಡ ಗೊತ್ತಿದೆ. ಸರ್ಕಾರ ಎಂದರೆ ರಾಜ್ಯಮಂತ್ರಿಗಳು ಇವರನ್ನು ನಾನು ಮಂತ್ರಿಗಳಲ್ಲ ಎಂದು ಹೇಳುವುದಿಲ್ಲ. ಆದರೆ ಇವರು ಲೆಕ್ಕಕ್ಕೆ ಮಾತ್ರ ಉಂಟು. ಇವರು ಸಚಿವಸಂಪುಟದ ಒಂದು ಸಭೆಯಲ್ಲಿ ಭಾಗವಹಿಸುವುದಕ್ಕೆ ಆಗುವುದಿಲ್ಲ. ಸರ್ಕಾರದ ಧೋರಣೆ ಏನು? ಸದನವು ಸೇರಿದೆ ಅಂದರೆ ಅರ್ಥವೇನು. ಉಪಾಧ್ಯಕ್ಷರು ತಾವು ಇದ್ದೀರಿ. ವಿರೋಧ ಪಕ್ಷದ ಸದಸ್ಯರುಗಳು ನಾವು ಇದ್ದೇವೆ ಮತ್ತು ಆಡಳಿತ ಪಕ್ಷದ ಸದಸ್ಯರು ಇದ್ದಾರೆ. ಸರ್ಕಾರವೇ ಇಲ್ಲ ಎಂದರೆ ಈ ಸದನದ ಕಾರ್ಯಕಲಾಪವನ್ನು ನಡೆಸುವುದು ಹೇಗೆ? ಆದ್ದರಿಂದ ಇದು ಒಂದು ದೊಡ್ಡ ಕ್ರಿಯಾಲೋಪವಾಗುತ್ತದೆ. ಮಾನ್ಯ ಲಮಾಣಿಯವರು ಬಹಳ ಪ್ರಯತ್ನಮಾಡುತ್ತಿದ್ದಾರೆ. ಅವರು ಏಕೆ ಈ ಜವಾಬ್ದಾರಿಯನ್ನು ತೆಗೆದುಕೊಂಡರೋ ನನಗೆ ಗೊತ್ತಾಗುತ್ತಿಲ್ಲ. ಸದನದ ಪ್ರಾರಂಭದಿಂದಲೂ ಅವರು ಬಹಳ ಕಷ್ಟಪಡುತ್ತಿದ್ದಾರೆ. ಮಧ್ಯಾಹ್ನ ಆಯಿತು. ಎಂದರೆ ಮಾನ್ಯ ಲಮಾಣಿಯವರು ಫೋನ್ ಮಾಡುವುದಕ್ಕೆ ಹೋಗುತ್ತಾರೆ. ಮಂತ್ರಿಗಳು ಎಲ್ಲಿಗೆ ಹೋಗುತ್ತಾರೆ ಎನ್ನುವುದು ನನಗಂತೂ ಅರ್ಥವಾಗುತ್ತಿಲ್ಲ. ಇವರುಗಳಿಗೆ ಜವಾಬ್ದಾರಿ ಇದೆಯೇ? ಹಿಂದುಗಡೆ ಮಾತನಾಡುತ್ತಾರೆ ಎಂದು ಹೇಳುತ್ತಾರೆ. ಈಗ ಮುಂದುಗಡೆಯೇ ಮಾತನಾಡುತ್ತೇನೆ. ಇವರು ಏತಕ್ಕೆ ಬರುವುದಿಲ್ಲ ಎಂದು ತಾವು ಸರ್ಕಾರವನ್ನು ಕೇಳಬೇಕಾಗುತ್ತದೆ. ಸರ್ಕಾರವನ್ನು ತಾವು ಖಂಡಿಸಬೇಕಾಗುತ್ತದೆ. ಈ ಧೋರಣೆ ಸರಿಯಲ್ಲ. ಮಂತ್ರಿಗಳು ಬರಬೇಕಾಗುತ್ತದೆ. ನನ್ನ ಕ್ರಿಯಾಲೋಪವನ್ನು ತಾವು ಎತ್ತಿ ಹಿಡಿಯುಬೇಕು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಒಬ್ಬ ಐ.ಎ.ಎಸ್. ಅಧಿಕಾರಿಯೂ ಇಲ್ಲ. ಮಂತ್ರಿಗಳೂ ಇಲ್ಲ. ಈ ಸರ್ಕಾರವನ್ನು ನಡೆಸುವವರು ಯಾರು? ರಾಜ್ಯಸಚಿವರುಗಳ ಬಗ್ಗೆ ನಮ್ಮ ಆಕ್ಷೇಪಣೆಯೇನೂ ಇಲ್ಲ. ಅವರು ಪ್ರಾಮಾಣಿಕವಾಗಿ ಬಂದಿದ್ದಾರೆ. ಮಂತ್ರಿಗಳು ಒಬ್ಬರೂ ಇಲ್ಲ. ಆದ್ದರಿಂದ ಸಭೆಯನ್ನು ಮುಂದಕ್ಕೆ ಹಾಕಿ.

ಶ್ರೀ ಹೆಚ್ ಏಕಾಂತಯ್ಯ : ಇದರ ಬಗ್ಗೆ ಈ ಹಿಂದೆಯೂ ಕೂಡ ಪ್ರತಿಭಟನೆಯನ್ನು ಮಾಡಿದ್ದೇವೆ.

(ಗೊಂದಲ)

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ತಾವು ಎದ್ದು ನಿಂತಾಗಲೂ ಕೂಡ ಮಾನ್ಯ ಹಿರಿಯ ಸದಸ್ಯರು ಕುಳಿತುಕೊಳ್ಳದಿದ್ದರೆ ಇದೇನು ಹೊಸ ಸಂಪ್ರದಾಯ ನಡೆದಿದೆಯೆಲ್ಲಾ?

ಉಪಾಧ್ಯಕ್ಷಿಣಿಯವರು : ಬೈರೇಗೌಡರೇ ತಾವು ಮಾತನಾಡಿ. ಈಗ ಬೈರೇಗೌಡರು ಪ್ರಾರಂಭ ಮಾಡುತ್ತಾರೆ. ಮಾನ್ಯ ಸಚಿವರುಗಳು ಬರುತ್ತಾರೆ. ಅವರು ಪ್ರಾರಂಭಮಾಡಲಿ.

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ : ಇದು ಸರ್ಕಾರವೇ? ಏನು ಮಾಡುವುದು? Do you call this A Government?

(ಗೊಂದಲ)

ಉಪಾಧ್ಯಕ್ಷಿಣಿಯವರು : ಬೈರೇಗೌಡರೇ, ತಾವು ಮಾತನಾಡಿ. ಇನ್ನು ಐದು ನಿಮಿಷದಲ್ಲಿ ಎಲ್ಲರೂ ಕೂಡ ಬರುತ್ತಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಹಳ್ಳಿ ಪಂಚಾಯಿತಿ ಕಟ್ಟೆಗೂ ಕೂಡ ಗೌರವ ಇರುತ್ತದೆ. ಶಾಸನಸಭೆಗೆ ಮಂತ್ರಿಗಳು ಜವಾಬ್ದಾರಿಯಿಂದ ಬರಬೇಕು.

(ಗೊಂದಲ)

ಶ್ರೀ ಸಿ. ಬೈರೇಗೌಡ : ಮಾನ್ಯ ಉಪಾಧ್ಯಕ್ಷರೆ, ತಾವು ನನ್ನನ್ನು ಕರೆದಿದ್ದೀರಿ, ಮಾತನಾಡಿ ಎಂದು ತಾವು ಅಪ್ಪಣೆಯನ್ನು ಕೊಟ್ಟಿದ್ದೀರಿ. ನಿಮ್ಮ ಅಪ್ಪಣೆಯನ್ನು ಪಾಲಿಸಬೇಕಾದ್ದು ಸದನದಲ್ಲಿ ನನ್ನ ಕರ್ತವ್ಯವಾಗಿದೆ. ನಾನು ಸಣ್ಣಪುಟ್ಟ ವಿಚಾರವನ್ನು ಮಾತನಾಡುತ್ತಿದ್ದರೆ ಆಗಬಹುದಾಗಿತ್ತು. ಆದರೆ ಮಾತನಾಡುತ್ತಿರತಕ್ಕಂಥದ್ದು ಮತ್ತು ಮಾತನಾಡತಕ್ಕಂಥದ್ದು ಬಹಳ ಗುರುತರವಾಗಿರತಕ್ಕಂಥದ್ದು ಮತ್ತು ಬಹಳ ಜವಾಬ್ದಾರಿಯಿರತಕ್ಕಂಥ ದೊಡ್ಡ ದೊಡ್ಡ ಅಧಿಕಾರಿಗಳ ವಿಚಾರವನ್ನು ನಾನು ಮಾತನಾಡುತ್ತಿದ್ದೇನೆ. ಪಾಪ ಇಬ್ಬರು ಇಲ್ಲಿ ಕುಳಿತಿದ್ದಾರೆ.

(ಗೊಂದಲ)

ಉಪಾಧ್ಯಕ್ಷಿಣಿಯವರು : ನೀವು ಏನು ಮಾತನಾಡುತ್ತೀರಿ, ಅದನ್ನು ಅವರು ನೋಟ್ ಮಾಡಿಕೊಂಡು ಸಂಬಂಧಪಟ್ಟ ಮಂತ್ರಿಗಳಿಗೆ ಅದನ್ನು ಕಳುಹಿಸುತ್ತಾರೆ. (ಗೊಂದಲ)

ಶ್ರೀ ಎಸ್. ರಮೇಶ್ : ಯುವಜನ ಸೇವಾ ಸಚಿವರು) : ಅವರು ಹಿರಿಯ ಸದಸ್ಯರಾಗಿದ್ದಾರೆ. ಯಾರನ್ನಾದರೂ ಬೈಯುವುದಕ್ಕೂ ಒಂದು ರೀತಿಯ ನೀತಿ ಇದೆ, ಹೇಳುವುದಕ್ಕೂ ಒಂದು ರೀತಿ ನೀತಿ ಇದೆ.

ಇದು ಸರಿಯೇ?

(ಗೊಂದಲ)

ಶ್ರೀ ಸಿ. ಬೈರೇಗೌಡ : ಮಾನ್ಯ ರಮೇಶ್ ಮತ್ತು ಶಂಬುನಾಥ್‌ರವರ ಬಗ್ಗೆ ನನಗೆ ಗೌರವ ಇದೆ. ಆ ಪದ ಅನ್‌ಪಾರ್ಲಿಮೆಂಟರಿ ಅಲ್ಲ.

(ಗೊಂದಲ)

ಉಪಾಧ್ಯಕ್ಷಿಣಿಯವರು : ಮಾನ್ಯ ಬೈರೇಗೌಡರೆ, ನೀವು ಬಳಸತಕ್ಕಂಥ ಪದ ಪಾರ್ಲಿಮೆಂಟರಿ ಇರಬಹುದು ಅಥವಾ ಅನ್‌ಪಾರ್ಲಿಮೆಂಟರಿ ಇರಬಹುದು. But it is not in good taste to use such a word.

(ಗೊಂದಲ)

ಶ್ರೀ ಸಿ. ಬೈರೇಗೌಡ : ನೀವು ಹೇಳಿರತಕ್ಕಂಥ ಮಾತನ್ನು ನಾನು ಒಪ್ಪುತ್ತೇನೆ. ಆದರೆ ಇಡೀ ಮೊದಲನೇ ಸಾಲೇ ಖಾಲಿ ಇದೆಯಲ್ಲಾ?

ಉಪಾಧ್ಯಕ್ಷಿಣಿಯವರು : ತಾವು ಪ್ರಾರಂಭ ಮಾಡಿ. ಅವರು ಹೇಳಿಕಳುಹಿಸಿದ್ದಾರೆ. ಮಂತ್ರಿಗಳು ಬರುತ್ತಿದ್ದಾರೆ.

(ಗೊಂದಲ)

ಶ್ರೀ ಸಿ. ಬೈರೇಗೌಡ : ಮೊದಲನೇ ಸಾಲೇ ಖಾಲಿ ಇದೆಯಲ್ಲಾ? ಇದು ಯಾವ ಟೇಸ್ಟ್?

(ಗೊಂದಲ)

ಉಪಾಧ್ಯಕ್ಷಿಣಿಯವರು : ಈಗ ಮುಖ್ಯ ಸಚೇತಕರು ಕರೆಯುವುದಕ್ಕೆ ಹೋಗಿದ್ದಾರೆ.

ಶ್ರೀ ಸಿ. ಬೈರೇಗೌಡ : ನಾವು ಯಾರಿಗೆ ಮಾತನಾಡಬೇಕು?

(ಗೊಂದಲ)

(ಗೊಂದಲ)

(ಈ ಹಂತದಲ್ಲಿ ಜನತಾ ದಳದ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

ಶ್ರೀ ವಾಟಾಳ್ ನಾಗರಾಜ್ : ಹಳ್ಳಿಕಡೆ ಗಾದೆ ಇದೆ. ಕತ್ತೆ ಮುಂದೆ ಕಿನ್ನರಿ ಬಾರಿಸಿದಂತೆ ನಾವು ಯಾರ ಮುಂದೆ ಹೇಳಬೇಕು. ಎಲ್ಲಿಗೆ ಹೋಗಬೇಕು? ಇಲ್ಲಿ ಒಬ್ಬ ಅಧಿಕಾರಿಯೂ ಇಲ್ಲ. ಈ ಸಭೆಯ ಬಗ್ಗೆ ಅವರಿಗೆ ಗೌರವ ಇದೆಯೇ? ಈ ರೀತಿ ಬೇಜವಾಬ್ದಾರಿಯಿಂದ ವರ್ತಿಸಿದರೆ ಹೇಗೆ?

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ : ಮಂತ್ರಿಗಳು ಇಲ್ಲ ಎಂದು ಹೇಳತಕ್ಕಂಥ ವಿಚಾರ ಸರಿಯಲ್ಲ, ಮಂತ್ರಿಗಳು ಒಬ್ಬರೂ ಇಬ್ಬರೂ ಇದ್ದಾರೆ. ತಾವು ಕೂಡ ಸರ್ಕಾರಕ್ಕೆ ಎಚ್ಚರಿಕೆಯನ್ನು ಕೊಡಬೇಕು. ಜವಾಬ್ದಾರಿಯುತರಾದ ಅಧಿಕಾರಿಗಳು ಒಬ್ಬರು ಇಲ್ಲ ಇದು ಪಕ್ಷ ಮತ್ತು ಸರ್ಕಾರದ ವಿಚಾರವೇನೂ ಅಲ್ಲ. ದಯವಿಟ್ಟು ಅದಕ್ಕೆ ತಾವು ಅವಕಾಶವನ್ನು ಕೊಡಬೇಡಿ. ದಿನಭೆಳಿಗ್ಗೆ ಯಾದರೂ ಈ ವಿಚಾರವನ್ನು ಚರ್ಚೆಮಾಡುವುದಕ್ಕೆ ತಾವು ಅವಕಾಶವನ್ನು ಕೊಡದಹಾಗೆ ಅವರು ಇರಬೇಕು ಅಧಿಕಾರಿಗಳು ಸಹಾ ಜವಾಬ್ದಾರಿಯಿಂದ ಸಭೆಯಲ್ಲಿರಬೇಕಾಗುತ್ತದೆ. ಇರುವ ಇಬ್ಬರು ಮಂತ್ರಿಗಳಲ್ಲೇ ಅವರು ನೋಟ್ ಮಾಡಿಕೊಂಡು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ಅದನ್ನು ತರುತ್ತಾರೆ. ಆದರೆ ಅಧಿಕಾರಿಗಳು ಸಭೆಯಲ್ಲಿ ಇರುವಂತಹ ವ್ಯವಸ್ಥೆಯನ್ನು ತಾವು ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್ : ನಮ್ಮಲ್ಲಿ ಕೆಲವರು ಈ ಸಭೆಯನ್ನು ಬಿಟ್ಟು ಈಗ ಕುದುರೆ ಜೂಜಿನ ಮೈದಾಕ್ಕೆ ಹೋಗಿ ಅಲ್ಲೇ ಕುಳಿತಿರುತ್ತಾರೆ. ಅವರಿಗೆ ಈ ಸಭೆಯ ಬಗ್ಗೆ ಗೌರವವಿಲ್ಲ. ಈ ಸಭೆಯಲ್ಲಿ ನಾವು ಕುಳಿತುಕೊಳ್ಳಬೇಕು. ಇದು ಸರಿಯಲ್ಲ. ಇದು ಅಧ್ಯಕ್ಷರಿಗೂ ಅಗೌರವ ಮಾಡಿದ ಹಾಗೆ, ಈ ಸಭೆಗೂ ಅಗೌರವ ಮಾಡಿದಹಾಗೆ. ಇದು ಅತ್ಯಂತ ಘೋರ ಅಪರಾದ. ಆದುದರಿಂದ ಇದನ್ನು ವಿರೋಧ ಮಾಡಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಗೊಂದಲ)

ಉಪಾಧ್ಯಕ್ಷಿಣಿಯವರು : ಬೈರೇಗೌಡರೇ, ತಾವು ಮಾತನಾಡಿ, ಹೇಳಿ ಕಳುಹಿಸಿದ್ದಾರೆ, ಅವರು ಬರುತ್ತಿದ್ದಾರೆ.

ಶ್ರೀ ಸಿ. ಬೈರೇಗೌಡ : ತಾವು ದಯವಿಟ್ಟು ನನ್ನನ್ನು ಇಕ್ಕಟ್ಟಿಗೆ ಸಿಕ್ಕಿಸಬೇಡಿ. ನಾನು ಕೂಡ ಅವರ ಜೊತೆಯಲ್ಲಿ ಸಭಾತ್ಯಾಗ ಮಾಡಬೇಕಾಗಿದೆ. ಏಕೆಂದರೆ ಇವತ್ತು ನಾವು ಯಾರಿಗೆ ಮಾತನಾಡಬೇಕು, ಹೇಳಿ ನೋಡೋಣ. ಈಗ ತಾವು ನನ್ನನ್ನು ಕರೆದಿದ್ದೀರಿ. ಯಾರಿಗಾಗಿ ನಾನು ಮಾತನಾಡಬೇಕು?

(ಗೊಂದಲ)

ಉಪಾಧ್ಯಕ್ಷಿಣಿಯವರು ; ಈಗ ಇಬ್ಬರು ಮಂತ್ರಿಗಳಿದ್ದಾರೆ. ನೀವು ಮಾತನಾಡಿದ್ದನ್ನು ಅವರು ನೋಟ್ ಮಾಡಿಕೊಳ್ಳುತ್ತಾರೆ. ಸಂಬಂಧಪಟ್ಟ ಮಂತ್ರಿಗಳಿಗೆ ಅದನ್ನು ತಿಳಿಸುತ್ತಾರೆ.

ಶ್ರೀ ಸಿ. ಬೈರೇಗೌಡ : ಯಾರಿಗೆ ಹೇಳಬೇಕೋ ಅವರಿಗೆ ಅದನ್ನು ಹೇಳಿದರೆ ಒಳ್ಳೆಯದು. ಸದನವನ್ನು ಹತ್ತು ನಿಮಿಷ ಮುಂದಕ್ಕೆ ಹಾಕಿ ಅವರು ಬರಲಿ ಮಾತನಾಡೋಣ. ನಾನು ಮಾತನಾಡುವುದಕ್ಕೆ ತಯಾರಿದ್ದೇನೆ.

ಶ್ರೀ ಇ.ಟಿ. ಶಂಬುನಾಥ್ (ಅರಣ್ಯ ಸಚಿವರು) : ನಾವು ನೋಟ್ ಮಾಡಿಕೊಂಡು ಸಂಬಂಧಪಟ್ಟ ಮಂತ್ರಿಗಳಿಗೆ ಕಳುಹಿಸುತ್ತೇವೆ. ಮಂತ್ರಿಗಳೇ ಇಲ್ಲ ಎಂದು ಹೇಳಿದರು. ಅಧಿಕಾರಿಗಳು ಇಲ್ಲ ಎಂದು ಹೇಳುತ್ತಿದ್ದಾರೆ. ಮೊನ್ನೆ ನಮ್ಮ ನಾಗರತ್ನಮ್ಮನವರು

ಇದ್ದರೂ ಕೂಡ ಸಂಬಂಧಪಟ್ಟ ಮಂತ್ರಿಗಳು ಇಲ್ಲ ಎಂದು ಹೇಳಿದ್ದಾರೆ. ಅವರಿಗೆ ಸಭೆಯಲ್ಲಿ ಇರಲಿಕ್ಕೆ ಇಷ್ಟವಿಲ್ಲ, ಅವರು ಜೂಜಾಟಕ್ಕೆ ಹೋಗಬೇಕಾಗಿದೆ, ಅದಕ್ಕಾಗಿ ಅವರು ಹೋಗುತ್ತಿದ್ದಾರೆ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಸಿ. ಬೈರೇಗೌಡ : ಇಂಥ ಮಾತನ್ನು ದಯವಿಟ್ಟು ಆಡಬೇಡಿ. ಆಟಕ್ಕೋಸ್ಕರ ಯಾರೂ ಬರುವುದಿಲ್ಲ. ಆಟಕ್ಕೋಸ್ಕರ ಬಂದಿರತಕ್ಕಂಥವರು ನೀವು. ಅರ್ಥವಿಲ್ಲದ ಮಾತುಗಳನ್ನು ಮಾತನಾಡಬೇಡಿ.

(ಗೊಂದಲ)

ಶ್ರೀ ಇ.ಟಿ. ಶಂಭುನಾಥ್ : ತಾವು ತಿಳಿಸಿದಂಥ ವಿಚಾರವನ್ನು ನಾವು ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತರುತ್ತೇವೆ.

(ಗೊಂದಲ)

ಶ್ರೀ ಡಿ. ಎ. ಚಿನ್ನಪ್ಪ : ಅವರ ಸರ್ಕಾರ ಇದ್ದಾಗಲೂ ಇದೇ ರೀತಿ ನಡೆಯುತ್ತಿತ್ತು.

ಶ್ರೀ ಸಿ. ಬೈರೇಗೌಡ : ನಾನು ಮಾತನಾಡುವುದಕ್ಕೆ ತಯಾರಿದ್ದೇನೆ.

ಉಪಾಧ್ಯಕ್ಷಿಣಿಯವರು : ತಾವು ಈಗಾಗಲೇ ಪ್ರಾರಂಭ ಮಾಡಿದ್ದೀರಿ. ಇನ್ನು ಐದು-ಹತ್ತು ನಿಮಿಷದಲ್ಲಿ ಮುಗಿಸಬೇಕು.

(ಗೊಂದಲ)

ಶ್ರೀ ಸಿ. ಬೈರೇಗೌಡ : ಸದನ ಪ್ರಾರಂಭವಾಗಿ ಅರ್ಧಗಂಟೆಯಾಯಿತು. ಇದು ವರೆಗು ಬಂದಿಲ್ಲ.

ಉಪಾಧ್ಯಕ್ಷಿಣಿಯವರು ; ಅವರು ಬರುತ್ತಿದ್ದಾರೆ.

ಶ್ರೀ ಸಿ. ಬೈರೇಗೌಡ : ದಯವಿಟ್ಟು ತಾವು ನನ್ನನ್ನು ಇಕ್ಕಟ್ಟಿನಿಂದ ಪಾರುಮಾಡಿ.

(ಗೊಂದಲ)

ಉಪಾಧ್ಯಕ್ಷಿಣಿಯವರು : ಮಾನ್ಯ ಬೇರೇಗೌಡರು ತಮ್ಮ ಭಾಷಣವನ್ನು ಶುರು ಮಾಡಬೇಕು.

(ಗೊಂದಲ)

ಡಾ|| ಎನ್. ಬಿ. ನಂಜಪ್ಪ : ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುವುದು ಯಾವ ರೂಲ್ಸ್‌ನಲ್ಲಿದೆ. ಮಾನ್ಯ ಸದಸ್ಯರು ಮಾತನಾಡುವಾಗ ಮಂತ್ರಿಗಳಿದ್ದಾರೆ, ಅವರು ಇದ್ದಾರೆ ಇವರು ಇದ್ದಾರೆ, ಅಧಿಕಾರಿಗಳು ಬಂದಿಲ್ಲ ಎಂದು ಪ್ರತಿ ದಿವಸ ಹೇಳುವುದಾದರೆ ಹೇಗೆ? ಸದನದ ಯಾವ ರೂಲ್ಸ್ ಅಂಡ್ ರೆಗ್ಯೂಲೇಷನ್ ಪ್ರಕಾರ ಇಂತಹವರೇ ಬರಬೇಕು, ಇವರ ಮಾತನ್ನು ಇಂತಹವರೇ ಕೇಳಬೇಕು ಎಂದು ಎಲ್ಲೂ ಇಲ್ಲ. ಆ ತರಹ ಡಿಮ್ಯಾಂಡ್ ಮಾಡಲಿಕ್ಕೆ ಸದನದ ರೂಲ್ಸ್ ಅಂಡ್ ರೆಗ್ಯುಲೇಷನ್‌ನಲ್ಲಿ ಇಲ್ಲದೇ ಇರುವುದರಿಂದ ಅಧಿಕಾರಿಗಳು ಇಂತಹವರೇ ಬಂದು ಕೇಳಬೇಕು ಎಂದು ಇಲ್ಲ. ಸಂಬಂಧಪಟ್ಟ ಮಂತ್ರಿಗಳಿಗೆ ಏನಾದರೂ ಸಹಾಯ ಮಾಡುವುದಿದ್ದರೆ ಅಧಿಕಾರಿಗಳು ಬರಬೇಕು. ಅಧಿಕಾರಿಗಳು ಬಂದು ನಮ್ಮ ಭಾಷಣವನ್ನು ಕೇಳತಕ್ಕಂಥ ವಿಧಾನ ಯಾವ ರೂಲ್ಸ್ ಅಂಡ್ ರೆಗ್ಯುಲೇಷನ್‌ನಲ್ಲಿಯೂ ನಾನು ಓದಿಲ್ಲ. ಇಂತಹ ಮಂತ್ರಿಗಳೇ ಕುಳಿತುಕೊಳ್ಳಬೇಕು, ಇವರು ಮಂತ್ರಿಗಳು, ಇವರು ಇರಕೂಡದು ಇದು ಸರ್ಕಾರ ಅಲ್ಲ ಎಂದು ಹೇಳುವುದಕ್ಕೆ ಯಾವ ಅಪೋಸಿಷನ್ ಪಾರ್ಟಿ ಲೀಡರ್‌ಗಾಗಲಿ ಅಥವಾ ರೂಲಿಂಗ್ ಪಾರ್ಟಿಯವರಿಗಾಗಲಿ ಹೇಳಲಿಕ್ಕೆ ಅಧಿಕಾರ ಇಲ್ಲ, ಮೆಜಾರಿಟಿ ಇದ್ದು ಕೋರಂ ಇದ್ದು ಅಧ್ಯಕ್ಷರು ಬಂದು ಸಭೆಯನ್ನು

ನಡೆಸತಕ್ಕಂಥ ವಿಧಾನ ಇದ್ದಾಗ ಮಾತನಾಡತಕ್ಕಂಥವರು ಮಾತನಾಡಬೇಕು, ಕೇಳತಕ್ಕವರು ಕೇಳಬೇಕು, ಕೇಳಲಿಕ್ಕೆ ಇಷ್ಟ ಇಲ್ಲದೇ ಇರುವವರು ಹೊರಗಡೆ ಹೋಗಬೇಕು. ಇದು ಇಷ್ಟೇ ಇರತಕ್ಕಂಥದ್ದು. ಅವರು ಹೇಳಿರುವದನ್ನು ನಾನು ಬೇರೆ ಕಡೆ ಎಲ್ಲೂ ನೋಡಿಲ್ಲ, ಇದ್ದರೆ ತೋರಿಸಲಿ.

ಶ್ರೀ ಸಿ. ಬೈರೇಗೌಡ : ಅಧ್ಯಕ್ಷರೆ, ನಾನು ಸರ್ಕಾರದ ದಾಖಲೆಯನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ದಿನಾಂಕ 7-3-1991ರಲ್ಲಿ ನಮ್ಮ ರಾಜ್ಯದ ಮುಖ್ಯ ಕಾರ್ಯದರ್ಶಿಗಳು ಅನ್-ಅಫಿಷಿಯಲ್ ನೋಟ್ ಎಂದು ಒಂದು ಹೊರಡಿಸಿದ್ದಾರೆ. ಅದನ್ನು ನಾನು ಇಲ್ಲಿ ಓದತಕ್ಕದ್ದು ಸೂಕ್ತ ಎಂದು ಅನಿಸುತ್ತಿದೆ.

"This is to remind that the turn of list of officers to be present daily in the Officers; Gallery in each House has to be made available to-day. It is also requested that the Secretary, including the Special Secretary, Additional Secretary in every Department make it a point to spend one hour each day between 7.3.1991 and 22.3.1991 in either House and furnish the undersigned a copy of the important points which have come up during the presence of the Secretary, Special Secretary, Additional Secrtary in the Officers' Gallary. I would like to make a summary of the observations on each day to the Chief Minister to facilitate him to reply. The suggestions made by the Members of the Legislature should be made available within 7.30 P.M. on every day during the Session, so that the most important points can be brought to the attention of the Chief Minister, Minister for parliamentary Affairs. It is also proposed that during the ensuing two weeks one of the Secretaries by turn spends a day either at the Council or at the Assembly and oversee...."

ಈ ಪದದ ಬಗ್ಗೆ ನಾನು ಆಮೇಲೆ ಬರುತ್ತೇನೆ.

"......Suggestions pertaining to all Departments so that there may be no further cause of critical comments that the suggestions of Members of both the Houses of Legislature have not been acted upon, during the discussions after the special business of the House, A turn list of Secretaries to be present on each day is furnished in Appendix-1 and 2 to this Un-official Note."

ಇದನ್ನು ದಯವಿಟ್ಟು ತಾವು ಕೇಳಬೇಕು. ಇದರ ಪ್ರಕಾರ ಸೆಕ್ರೆಟರಿಗಳು ಇರಬೇಕು. ಅಡಿಷನಲ್ ಸೆಕ್ರೆಟರಿ ಯಾರೋ ಸ್ಪೆಷಲ್ ಸೆಕ್ರೆಟರಿ ಯಾರೋ, ಸೆಕ್ರೆಟರಿ ಯಾರೋ ನಮಗಂತೂ ಗೊತ್ತಿಲ್ಲ. ಈಗ ಏನಾಗಿದೆ ಇಲ್ಲಿ ಅಧಿಕಾರಿಗಳು ಇರುವುದು ಬೇಕಾಗಿಲ್ಲ, ಮಂತ್ರಿಗಳು ಮೊದಲೇ ಇರುವುದು ಬೇಕಾಗಿಲ್ಲ, ಇಲ್ಲಿ ಯಾರೂ ಬೇಕಾಗಿಯೇ ಇಲ್ಲ. ನಾವು ಇಲ್ಲಿ ಏಕೆ ಮಾತನಾಡಬೇಕು. ಇದರ ಮೇಲೆ ಮಾತನಾಡಬೇಕಾಗಿದ್ದರೆ ನಾನು ಏದಾರು ರಾತ್ರಿ ನಿದ್ದೆಗೆಟ್ಟು ತಯಾರಾಗಿರತಕ್ಕಂಥಾದ್ದು ಯಾರಿಗೋಸ್ಕರ ಏತಕ್ಕೋಸ್ಕರ

ಉಪಾಧ್ಯಕ್ಷರು : ಈಗ ನೀವು ಮಾತನಾಡುತ್ತೀರೋ ಅಥವಾ ನಾನು ಬೇರೆಯವರನ್ನು ಕರೆಯಬೇಕೋ.

ಶ್ರೀ ಸಿ. ಬೈರೇಗೌಡ : ತಾವು ಕರೆದಿದ್ದೀರಿ, ನಾನು ಮಾತನಾಡುತ್ತೇನೆ, ತಾವು ಮಂತ್ರಿಗಳನ್ನು ಕರೆಸಿ.

ಉಪಾಧ್ಯಕ್ಷರು : ಮಾನ್ಯ ಮಂತ್ರಿಗಳು ಅವರ ಛೇಂಬರ್‌ನಿಂದ ಬರಬಹುದು. ತಾವು ಶುರುಮಾಡಿ ಇನ್ನು ಹದಿನೈದು ನಿಮಿಷದಲ್ಲಿ ಬರುತ್ತಾರೆ.

ಶ್ರೀ ವಾಟಾಳ್ ನಾಗರಾಜ್ : ಇದನ್ನು ತಾವಾದರೂ ಚಿಂತನೆ ಮಾಡಬೇಕು. ಏಕೆಂದರೆ ಆ ಕುರ್ಚಿಗೆ ಅಗೌರವ ಮಾಡುತ್ತಿದ್ದಾರೆ.

ಉಪಾಧ್ಯಕ್ಷಿಣಿಯವರು : ಆಗಿನಿಂದಲೂ ಮಾನ್ಯ ನಂಜುಂಡಸ್ವಾಮಿಯವರು ನಿಂತಿದ್ದಾರೆ........

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ : ಮಾನ್ಯ ಅಪಾಧ್ಯಕ್ಷಿಣಿಯವರೆ, ಯಾರು ಈ ರೀತಿ ಅಗೌರವವನ್ನು ಮಾಡುತ್ತಿದ್ದಾರೆಂದು ದೇಶಕ್ಕೆ ಗೊತ್ತಿದೆ. ಚರಿತ್ರೆಯಲ್ಲಿ ಬರೆಮು ಇಡಬೇಕು. ಇಂಥ ಸಣ್ಣ ವಿಚಾರಕ್ಕೆ ಏತಕ್ಕೆ ಪದೇ ಪದೇ ಈ ರೀತಿ ಮಾಡುತ್ತಾರೆ. ಇಲ್ಲಿ ಇಬ್ಬರು ಮಂತ್ರಿಗಳಿದ್ದಾರೆ ಅವರು ಕೇಳಿಸಿಕೊಳ್ಳುತ್ತಿದ್ದಾರೆ.

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ ; ಅರಣ್ಯ ಮಂತ್ರಿಗಳಿದ್ದಾರೆ, ಅವರು ಕ್ಲೀನ್ ಆಗಿ ಕುಳಿತಿದ್ದಾರೆ ಮಾನ್ಯ ಬೈರೇಗೌಡರಿಗೆ ಭಾಷಣ ಶುರು ಮಾಡಲಿಕ್ಕೆ ಹೇಳಿ....

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಸದಸ್ಯರು ಬಹಳ ಬೇಜವಾಬ್ದಾರಿಯಿಂದ ಮಾತನಾಡುತ್ತಿದ್ದಾರೆ....

(ಗೊಂದಲ)

ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ : ಇದನ್ನು ನಾವು ಅರ್ಥಮಾಡಿಕೊಳ್ಳುವುದೇ ಕಷ್ಟವಾಗಿದೆ. ನನ್ನನ್ನು ಒಬ್ಬರು ಮಂತ್ರಿ ಎಂದರು, ಇನ್ನೊಬ್ಬರು ಇನ್ನೇನೂ ಅಂದರು. ಇದನ್ನು ನಾವು ಯಾವರೀತಿ ಅರ್ಥಮಾಡಿಕೊಳ್ಳಬೇಕೆಂಬುದನ್ನು ನೀವೇ ಹೇಳಿ. ಅವರ ಪಕ್ಷದ ಸದಸ್ಯರನ್ನು ಅವರು ಸ್ವಲ್ಪ ಕಂಟ್ರೋಲ್ ಮಾಡಬಹುದಿತ್ತು. ಅದನ್ನು ಅವರು ಮಾಡಲಿಲ್ಲ.

(ಗೊಂದಲ)

ಶ್ರೀ ಎ.ಕೆ. ಅನಂತಕೃಷ್ಣ ; ಮಾನ್ಯ ಉಪಾಧ್ಯಕ್ಷಿಣಿಯವರೇ, ಮಾನ್ಯ ಬೈರೇಗೌಡರು ಅದನ್ನು ಓದುವುದಕ್ಕೆ ತಾವು ಅನುಮತಿಯನ್ನು ಕೊಟ್ಟಿದ್ದೀರಾ? ಅವರು ಅದನ್ನು ಓದಿದ್ದಾರೆ. ಛೀಫ್ ಸೆಕ್ರೆಟರಿಯವರು ಏನು ಸರ್ಕ್ಯುಲರ್‌ನ್ನು ಕಳುಹಿಸಿಕೊಟ್ಟಿದ್ದಾರೆ ಅವರು ಅದನ್ನು ಒಪ್ಪಿಕೊಳ್ಳುತ್ತಾರೆಯೆ? ಅವರು ಅದನ್ನು ಒಪ್ಪುವುದಾದರೆ ನನ್ನದು ಒಂದು ಮಾತು ಹೇಳುವುದಿದೆ. ತಾವು ಒಪ್ಪುವುದಾದರೆ ಅದರಲ್ಲಿ ಬಹಳ ಸ್ಪಷ್ಟವಾಗಿದೆ. ಚೀಫ್ ಸೆಕ್ರೆಟರಿಯವರು ಯಾವ ಕಾರ್ಯದರ್ಶಿ ಇರಬೇಕು, ಎಂಬುದನ್ನು ಹೇಳಿದ್ದಾರೆ.....

ಉಪಾಧ್ಯಕ್ಷಿಣಿಯವರು : ಅನಂತ ಕೃಷ್ಣರವರೇ ನೀವು ದಯವಿಟ್ಟು ಕೂತುಕೊಳ್ಳಿ. ಈಗ ಮಾನ್ಯ ಬೈರೇಗೌಡರು ಮುಂದುವರಿಸಬೇಕಾಗಿದೆ. ಎರಡು ನಿಮಿಷ ನಾನು ಬೇರೆ ಯಾವುದೆ ವಿಷಯವನ್ನು ಎತ್ತುತ್ತೇನೆಂದು ಹೇಳಿದರು. ಅದು ಆಯಿತು. ಈಗ ಬೇರೆ ವಿಷಯಕ್ಕೆ ಬಂತು. ಈಗ ಅದನ್ನು ಮುಂದುವರಿಸುವುದು ಬೇಡ. ಈಗ ಬೈರೇಗೌಡರೇ ತಮ್ಮ ಮಾತನ್ನು ಮುಂದುವರಿಸಬೇಕು. ಇಲ್ಲದಿದ್ದರೆ ನಾನು ಬೇರೆಯವರನ್ನು ಕರೆಯಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ : ನಾನು ಮಾತನಾಡಲೇಬೇಕಾಗುತ್ತದೆ.

ಪ್ರೊ॥ ಎಂ. ಡಿ. ನಂಜುಂಡಸ್ವಾಮಿ ; ಮಾನ್ಯ ಉಪಾಧ್ಯಕ್ಷಿಣಿಯವರೆ, ತಾವು ನನಗೆ ಅವಕಾಶವನ್ನು ಕೊಟ್ಟಿದ್ದಿರಿ. ಆದರೆ ಹಿರಿಯ ಸದಸ್ಯರು ಮಧ್ಯೆ ಪ್ರವೇಶ

ಮಾಡಿದ್ದರಿಂದ ನಾನು ಮಾತನಾಡುವುದಕ್ಕೆ ಆಗಲಿಲ್ಲ. ಇಲ್ಲಿ ನಾವು ಏನು ಮಾಡುತ್ತಿದ್ದೇವೆಂಬುದು ನನಗೆ ಅರ್ಥವಾಗುತ್ತಿಲ್ಲ. ಮಾನ್ಯ ಬೈರೇಗೌಡರು ಓದಿ ಹೇಳಿದಂಥ ವಿಷಯವನ್ನು ನಾನೇ ತಮ್ಮ ಗಮನಕ್ಕೆ ತರಬೇಕೆಂದಿದ್ದೆ. ಆದರೆ ಅವರೇ ಓದಿ ಹೇಳಿದ್ದಾರೆ. ಅವರು ಮಾತನಾಡುವುದು ಈಗ ಯಾರು ಮುಖ್ಯ ಕಾರ್ಯದರ್ಶಿ ಇದ್ದಾರೆ ಅವರಿಗೆ ಸಂಬಂಧಪಟ್ಟ ವಿಚಾರ. ಇದು ಸಣ್ಣ ವಿಚಾರವೇನಿಲ್ಲ. ಮಾನ್ಯ ರಾಜ್ಯಪಾಲರ ಭಾಷಣಕ್ಕೆ ನಾನು ತಿದ್ದುಪಡಿಗಳನ್ನು ಕಳುಹಿಸಿಕೊಟ್ಟಿದ್ದೇವೆ. ತಾವು ಅದಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ. ಮಾನ್ಯ ಬೈರೇಗೌಡರ ಮಾತಿನ ನಂತರ ನನ್ನದು ಬರಬಹುದು ಅಥವಾ ಮಾನ್ಯ ಸಿಂಧ್ಯರವರ ಮೊದಲನೇ ತಿದ್ದುಪಡಿ ಆದಮೇಲೆ ನನ್ನ ಎರಡು ತಿದ್ದುಪಡಿಗಳು ಬರಬಹುದು. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ...

(ಗೊಂದಲ)

ಉಪಾಧ್ಯಕ್ಷಿಣಿಯವರು : ನೀವು ಮಾತನಾಡುವವರಿದ್ದೀರಿ, ಆಗ ನೀವು ಏನು ಬೇಕಾದರು ಹೇಳಿ.

ಪ್ರೊ|| ಎಂ.ಡಿ. ನಂಜುಂಡಸ್ವಾಮಿ : ನಾನು ಏತಕ್ಕೆ ಪೀಠಿಕೆಯನ್ನು ಹಾಕುತ್ತಿದ್ದೇನೆಂದರೆ ತಾವು ಬೈರೇಗೌಡರು ತಮ್ಮ ಮಾತನ್ನು ಮುಂದುವರಿಸದದಿದ್ದರೆ ನಾನು ಬೇರೆಯವರನ್ನು ಕರೆಯಬೇಕಾಗುತ್ತದೆ ಎಂದು ಹೇಳಿದಿರಿ. ಆದರ ಬಗ್ಗೆಯೇ ನಾನೂ ಹೇಳುತ್ತಿದ್ದೇನೆ. ನಾನು ಮುಂದಿನ ಬೇಕಾದ ತಿದ್ದುಪಡಿಗಳು 2 ಮುಖ್ಯವಾದ ವಿಚಾರಗಳಿಗೆ ಸಂಬಂಧಪಟ್ಟಿದೆ.

ಉಪಾಧ್ಯಕ್ಷಿಣಿಯವರು : ತಿದ್ದುಪಡಿಯ ವಿಚಾರದಲ್ಲಿ ಈಗ ಚರ್ಚೆ ಬೇಡ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ನಾನು ಈ ಸಭೆಯ ಕಾಲಹರಣ ಮಾಡುವವನಲ್ಲ, ನಾನು ಯಾವತ್ತೂ ಆ ರೀತಿ ಮಾಡಿಲ್ಲ. ಎಂಪ್ಲಾಯಿಮೆಂಟ್ ಗ್ಯಾರೆಂಟಿ ಆಕ್ಟ್ ಆಗಿದೆ ನಿಮ್ಮ ಈ ವರ್ಷದ ಯಾವುದೇ ಕಾರ್ಯಕ್ರಮವೂ ಕೂಡ ಜಾರಿಗೆ ಬರುವುದಿಲ್ಲ ಎನ್ನುವಂಥ ಒಂದು ತಿದ್ದುಪಡಿಯನ್ನು ನಾನು ತಂದಿದ್ದೇನೆ. ಮತ್ತೆ ನೀರಿನ ಬಗ್ಗೆ ಬಹಳ ಜನರು ಮಾತನಾಡುತ್ತಿದ್ದಾರೆ. ನಾನು ತಮಗೆ ಹೇಳುತ್ತೇನೆ. ಗ್ರೌಂಡ್ ವಾಟರ್ ಬಿಲ್ಲನ್ನು ತರದೇ ಗ್ರೌಂಡ್ ವಾಟರ್ ಮಸೂದೆಯನ್ನು ಮಾಡದೇ ಈ ರಾಜ್ಯದ ನೀರಿನ ಸಮಸ್ಯೆಯನ್ನು ಬಗೆಹರಿಸುದಕ್ಕಾಗುವುದಿಲ್ಲ ಎನ್ನತಕ್ಕ ವಿಷಯವನ್ನು ಈ ಎರಡು ತಿದ್ದುಪಡಿಗಳ ಮುಖಾಂತರ ಮಂಡಿಸಬೇಕಾಗಿದೆ. ನಾನು ಎಲ್ಲಿ ಮಂಡಿಸಬೇಕು? ಯಾರಿಗೆ ಮಂಡಿಸಬೇಕು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ : ತಿದ್ದುಪಡಿಯನ್ನು ಮಂಡಿಸುವುದಕ್ಕೆ ಮಂತ್ರಿಗಳೇ ಇರಬೇಕೆಂದಿಲ್ಲ, ಯಾರಿಗೆ ಮಂಡಿಸಬೇಕು ಎಂದರೆ ಏನು ಅರ್ಥ? ಸಭೆಗೆ ಮಂಡಿಸಿ....

(ಗೊಂದಲ)

ಪ್ರೊ|| ಎಂ.ಡಿ. ನಂಜುಂಡಸ್ವಾಮಿ : ನೀವು ಏತಕ್ಕೆ ಮಧ್ಯೆ ಮಾತನಾಡುತ್ತೀರಿ. ನಾನು ಮಾತನಾಡಿದಮೇಲೆ ಮಾತನಾಡಿ

(ಗೊಂದಲ)

ಶ್ರೀ. ಆರ್.ವಿ. ದೇಶಪಾಂಡೆ : ಮಾನ್ಯ ಉಪಾಧ್ಯಕ್ಷಿಣಿಯವರೆ, ಈಗ ವಿಧಾನ ಪರಿಷತ್ತು ಅಡ್ಜರ್ನ್ ಆಗಿದೆ. ಮಾನ್ಯ ಸದಸ್ಯರು ಈಗ ಮಾನ್ಯ ರಾಜ್ಯಪಾಲರ ಭಾಷಣದಮೇಲೆ ಮಾತನಾಡಬೇಕಾಗಿದೆ. ಇಲ್ಲಿ ಮೊದಲನೇ ಸಾಲನಲ್ಲಿ ಒಬ್ಬರೂ

ಮಂತ್ರಿಗಳಿಲ್ಲ ಎಂದರೆ ನಾವು ಏನು ಮಾಡಬೇಕು? ಯಾರು ಬರೆದುಕೊಳ್ಳುತ್ತಾರೆ? ಏತಕ್ಕೆ ಮಾತನಾಡಬೇಕು?

ಉಪಾಧ್ಯಕ್ಷಿಣಿಯವರು : ದಯವಿಟ್ಟು ಕುಳಿತುಕೊಳ್ಳಿ.

ಪ್ರೊ|| ಎಂ.ಡಿ. ನಂಜುಂಡಸ್ವಾಮಿ : ನಾನು ಇನ್ನೂ ಮುಗಿಸಿಯೇ ಇಲ್ಲ.

ಸಂಬಂಧಪಟ್ಟ ಇಲಾಖೆಯವರು ಯಾರಾದರೂ ಇರಬೇಕು. ಇಲ್ಲದಿದ್ದರೆ ಏನು ಪ್ರಯೋಜನವಾಗುತ್ತದೆ. ಈಗ ಏಕೆ ಹೇಳುತ್ತಿದ್ದೇನೆಂದರೆ ಶ್ರೀಯುತ ಬೈರೇಗೌಡರನ್ನು ಕರೆಯುತ್ತೇನೆ, ಅವರು ಮಾತನಾಡದಿದ್ದರೆ ಮುಂದಿನವರನ್ನು ಕರೆಯುತ್ತೇನೆಂದು ಹೇಳಿದಿರಿ. ತಾವು ಮುಂದೆ ನನ್ನನ್ನು ಕರೆದರೆ ನಾನು ಮಾತನಾಡುವುದಿಲ್ಲ. ಅದನ್ನು ತಮಗೆ ತಿಳಿಸುವುದಕ್ಕೋಸ್ಕರ ಹೇಳುತ್ತಿದ್ದೇನೆ. ಈಗ ಸಭೆಯನ್ನು ಮುಂದೂಡಿ ಅವರನ್ನು ಏಕೆ ಕರೆಯಬಾರದು.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : 40 ನಿಮಿಷಗಳಿಂದ ನಾವು ಕೇಳುತ್ತಿದ್ದೇವೆ. ಮಾನ್ಯ ಮಂತ್ರಿಗಳು ಒಬ್ಬರೂ ಇಲ್ಲ. ಮಂತ್ರಿಗಳು ವಿಧಾನಸೌದದಲ್ಲಿದ್ದಿದ್ದರೆ ಇಷ್ಟೊತ್ತಿಗೆ ಬರಬಹುದಾಗಿತ್ತು. ಒಬ್ಬರೂ ಕಾಣುತ್ತಿಲ್ಲ, ಎಲ್ಲಿಹೋಗಿದ್ದಾರೆ, ಅವರಿಗೆ ಜವಾಬ್ದಾರಿ ಇದೆಯೇ? ಈ ಸರ್ಕಾರದ ಮಂತ್ರಿಗಳಿಗೆ ಈ ಸಭೆಯ ಬಗ್ಗೆ ಗೌರವ ಇದೆಯೇ ಇಲ್ಲವೇ?

ಪ್ರೊ|| ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ಅಧ್ಯಕ್ಷಿಣಿಯವರೆ ತಾವು ಈ ಸಭೆಯನ್ನು ಈಗ ಮುಂದೂಡಿ ಇಲ್ಲದಿದ್ದರೆ ನಾನೇ ಆಚೆಗೆ ಹೋಗುತ್ತೇನೆ.

ಸದಸ್ಯರಾದ ಪ್ರೊ|| ಎಂ. ಡಿ. ನಂಜುಂಡಸ್ವಾಮಿಯವರು ಸಭೆಯಿಂದ ನಿರ್ಗಮಿಸಿದರು

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷಣಿಯವರೇ ನಾನು ಆಗಲೆ ಸರ್ಕುಲರ್‌ನ್ನು ಓದಿದೆ. ತಮ್ಮ ಗಮನಕ್ಕೆ ತರತಕ್ಕಂಥಾದ್ದೇನೆಂದರೆ ಒಂದು ಪದ ಉಪಯೋಗಿಸಿದ್ದಾರೆ.

ಉಪಾಧ್ಯಕ್ಷಿಣಿಯವರು : ಈಗ ವಂದನಾ ನಿರ್ಣಯದ ಮೇಲೆ ಮಾತನಾಡಬೇಕು. ಶ್ರೀಯುತ ಬೈರೇಗೌಡರೇ ತಾವು ವಂದನಾ ನಿರ್ಣಯದ ಮೇಲೆ ಮಾತನಾಡಿ.

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ : ಮಾನ್ಯ ಮಂತ್ರಿಗಳನ್ನು ಕರೆಸಿ.

ಶ್ರೀ ವಾಟಾಳ್‌ನಾಗರಾಜ್ : ಮಂತ್ರಿಗಳು ಎಲ್ಲಿಹೋದರು.

(ಗೊಂದಲ)

ಮಾನ್ಯ ಉಪಾಧ್ಯಕ್ಷರು ಯಾವುದನ್ನೂ ರೆಕಾರ್ಡ್‌ಮಾಡಬಾರದೆಂದು ಅಪ್ಪಣೆ ನೀಡಿದ ಮೇರೆಗೆ ರೆಕಾರ್ಡ್ ಮಾಡಲಾಗಲಿಲ್ಲ

ಶ್ರೀ ಆರ್.ವಿ. ದೇಶಪಾಂಡೆ : ಇಲ್ಲಿ ಯಾರು ಮಂತ್ರಿಗಳು ಕಳಿತಿರುತ್ತಾರೆ ಅವರ ಕೈಯಲ್ಲಿ ಪೆನ್ನೂ ಇಲ್ಲ, ಪ್ಯಾಡ್ ಕೂಡ ಇಲ್ಲ.

ಉಪಾಧ್ಯಕ್ಷಿಣಿಯವರು : ಏನು ನೀವು ಹೇಳುವಂಥ ಮಾತು. ಪೆನ್ನು ಇಲ್ಲ, ಪ್ಯಾಡ್ ಇಲ್ಲವೆಂದರೆ ಏನು ಅದನ್ನೆಲ್ಲ ತೋರಿಸಬೇಕೆ. ಶ್ರೀಯುತ ಬೈರೇಗೌಡೇರೇ ತಾವು ತಮ್ಮ ಭಾಷಣವನ್ನು ಮುಂದುವರೆಸಿ. ಮಾನ್ಯ ಚೀಫ್ ವಿಫ್‌ಚರವರು ಹೋಗಿದ್ದಾರೆ. ಅವರೆಲ್ಲರೂ ಬರುತ್ತಾರೆ. ಈಗ ತಾವು ಮುಂದುವರೆಸಿ.

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಸಭಾಧ್ಯಕ್ಷರೇ ನನ್ನ ಒಂದು ಸಲಹೆ ಏನೆಂದರೆ ಮೂರುವರೆ ಗಂಟೆಗೆ ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್ ಇರುತ್ತದೆ. ಇನ್ನು 10-15 ನಿಮಿಷಕ್ಕೆ ಇದೆ. ಈ ಸ್ಥಿತಿಯಲ್ಲಿ ಅದೂ ಆಗುತ್ತದೋ ಇಲ್ಲವೋ ಗೊತ್ತಿಲ್ಲ. ಅದಕ್ಕೆ ತಮ್ಮಲ್ಲಿ ನಾನು ಏನು ಕೇಳುತ್ತಿದ್ದೇನೆಂದರೆ ಬಿಸಿನೆಸ್ ಅಡ್ವೈಸರಿಯಲ್ಲಿ ಕಮಿಟಿ ಮೀಟಿಂಗ್‌ನಲ್ಲಾದರೂ ಇದನ್ನು ತೆಗೆದುಕೊಳ್ಳೋಣ. ಸದನ ಹೀಗೆ ನಡೆಯಬೇಕೆಂದು ಮಂತ್ರಿಮಂಡಲದ ಅಭಿಪ್ರಾಯವಿದ್ದರೆ ಹಾಗೆಯೇ ನಡೆಯಲಿಕ್ಕೆ ನನ್ನ ಅಭ್ಯಂತರವಿಲ್ಲ. ಇಲ್ಲ ನಮಗೆ ಜವಾಬ್ದಾರಿ ಇದೆ. ಜನತೆಯ ಬಗ್ಗೆ ಚಿಂತನೆ ಮಾಡುತ್ತಿದ್ದೇವೆ ಎನ್ನತಕ್ಕಂಥ ಅಭಿಪ್ರಾಯವಿದ್ದರೆ ಯಾವುದಾದರೂ ಒಂದು ನಿರ್ಧಾರಕ್ಕೆ ಬರೋಣ. ಆದ್ದರಿಂದ ನಾನು ತಮ್ಮಲ್ಲಿ ಮನವಿ ಮಾಡುವುದೇನೆಂದರೆ ಪದೇ ಪದೇ ಯಾವುದನ್ನು ಮಾಡಬಾರದು ಎಂದು ಇದ್ದೀರೊ ಆ ಕೆಲಸವನ್ನು ನಮ್ಮಿಂದ ಮಾಡಿಸಬೇಡಿ ಆದ್ದರಿಂದ ನಮಗಾಗಲಿ ಸದನಕ್ಕಾಗಲಿ, ಸರ್ಕಾರಕ್ಕಾಗಲಿ ದೇಶದ ಜನರಿಗಾಗಲಿ ನಾವು ಬಹಳ ದೊಡ್ಡ ಉಪಕಾರ ಮಾಡುತ್ತಿದ್ದೇವೆಂದು ಅನಿಸುವುದಿಲ್ಲ. ಆದ್ದರಿಂದ ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ಐದು ನಿಮಿಷದಲ್ಲಿ ಏನು ಆಗುವುದಿಲ್ಲ. ಬಿ.ಎ.ಸಿ.ಮೀಟಿಂಗ್ ಆಗುವವರೆಗೂ ಈ ಸದನವನ್ನು ಮುಂದೂಡಿ. ತಮ್ಮ ಜವಾಬ್ದಾರಿಯನ್ನು ವಹಿಸುವುದು ಕಷ್ಟವಾಗುತ್ತದೆ. ಅದಕ್ಕಿಂತ ಹೆಚ್ಚು ಪ್ರೊಟೆಸ್ಟ್ ಮಾಡುವುದು ಕಷ್ಟ. ಆದ್ದರಿಂದ ಛೇರ್‌ನಿಂದಲೂ ನಾನು ಇದಕ್ಕೆ ಸಹಾಯವನ್ನುಅಪೇಕ್ಷೆ ಪಡುತ್ತೇನೆ. ಐದು ನಿಮಿಷ ಸದನವನ್ನು ಮುಂದೂಡಿ ಬಿ.ಎ.ಸಿ.ಮೀಟಿಂಗ್ ಆದಮೇಲೆ ಸಭೆಯನ್ನು ಕರೆಯೋಣ.

ಉಪಾಧ್ಯಕ್ಷಿಣಿಯವರು : ಅಲ್ಲಿ ಮೀಟಿಂಗ್ ಆದರೆ ಇಲ್ಲಿ ಅಡ್ಜರ್ನ್ ಮಾಡಬೇಕೆಂದು ಇಲ್ಲ. ಈಗ ಮಾನ್ಯ ಬೈರೇಗೌಡರು ತಮ್ಮ ಭಾಷಣವನ್ನು ಮುಂದುವರೆಸಲಿ. ಮಂತ್ರಿಗಳನ್ನು ಕರೆತರಲು ಚೀಫ್‌ವಿಪ್ ಅವರು ಹೋಗಿದ್ದಾರೆ. ಮಂತ್ರಿಗಳು ಬರುತ್ತಾರೆ, ಚರ್ಚೆ ಮುಂದುವರೆಯಲಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಒಬ್ಬರು ಐ.ಎ.ಎಸ್. ಅಧಿಕಾರಿಗಳು ಬಂದರು, ಮಂತ್ರಿಗಳು ಬಂದರು.

ಶ್ರೀ ಸಿ. ಬೈರೇಗೌಡ : ಸನ್ಮಾನ್ಯ ಉಪಾಧ್ಯಕ್ಷರೆ, ಇವತ್ತಿನ ದಿವಸ ಈ ಸದನದಲ್ಲಿ ಮಾತನಾಡಬೇಕಾಗಿದ್ದರೆ ಅನೇಕ ರಾತ್ರಿ ನಿದ್ದೆಗೆಟ್ಟು ತಯಾರಿ ನಡೆಸಿ ಬಂದು ಮಾತನಾಡುತ್ತಿದ್ದೇನೆ. ಅಷ್ಟು ಜವಾಬ್ದಾರಿಯುತವಾಗಿ ಮಾತನಾಡುವಾಗ ಆ ಕಡೆಯಿಂದ ಜವಾಬ್ದಾರಿಯುತವಾದ ಪ್ರತಿಕ್ರಿಯೆ ಬಾರದೆ ಹೋದರೆ ನಾವು ಇಷ್ಟೆಲ್ಲ ಶ್ರಮಪಟ್ಟು ನಿದ್ದೆಗೆಟ್ಟು ತಯಾರಿ ನಡೆಸಿದ್ದು ವ್ಯರ್ಥವಾಗುತ್ತದೆ. ಆದುದರಿಂದ ನಾನು ಮಂತ್ರಿಗಳ ಪೈಕಿ ಯಾರಾದರೂ ಇರಬೇಕೆಂದು ಹೇಳಿದನೇ ಹೊರತು ಬೇರಾವ ಕಾರಣದಿಂದ ಅಲ್ಲ. ನಾನು ಮಾತನಾಡುವುದಕ್ಕೆ ಮೊದಲು ಓದಿದಂತಹ ಅನ್ ಅಫಿಷಿಯಲ್ ನೋಟ್ ಏನಿದೆ ಅದರಲ್ಲಿ ಮುಖ್ಯ ಕಾರ್ಯದರ್ಶಿಗಳು ಒಂದು ಪದವನ್ನು ಉಪಯೋಗಿಸಿದ್ದಾರೆ. ಅದನ್ನು ಮತ್ತೊಮ್ಮೆ ಸದನದ ಗಮನಕ್ಕೆ ತರಬಯಸುತ್ತೇನೆ.

" It is also proposed that during the ensuing two weeks one of the Secretaries by turn spends a day either at the Council or at the Assembly and oversee the suggestions...."

ನಮ್ಮ ಮೇಲೆ ಅವರು ಓವರ್‌ಸೀ ಮಾಡುತ್ತಾರೆ. ಇದಕ್ಕೆ ಏನು ಅರ್ಥ? ಈ ಸದನದ ಸದಸ್ಯರ ಮೇಲೆ ಕಾರ್ಯದರ್ಶಿಗಳು ಓವರ್‌ಸೀ ಮಾಡುತ್ತಾರಂತೆ. ಇದು ಮುಖ್ಯ ಕಾರ್ಯದರ್ಶಿಗಳು ತಮ್ಮ ಅಧೀನದಲ್ಲಿರತಕ್ಕ ಕಾರ್ಯದರ್ಶಿಗಳಿಗೆ ಕೊಡತಕ್ಕ

ನಿರ್ದೇಶನ. ನಾನು ಮಾತನಾಡಬೇಕಾದರೆ ಹೆದರಿಕೆ ಆಗುತ್ತದೆ. ಈಗ ನಾನು ಮಾತನಾಡುವುದನ್ನು ಯಾವ ಸೆಕ್ರಟರಿ ಯಾವ ಅಡೀಷನಲ್ ಸೆಕ್ರೆಟರಿ ಓವರ್‌ಸೀ ಮಾಡುತ್ತಿದ್ದಾರೋ ಗೊತ್ತಿಲ್ಲ. ಅವರ ಹಂಗಿನಲ್ಲಿ ನಾವು ಬಂದು ಇಲ್ಲಿ ಮಾತನಾಡುತ್ತಿದ್ದೇವೆಯೆ? ಅವರ ಹಂಗು ನಮಗೆ ಬೇಕಾಗಿಲ್ಲ. ಅಧಿಕಾರಿಗಳ ಹಂಗಿನಲ್ಲಿ ಬಂದು ನಾವಿಲ್ಲಿ ಕುಳಿತುಕೊಳ್ಳುತ್ತಿಲ್ಲ. ಜನರು ಕಳುಹಿಸಿದ್ದಾರೆ, ಜನರ ಕಷ್ಟ ಸುಖ, ನೋವು, ನಲಿವು ಏನಿದೆ ಅದನ್ನು ಪ್ರತಿಬಿಂಬಿಸುವುದು ನಮ್ಮ ಕರ್ತವ್ಯ. ನಮ್ಮ ಕರ್ತವ್ಯವನ್ನು ಮಾಡುವುದಕ್ಕೆ ನಾವು ಬಂದಿದ್ದೇವೆ. ನಾವು ಮಾತನಾಡಬೇಕಾದರೆ ಓವರ್‌ಸೀ ಮಾಡುತ್ತಾರೆಂದರೆ, ಇದಕ್ಕಿಂತ ಅವಮಾನಕರವಾದುದು ಈ ಸದನಕ್ಕೆ ಮತ್ತು ಸದನದ ಸದಸ್ಯರಿಗೆ ಬೇರೆಂದು ಇಲ್ಲ. ಆದ್ದರಿಂದ ತಾವು ಮುಖ್ಯ ಕಾರ್ಯದರ್ಶಿಗಳನ್ನು ಸದನಕ್ಕೆ ಕರೆದು ಛೀಮಾರಿ ಹಾಕಬೇಕಾದುದು ಸದನದ ಕರ್ತವ್ಯ .ಈ ಕೆಲಸವನ್ನು ತಾವು ನೆರವೇರಿಸಬೇಕೆಂದು ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಯಾವ ಸದಸ್ಯರು ಇದನ್ನು ಲಘುವಾಗಿ ತೆಗೆದುಕೊಳ್ಳುವ ಹಾಗಿಲ್ಲ. ಇದು ಬಹಳ ತೀವ್ರವಾಗಿ ಪರಿಗಣನೆ ಮಾಡತಕ್ಕ ವಿಚಾರ. ಅವರನ್ನು ಕರೆಸಿ ಛೀಮಾರಿ ಹಾಕಬೇಕೆಂದು ಮತ್ತೊಮ್ಮೆ ಆಗ್ರಹಪಡಿಸುತ್ತೇನೆ. ಇದಾದಮೇಲೆ, ಇವತ್ತಿನ ದಿವಸ ಮೈಸೂರು ಪೇಪರ್ ಮಿಲ್ಸ್ ಬಗ್ಗೆ ಮಾತನಾಡುತ್ತಿದ್ದೆ. ಆ ಮಿಲ್‌ನಲ್ಲಿ ಕೆ.ಕೆ.ಮಿಶ್ರ ಎಂಬುವವರು ಛೇರ್ಮನ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್ ಆಗಿ ಎರಡೂವರೆ ವರ್ಷಗಳ ಕಾಲ ಕೆಲಸಮಾಡಿದ್ದಾರೆ. ಇವರು ಒಬ್ಬ ಹಿರಿಯ ಅಧಿಕಾರಿ. ಈ ಬಗ್ಗೆ ವಿಶೇಷವಾಗಿ ಹೆಚ್ಚಿಗೆ ಹೇಳುವುದಕ್ಕೆ ಹೋದರೆ ಈ ಸಭೆಯ ಗಮನಕ್ಕೆ ತರುವುದೇನೆಂದರೆ, ಅವರು ಮೈಸೂರು ಪೇಪರ್ ಮಿಲ್ಸ್‌ನಲ್ಲಿ ಛೇರ್ಮನ್ ಮತ್ತು ಎಂ.ಡಿ ಆಗಿದ್ದು 637 ದಿನಗಳು. ಅವರ ಹೆಡ್‌ಕ್ವಾರ್ಟರ್ಸ್ ಇರತಕ್ಕದ್ದು ಮತ್ತು ಕಾರ್ಖಾನೆ ಇರತಕ್ಕದ್ದು ಭದ್ರಾವತಿಯಲ್ಲಿ. ಅವರು ಭದ್ರಾವತಿಯಲ್ಲಿ ಇದ್ದ ದಿನಗಳು, 637ರಲ್ಲಿ ಕೇವಲ 239 ದಿನಗಳು ಮಾತ್ರ.

ಬೆಂಗಳೂರಿನಲ್ಲಿದ್ದುದು 398 ದಿವಸ. 239 ದಿವಸ ಭದ್ರಾವತಿಯಲ್ಲಿದ್ದಾರೆ. ಎಲ್ಲಿ ಕಾರ್ಖಾನೆ ಇದೆ, ಎಲ್ಲಿ ಕೆಲಸ ನಡೆಯುತ್ತದೆ, ಎಲ್ಲಿ ಉತ್ಪಾದನೆಯಾಗುತ್ತಿದೆ ಅಲ್ಲಿ ಇದ್ದದ್ದು 239 ದಿವಸ. ಬೆಂಗಳೂರಿನಲ್ಲಿ ಈ ತರಹ ವ್ಯವಹಾರ ಏತಕ್ಕೆ ನಡೆಸಿದ್ದಾರೆ ಎಂದರೆ, ಇಲ್ಲಿ ಅವರಿಗೆಲ್ಲಾ ಸಕಲ ಸವಲತ್ತು ಇದೆ. ಮೈಸೂರು ಪೇಪರ್ ಮಿಲ್ಸ್‌ನವರು ಬೆಂಗಳೂರು ಕ್ಲಬ್‌ನಲ್ಲಿ ಮೆಂಬರ್‌ಷಿಪ್ ಪಡೆಯುವುದಕ್ಕೆ 2 ಲಕ್ಷ ರೂಪಾಯಿ ಕೊಟ್ಟಿದ್ದಾರೆ. ಅದು ಕಾರ್ಖಾನೆಯ ಹಣ. ಅದಕ್ಕೆ ನನ್ನ ಹತ್ತಿರ ದಾಖಲೆ ಇದೆ, ಕೊಡುತ್ತೇನೆ. ಕಾರ್ಖಾನೆಯ ಹಣ ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ.

ಶ್ರೀ ಎಸ್.ಹೆಚ್. ಕೌಜಲಗಿ : ಯಾರು ಕೊಟ್ಟರು?

ಶ್ರೀ ಸಿ. ಬೈರೇಗೌಡ : ಮ್ಯಾನೇಜಿಂಗ್ ಡೈರೆಕ್ಟರ್ ಕೊಟ್ಟರು. ಅವರ ಹೆಸರು ಕೆ.ಕೆ.ಮಿಶ್ರ

ಶ್ರೀ ಡಿ.ಎ. ಚಿನ್ನಪ್ಪ : ಯಾವ ಇಸವಿಯಲ್ಲಿ ಕೊಟ್ಟಿದ್ದು ಎಂಬುವುದನ್ನು ಹೇಳಬೇಕು. ನಮ್ಮ ರೆಜೀಮಿನಲ್ಲಿ ಕೊಟ್ಟಿದ್ದಾರ ಅಥವಾ ಜನತಾ ಪಾರ್ಟಿ ರೆಜೀಮಿನಲ್ಲಿ ಕೊಟ್ಟಿದ್ದಾರ?

ಶ್ರೀ ಸಿ. ಬೈರೇಗೌಡ : ಅದು ರೆಕಾರ್ಡ್‌ನಲ್ಲಿದೆ ಓದಿಕೊಳ್ಳಿ. ನಾನೇ ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಇಲ್ಲಿ ಉತ್ತರ ಕೊಟ್ಟಿದ್ದಾರೆ. ಅವರು ಎರಡು ಲಕ್ಷ ರೂಪಾಯಿಗಳನ್ನು ಬೆಂಗಳೂರು ಕ್ಲಬ್‌ನಲ್ಲಿ ಮೆಂಬರ್‌ಷಿಪ್ ಪಡೆಯುದಕ್ಕೆ ಕೊಟ್ಟಿದ್ದಾರೆ . ಕ್ಲಬ್‌ನಲ್ಲಿ ಹೋಗಿ ಮಜಾ ಮಾಡವುದಕ್ಕೆ ಕಂಪೆನಿಯಿಂದ ಎರಡು ಲಕ್ಷ ರೂಪಾಯಿ ಕೊಟ್ಟು ಸಂಬಳವನ್ನೂ ಕೊಟ್ಟಿದ್ದಾರೆ. ಅವರು ಭದ್ರಾವತಿಯಲ್ಲಿ ಇರುವುದಕ್ಕೆ ಬದಲಾಗಿ ಬೆಂಗಳೂರಿನಲ್ಲಿದ್ದಾರೆ. 398 ದಿವಸ ಬೆಂಗಳೂರಿನಲ್ಲಿದ್ದಾರೆ.

ಶ್ರೀ ಕೆ.ಹೆಚ್. ಪಾಟೀಲ್ : 398 ದಿವಸ ಹೇಗಾಗುತ್ತದೆ?

ಶ್ರೀ ಸಿ. ಬೈರೇಗೌಡ : ಅವರ ಒಟ್ಟು ಸರ್ವೀಸ್ ಕಾರ್ಖಾನೆಯಲ್ಲಿ 637 ದಿವಸ. 637 ದಿವಸದಲ್ಲಿ ಬೆಂಗಳೂರಿನಲ್ಲಿದ್ದು 398 ದಿವಸ ಭದ್ರಾವತಿಯಲ್ಲಿದ್ದದ್ದು ಕೇವಲ 239 ದಿವಸ. ಇದು ನಿಮ್ಮ ಐ.ಎ.ಎಸ್. ಅಧಿಕಾರಿಗಳ ಕಾರುಬಾರು.

ಶ್ರೀ ಕೆ.ಹೆಚ್. ಪಾಟೀಲ್ : ಯಾರು?

ಶ್ರೀ ಸಿ. ಬೈರೇಗೌಡ : ಕೆ.ಕೆ. ಮಿಶ್ರ ಅಂತ ಛೇರ್ಮನ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್, ಮೈಸೂರು ಪೇಪರ್ ಮಿಲ್ಸ್ ಅವರು ನಡೆಸಿರತಕ್ಕದ್ದು. ಇನ್ನು ಮುಂದಕ್ಕೆ ನಾನು ಹೋಗುವುದಿಲ್ಲ. ಏಕೆಂದರೆ ಮೈಸೂರು ಪೇಪರ್ ಮಿಲ್ಸ್‌ನ ಅವಾಂತರ ಇನ್ನೂ ಸಾಕಷ್ಟಿದೆ. ನನ್ನ ಪ್ರಶ್ನೆಗೆ ಸರ್ಕಾರದವರು ಉತ್ತರ ಕೊಟ್ಟಿದ್ದಾರೆ. ನಾನು ಕಳೆದ ಸಾರಿ ಹೇಳಿದೆ, ಕೆಲವು ಐ.ಎ.ಎಸ್.ಅಧಿಕಾರಿಗಳು ಹೆಚ್ಚಾಗಿರುವ ಕಡೆ ಮೇಯುತ್ತಾರೆ, ಬೆಚ್ಚಗಿರುವ ಕಡೆ ಮಲಗುತ್ತಾರೆ ಎಂದು. ಬೆಚ್ಚಗಿರುವ ಕಡೆ ಅಂದರೆ ಬೆಂಗಳೂರು ಕ್ಲಬ್‌ನಲ್ಲಿ ಮಲಗಿದಕ್ಕೆ ಕಂಪೆನಿ ನಷ್ಟವಾಗಿರತಕ್ಕದ್ದು. ಪ್ರಶ್ನೆ ಸಂಖ್ಯೆ 394, ಬಸವರಾಜ ಪಾಟೀಲ್, ಎಂ.ಎಲ್.ಸಿ.ಇವರ ಪ್ರಶ್ನೆಗೆ ವಿಧಾನ ಪರಿಷತ್ತಿನಲ್ಲಿ ಉತ್ತರ ಸರ್ಕಾರದವರು ಕೊಟ್ಟಿದ್ದಾರೆ. ಅದರ ಪ್ರಕಾರ ಮೈಸೂರು ಪೇಪರ್ ಮಿಲ್ಸ್‌ನಲ್ಲಿ 8,543.47 ಲಕ್ಷ ರೂಪಾಯಿ ನಷ್ಟವಾಗಿದೆ. 84 ಕೋಟಿ ರೂಪಾಯಿ ನಷ್ಟವಾಗಿದೆ.

ಉಪಾಧ್ಯಕ್ಷರು : ಬೈರೇಗೌಡರೇ ಇದರ ಬಗ್ಗೆ ಇಷ್ಟನ್ನು ಹೇಳಿದ್ದೇನೆ. ಇನ್ನು ಕಿಯಾನಿಕ್ಸ್ ಬಗ್ಗೆ ಏನು ಹೇಳಬೇಕೊ ಗೊತ್ತಿಲ್ಲ.

ಶ್ರೀ ಕೆ.ಹೆಚ್. ಪಾಟೀಲ್ : ಏನೂ ಹೇಳಬೇಡಿ. ಅದರಬಗ್ಗೆ ಸಲಹೆ ಹೇಳಿರಿ. ಮುಂದೆ ಯಾವರೀತಿ ಮಾಡಬೇಕು ಎಂಬ ಬಗ್ಗೆ ಸಲಹೆ ಹೇಳಿದರೆ ಉಪಯೋಗವಾಗುತ್ತದೆ.

ಶ್ರೀ ಸಿ. ಬೈರೇಗೌಡ : ನಾನು ಹೇಳಿದರೆ ನೀವು ಕೇಳುವುದಿಲ್ಲ. ಇವರನ್ನೆಲ್ಲಾ ಸೇರಿಸಿ ಒಂದು ಕೋಣೆಯಲ್ಲಿ ಹಾಕಿ ಹುಚ್ಚು ನಾಯಿ ಬಿಟ್ಟು ಇವರನ್ನು ಕಚ್ಚಿಸಿರಿ ಸಾಕು. ಹುಚ್ಚುನಾಯಿಯಿಂದ ಇವರನ್ನು ಕಚ್ಚಿಸಿದರೆ ಸಾಕು. ಈ ಕೆಲಸವನ್ನು ನೀವು ಮಾಡುತ್ತೀರಾ? ನೀವು ಮಾಡುವುದಿಲ್ಲ ಎಂದು ನನಗೆ ಗೊತ್ತಿದೆ ಹೋಗಲಿ, ಅವರನ್ನು ನೀವು ಸಸ್ಪೆಂಡ್ ಮಾಡಿ.

ಶ್ರೀ. ಕೆ.ಹೆಚ್. ಪಾಟೀಲ್ : ದುರಸ್ತಿ ಮಾಡಬೇಕೋ ಅಥವಾ ನೀವು ಹೇಳಿದ ಹಾಗೆ ನಾನು ಮಾಡಿ ಜೈಲಿಗೆ ಹೋಗಬೇಕೋ?

ಶ್ರೀ ಸಿ. ಬೈರೇಗೌಡ : ಸದನದಲ್ಲಿ ತಾವು ಉತ್ತರ ಕೊಟ್ಟಿದ್ದೀರಿ. ಮಿಶ್ರಾರವರ ಬಗ್ಗೆ ತಾವು ಹೇಳಿದ್ದೀರಿ. ಎಂಪಿಎಂನಲ್ಲಿ ಇಲ್ಲೀಗಲ್ ಲಾಕೌಟ್ ಮಾಡಿದ್ದಾರೆಂದು ತಾವೇ ಹೇಳಿದ್ದೀರಿ. ಅವರನ್ನು ಪ್ರಾಸಿಕ್ಯೂಟ್ ಮಾಡಬೇಕೆಂದು ಅಲ್ಲಿರತಕ್ಕ ಲೇಬರ್ ಯೂನಿಯನ್ನವರು ಕೇಳಿದ್ದಾರೆ. ತಾವು ಇದಕ್ಕೆ ಪರ್ಮೀಷನ್ ಕೊಟ್ಟಿದ್ದೀರಾ? ತಾವು ಪರ್ಮೀಷನ್ ಕೊಡಿ. ಇದು ಕೋರ್ಟ್‌ನಲ್ಲಿ ತೀರ್ಮಾನ ಆಗಲಿ. ದಿಡೀರ್ ಆಗಿ ಬಂದೂಕು ತೆಗೆದುಕೊಂಡು ನೇರವಾಗಿ ಶೂಟ್ ಮಾಡಿ ಎಂದು ನಾನು ಹೇಳುತ್ತಾ ಇಲ್ಲ. ಅದಕ್ಕೆ ಪರ್ಮಿಷನ್ ಕೊಡಿ ನಾನೇ ಡಿಮ್ಯಾಂಡ್ ಮಾಡಿದ್ದೇನೆ. ಅದಕ್ಕೆ ಉತ್ತರ ಏನು ಬಂದಿದೆ ಗೊತ್ತೇ? ಈಗ ಎಲ್ಲಾ ಸೆಟಲ್ ಆಗಿದೆ, ಲೇಬರ್ ರಿಲೇಷನ್ಶಿಪ್ ಚೆನ್ನಾಗಿ ಇದೆ ಎಂದು ಹೇಳಿದ್ದಾರೆ. ಗೋಕುಲಾಷ್ಟಮಿಗೂ, ಇಮಾಮ್ ಸಾಬ್ಗೂ ಏನು ಸಂಬಂಧ ಇದೆ ಎಂದು ಕೇಳಿದಹಾಗೆ ಇದಕ್ಕೂ ಅವರು ಮಾಡಿರತಕ್ಕ ಅಕ್ರಮಕ್ಕೂ ಏನು ಸಂಬಂಧ ಇದೆ ಎಂದು ತಾವೇ ಹೇಳಿ. ಈಗ ಸಲಹೆ ಕೊಡಿ ಎಂದು ಹೇಳಿದಿರಿ. ನಾನು ಸಲಹೆ ಕೊಟ್ಟಿದ್ದೇನೆ. ಕೊನೇ ಪಕ್ಷ ಅವರು ನ್ಯಾಯಾಲಯದ ಕಟಕಟೆ ಹತ್ತುವುದಕ್ಕೆ ಸರ್ಕಾರ ಏಕೆ ಅವಕಾಶ ಕೊಡಬಾರದು? ತಾವು ಪರ್ಮಿಷನ್ ಕೊಡುತ್ತೀರಾ ಅಥವಾ ಬಿಡುತ್ತೀರಾ?

ಶ್ರೀ ಕೆ.ಹೆಚ್. ಪಾಟೀಲ್ : ಸಂಬಂಧಪಟ್ಟ ಮಂತ್ರಿಗಳಿಗೆ ಇದನ್ನು ತಿಳಿಸುತ್ತೇನೆ. ಶ್ರೀ ಸಿ. ಬೈರೇಗೌಡ : ಅವರನ್ನು ಹುಚ್ಚು ನಾಯಿಯಿಂದ ಕಚ್ಚಿಸುವುದಿಲ್ಲ ಎಂದು ಗೊತ್ತಿದ್ದರೂ ಆ ಬಗ್ಗೆ ನಾನು ಹೇಳಿದೆ. ಈಗ ಸಲಹೆ ಕೊಟ್ಟರೂ ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸುತ್ತೇವೆ ಎಂದು ಹೇಳುತ್ತಾರೆ. ಇದೇ ಕತೆ ಕಿಯಾನಿಕ್ಸ್‌ನಲ್ಲಿ ಕೂಡೂ ನಡೆದಿರತಕ್ಕದ್ದು.

ಉಪಾಧ್ಯಕ್ಷರು : ತಾವು ಭಾಷಣ ಮುಗಿಸಬೇಕು.

ಶ್ರೀ ಎ.ಬಿ. ಜಕನೂರ್ : ತಾವು ಮಂತ್ರಿಗಳಾಗಿದ್ದಾಗ ಕೂಡಾ ಅದು ಲಾಸ್ ಆಗಿತ್ತು. ಆಗ ಈ ಆಫೀಸರ್ ಅಲ್ಲ, ಮತ್ತೊಬ್ಬರು ಇದ್ದರು. ಆಗ ತಾವು ಏನು ಮಾಡಿದಿರಿ ಎನ್ನುವುದನ್ನು ಹೇಳಿ?

ಶ್ರೀ ಸಿ. ಬೈರೇಗೌಡ : ಕಿಯಾನಿಕ್ಸ್ ಬಗ್ಗೆ ಸಾರ್ವಜನಿಕ ಉದ್ದಿಮೆಗಳ ಸಮಿತಿಯವರು 2 ದಿವಸಗಳ ಹಿಂದೆ ವರದಿಯನ್ನು ಕೊಟ್ಟಿದ್ದಾರೆ. ಆ ವರದಿಯನ್ನು ಅನಾಮತ್ತಾಗಿ ಎರಡು-ಮೂರು ಸಾರಿ ಓದಿದ್ದರೂ ಕಾಲದ ಅಭಾವದಿಂದ ಅದೆಲ್ಲವನ್ನೂ ಈಗ ಹೇಳುವುದಕ್ಕೆ-ಹೋಗುವುದಿಲ್ಲ.

ಸಾರ್ವಜನಿಕ ಉದ್ಯಮಗಳ ಸಮಿತಿಯವರು ಬಹಳ ವ್ಯಥೆಯಿಂದ ಕೆಲವು ವಿಷಯಗಳನ್ನು ಹೇಳಿದ್ದಾರೆ. ಅದನ್ನು ಮಾತ್ರ ನಾನು ಇಲ್ಲಿ ಓದುವುದಕ್ಕೆ ಇಷ್ಟಪಡುತ್ತೇನೆ. ನಾನು ಇದರಲ್ಲಿ ಕೊನೆಯ ಪ್ಯಾರಾವನ್ನು ಓದುತ್ತೇನೆ. ಪ್ಯಾರ ಸಂಖ್ಯೆ 13.7ರಲ್ಲಿ ಈ ರೀತಿ ಇದೆ.

"Further, the Committee is extremly concerned to note that Government's solemn instructions issued as far back as March 1981 and reiterated in Man. 1984 and even the warnign of fixing personal responsbility on the defaulting Government Directors have all remained on paper and that the Government Directors on the Board of the Company did not comply with Govenment's instruction of March 1981 and January 1984. The Committee is distressed to note that while the Government Directors seem to have had a vested interest in not sending the reports to Govenment as instructed in March 1981 and Jan. 1984 left their own omissions and commissions may stand exposed, the Govenment also in its part, has chosen to remain silent and thus frustrated the implementation of its own instructions. At this rate, Government's own credibility would suffer erosion and the erring Govenment Directors on the Board would be encouraged to violate Government's policies and instructions at will. The Committee strongly urges that Government should at least now act decisively to get implemented in letter and spirit, its own unambiguous instructions of March 1981 and Jan. 1984 to Govenment directors on the Company's Board".

ಈ ರೀತಿ ವರದಿಯನ್ನು ಕೊಟ್ಟಿದ್ದಾರೆ. ಕಿಯೋನಿಕ್ಸ್ ಒಂದು ಸಣ್ಣ ಕಂಪೆನಿ. ಅದರಲ್ಲಿ 4 ಕೋಟಿ ರೂಪಾಯಿ ನಷ್ಟವಾಗಿದೆ ಇಲ್ಲಿತರಕ್ಕಂತಹವರೆಲ್ಲ ಸರಕಾರಿ ಅಧಿಕಾರಿಗಳೆ. ಅವರ ಪಟ್ಟಿ ಇದೆ. ಕಿಯೋನಿಕ್ಸ್‌ನಲ್ಲಿ ಬೋರ್ಡ್ ಆಫ್ ಡೈರೆಕ್ಟರ್, ಚೇರ್ಮನ್ ಯಾರ್ಯಾರು ಆಗಿದ್ದರು ಎಂಬ ಪಟ್ಟಿ ಇದೆ. ಸುಮಾರು 100-150 ಜನ ಐ.ಎ.ಎಸ್. ಅಧಿಕಾರಿಗಳ ಹೆಸರುಗಳಿವೆ. ನಾನು ಅದೆಲ್ಲವನ್ನೂ ಓದುವುದಕ್ಕೆ ಹೋಗುವುದಿಲ್ಲ.

ಶ್ರೀ ಕೆ.ಹೆಚ್. ಪಾಟೀಲ್: ಯಾವುದಾದರೂ ಸಲಹೆ ಮಾಡುವುದಿದ್ದರೆ ಸರಿಯಾದಂತಹ ರೀತಿಯಲ್ಲಿ ಮಾಡಬೇಕು. ತಾವು ವರದಿಯನ್ನಾಧರಿಸಿ ಹೇಳುತ್ತಿದ್ದೀರಿ. ಸರಕಾರ ಅದನ್ನು ಜಾರಿಗೆ ಹೇಗೆ ತರಬೇಕು ಎಂಬ ಬಗ್ಗೆ ಸಲಹೆ ಕೊಡಿ ಎಂದು ಹೇಳಿದೆ. ಐ.ಎ.ಎಸ್. ಅಧಿಕಾರಿಗಳನ್ನು ಏಕೆ ಹಾಕುತ್ತೀರಿ, ನಿಮಗೆ ಮತ್ಯಾರು ಸಿಗುವುದಿಲ್ಲವೇ ಎಂದು ತಾವು ನಮ್ಮನ್ನು ಕೇಳಿದ್ದಿದ್ದರೆ ನಮ್ಮ ಬಾಯಿ ಆಗ ಕಟ್ಟುತ್ತಿತ್ತು. ಅವರನ್ನು ಹಾಕಿ ಏಕೆ ಹೆಚ್ಚು ಹಣವನ್ನು ಖರ್ಚು ಮಾಡುತ್ತಿದ್ದೀರಿ ಎಂದು ಕೇಳಿದ್ದರೆ ಅದು ಸೂಕ್ತವಾದಂತಹ ಸಲಹೆಯಾಗುತ್ತಿತ್ತೇನೋ ಎಂದು ನನಗೆ ಅನಿಸುತ್ತದೆ.

ಶ್ರೀ ಸಿ. ಬೈರೇಗೌಡ : ನಾನು ಒಂದೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯ ಸದಸ್ಯನಾಗಿದ್ದೆ ಆಗ ಇಂಥಾದ್ದೇ ವಿಚಾರಗಳ.....

ಉಪಾಧ್ಯಕ್ಷರು : ಈಗಾಗಲೇ 25 ನಿಮಿಷವಾಗಿದೆ.

ಶ್ರೀ ಸಿ. ಬೈರೇಗೌಡ : ಆಗ ನಾವು ಏನು ಸಲಹೆ ಕೊಟ್ಟಿದ್ದೆವೆಂದರೆ, ಸರಕಾರಿ ರಂಗದಲ್ಲಿರತಕ್ಕಂಥಹ ಕಾರ್ಖಾನೆಗಳು ಏನು ಇದೆ ಇವನ್ನು ಮ್ಯಾನೇಜ್ ಮಾಡುವುದಕ್ಕೋಸ್ಕರ ಅದೇ ಒಂದು ಕೇಡರ್‌ಅನ್ನು ಮಾಡಿ. ಅಧಿಕಾರಿಗಳನ್ನು ನೇಮಿಸುವಾಗ ಕೇಡರ್ ಅನ್ನು ಬೇರೆ ಮಾಡಿ, ಆ ಕೇಡರ್‌ಅನ್ನು ಡೆವಲಪ್ ಮಾಡಿ ಅವರಿಗೆ ಮ್ಯಾನೇಜೀರಿಯಲ್ ಸ್ಕಿಲ್, ಟೆಕ್ನಿಕಲ್ ಸ್ಕಿಲ್ ಮುಂತಾದ ತರಬೇತಿಯನ್ನು ಕೊಟ್ಟು ಅಂತಹವನ್ನು ಮಾತ್ರ ಕಂಪೆನಿಗೆ ಹಾಕಬೇಕೆಂಬ ಸಲಹೆಯನ್ನು ನಾನೇ ಸಮಿತಿಯ ಸದಸ್ಯನಾಗಿದ್ದು ವರದಿಯನ್ನು ಕೊಟ್ಟಿರುವುದು ನನಗೆ ನೆನಪಿನಲ್ಲಿದೆ. ಆ ಸಲಹೆಯನ್ನು ಮತ್ತೆ ಮಾನ್ಯ ಕೆ.ಹೆಚ್. ಪಾಟೀಲರಿಗೆ ಮತ್ತು ಸರಕಾರಕ್ಕೆ ನೆನಪು ಮಾಡಿಕೊಡುತ್ತೇನೆ. ಅವರು ಅದನ್ನು ಮಾಡುತ್ತಾರೋ ಬಿಡುತ್ತಾರೋ ಗೊತ್ತಿಲ್ಲ. ಇಂತಹ ವರದಿಗಳನ್ನು ಕಸದ ಬುಟ್ಟಿಗೆ ಎಸೆಯತಕ್ಕಂತಹ ಹವ್ಯಾಸವು ನಡೆಯುತ್ತಾ ಬಂದಿದೆ. ಕಿಯೋನಿಕ್ಸ್ ಬಗ್ಗೆ ಏನು ವರದಿಯನ್ನು ಕೊಟ್ಟಿದ್ದಾರೆ ಅದರ ಮೇಲೆ ಸರ್ಕಾರ ತೀವ್ರವಾದ ಕ್ರಮ ತೆಗೆದುಕೊಳ್ಳಬೇಕು. ಅಲ್ಲದೆ ನಾನು ಹೇಳಿರತಕ್ಕಂತಹ ಕೆಲವು ಅಧಿಕಾರಿಗಳಿದ್ದಾರೆ ಮತ್ತು ಅಲ್ಲಿ ಆಗಿರತಕ್ಕಂತಹ ಅನಾಹುತಗಳನ್ನು ಪಟ್ಟಿ ಮಾಡಿ ಹೇಳಿದ್ದೇನೆ. ಸರ್ಕಾರಿ ರಂಗದ ಕಾರ್ಖಾನೆಗಳು ಯಾವ ರೀತಿ ಕೆಲಸ ಮಾಡುತ್ತಿವೆ ಎನ್ನುವುದಕ್ಕೆ ಒಂದೇ ಒಂದು ಸಣ್ಣ ಸೆಂಟೆನ್ಸ್ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

"In short Company as paid taxes on profits, not earned bonus on production targets not achieved, dividend on Income not generated has shown working results achieved was resting purpose that was puffed." ಎಂದು ಎನ್.ಜಿ.ಇ.ಎಫ್.ನಲ್ಲಿ ನಡೆದಿರತಕ್ಕಂಥಾದ್ದರ ಬಗ್ಗೆ ಇಷ್ಟನ್ನು ಹೇಳುತ್ತಾ, ತಾವು ನನಗೆ ವಿಶೇಷವಾದ ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ.ಎಂ. ಇದ್ದಿನಬ್ಬ (ಉಳ್ಳಾಲ) : ಮಾನ್ಯ ಅಧ್ಯಕ್ಷರೇ, ಮಾನ್ಯ ರಾಜ್ಯಪಾಲ ಭಾಷಣವನ್ನುದ್ದೇಶಿಸಿ ಮಾತನಾಡುವುದಕ್ಕಿಂತ ಮೊದಲು ಆಗಲೇ ಅವರು ಮಾತನಾಡುವಾಗ ತುಂಡು ಮಂತ್ರಿಗಳು ಏಕಿರಬೇಕೆಂದು ಹೇಳಿದ್ದಾರೆ ಅದನ್ನು ಕಡತದಿಂದ ತೆಗೆಸಬೇಕು.

ಉಪಾಧ್ಯಕ್ಷರು : ಅದನ್ನು ವಾಪಸ್ಸು ತೆಗೆದುಕೊಳ್ಳುತ್ತೀರಾ? ಅದನ್ನು ಕಡತದಿಂದ ತೆಗೆಸಿ ಹಾಕುತ್ತೇನೆ.

ಶ್ರೀ ಬಿ.ಎಂ. ಇದ್ದಿನಬ್ಬ : ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸಲ್ಲಿಸಿದ ಶ್ರೀಮತಿ ಚಂದ್ರಪ್ರಭಾ ಅರಸುರವರ ಆ ವಂದನೆಗೆ ಬೆಂಬಲಿಸಿ ನಾನು ಕೆಲವು ಮಾತುಗಳನ್ನು ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ಅನೇಕ ಉತ್ತಮವಾದಂತಹ ಕೆಲವು ವಿಷಯಗಳನ್ನು ನಾವು ಪರಿಶೀಲಿಸಿ ನೋಡಬಹುದು. ಅನೇಕ ಪ್ರಗತಿದಾಯಕವಾದಂತಹ ಕಾರ್ಯಕ್ರಮಗಳನ್ನು ಕೂಡ ಅದರಲ್ಲಿ ಅವರು

ಸ್ಪಷ್ಟವಾಗಿ ಹೇಳಿದ್ದಾರೆ. ಇವತ್ತು ರಾಜ್ಯವಾಗಲೀ, ದೇಶವಾಗಲೀ ಬೆಳೆಯಬೇಕಾದರೆ, ಅಭಿವೃದ್ಧಿ ಹೊಂದಲೇಬೇಕಾದರೆ, ಪ್ರಗತಿ ಕಾಣಬೇಕಾದರೆ ಅದಕ್ಕೆ ಅನೇಕ ಸವಲತ್ತುಗಳು ಇವೆ. ಆ ಸವಲತ್ತುಗಳೆಲ್ಲ ಕೂಡಿ ಬಂದರೆ ಮಾತ್ರ ಆ ದೇಶವಾಗಲೀ, ರಾಜ್ಯವಾಗಲೀ, ಆ ಪ್ರಾಂತ್ಯವಾಗಲೀ ಅಭಿವೃದ್ಧಿಯ ತುತ್ತತುದಿಗೆ ಏರಲಿಕ್ಕೆ ಸಾಧ್ಯವಾಗುತ್ತದೆ. ಹಾಗೇ ನಮ್ಮ ಕರ್ನಾಟಕದ ಮಟ್ಟಿಗೆ ಹೇಳುವುದಾದರೆ, ರಾಜ್ಯಪಾಲರು ತಮ್ಮ ಭಾಷಣದ ಆರಂಭದಲ್ಲಿ ಹೇಳಿದ್ದಾರೆ. ಈ ಕರ್ನಾಟಕವೆಂದು ಹೇಳಿದರೆ, ಇಡೀ ಭಾರತ ದೇಶದಲ್ಲಿ ವೈಶಿಷ್ಟ್ಯವಾದಂತಹ ಒಂದು ರಾಜ್ಯ. ಈ ರಾಜ್ಯ ಎಲ್ಲಾ ವಿಧದಲ್ಲೂ ಕೀರ್ತಿ ಪತಾಕೆ ಹಾರಿಸಿರತಕ್ಕಂಥ ರಾಜ್ಯ. ಈ ರಾಜ್ಯವನ್ನು ಚಿನ್ನದ ನಾಡು, ಗಂಧದ ನಾಡು, ಬೀಟೆ ಮರಗಳ ನಾಡು, ಕಾಫಿ ನಾಡು, ಏಲಕ್ಕಿ ನಾಡು, ಕಿತ್ತಳೆ ನಾಡು, ತೆಂಗಿನ ಕಂಗಿನ ಬಾಳೆಯ ತೋಟದ ಸುಂದರ ನಾಡು ಎಂದು ಕವಿಗಳು, ತಿಳಿದವರು ಹೇಳುತ್ತಾ ಬಂದಿದ್ದಾರೆ.

ಇದು ಅಷ್ಟು ಘನಸ್ಥಿತಿಯನ್ನು ಪಡೆದಿರತಕ್ಕ ರಾಜ್ಯ. ಅಷ್ಟೇ ಅಲ್ಲ ಕೋಮು ಸಾಮರಸ್ಯದಲ್ಲಿ ಕೂಡ ಬಹಳ ಉತ್ತುಂಗ ಶಿಖರಕ್ಕೆ ಏರಿರುವಂತಹ ರಾಜ್ಯ. ಆದರೆ ದುರಾದೃಷ್ಟವಶಾತ್, ಆರು ತಿಂಗಳ ಹಿಂದೆ ಈ ಮಾದರಿಯ ರಾಜ್ಯದಲ್ಲಿ ಕೋಮುಸಾಮರಸ್ಯ ಹಾಳಾಗಿ ಕೋಮುಗಲಭೆಗಳಾಗಿರುವಂತಹ ವಿಚಾರ ನಿಮಗೆ ಗೊತ್ತಿದೆ. ಇದನ್ನೆ ರಾಜ್ಯಪಾಲರು ತಮ್ಮ ಭಾಷಣದ ಆರಂಭದಲ್ಲಿ ಎರಡು ಪುಟಗಳಲ್ಲಿ ಹೇಳಿದ್ದಾರೆ. ಒಂದು ರಾಜ್ಯ ಉತ್ತಮ ಸ್ಥಿತಿಗೆ ಬರಬೇಕಾದರೆ ಅಲ್ಲಿ ನೆಮ್ಮದಿ ಇರಬೇಕು, ಅಲ್ಲಿ ಶಾಂತಿ ಇರಬೇಕು, ಅಲ್ಲಿ ಸಂತೋಷ ಇರಬೇಕು. ನಾವು ಇದನ್ನು ಪ್ರಗತಿ ಮಾಡುತ್ತೇವೆ. ನಾವು ಅಭಿವೃದ್ಧಿ ಮಾಡುತ್ತೇವೆ, ನಾವು ಬಹಳ ಒಳ್ಳೆಯದು ಮಾಡುತ್ತೇವೆಂದು ಹೇಳಬಹುದು, ಮಾಡಬಹುದು. ಆದರೆ ಅದನ್ನು ಅನುಭವಿಸತಕ್ಕ ಜನ, ಅದನ್ನು ಪಡೆಯತಕ್ಕ ಜನ ಅವರು ಸುಖವಾಗಿದ್ದರೆ, ಅವರು ನೆಮ್ಮದಿಯಾಗಿದ್ದರೆ, ಅವರು ಅಣ್ಣತಮ್ಮಂದಿರ ಹಾಗೆ ಇದ್ದರೆ ಮಾತ್ರ ಅಲ್ಲಿ ಅದರ ಸಂತೋಷವನ್ನು, ಸುಖವನ್ನು ಪಡೆಯಲಿಕ್ಕೆ ಸಾಧ್ಯ. ಆ ದೃಷ್ಟಿಯಲ್ಲಿ ಆರು ತಿಂಗಳ ಹಿಂದೆ, ಇಲ್ಲಿ ನಡೆದಿರತಕ್ಕ ಕೋಮು ಗಲಭೆ ಈ ರಾಜ್ಯದಲ್ಲಿ ಏನು ಮಾಡಿದೆ ಎಂಬುದನ್ನು ಸೂಚ್ಯವಾಗಿ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಅದರೂ ಕೂಡ ಚೆನ್ನಪಟ್ಟಣದಲ್ಲಿ, ರಾಮನಗರದಲ್ಲಿ, ಕೋಲಾರದಲ್ಲಿ, ಶ್ರೀನಿವಾಸಪುರದಲ್ಲಿ, ದಾವಣಗೆರೆಯಲ್ಲಿ, ಹೊಸದುರ್ಗದಲ್ಲಿ, ತುಮಕೂರಿನಲ್ಲಿ ಸಕಲೇಶಪುರದಲ್ಲಿ, ಶುಕ್ರವಾರ ಸಂತೆಯಲ್ಲಿ, ಬಾಳ್ಳುಪೇಟೆಯಲ್ಲಿ, ಸೋಮವಾರಪೇಟೆಯಲ್ಲಿ ಮತ್ತು ಸುಳ್ಯದಲ್ಲಿ ಹೀಗೆ ಅನೇಕ ಕಡೆ ಕೋಮುಗಲಭೆಗಳಾಗಿವೆ. ಆದರೂ ಕೂಡ ಅದನ್ನು ಹದ್ದುಬಸ್ತಿಗೆ ತಂದು ಆ ಕೋಮುಗಲಭೆಯಲ್ಲಿ ಸಂತ್ರಸ್ಥರಾದ ಜನರಿಗೆಲ್ಲ ಸಾಂತ್ವನವನ್ನು ಹೇಳಿ, ಅವರ ಮನಸ್ಸನ್ನು ಹಗುರ ಮಾಡಲಿಕ್ಕೆ ಬೇಕಾದ ಕಾರ್ಯಕ್ರಮವನ್ನು ತೆಗೆದುಕೊಳ್ಳಲಿಕ್ಕೆ ಖುದ್ದಾಗಿ ಮುಖ್ಯಮಂತ್ರಿಗಳೇ ಎಲ್ಲಾ ಕಡೆಗೆ ಹೋಗಿದ್ದಾರೆ ; ಎಲ್ಲಿ ಕೋಮುಗಲಭೆಯಾಗಿದೆ ಅಲ್ಲಿಗೆ ಹೋಗಿ ಅವರನ್ನು ಕಂಡು, ಅವರ ಯೋಗಕ್ಷೇಮವನ್ನು ಕೇಳಿದ್ದಾರೆಂಬುದು ಬಹಳ ಪ್ರಾಮುಖ್ಯವಾದ ವಿಚಾರ. ಕೋಮುಗಲಭೆಯಾದರೂ ಸರ್ಕಾರ ಸುಮ್ಮನೆ ಕುಳಿತುಕೊಂಡಿಲ್ಲ, ಪ್ರತಿಯೊಂದು ಕಡೆಗೂ ಮುಖ್ಯಮಂತ್ರಿಗಳು ಭೇಟಿ ಕೊಟ್ಟು ಗಲಭೆ ಆದದ್ದು ಆಗಿ ಹೋಯಿತು, ಅದನ್ನು ಮರೆತುಬಿಡಿಯೆಂದು ಅವರನ್ನು ಸಮಾಧಾನಪಡಿಸಿ, ನೆಮ್ಮದಿಯಿಂದ, ಪ್ರೀತಿಯಿಂದ ಇರುವಹಾಗೆ ಮಾಡುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಇನ್ನುಮುಂದೆ ಇಂತಹ ಕಾರ್ಯಗಳು ಆಗದಹಾಗೆ ನೋಡಿಕೊಳ್ಳತಕ್ಕ ಒಂದು ಪರಿಸ್ಥಿತಿಯನ್ನು ಉದ್ಭವ ಮಾಡಲಿಕ್ಕೆ ಬೇಕಾದ ಕಾರ್ಯಕ್ರಮವನ್ನು ಮಾಡಿದರು. ನೊಂದವರಿಗೆ ಒಳ್ಳೆಯ ರೀತಿಯ ಪರಿಹಾರವನ್ನು ಕೊಟ್ಟರು. ಅದೇರೀತಿಯಲ್ಲಿ ತೀರಿಹೋದವರಿಗೆ 50ಸಾವಿರ ಕೊಡತಕ್ಕ ಕಾರ್ಯಕ್ರಮ ಮಾಡಿ ಜನರನ್ನು ಶಾಂತಿ,ನೆಮ್ಮದಿಯ ತಳಹದಿಗೆ ತರತಕ್ಕ ವ್ಯವಸ್ಥೆಯನ್ನು ಈ ಸರ್ಕಾರ ಮಾಡಿರುವುದನ್ನು ಯಾರೂ ಅಲ್ಲಗಳೆಯುವುದಕ್ಕೆ ಸಾಧ್ಯವಿಲ್ಲ.

ಇದು ನಡೆದುಹೋದ ಚಿತ್ರ, ನಮ್ಮ ಕಣ್ಣಮುಂದೆ ಇರತಕ್ಕ ಚಿತ್ರ. ಅದಕ್ಕೆ ಮಾನ್ಯ ರಾಜ್ಯಪಾಲರು ತಮ್ಮ ಭಾಷಣದ ಆರಂಭದಲ್ಲಿ ಸೂಚನೆ ಮಾಡಿದ್ದಾರೆ. ಈ ರೀತಿಯಲ್ಲಿ ಕೆಲಸ ಮಾಡಿಕೊಂಡು ಹೋಗುವುದು ಮಾತ್ರವಲ್ಲದೆ, ಕೋಮುಗಲಭೆಗಳು ಆಗದಹಾಗೆ, ಎಲ್ಲರೂ ಕೋಮುಸಾಮರಸ್ಯದಿಂದ ಬೆಳೆಯಬೇಕು ಎನ್ನುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆಂಬುದು ಬಹಳ ಪ್ರಾಮುಖ್ಯವಾದ ವಿಚಾರ. ಅದು ಮಾತ್ರವಲ್ಲದೆ, ಶಿಕ್ಷಣದ ಬಗ್ಗೆ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಕೆಲವು ಒಳ್ಳೆಯ ಅಭಿಪ್ರಾಯಗಳನ್ನು ಕೊಟ್ಟಿದ್ದಾರೆ. ಎಲ್ಲಿಯವರೆಗೆ ಹೋಗಿದ್ದಾರೆಂದರೆ "ಕಪ್ಪು ಹಲಗೆ ಆಂದೋಲನದ ವ್ಯಾಪ್ತಿಯನ್ನು ಇಡೀ ರಾಜ್ಯಕ್ಕೆ ವಿಸ್ತರಿಸಲು ಮತ್ತು ಈ ಉದ್ದೇಶಕ್ಕಾಗಿ 6,700 ತರಗತಿ ಕೊಠಡಿಗಳನ್ನು ನಿರ್ಮಿಸಲು ಉದ್ದೇಶಿಸಿದೆ. ಇತರ ಪ್ರದೇಶಗಳಿಗೆ ಹೋಲಿಸಿ ನೋಡಿದಾಗ ಹೆಚ್ಚು ಹಿಂದುಳಿದಿರುವ ಪ್ರದೇಶಗಳಲ್ಲಿ ಶಿಕ್ಷಣದ ಸೌಲಭ್ಯಗಳನ್ನು ಅಭಿವೃದ್ಧಿಪಡಿಸುವುದಕ್ಕಾಗಿ ವಿಶೇಷ ಗಮನ ನೀಡಲಾಗುತ್ತಿದೆ. ಕಪ್ಪು ಹಲಗೆ ಆಂದೋಲನವನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವುದಕ್ಕಾಗಿ ರಾಜ್ಯದಲ್ಲಿ ಖಾಲಿ ಇರುವ ಎಲ್ಲ ಪ್ರಾಥಮಿಕ ಶಾಲಾ ಶಿಕ್ಷಕರುಗಳ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ಈಗಾಗಲೇ ಕ್ರಮಗಳನ್ನು ಕೈಗೊಂಡಿದೆಯೆಂದು ಹೇಳಿದ್ದಾರೆ. ಇದು ಬಹಳ ಪ್ರಾಮುಖ್ಯವಾದ ವಿಚಾರ. ಯಾವಾಗಲೂ ಅಧ್ಯಾಪಕರುಗಳನ್ನು ಭರ್ತಿ ಮಾಡತಕ್ಕದ್ದನ್ನು ನಾವು ಪ್ರತಿ ವರ್ಷ ಕಂಡಿದ್ದೇವೆ. ಆದರೆ ಈ ವರ್ಷ ಹಾಗಲ್ಲ. ಈ ವರ್ಷ ಹೊಸದಾಗಿ ಕಂಪ್ಯೂಟರ್ ಮೂಲಕ ಪ್ರತಿಯೊಬ್ಬರನ್ನು ಭರ್ತಿ ಮಾಡತಕ್ಕ ಕಾರ್ಯಕ್ರಮ ಮಾಡಿದ್ದಾರೆ. ರಿಕ್ರೂಟ್‌ಮೆಂಟ್ ಕಮಿಟಿ ಮಾಡುವಂಥಾದ್ದನ್ನು ತಡೆಹಿಡಿದು ಅದು ಬಹಳ ಕಾಲ ತೆಗೆದುಕೊಳ್ಳುತ್ತದೆ, ರಿಕ್ರೂಟ್‌ಮೆಂಟ್ ಕಮಿಟಿಯಲ್ಲಿ ಭ್ರಷ್ಟಾಚಾರ ಕೂಡ ಆಗುತ್ತದೆಂದು ಹೇಳತಕ್ಕ ಅನೇಕ ಆಪಾದನೆಗಳು ಇದ್ದುದರಿಂದ ಅಂತಹ ಒಂದು ರಿಕ್ರೂಟ್‌ಮೆಂಟ್ ಕಮಿಟಿಗೆ ಆಸ್ಪದ ಕೊಡದೆ ಆ ರೀತಿಯಲ್ಲಿ ಅಧ್ಯಾಪಕರುಗಳನ್ನು ನೇಮಕ ಮಾಡತಕ್ಕ ಕೆಲಸವನ್ನು ಸರ್ಕಾರ ಮಾಡಿದ್ದು ಅದು ನಿಜವಾಗಿಯೂ ಮೆಚ್ಚತಕ್ಕ ಕಾರ್ಯಕ್ರಮ. ಅದೇರೀತಿಯಲ್ಲಿ "ರಾಜ್ಯದ ಸಂಸ್ಕೃತಿ ಮತ್ತು ಸಾಮಾಜಿಕ ಅಗತ್ಯತೆಗಳನ್ನು ಪ್ರತಿಬಿಂಬಿಸಲಾಗುವುದು. ಒಪ್ಪುವಂತಹ ಗುಣಮಟ್ಟದ ಪಠ್ಯಪುಸ್ತಕಗಳನ್ನು ಮುದ್ರಿಸಿ ವಿತರಣೆ ಮಾಡುವ ಉದ್ದೇಶಕ್ಕಾಗಿ ಒಂದು ಸ್ವಾಯತ್ತ ಸಂಸ್ಥೆಯನ್ನು ಸ್ಥಾಪಿಸಲು ಸಹ ಸರ್ಕಾರ ನಿರ್ಧರಿಸಿದೆ" ಎಂದು ಹೇಳಿದ್ದಾರೆ. ಅಂದರೆ ಈಗ ಇರತಕ್ಕ ಪಠ್ಯಪುಸ್ತಕಗಳಲ್ಲಿ ಬದಲಾವಣೆ ತರತಕ್ಕ ಒಂದು ಹೊಸ ಕಾರ್ಯಕ್ರಮವನ್ನು ಶಿಕ್ಷಣ ಇಲಾಖೆ ಮಾಡುತ್ತದೆಂದು ರಾಜ್ಯಪಾಲರ ಭಾಷಣದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಆ ರೀತಿಯಾಗಿ ಪಠ್ಯಪುಸ್ತಕಗಳನ್ನು ಬದಲಾವಣೆ ಮಾಡುವುದು ಬಹಳ ಒಳ್ಳೆಯದು. ಹಿಂದಿನಿಂದ ನಡೆದುಕೊಂಡು ಬಂದಂತಹ ಪಠ್ಯಪುಸ್ತಕಗಳಿಂದ ಅನೇಕ ವಿಚಾರಗಳಲ್ಲಿ ಪ್ರಗತಿಯನ್ನು ಹೊಂದಿಕೊಂಡು ಹೋಗುವುದಕ್ಕೆ ಆಗುವುದಿಲ್ಲ. ದೇಶಪ್ರೇಮವನ್ನು ಬೆಳೆಸುವಂತಹ, ಹಿಂದು-ಮುಸ್ಲಿಮ್ ಐಕ್ಯತೆಗೆ ಪ್ರಚೋದನೆ ಮಾಡುವಂತಹದ್ದು, ದೇಶದ ಮೇಲೆ ಪ್ರೀತಿ ಹುಟ್ಟಿಸುವಂತಹದ್ದು, ನಾವೆಲ್ಲರೂ ಅಣ್ಣ ತಮ್ಮಂದಿರೆಂದು ಬಾಳುವಹಾಗೆ ಮಾಡತಕ್ಕ ವಿಚಾರಗಳನ್ನು ಹೇಳುವಂಥಾದ್ದು. ಹಿಂದೆ ಆಗಿ ಹೋಗಿರತಕ್ಕ ರಾಜಕೀಯ ಮುಖಂಡರ ಅಥವಾ ದೇಶಪ್ರೇಮಿಗಳ ಚಿತ್ರಣ ಕೊಡತಕ್ಕದ್ದು,

3.50 ಪಿ.ಎಂ.

ಅದು ಮಾತ್ರವಲ್ಲ, ಧಾರ್ಮಿಕ, ನೈತಿಕತೆಯನ್ನು ಹೆಚ್ಚು ಮಾಡತಕ್ಕಂಥ ಲೇಖನಗಳು ಇರುವ, ಪಠ್ಯಪುಸ್ತಕಗಳು ಬಂದರೆ ನಮ್ಮ ಭಾವೀ ಜನಾಂಗದ ಮಕ್ಕಳ ಒಳ್ಳೆಯ ರೀತಿಯಲ್ಲಿ ಸುಸಂಸ್ಕೃತರಾಗಿ,ಒಳ್ಳೆಯ ರೀತಿಯಲ್ಲಿ ಉತ್ತಮ ಪ್ರಜೆಗಳಾಗಿ ರೂಪುಗೊಳ್ಳುವುದಕ್ಕೆ ಕಾರಣವಾಗುತ್ತದೆ. ಶಿಕ್ಷಣ ಇಲಾಖೆಗೆ ಸಂಬಂಧಪಟ್ಟಂತೆ ಇಂತಹ ಒಂದು ಅಂಶವನ್ನು ಪ್ರಸ್ತಾಪ ಮಾಡಿರುವುದನ್ನು ಕೂಡ ನಾವು ಈ ಭಾಷಣದಲ್ಲಿ ಕಾಣಬಹುದು. ಅದು ಮಾತ್ರವಲ್ಲ, ಸಾಕ್ಷರತಾ ಆಂದೋಲನದಲ್ಲಿ ಈ ವರ್ಷ ಒಂದು ಹೊಸ ರೀತಿಯಲ್ಲಿ

ಬಿಜಾಪುರ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳನ್ನು ತೆಗೆದುಕೊಂಡು ಸಾಧಾರಣವಾಗಿ ಎಲ್ಲರೂ ಅಕ್ಷರಜ್ಞಾನ ಉಳ್ಳವರಾಗಬೇಕು ಎನ್ನುವಂಥ ದೊಡ್ಡ ಕೆಲಸವನ್ನು ಮಾಡಿದ್ದಾರೆ. ಇದು ಬಹಳ ಮೆಚ್ಚತಕ್ಕಂಥ ಕೆಲಸವಾಗಿದೆ. ಈ ಬಿಜಾಪುರ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆ ಸ್ವಲ್ಪ ಮುಂದುವರೆದ ಜಿಲ್ಲೆಗಳಾದರೂ ಕೂಡ ಅಕ್ಷರಜ್ಞಾನ ಇಲ್ಲದಂಥ ಜನ ಗ್ರಾಮಾಂತರ ಪ್ರದೇಶಗಳಲ್ಲಿ, ಹಳ್ಳಿಪ್ರದೇಶಗಳಲ್ಲಿ ಬೇಕಾದಷ್ಟು ಇದ್ದಾರೆ. ಅವರೂ ಕೂಡ ಇವತ್ತಿನ ದಿವಸ ಅಕ್ಷರಜ್ಞಾನವುಳ್ಳವರಾಗಿ ಓದಿಬರೆಯುವ ಮಟ್ಟಕ್ಕೆ ಬಂದಿದ್ದಾರೆ ಮಾತ್ರವಲ್ಲ, ಹೆಬ್ಬೆಟ್ಟು ಹಾಕುವುದು ತಪ್ಪಿ ದಸ್ಕತ್ತು ಹಾಕತಕ್ಕಂಥ ಪರಿಸ್ಥಿತಿಗೆ ಬಂದಿದ್ದಾರೆ. ಕೆಲವು ಕಡೆ ಪತ್ರಿಕೆಗಳನ್ನು ಓದುವ ಮಟ್ಟದವರೆಗೆ ಈ ಸಾಕ್ಷರತಾ ಆಂದೋಲನದಲ್ಲಿ ಆಗಿವೆ. ಅದರಲ್ಲೂ ಹಿಂದುಳಿದ ಬಿಜಾಪುರ ಜಿಲ್ಲೆಯಲ್ಲಿ ಕೂಡ ಇದೇ ರೀತಿಯಲ್ಲಿ ಒಳ್ಳೆಯ ಕಾರ್ಯಕ್ರಮ ಮಾಡಿದ್ದಾರೆ. ಇನ್ನುಮುಂದೆ ಇದನ್ನು ಬೇರೆ ಎರಡು ಜಿಲ್ಲೆಗಳಿಗೆ ಕೂಡ ವಿಸ್ತರಣೆ ಮಾಡತಕ್ಕಂಥ ಕಾರ್ಯಕ್ರಮ ಕೂಡ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಇದು ಬಹಳ ಉತ್ತಮವಾದ ವಿಚಾರ. ಏಕೆಂದರೆ ಒಂದು ದೇಶ, ಒಂದು ರಾಜ್ಯ ಪ್ರಗತಿದಾಯಕವಾಗಬೇಕಾದರೆ ಆ ದೇಶದ ಶಿಕ್ಷಣ ಒಳ್ಳೆಯದಾಗಿರಬೇಕು ; ವಿದ್ಯಾಮಟ್ಟ ಒಳ್ಳೆಯದಾಗಬೇಕು. ಯಾರಾದರೂ ಯಾವುದಾದರೂ ರಾಜ್ಯ ಒಳ್ಳೆಯದು ಎಂದು ಹೇಳಬೇಕಾದರೆ, ಆ ರಾಜ್ಯದ ಶಿಕ್ಷಣದ ನೀತಿ ಮುಂದುವರೆದಿದ್ದರೆ ಆ ರಾಜ್ಯ, ದೇಶ ನಿಜವಾಗಿಯೂ ಮುಂದೆ ಬರುವಂಥ ಲಕ್ಷಣ ಉಂಟು, ಅಭಿವೃದ್ಧಿಯನ್ನು ಕಾಣುವಂಥ ಲಕ್ಷಣ ಉಂಟು, ಪ್ರಗತಿಯನ್ನು ಕಾಣುವಂಥ ಲಕ್ಷಣ ಉಂಟು ಎಂದು ಹೇಳುವುದರಲ್ಲಿ ಅನುಮಾನ ಇಲ್ಲ. ಇವತ್ತು ಈ ಕಾರ್ಯಕ್ರಮವನ್ನು ಮಾಡಿಕೊಂಡು ಬಂದಿದ್ದಾರೆ. ಇದೂ ಅಲ್ಲದೆ, ಒಂದು ಮುಕ್ತ ವಿಶ್ವವಿದ್ಯಾನಿಲಯವನ್ನು ತೆರೆಯತಕ್ಕಂಥ ಕಾರ್ಯಕ್ರಮವನ್ನು ಕೂಡ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಏಕೆಂದರೆ, ಶಕ್ತಿ ಇರುವ ಶ್ರೀಮಂತರು ದೊಡ್ಡ ದೊಡ್ಡ ಕಾಲೇಜುಗಳಿಗೆ ಹೋಗಬಹುದು, ಅವರು ಎಲ್ಲಿ ಬೇಕಾದರೂ ಹೋಗಿ ಕಲಿಯಬಹುದು. ಶ್ರೀಮಂತರು ಬೇಕಾದರೆ ಲಂಡನ್,ಅಮೆರಿಕಾ, ಮುಂತಾದ ದೇಶಗಳಿಗೆ ಹೋಗಬಹುದು. ಡೆಲ್ಲಿ, ಬೊಂಬಾಯಿ. ಕಲ್ಕತ್ತಾ, ಮದ್ರಾಸಿಗೆ ಹೋಗಿ ಎಲ್ಲಿ ಬೇಕಾದರೂ ಹೋಗಿ ಕಲಿಯಬಹುದು. ಆದರೆ ರೈತರ ಮಕ್ಕಳಿಗೆ, ಬಡವರ, ಕೂಲಿಕಾರರ ಮಕ್ಕಳಿಗೆ, ಮಧ್ಯಮವರ್ಗದವರ ಮಕ್ಕಳಿಗೆ ಈ ರೀತಿ ಹೋಗಲಿಕ್ಕೆ ಸಾಧ್ಯವಾಗುವುದಿಲ್ಲ. ಅಂತಹವರೂ ಕೂಡ ಶಿಕ್ಷಣ ನೀತಿಯಲ್ಲಿ ಸ್ವಲ್ಪ ಮುಂದುವರೆಯುವುದಕ್ಕೆ ಅವಕಾಶ ಕೊಡತಕ್ಕಂಥ ವ್ಯವಸ್ಥೆ ಇಲ್ಲದೆ. ಅದಕ್ಕಾಗಿ ಈ ಮುಕ್ತ ವಿಶ್ವವಿದ್ಯಾನಿಲಯವನ್ನು ಪ್ರಾರಂಭಿಸಿದರೆ, ಎಲ್ಲ ತಾಲ್ಲೂಕುಗಳಲ್ಲೂ ಅದರ ಸಂಪರ್ಕವನ್ನು ಇಟ್ಟುಕೊಂಡರೆ ಪ್ರತಿಯೊಂದು ಮುದ್ರಣ, ಶ್ರವಣ, ವಿಲಕ್ಷಣ, ರೇಡಿಯೊ ಮತ್ತು ಟೆಲಿವಿಷನ್ನಂಥ ಬಹುಮಾಧ್ಯಮ ವಿಧಾನದ ಮೂಲಕ ಬೋಧನೆ ಕೊಟ್ಟು ಆ ರೀತಿಯಲ್ಲಿ ಅನೇಕ ವಿದ್ಯಾರ್ಥಿಗಳನ್ನು ತಯಾರು ಮಾಡಲಿಕ್ಕೆ ಸಾಧ್ಯವಾಗುತ್ತದೆ. ಇದು ಕಾರ್ಯರೂಪದಲ್ಲಿ ಬಂದರೆ ನಿಜವಾಗಿಯೂ ಇದು ಒಂದು ಪ್ರಗತಿದಾಯಕವಾದ ಕಾರ್ಯಕ್ರಮ ಆಗುತ್ತದೆ ಎಂದು ಹೇಳುವುದಕ್ಕೆ ಅನುಮಾನ ಇಲ್ಲ. ಬಹಳ ವರ್ಷಗಳಿಂದ ಹಂಪೆಯಲ್ಲಿ ವಿಶ್ವವಿದ್ಯಾನಿಲಯ ಆಗಬೇಕು ಎಂದು ಕನ್ನಡ ಪ್ರೇಮದಿಂದ ಪ್ರತಿಯೊಬ್ಬರೂ ಹೇಳುತ್ತಿದ್ದರು.ಅದನ್ನು ಮಾಡತಕ್ಕಂಥ ವ್ಯವಸ್ಥೆಯನ್ನೂ ಕೂಡ ರಾಜ್ಯಪಾಲರ ಭಾಷಣದಲ್ಲಿ ಸೂಚನೆ ಮಾಡಿದ್ದಾರೆ ಹಂಪಿಯಲ್ಲಿ ಕನ್ನಡ ವಿಶ್ವವಿದ್ಯಾನಿಲಯ ಸ್ಥಾಪಿಸುವ ಕಾರ್ಯಕ್ರಮವನ್ನು ಸರ್ಕಾರ ಈಗಾಗಲೇ ಕೈಗೆತ್ತಿಕೊಂಡಿದೆ ಎಂದು ಹೇಳಿದ್ದಾರೆ. ಇದು ನಿಜವಾಗಿಯೂ ಒಂದು ಸ್ತುತ್ಯಾರ್ಹವಾದ ಕಾರ್ಯ. ನಾನು ಕಳೆದ ಆರು ವರ್ಷಗಳಿಂದ ವಿಧಾನಸಭೆಯಲ್ಲಿ ಈ ಒಂದು ಪ್ರಸ್ತಾಪವನ್ನು ಕೇಳುತ್ತಿದ್ದೆ ನಾನು ಕೂಡ 1987ನೇ ಇಸವಿಯಲ್ಲಿ ಹಂಪೆಯಲ್ಲಿ ವಿಶ್ವವಿದ್ಯಾನಿಲಯ ಆಗಬೇಕು ಎಂದು ಶಿಕ್ಷಣ ಇಲಾಖೆಯ ವಿಷಯದ ಮೇಲೆ ಮಾತನಾಡುವಾಗ ಹೇಳಿದ್ದೆ ಮತ್ತು ಅನೇಕರು ಕೂಡ ಈ ವಿಚಾರದಲ್ಲಿ ಹೇಳಿದ್ದಾರೆ. ಆದರೆ ಅದು ಕೈಗೂಡಿರಲಿಲ್ಲ, ಅದನ್ನು ಇವತ್ತು ಸರ್ಕಾರ ಕೈಗೆತ್ತಿಕೊಂಡು

ಹಂಪೆಯಲ್ಲಿ ವಿಶ್ವವಿದ್ಯಾನಿಲಯ ಮಾಡತಕ್ಕಂಥ ಒಂದು ಕಾರ್ಯಕ್ರಮ ಮಾಡುತ್ತೇವೆ ಎಂದು ಹೇಳಿರತಕ್ಕ ವಿಚಾರ ನಮಗೆಲ್ಲ ತುಂಬಾ ಸಂತೋಷವನ್ನು ಉಂಟುಮಾಡಿದೆ. ಹಂಪಿ ಎಂದರೆ ಕೀರ್ತಿಪತಾಕೆಯನ್ನು ಬಹಳ ಮೇಲೆರಿಸಿದಂಥ ಒಂದು ದೊಡ್ಡ ಐತಿಹಾಸಿಕ ಮಹತ್ವ ಇರತಕ್ಕಂಥ ಪ್ರದೇಶ. ಇಂತಹ ಹಂಪಿಯಲ್ಲಿ ಇವತ್ತು ವಿಶ್ವವಿದ್ಯಾನಿಲಯವಾಗಿ ಕನ್ನಡದ ಬಗ್ಗೆ, ಇಲ್ಲಿಯ ಸಂಸ್ಕೃತಿ ಬಗ್ಗೆ, ಇನ್ನೂ ಅನೇಕ ವಿಚಾರಗಳ ಬಗ್ಗೆ ಅಲ್ಲಿ ಕಲಿಯತಕ್ಕಂಥ ವ್ಯವಸ್ಥೆಯಾಗಿ, ಅಲ್ಲಿರತಕ್ಕಂಥ ವಿದ್ಯಾರ್ಥಿಗಳು ಮುಂದೆಬಂದರೆ ಕರ್ನಾಟಕಕ್ಕೆ ಹೆಚ್ಚಿನ ಕೀರ್ತಿ ಬರಲಿಕ್ಕೆ ಸಾಧ್ಯ ಉಂಟೆಂದು ನನ್ನ ಅಭಿಪ್ರಾಯ.

ಇನ್ನು ಲಲಿತಕಲೆ, ಶಿಲ್ಪಕಲೆ, ನಾಟಕ, ಸಂಗೀತ, ನೃತ್ಯ, ಕನ್ನಡ ರಂಗಭೂಮಿ-ಇವುಗಳನ್ನು ಪುನಶ್ಚೇತನಗೊಳಿಸತಕ್ಕಂಥ ವ್ಯವಸ್ಥೆ ಮಾಡುತ್ತೇವೆ ಎಂದು ಕೂಡ ಮಾನ್ಯ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಹೇಳಿದ್ದಾರೆ. ಇದು ಬಹಳ ಅಗತ್ಯವಾದ ವಿಚಾರ. ಇವತ್ತು ನಾವು ಲಲಿತಕಲೆ, ನಾಟಕ, ಸಂಗೀತ, ನೃತ್ಯ ಎಂದು ಮಾತನಾಡುತ್ತೇವೆ. ಆದರೆ ಅದು ಎಲ್ಲಿಯವರೆಗೆ ಬಂದಿದೆ ಎಂದು ನಮಗೆ ಗೊತ್ತಿಲ್ಲ. ಇದಕ್ಕಾಗಿ ನಮ್ಮಲ್ಲಿ ಅಕಾಡೆಮಿಗಳು ಕೂಡ ಉಂಟು. ಇವುಗಳಲ್ಲಿ ಕೂಡ ಹೆಚ್ಚಿನ ಕೆಲಸ ಮಾಡಿ ಮುಂದುವರೆಸುತ್ತೇವೆ ಎಂದು ಕೂಡ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಇದು ಕೂಡ ಬಹಳ ಒಳ್ಳೆಯ ಕೆಲಸ. ಕನ್ನಡದ ಅಭಿಮಾನ ಎಂದು ಹೇಳಿದರೆ ಅದು ಸಂಕುಚಿತ ಮನೋಭಾವ ಎಂದು ಕೆಲವರು ಹೇಳುತ್ತಾರೆ. ಅದು ತಪ್ಪು.

ಭಾಷಾವಾರು ರಾಜ್ಯ ಮಾಡಿದ್ದುದು ಏಕೆ? ಅವರವರ ಭಾಷೆಯನ್ನು ಮೇಲೆ ತರಬೇಕು, ಅವರವರ ಸಾಹಿತ್ಯವನ್ನು ಮೇಲೆ ತರಬೇಕು ಎಂದು ಭಾಷಾವಾರು ರಾಜ್ಯವನ್ನು ಮಾಡಿದ್ದು. ಇಲ್ಲದೇ ಹೋದರೆ ಫಜಲ್ ಅಲಿ ಕಮಿಟಿ ಮಾಡಿ ಭಾಷಾವಾರು ರಾಜ್ಯ ಮಾಡುವ ಅಗತ್ಯ ಇರಲಿಲ್ಲ. ಕರ್ನಾಟಕದವರು ಬಹಳ ಔದಾರ್ಯವಂತರು, ಬಹಳ ದಾಕ್ಷಿಣ್ಯವಂತರು ಎಂದು ತೋರಿಸತಕ್ಕಂಥ ಒಂದು ಹೆಮ್ಮೆಗೆ ಬೇಕಾದರೆ ಮಾತ್ರ ನಾವು ಏನಾದರೂ ಹೇಳಬಹುದೇ ಹೊರತು, ಕೇರಳಕ್ಕೆ ಹೋದರೆ ನಮಗೆ ಗೊತ್ತಾಗುತ್ತದೆ. ಕೇರಳದಲ್ಲಿ ಎಲ್ಲರೂ ಬಿ.ಕಾಂ., ಎಂ.ಎ. ಆಗಿರುತ್ತಾರೆ. ಅಲ್ಲಿ ಮಲೆಯಾಳ ಭಾಷೆ ಅಲ್ಲದೆ, ಒಬ್ಬರೂ ಇಂಗ್ಲೀಷ್ ನಲ್ಲಿ ಮಾತನಾಡುವ ಜನ ಇಲ್ಲ. ಎಲ್ಲರ ಕೈಯಲ್ಲೂ ಮಲೆಯಾಳ ಪತ್ರಿಕೆ ಅಲ್ಲದೆ ಬೇರೆ ಯಾವುದನ್ನೂ ಕಾಣುವುದಕ್ಕೆ ಯಾರಿಗೂ ಸಾಧ್ಯವಿಲ್ಲ. ಕೇರಳದಲ್ಲಿ ಯಾವ ಮೂಲೆಯಲ್ಲಿ ಸುತ್ತಾಡಿದರೂ ಒಬ್ಬ ಕನ್ನಡ ಮಾತನಾಡುವವನನ್ನು ಹುಡುಕಬೇಕೆಂದರೆ, "ಹತ್ತಿ ಮರದಲ್ಲಿ ಹೂವನ್ನು ಹುಡುಕಿದ ಹಾಗೆ" ತಮಿಳುನಾಡಿನಲ್ಲಿಯೂ ಹಾಗೆಯೇ. ಬಹುಶಃ ಆಂಧ್ರದಲ್ಲಿ ನಾನು ಹೆಚ್ಚು ಸುತ್ತಾಡಿಲ್ಲ, ಅಲ್ಲಿಯೂ ಹಾಗೆಯೇ ಇದೆ ಎಂದು ಹೇಳುತ್ತಾರೆ. ಆದರೆ ಕನ್ನಡ ನಾಡಿನಲ್ಲಿ ನಾವು ಬಹಳ ಔದಾರ್ಯವಂತರು, ನಾವು ಬಹಳ ಪುಣ್ಯವಂತರು, ನಮಗೆ ಎಲ್ಲರೂ ಬೇಕು ಎಂಬ ವಿಶಾಲ ಭಾವನೆಯುಳ್ಳವರು. ಭಾಷಾವಾರು ರಾಜ್ಯದ ಉಪಕಾರವನ್ನು ನಾವು ಪಡೆದು, ಕನ್ನಡ ಸಾಹಿತ್ಯವನ್ನು ನಾವು ಬೆಳೆಸಬೇಕು. ಕನ್ನಡ ಪುಸ್ತಕಗಳನ್ನು ಹೆಚ್ಚು ಓದಬೇಕು, ಕನ್ನಡ ಪತ್ರಿಕೆಗಳನ್ನು ಹೆಚ್ಚು ಹೆಚ್ಚು ಓದಬೇಕು. ಕನ್ನಡ ಪತ್ರಿಕೆಗಳ ಪ್ರೆಸ್ ಗಳನ್ನು ಹೆಚ್ಚಾಗಿ ಸ್ಥಾಪನೆ ಮಾಡಬೇಕು. ಕನ್ನಡ ಪುಸ್ತಕಗಳ ಮಾರಾಟ ಮಾಡಬೇಕು. ಕೇರಳದಲ್ಲಿ ಸರ್ಕಾರಿ ಇಲಾಖೆಯ ರೀತಿಯಲ್ಲಿ ಪುಸ್ತಕಗಳನ್ನು ಅಚ್ಚು ಮಾಡತಕ್ಕ ವ್ಯವಸ್ಥೆಯನ್ನು ಮಾಡಿದ್ದಾರೆ. ಅಲ್ಲಿ ಲಕ್ಷಗಟ್ಟಲೆ ಪುಸ್ತಕಗಳನ್ನು ಅಚ್ಚು ಮಾಡಿಸಿ ವಿತರಣೆ ಮಾಡುತ್ತಿದ್ದಾರೆ. ಅಲ್ಲಿ ಪ್ರತಿಯೊಂದು ಮನೆಯಲ್ಲೂ ಅಣ್ಣ ತಮ್ಮಂದಿರು ಮೂರು ಜನ ಇದ್ದರೆ, ಆ ಮೂರು ಜನರೂ ಪುಸ್ತಕಗಳನ್ನು ತೆಗೆದುಕೊಂಡು ಓದತಕ್ಕ ವ್ಯವಸ್ಥೆ ಇದೆ. ಪ್ರತಿಯೊಂದು ಮನೆಯಲ್ಲೂ ವಾಚನಾಲಯ ಇದೆ. ಅವರು ಬಡವರಾಗಲೀ, ಮಧ್ಯಮ ವರ್ಗದವರಾಗಲೂ, ಯಾರೇ

ಆಗಿರಲಿ, ಅವರ ಮನೆಯಲ್ಲಿ ಎಲ್ಲಾ ವಿಧದ ಪುಸ್ತಕಗಳು, ಪತ್ರಿಕೆಗಳೂ ಇರುತ್ತವೆ. ಈ ರೀತಿ ಇದ್ದರೆ ಒಳ್ಳೆಯದಾಗುತ್ತದೆ. ಮನೆಯಲ್ಲಿ ನಾನು ಓದುತ್ತೇನೆ, ನನ್ನ ಹೆಂಡತಿ ಓದುತ್ತಾಳೆ. ನಮ್ಮ ಮಕ್ಕಳು ಓದುತ್ತಾರೆ, ನಮ್ಮ ಹೆಣ್ಣುಮಕ್ಕಳು ಓದುತ್ತಾರೆ, ನನ್ನ ಅಳಿಯಂದಿರು ಓದುತ್ತಾರೆ. ಬಂದವರೂ ಓದುತ್ತಾರೆ. ನಮ್ಮಲ್ಲಿ ಆ ರೀತಿ ವಾಚನಾಲಯ ಆದರೆ, ಕನ್ನಡದ ಶಕ್ತಿ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಇಂಥಾದ್ದನ್ನು ನಮ್ಮ ರಾಜ್ಯದಲ್ಲಿಯೂ ಬೆಳೆಸುವ ಅಗತ್ಯ ಉಂಟು. ರಾಜ್ಯಪಾಲರ ಭಾಷಣದಲ್ಲಿ ಅನೇಕ ವಿಚಾರಗಳನ್ನು ಹೇಳಿರುವುದನ್ನು ನೋಡಿದಾಗ ಈ ಕಡೆಗೂ ಗಮನ ಕೊಡುತ್ತಾರೆಂಬ ಭಾವನೆ ನಮಗೆ ಮೂಡಿ ಬರುತ್ತದೆ. ಇದು ಬಹಳ ಪ್ರಾಮುಖ್ಯವಾದುದು. ಇನ್ನು ಪರಿಸರ ನಾಶದ ವಿಷಯದಲ್ಲಿ ಕೂಡ ಹೇಳಿದ್ದಾರೆ. ನೈಸರ್ಗಿಕ ಸಂಪನ್ಮೂಲಗಳು ನಮ್ಮ ರಾಜ್ಯದಲ್ಲಿ ಬೇಕಾದಷ್ಟು ಉಂಟು. ಇದನ್ನು ಹಾಳಾಗದ ಹಾಗೆ ನೋಡುತ್ತೇವೆ ಎಂದು ಹೇಳಿದ್ದಾರೆ. ಇದು ಪ್ರಾಮುಖ್ಯವಾದುದು. ತಮಗೆಲ್ಲ ನೆನಪಿರಬಹುದು. ಬ್ರಿಟಿಷರು ಈ ದೇಶವನ್ನು ಬಿಟ್ಟು ಹೋಗುವಾಗ, ಅಲ್ಲಿ ಒಬ್ಬ ತಜ್ಞ ಹೇಳಿದ. ಭಾರತದಲ್ಲಿರತಕ್ಕ ಅರಣ್ಯ ಸಂಪತ್ತಿನಿಂದ 65 ವರ್ಷಗಳ ಕಾಲ ರಾಜ್ಯಭಾರ ಮಾಡಬಲ್ಲೆ ಎಂದು ಹೇಳಿದ. ಇದರ ಅರ್ಥ ಏನೆಂದರೆ, ಭಾರತದಲ್ಲಿ ಅಷ್ಟು ಅರಣ್ಯ ಸಂಪತ್ತು ಉಂಟು, ಅಷ್ಟು ಒಳ್ಳೆಯ ವ್ಯವಸ್ಥೆ ಉಂಟು. ಅದೇ ರೀತಿಯಲ್ಲಿ ಕರ್ನಾಟಕದಲ್ಲಿಯೂ ಬೇಕಾದಷ್ಟು ಅರಣ್ಯ ಸಂಪತ್ತು ಉಂಟು. ಬೇಕಾದಷ್ಟು ಪರಿಸರದ ಸಂತೋಷ ನಮಗೆ ಉಂಟು. ಆದರೆ ಇವತ್ತು ಏನಾಗಿದೆ, ಬೀಟೆಯ ಮರಗಳು ಎಲ್ಲಿವೆ, ಗಂಧದ ಮರಗಳು ಎಲ್ಲಿವೆ. ಎಲ್ಲವನ್ನೂ ಕಾಡುಗಳ್ಳರು ಕದಿಯುತ್ತಿದ್ದಾರೆ. ಇದು ಪ್ರತಿಯೊಬ್ಬರಿಗೂ ಗೊತ್ತಿದೆ. ದಲ್ಲಾಳಿಗಳಿಗೆ ಗೊತ್ತಿದೆ. ದಳ್ಳಾಳಿಗಳು ತುಂಬಿ ಹೋಗಿದ್ದಾರೆ, ಕಾಡುಗಳ್ಳರು ತುಂಬಿ ಹೋಗಿದ್ದಾರೆ. ಇಂತಹವರನ್ನು ಅಲ್ಲಿ, ಇಲ್ಲಿ ಸ್ವಲ್ಪ ಹಿಡಿಯುತ್ತಾರೆ. ಬಸ್ಸಿನಲ್ಲಿ ಸಣ್ಣ ಸಣ್ಣದಾಗಿ ಕಟ್ಟಿಕೊಂಡು ಹೋಗುವಾಗ ದಾರಿಯಲ್ಲಿ ಸಣ್ಣದಾಗಿ ಕಟ್ಟಿಕೊಂಡು ಹೋಗುವಾಗ ಹಿಡಿಯುತ್ತಾರೆ. ಆದರೆ ಇದೇನೂ ದೊಡ್ಡದಲ್ಲ. ಲಾರಿ ಲಾರಿಗಳಲ್ಲಿ ಹೋಗುವುದನ್ನು ಹಿಡಿಯಬೇಕು. ಸಂಪೂರ್ಣವಾಗಿ ಹಿಡಿಯುವುದಿಲ್ಲವೆಂದು ನಾನು ಹೇಳುವುದಿಲ್ಲ. ಹಾಲಿ ಹಿಡಿಯುತ್ತಿರುವುದು ಸಾಲದು. ಈ ರೀತಿ ಪರಿಸರ ಹಾಳಾಗುವುದಕ್ಕೆ, ಈ ರೀತಿ ಕಾಡು ನಾಶವಾಗುವುದಕ್ಕೆ ಕಾರಣವೇನು? ಇದು ಎಲ್ಲಿ ಹೋಯಿತು, ಆಕಾಶಕ್ಕೆ ಹೋಯಿತೇ? ಕಳ್ಳ ಸಾಗಾಣಿಕೆ ಮುಖಾಂತರ ಕೇರಳಕ್ಕೆ ಹೋಯಿತೇ? ಅಥವಾ ಬೇರೆ ಕಡೆಗೆ ಹೋಯಿತೇ? ಇವತ್ತು ಕೇರಳದಲ್ಲಿ ಗಂಧದ ಮರಗಳೇ ಇಲ್ಲ. ಆದರೆ ಅಲ್ಲಿರುವಷ್ಟು ಗಂಧದ ಎಣ್ಣೆಯ ಕಾರ್ಖಾನೆಗಳು ಬೇರೆ ಎಲ್ಲಿಯೂ ಇಲ್ಲ. ಕಳ್ಳ ಸಾಗಾಣಿಕೆಯಲ್ಲಿ ಗಂಧದ ಮರಗಳು ಹೋದಾಗ, ಅಲ್ಲಿ ಗಂಧದ ಎಣ್ಣೆ ಕಾರ್ಖಾನೆಗಳು ಬೇಕಾದಷ್ಟು ಆಗುತ್ತವೆ, ಅದರಿಂದ ಅಲ್ಲಿಯ ಜನ ಲಾಭ ಪಡೆಯುತ್ತಾರೆ. ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಪರಿಸರವನ್ನು ಕಾಪಾಡುತ್ತೇವೆ, ಪರಿಸರದ ಶಕ್ತಿಯನ್ನು ಬೆಳೆಸುತ್ತೇವೆ ಎಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಸಂತೋಷ ಪರಿಸರದ ಶಕ್ತಿಯನ್ನು ಬೆಳೆಸಬೇಕು. ರಾಜ್ಯಪಾಲರ ಭಾಷಣದಲ್ಲಿ ಬಂದಿದೆ ಎಂದು ಸಂತೋಷಪಡುವಾಗ, ಇದು ಕಾರ್ಯರೂಪದಲ್ಲಿ ಬರಬೇಕು. ಇನ್ನು ಒಂದು ವರ್ಷದೊಳಗಾಗಿ ಇದನ್ನು ಪರಿಪೂರ್ಣ ಮಾಡುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳುವುದು ನಮ್ಮ ಕರ್ತವ್ಯ. ಆದ್ದರಿಂದ ಪರಿಸರವನ್ನು ಉಳಿಸಿ, ನಮ್ಮ ಸಂಪತ್ತನ್ನು ಉಳಿಸುವುದು ಬಹಳ ಮುಖ್ಯ ಇನ್ನು ಮಹಿಷಿ ವರದಿಯನ್ನು ಅನುಷ್ಠಾನಕ್ಕೆ ತರುವ ವಿಚಾರದಲ್ಲಿ ಸರ್ಕಾರ ಒಪ್ಪಿದೆ. ಹಾಗಿದ್ದರೆ ನಿಜವಾಗಿಯೂ ಕನ್ನಡಿಗರಿಗೆ ಎಲ್ಲಾ ಕಡೆಗಳಲ್ಲಿಯೂ ಹೆಚ್ಚು ಕೆಲಸ ಸಿಗುತ್ತದೆ. ಕನ್ನಡಿಗರಿಗೆ ಕೆಲಸ ಇಲ್ಲದೆ ಬಳಲುತ್ತಿದ್ದಾರೆಂದು ಹೇಳುವಾಗ, ಬೇರೆ ಕಡೆಗಳಲ್ಲಿ ಹೋದರೆ ಕನ್ನಡಿಗರಿಗೆ ಕೆಲಸ ಸಿಕ್ಕುವುದಿಲ್ಲ, ಬಹಳ ಕಷ್ಟ. ಕೇರಳದಲ್ಲಿ ಕನ್ನಡಿಗರಿಗೆ ಕೆಲಸ ಸಿಕ್ಕುವುದಿಲ್ಲ, ತಮಿಳುನಾಡಿನಲ್ಲಿ ಸಿಕ್ಕುವುದಿಲ್ಲ. ಕೇರಳದವರು, ತಮಿಳುನಾಡಿನವರು ಬೇಕಾದಷ್ಟು ಜನ ಕರ್ನಾಟಕಕ್ಕೆ

ಬರುತ್ತಾರೆ. ಬರಬಾರದು ಎಂದು ಸಂಕುಚಿತ ಮನೋಭಾವದಿಂದ ಹೇಳುವುದಿಲ್ಲ. ವಿಶಾಲ ಮನೋಭಾವದಲ್ಲಿ ಹೇಳುತ್ತೇನೆ. ಮೊದಲು ಕನ್ನಡಿಗರಿಗೆ ಬೇಕಾದಷ್ಟು ವ್ಯವಸ್ಥೆ ಮಾಡಿಕೊಟ್ಟು ಮತ್ತೆ ಬೇರೆಯಾಗಿ ಕೊಡೋಣ. ಆದರೆ ಕನ್ನಡಿಗರಿಗೇ ಇಲ್ಲ, ಮನೆಯವರಿಗೇ ಇಲ್ಲ ಎಂದರೆ ಕಷ್ಟವಾಗಬಹುದು. ಡಾ. ಸರೋಜಿನಿ ಮಹಿಷಿ ಸಮಿತಿಯ ವರದಿಯನ್ನು ಸರಕಾರ ಒಪ್ಪಿಕೊಂಡಿದ್ದು ಅದನ್ನು ಕಾರ್ಯರೂಪಕ್ಕೆ ತರುವ ವ್ಯವಸ್ಥೆಯಾಗಬೇಕು. ಮಹಿಷಿ ವರದಿಯನ್ನು ಸರಕಾರ ಒಪ್ಪಿಕೊಂಡಿದ್ದು ಅದನ್ನು ಕಾರ್ಯರೂಪಕ್ಕೆ ತರುತ್ತೇವೆಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಅದನ್ನು ಕಾರ್ಯರೂಪಕ್ಕೆ ತರಬೇಕು. ಇದು ಬಹಳ ಪ್ರಾಮುಖ್ಯವಾದ ವಿಷಯ. ಎಲ್ಲಕ್ಕಿಂತ ಮುಖ್ಯವಾಗಿ ಈ ದೇಶ ರೈತರ ದೇಶ, ರೈತರಿಗೆ ಸಹಾಯ ಆಗಬೇಕೆಂದು, ರೈತರಿಗೆ ಬೇಕಾದ ಎಲ್ಲಾ ಸವಲತ್ತುಗಳನ್ನು ಸರಕಾರ ಕೊಡುವುದಕ್ಕೆ ಮುಂದೆ ಬಂದಿದೆ ಎಂಬುದನ್ನು ನಾವು ಇಲ್ಲಿ ಕಾಣುತ್ತಿದ್ದೇವೆ. ಉದಾಹರಣೆಗೆ ಹೇಳುವುದಾದರೆ, ಅಕ್ರಮ ಭೂಮಿಯನ್ನು ಸಕ್ರಮ ಮಾಡತಕ್ಕದ್ದು. ಇದನ್ನು ಹತ್ತು ವರ್ಷಗಳಿಂದ ಹೇಳುತ್ತಿದ್ದೇವೆ. ಅಕ್ರಮ ಭೂಮಿಯನ್ನು ಸಕ್ರಮಮಾಡಿ ಎಂದು ಕಳೆದ ಆರು ವರ್ಷಗಳಿಂದ ಪ್ರತಿಯೊಂದು ಡಿಮ್ಯಾಂಡ್ ಮೇಲೆ ಮಾತನಾಡುವಾಗಲೂ ಹೇಳಿದ್ದೇವೆ. ಅಕ್ರಮ ಭೂಮಿಯಲ್ಲಿ ಕುಳಿತವರಿಗೆ ಉಪಟಳ ಮಾಡಬೇಡಿ. ಅವರಿಗೆ ಆ ಭೂಮಿಯನ್ನು ಸಕ್ರಮ ಮಾಡಿ ಹಕ್ಕುಪತ್ರ ಕೊಡಿ ಎಂದು ಹೇಳುತ್ತಿದ್ದೇವೆ. ಆದರೆ ಅದು ಆಗಲಿಲ್ಲ. ಇವತ್ತು ಅಕ್ರಮ ಭೂಮಿಯಲ್ಲಿ ಕುಳಿತವರಿಗೆ ಅದನ್ನು ಸಕ್ರಮ ಮಾಡಬೇಕೆಂದು ಮಾನ್ಯ ಕಂದಾಯ ಮಂತ್ರಿಗಳಾದ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ್ದಾರೆ. ರಾಜ್ಯಪಾಲರ ಭಾಷಣದಲ್ಲೂ ಅದರ ಸೂಚನೆ ಇದೆ. ಆದುದರಿಂದ ಅಕ್ರಮ ಭೂಮಿಗಳನ್ನು ಸಕ್ರಮ ಮಾಡುವಂಥ ಕಾರ್ಯಕ್ರಮದ ಜೊತೆಗೆ ಪಂಪುಸೆಟ್ಟುಗಳಿಗೆ ವಿದ್ಯುತ್ ಕೊಡತಕ್ಕಂಥ ಕಾರ್ಯಕ್ರಮ ಕೂಡ ಬಹಳ ಪ್ರಾಮುಖ್ಯವಾದುದು. ರೈತರು ಪಂಪುಗಳನ್ನು ಇಟ್ಟು ವಿದ್ಯುತ್ ಇಲ್ಲದೇ ಕೃಷಿ ಮಾಡುವುದಕ್ಕೆ ಸಾಧ್ಯ ಇಲ್ಲದೆ ತಮ್ಮ ಬೆಳೆ ಒಣಗಿ ಸೊರಗಿ ಹೋಗುವುದನ್ನು ಕಂಡು ಕಣ್ಣಿನಲ್ಲಿ ನೀರು ಬರುವ ಪರಿಸ್ಥಿತಿ ಇದೆ. ಇದನ್ನು ತಪ್ಪಿಸುವುದಕ್ಕೆ ಸರಕಾರ ಪಂಪುಸೆಟ್ಟುಗಳಿಗೆ ವಿದ್ಯುತ್ ಕೊಡುವ ಒಳ್ಳೆಯ ಕಾರ್ಯಕ್ರಮ ಮಾಡಿಕೊಂಡು ಬಂದಿದೆ. ಅದನ್ನು ರಾಜ್ಯಪಾಲರ ಭಾಷಣದಲ್ಲಿ ಸೂಚನೆ ಮಾಡಿದ್ದಾರೆ. ಅದನ್ನು ಒಳ್ಳೆಯ ರೀತಿಯಲ್ಲಿ ಮುಂದುವರಿಸಿಕೊಂಡು ಹೋಗುವುದು ಬಹಳ ಪ್ರಾಮುಖ್ಯವಾದುದು. ಈಗ ನಾನು ಹೇಳಿದ ಎಲ್ಲ ವಿಷಯಗಳನ್ನು ರಾಜ್ಯಪಾಲರ ಭಾಷಣದಲ್ಲಿ ಸೂಚನೆ ಮಾಡಿದ್ದಾರೆ. ಸರಕಾರ ಇಂತಹ ಒಳ್ಳೆಯ ಕೆಲಸಗಳನ್ನು ತೆಗೆದುಕೊಂಡು ನಿವೇಶನ ಇಲ್ಲದವರಿಗೆ ನಿವೇಶನವನ್ನು ಉಚಿತವಾಗಿ ಕೊಡುವ ಕಾರ್ಯಕ್ರಮ ಸಹ ಮಾಡಿದ್ದಾರೆ. ಸರಕಾರ ಇಷ್ಟೆಲ್ಲಾ ಮಾಡಿದರೂ ಕೂಡ ಇದನ್ನು ಅಧಿಕಾರಿಗಳು ಒಳ್ಳೆಯ ರೀತಿಯಲ್ಲಿ ಮಾಡಿಕೊಂಡು ಬರಬೇಕು. ಈ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತಂದು ಬಡವರಿಗೆ ಮುಟ್ಟಿಸುವ ಕಾರ್ಯವನ್ನು ಅಧಿಕಾರಿಗಳು ಮಾಡಬೇಕು.

ಶ್ರೀ ಮಲ್ಲಾರಿಗೌಡ ಎಸ್ ಪಾಟೀಲ್ : ವಿರೋಧ ಪಕ್ಷದ ಸಾಲಿನಲ್ಲಿ ಯಾರೂ ಇಲ್ಲ. ನೀವು ವಿರೋಧ ಪಕ್ಷಗಳಲ್ಲಿ ಯಾರಿಗೆ ಹೇಳುತ್ತಿದ್ದೀರಿ, ಯಾರು ಕೇಳುತ್ತಿದ್ದಾರೆ, ಅವರ ಕಡೆ ಫ್ರಂಟ್ ಲೈನ್ ನಲ್ಲಿ ಯಾರೂ ಇಲ್ಲ. ನಮ್ಮ ಕಡೆ ಫ್ರಂಟ್ ಲೈನ್ ನಲ್ಲಿ ಯಾರೂ ಇಲ್ಲ ಎಂದು ನೀವು ಕೇಳುತ್ತಿದ್ದೀರಿ. ಈಗ ನಿಮ್ಮ ಕಡೆ ಇಲ್ಲದಿದ್ದರೆ ನೀವು ಕೇಳುವುದಿಲ್ಲವೇ?

ಶ್ರೀ ಹೆಚ್.ಏಕಾಂತಯ್ಯ : ನಾವು ಇದ್ದೇವಲ್ಲ.

ಶ್ರೀ ಎ.ಕೆ. ಅನಂತಕೃಷ್ಣ : ಇಂಗ್ಲೀಷ್ ನಲ್ಲಿ ಒಂದು ಗಾದೆ ಇದೆ. "Do as I ask you to do and not ask I to do" ಆ ರೀತಿ ಆಯಿತು.

(ಗೊಂದಲ)

ಶ್ರೀ ಬಿ.ಎಂ. ಇದಿನಬ್ಬ : ಆದುದರಿಂದ ಇವತ್ತು ಈ ಸರಕಾರ ತೆಗೆದುಕೊಂಡ ಕಾರ್ಯಕ್ರಮ ಮತ್ತು ರಾಜ್ಯಪಾಲರ ಭಾಷಣದಲ್ಲಿರತಕ್ಕ ಕಾರ್ಯಕ್ರಮ ಇದೆಲ್ಲವೂ ಕೂಡ ಬಡವರಿಗೆ ಬೇಕಾದಂಥ, ರೈತರಿಗೆ ಬೇಕಾದಂಥ, ಹಿಂದುಳಿದ ವರ್ಗದವರಿಗೆ ಬೇಕಾದಂಥ ಕಾರ್ಯಕ್ರಮಗಳೇ ಆಗಿವೆ. ಇದನ್ನು ಅನುಷ್ಠಾನದಲ್ಲಿ ಕಾರ್ಯರೂಪಕ್ಕೆ ತಂದಾಗ ನಿಜವಾಗಲೂ ರೈತರಿಗೆ, ಬಡವರಿಗೆ, ಕೂಲಿಕಾರರಿಗೆ ಉಪಕಾರವಾಗುತ್ತದೆ. ಎಲ್ಲರಿಗೂ ಉಪಕಾರವಾಗುತ್ತದೆ. ಅಂತಹ ಭಾವನೆ ರಾಜ್ಯಪಾಲರ ಭಾಷಣದಲ್ಲಿ ಉಂಟು. ಅದನ್ನು ಅಧಿಕಾರಿಗಳೂ ಸಹ ಒಳ್ಳೆಯ ರೀತಿಯಲ್ಲಿ ಮನಸ್ಸು ಮಾಡಿ, ಸರಕಾರ ಮಾಡಿದಂಥ ಕಾರ್ಯಕ್ರಮವನ್ನು ಚಾಚೂತಪ್ಪದೆ ಹಳ್ಳಿಯಲ್ಲಿರತಕ್ಕ, ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಬಡವರಿಗೆ ಮುಟ್ಟಿಸತಕ್ಕಂಥ ಕಾರ್ಯಕ್ರಮ ಮಾಡಬೇಕು. ಅದಕ್ಕೆ ಈ ಸದನದಲ್ಲಿರತಕ್ಕಂಥ ನಾವೆಲ್ಲರೂ ಸ್ಪಂದನವನ್ನು ಕೊಟ್ಟು, ಈ ಕಾರ್ಯ ಚಾಲನೆ ಆಗುವ ಹಾಗೆ ಸಾಧನೆ ಮಾಡಿದರೆ, ಇಂತಹ ಕಾರ್ಯಕ್ರಮ ನಮಗೆ ಉಪಕಾರ ನೀಡುತ್ತದೆ ಎಂದು ಹೇಳುವುದರಲ್ಲಿ ಯಾವ ಅನುಮಾನವೂ ಇಲ್ಲ. ಇನ್ನು ಮಲೆನಾಡು ಅಭಿವೃದ್ಧಿಗೆ ಒಂದು ಮಂಡಲಿಯನ್ನು ಮಾಡತಕ್ಕ ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ವಿಚಾರ ಉಂಟು. ಇದು ಬಹಳ ಒಳ್ಳೆಯ ವಿಚಾರ. ಏಕೆಂದರೆ ಹೈದರಾಬಾದ್ - ಕರ್ನಾಟಕದ ಅಭಿವೃದ್ಧಿಗೆ ಒಂದು ಮಂಡಲಿಯನ್ನು ಮಾಡಿದ್ದಾರೆ. ಅದೇ ರೀತಿಯಲ್ಲಿ ಬಾಂಬೆ ಕರ್ನಾಟಕಕ್ಕೂ ಒಂದು ಮಂಡಲಿಯನ್ನು ಮಾಡಬೇಕೆಂದು ಕಾರ್ಯಕ್ರಮಗಳು ನಡೆಯುತ್ತಾ ಇದೆ. ಮಲೆನಾಡು ಎಂದು ಹೇಳಿದರೆ ಇಡೀ ಮಲೆನಾಡು ಪ್ರದೇಶದಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳು ಆಗಬೇಕಾಗಿದೆ. ಅನೇಕ ಒಳ್ಳೊಳ್ಳೆಯ ಕಾರ್ಯಗಳು ಆಗಬೇಕಾಗಿದೆ.

ಮಲೆನಾಡು ಪ್ರದೇಶ ಎಂದರೆ ದಕ್ಷಿಣಕನ್ನಡ ಜಿಲ್ಲೆಯ ಧರ್ಮಸ್ಥಳ, ಸುಬ್ರಹ್ಮಣ್ಯ, ಪಂಜ, ಆಗುಂಬೆ - ಈ ರೀತಿ ಇಡೀ ದಕ್ಷಿಣ ಕನ್ನಡ ಜಿಲ್ಲೆಯ ಒಂದು ಭಾಗ ಮಲೆನಾಡಿನಲ್ಲಿ ಸೇರಿದೆ. ಶಿವಮೊಗ್ಗದ ಭಾಗ, ಚಿಕ್ಕಮಗಳೂರು, ಕೊಡಗು - ಜಿಲ್ಲೆಗಳು ಮಲೆನಾಡಿಗೆ ಸೇರಿವೆ. ಈ ಪ್ರದೇಶಕ್ಕೆ ಇಂತಹ ಒಂದು ಮಂಡಲಿಯನ್ನು ಮಾಡುವ ವ್ಯವಸ್ಥೆ ಮಾಡಿದರೆ ನಿಜವಾಗಿಯೂ ಮಲೆನಾಡಿಗೆ ಆಗಿರತಕ್ಕ ಅನ್ಯಾಯವನ್ನು ಸರಿಪಡಿಸುವುದಕ್ಕೆ ಖಂಡಿತವಾಗಿ ಸಾಧ್ಯ ಆಗುತ್ತದೆ. ಇದು ಕೂಡ ರಾಜ್ಯಪಾಲರ ಭಾಷಣದಲ್ಲಿ ಸೂಚಿತವಾಗಿದೆ. ಆದುದರಿಂದ ಇದನ್ನು ಸ್ವಾಗತ ಮಾಡುತ್ತೇನೆ. ಇನ್ನು ವಿಶೇಷವಾಗಿ ಹೇಳಬೇಕಾದುದು ಕುಡಿಯುವ ನೀರಿನ ವಿಚಾರ. ಬಹಳ ಸಲ ನಮ್ಮ ಮಿತ್ರರೆಲ್ಲರೂ ಇದರ ಬಗ್ಗೆ ಮಾತನಾಡಿದ್ದಾರೆ.

ಇವತ್ತು ಏನು ಇಲ್ಲದಿದ್ದರೂ ಕುಡಿಯುವ ನೀರು ಇಲ್ಲದಿದ್ದರೆ ಯಾರೂ ಬದುಕುವುದಕ್ಕೆ ಸಾಧ್ಯವಿಲ್ಲ. ಇವತ್ತು ಜಾಗ ಇರಬಹುದು, ನಿವೇಶನ ಇರಬಹುದು, ಮನೆ ಇರಬಹುದು, ಮಕ್ಕಳು ಇರಬಹುದು, ಮರಿಗಳು ಇರಬಹುದು, ಏನೆಲ್ಲಾ ಇದ್ದರೂ ಸಹ ಕುಡಿಯುವ ನೀರು ಇಲ್ಲದಿದ್ದರೆ, ಕುಡಿಯುವ ನೀರು ಸಿಗದಿದ್ದರೆ ಯಾರಿಗೂ ಸಂತೋಷ ಇರುವುದಕ್ಕೆ ಸಾಧ್ಯವಿಲ್ಲ. ಇವತ್ತು ಕುಡಿಯುವ ನೀರಿನ ಹಾಹಾಕಾರ ಎದ್ದಿದೆ. ಆದರಿಂದ ಕುಡಿಯುವ ನೀರಿನ ಬಗ್ಗೆ ಕೂಡ ರಾಜ್ಯಪಾಲರ ಭಾಷಣದಲ್ಲಿ ಸೂಚನೆ ಮಾಡಿದ್ದಾರೆ. ಇದನ್ನು ಸುಧಾರಣೆ ಮಾಡಿ. ಈ ಸರ್ಕಾರ ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುತ್ತದೆ ಎನ್ನತಕ್ಕಂಥ ಭಾವನೆಯಲ್ಲಿ ಕೂಡ ಹೇಳಿದ್ದಾರೆ. ಮತ್ತು ಅನೇಕ ಮಿತ್ರರು ಕೂಡ ಇದರ ಬಗ್ಗೆ ಹೇಳಿದ್ದಾರೆ. ನಮ್ಮ ಮಂಗಳೂರಿನಲ್ಲಿ ಕೂಡ ಕುಡಿಯುವ ನೀರಿಗೆ ಬಹಳ ತೊಂದರೆ ಇದೆ. ದಕ್ಷಿಣ ಕನ್ನಡ ಜಿಲ್ಲೆ ಬರಗಾಲ ಪ್ರದೇಶವಲ್ಲದಿದ್ದರೂ ಕೂಡ ಬರಗಾಲ ಪ್ರದೇಶಕ್ಕೆ ಸಿಗತಕ್ಕಂಥ ಕೋಟಿ ಕೋಟಿ ರೂಪಾಯಿಗಳ ಹಣ ನಮ್ಮ ಜಿಲ್ಲೆಗೆ ಸಿಗದಿದ್ದರೂ ಕೂಡ ಕುಡಿಯುವ

ನೀರಿನ ಬವಣೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಾಸ್ತಿ ಇದೆ. ಕಳೆದ 6-7 ವರ್ಷಗಳಿಂದ ಬರಗಾಲ ಪೀಡಿತ ಜಿಲ್ಲೆಗಳಿಗೆ 8 ಕೋಟಿ ರೂಪಾಯಿ, 6 ಕೋಟಿ ರೂಪಾಯಿ, 7 ಕೋಟಿ ರೂಪಾಯಿ ಹಣ ಕೊಡುತ್ತಿದ್ದಾರೆ. ಆದರೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬರಗಾಲ ಇಲ್ಲ ಎಂದು ಲೆಕ್ಕ ಹಾಕಿ ಕೊಂಡಿದ್ದಾರೆ, ಚಿಂತೆ ಇಲ್ಲ. ಬರಗಾಲ ಬರುವುದೇ ಬೇಡ. ಬರಗಾಲ ಎಲ್ಲೂ ಬರುವುದು ಬೇಡ. ಆದರೆ ಕುಡಿಯುವ ನೀರಿನ ತೊಂದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉಂಟು. ಇವತ್ತು ಮಂಗಳೂರಿನಲ್ಲಿ ಕುಡಿಯುವ ನೀರಿನ ಹಾಹಾಕಾರ ಎದ್ದಿದೆ. ನನ್ನ ಕ್ಷೇತ್ರವಾದ ಜಪ್ಪಿನವಗರು, ಜಟ್ಟಿನಲ್ಲಿ, ವೆಲೆನ್ಸಿಯಲ್ಲಿ, ಕಂಕನಾಡಿನಲ್ಲಿ, ನಾಗರಿಯಲ್ಲಿ ಇನ್ನೂ ಅನೇಕ ಕಡೆಗಳಲ್ಲಿ ಕುಡಿಯುವ ನೀರಿನ ಹಾಹಾಕಾರ ಉಂಟು. ಅದಕ್ಕೆ ತುಂಬೆಯಲ್ಲಿ ಅಣೆಕಟ್ಟು ಕಟ್ಟಿ ಅಲ್ಲಿಂದ ನೀರನ್ನು ತರತಕ್ಕ ವ್ಯವಸ್ಥೆ ಮಾಡಿದ್ದಾರೆ. ಅದು ಇನ್ನೂ ಪೂರ್ಣವಾಗಲಿಲ್ಲ. ಅದು ಪೂರ್ಣವಾಗದೆ ಇದ್ದುದರಿಂದ ಸಂಪೂರ್ಣವಾಗಿ ಕುಡಿಯುವ ನೀರು ಮಂಗಳೂರಿಗೆ ಬರುವುದಕ್ಕೆ ಸಾಧ್ಯವಾಗಲಿಲ್ಲ. ಆದ್ದರಿಂದ ಆ ರೀತಿ ನಮ್ಮ ಮಂಗಳೂರಿನಲ್ಲೂ ಸಹ ಕುಡಿಯುವ ನೀರಿನ ವ್ಯವಸ್ಥೆ ಆಗುವ ಹಾಗೆ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಕೂಡ ಕುಡಿಯುವ ನೀರಿನ ವ್ಯವಸ್ಥೆ ಸರಿಯಾಗಲಿಕ್ಕೆ ಅಲ್ಲಿ ಬೇಕಾದಷ್ಟು ಕೊಳವೆಬಾವಿಗಳನ್ನು ತೋಡಿಸತಕ್ಕಂಥ ಕಾರ್ಯಕ್ರಮಗಳನ್ನು ಸರ್ಕಾರ ಮಾಡಿಕೊಂಡರೆ ನಿಜವಾಗಿಯೂ ಇದೊಂದು ಒಳ್ಳೆಯ ಕಾರ್ಯ ಆಗುತ್ತದೆ ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ. ರಾಜ್ಯಪಾಲರ ಭಾಷಣದಲ್ಲಿ ಗ್ರಾಮಾಂತರ ಪ್ರದೇಶದ ಜನಗಳಿಗೆ, ರೈತರಿಗೆ ಕೂಲಿಕಾರರಿಗೆ, ಬಡವರಿಗೆ, ಹಿಂದುಳಿದ ವರ್ಗದವರಿಗೆ ಬೇಕಾದಂತಹ ಅನೇಕ ಅತ್ಯುತ್ತಮ ಸೂಚನೆಗಳನ್ನು ಕೊಟ್ಟಿದ್ದಾರೆ. ಅಕ್ರಮ ಭೂಮಿ ಸಕ್ರಮ ಮಾಡತಕ್ಕಂಥಾದ್ದು, ರೈತರ ಪಂಪುಸೆಟ್ಟುಗಳಿಗೆ ವಿದ್ಯುತ್ ಕೊಡತಕ್ಕಂಥಾದ್ದು, ನಿವೇಶನರಹಿತರಿಗೆ ಉಚಿತವಾಗಿ ನಿವೇಶನ ಕೊಡತಕ್ಕಂಥಾದ್ದು, ಮನೆ ಇಲ್ಲದವರಿಗೆ ಮನೆ ಕಟ್ಟಿಸಿಕೊಡತಕ್ಕಂಥಾದ್ದು, ಹಾಗೆಯೇ ಹೆಚ್ಚು ಒಂದು ಕೊಠಡಿಯನ್ನು ಕಟ್ಟಿಸಿಕೊಡತಕ್ಕಂಥಾದ್ದು - ಇದೇ ರೀತಿಯಲ್ಲಿ ಶಿಕ್ಷಣದಲ್ಲಿ ಬೇಕಾದಂತಹ ವ್ಯವಸ್ಥೆ ಮಾಡಿ ಶಿಕ್ಷಣ ಮುಂದುವರಿಸತಕ್ಕಂಥಾದ್ದು ಪೊಲಿಟೆಕ್ನಿಕ್ ಮತ್ತು ಐ.ಟಿ.ಐಗಳಲ್ಲಿ ಹೆಚ್ಚು ವಿದ್ಯಾಭ್ಯಾಸ ಕೊಟ್ಟು ವಿದ್ಯಾರ್ಥಿಗಳು ಹೊರಗಡೆ ಬಂದು ಸ್ವತಂತ್ರವಾಗಿ ಜೀವನ ಮಾಡತಕ್ಕಂಥಾದ್ದಕ್ಕೆ ಬೇಕಾದಂತಹ ಪರಿಪೂರ್ಣ ಕಾರ್ಯಕ್ರಮಗಳನ್ನು ಕೂಡ ರಾಜ್ಯಪಾಲರು ತಮ್ಮ ಭಾಷಣದಲ್ಲಿ ಸೂಚನೆ ಮಾಡಿದ್ದಾರೆ. ಅಧನ್ನು ಕಾರ್ಯರೂಪಕ್ಕೆ ತರಬೇಕು. ಕಾರ್ಯರೂಪಕ್ಕೆ ಬರುವ ಹಾಗೆ ಅಧಿಕಾರಿಗಳು ನಾವು ನೀವು ಸರ್ಕಾರ ಎಲ್ಲರೂ ಕೂಡಿ ಪ್ರಯತ್ನ ಮಾಡಬೇಕೆಂದು ಹೇಳಿ ಈ ಬಗ್ಗೆ ನನಗೆ ಈ ಸದನದಲ್ಲಿ 4 ಚರಣ ಕವಿತೆಗಳನ್ನು ಬರೆದಿದ್ದೇನೆ. ಅದರಲ್ಲಿ ಎಲ್ಲಾ ಅಡಕವಾಗಿವೆ. ಅದನ್ನು ಇಲ್ಲಿ ನಾನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

"ರಾಜ್ಯ ಪಾಲರ ಭಾಷಣ ಕ್ರಾಂತಿಕಾರಿ ವಿಷಯಗಳ ಪರಿಪಾಕ.

ಅವುಗಳನ್ನು ಮನನ ಮಾಡಿ ಜಾರಿ ಮಾಡಿದರೆ ಆದೀತು ಸರಿ ತೂಕ.

ಭೂಮಿ ಅಕ್ರಮ ಸಕ್ರಮ ಭೂಹೀನರಿಗೆ ನಿವೇಶನ ರೈತರಿಗೆ ಪಾಸು

ಪುಸ್ತಕ ಪಂಪುಗಳಿಗೆ ವಿದ್ಯುತ್ ನೀಡಿಕೆ, ಶಿಕ್ಷಣ ಕ್ರಮದಲ್ಲಿ ಬದಲಾವಣೆ

ಕೃಷಿ ಕ್ಷೇತ್ರದಲ್ಲಿ ಪ್ರಗತಿ, ಪಂಪ್ ಗಳಿಗೆ ವಿದ್ಯುತ್ ನೀಡಿಕೆ ಇದೆಲ್ಲಾ ಬಡವರ

ಪಾಲಿಗೆ ಅತ್ಯುತ್ತಮ ಕೊಡುಗೆ, ಇದರ ಬಗ್ಗೆ ಬೇಡ ಅನಾವಶ್ಯಕ ಸಲುಗೆ

ಸಹಕಾರ ಭಾವದಲಿ ಸರ್ವ ಜನರ ಬೆಸುಗೆ ಕೂಡಿ ಬಂದಾಗ ರಾಜ್ಯದಲ್ಲಿ

ಸರ್ವತೋಮುಖ ಏಳಿಗೆ"

ಇದರಲ್ಲಿ ಅಧಿಕಾರಿಗಳು ನಾವು ಸರ್ಕಾರ ಊರವರು ಎಲ್ಲರೂ ಕೂಡಿದೆ. ಸಹಕಾರ ಭಾವದಲಿ ಸರ್ವಜನರ ಬೆಸುಗೆ ಕೂಡಿ ಬಂದಾಗ ರಾಜ್ಯದ ಸರ್ವತೋಮುಖ ಏಳಿಗೆ ಬಡವರ ಕಳಕಳಿಯ ರಾಜ್ಯಪಾಲರ ಭಾಷಣ. ಅದರ ಒಳಗಿದೆ ಸಿಹಿಯಾದ ಹೂರಣ ಅದನ್ನು ಬಳಸಿಕೊಳ್ಳೋಣ ನಾವೀಗ ಪರಿಪೂರ್ಣ ಕೋಮು ಸಾಮರಸ್ಯ ಸ್ಥಿರವಾಗಲಿ ರಾಜ್ಯದಲ್ಲಿ ಸಂಪೂರ್ಣ ಅದನ್ನು ಬಳಸಿಕೊಳ್ಳೋಣ ನಾವೀಗ ಪರಿಪೂರ್ಣ ಅದರ ಒಳಗಿದೆ ಸಿಹಿಯಾದ ಹೂರಣ, ರಾಜ್ಯಪಾಲರ ಭಾಷಣ. ಇಷ್ಟು ಹೇಳಿ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಹೆಚ್.ಏಕಾಂತಯ್ಯ (ಚಿತ್ರದುರ್ಗ) : ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಈಗ ತಾನೆ ಮಾತನಾಡಿದಂಥ ನನ್ನ ಸನ್ಮಿತ್ರರಾದಂಥ ಇದಿನಬ್ಬನವರು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಅವರು ಬಹಳ ಸಿಹಿಯಾದ ಮಾತನ್ನು ಹೇಳಿದ್ದಾರೆ. ಸಿಹಿಯಾದಂಥ ಹೂರಣವನ್ನು ಅವರು ತೋರಿಸಿದ್ದಾರೆ. ಆದರೆ, ಆ ಸಿಹಿಯಾದ ಹೂರಣ ಕನ್ನಡಿಯಲ್ಲಿದ್ದರೆ ಪ್ರಯೋಜನವಿಲ್ಲ. ಯಾರಿಗೆ ಆ ಹೂರಣ ದೊರಕಬೇಕೋ ಅಂಥವರಿಗೆ ದೊರಕಿಸುವಂಥ ಆಡಳಿತ ಅಗತ್ಯ. ನಿಜವಾಗಲೂ ಸಹಾ ಅಂಥಾ ಒಂದು ಕಾರ್ಯಕ್ರಮವನ್ನು ಹಾಕಿಕೊಂಡರೆ ಅದಕ್ಕೆ ನಮ್ಮದೂ ಬೆಂಬಲ ಇದೆ. ಆದರೆ ಆ ರೀತಿ ಆಗುತ್ತದೆಯೇ? ಅಥವಾ ಅದರಲ್ಲಿ ಏನಾದರೂ ವೈಫಲ್ಯ ಇದೆಯೇ ಎಂದು ನಾವು ಇವತ್ತು ಪರಿಶೀಲನೆ ಮಾಡಬೇಕಾಗಿದೆ. ಹೋದ ಸಾರಿ ಸಾರ್ವಜನಿಕ ಚುನಾವಣೆಯಾದ ಮೇಲೆ ಕಾಂಗ್ರೆಸ್ ಪಕ್ಷವು ಅತ್ಯಧಿಕ ಬಹುಮತವನ್ನು ಪಡೆದು ಸರ್ಕಾರವನ್ನು ಸ್ಥಾಪಿಸಿತು. ಸರ್ಕಾರ ಸ್ಥಾಪನೆಯಾದ ಮೇಲೆ ರಾಜ್ಯಪಾಲರಿಂದ ಎರಡು ಸಾರಿ ಈಗಾಗಲೇ ಭಾಷಣವನ್ನು ಮಾಡಿಸಿದ್ದಾರೆ. 1989ನೇ ಇಸವಿ ಡಿಸೆಂಬರ್ 18ರಂದು ಒಂದು ಭಾಷಣ ಮಾಡಿಸಿದ್ದಾರೆ, ತದನಂತರ ಮಾರ್ಚ್ 1991ನೇ ಮಾರ್ಚ್ 15 ರಂದು ಮತ್ತೊಂದು ಸಾರಿ ರಾಜ್ಯಪಾಲರು ಭಾಷಣ ಮಾಡಿದ್ದಾರೆ. ಈ ರಾಜ್ಯಪಾಲರ ಭಾಷಣದ ಬಗ್ಗೆ, ಅದರ ಪ್ರಾಮುಖ್ಯತೆ ಬಗ್ಗೆ ಮತ್ತು ಮಹತ್ವದ ಬಗ್ಗೆ ನಾನು ಹೇಳಬೇಕಾಗಿಲ್ಲ. ದಿನಾಂಕ1-3-91ರಂದು ರಾಜ್ಯಪಾಲರು ದಯಪಾಲಿಸಿದ ಭಾಷಣದ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡುವುದಕ್ಕಿಂತ ಮೊದಲು ಈ ಹಿಂದೆ ಏನು ರಾಜ್ಯಪಾಲರು ಭಾಷಣ ಮಾಡಿದ್ದಾರೆ, ಆ ರಾಜ್ಯಪಾಲರ ಭಾಷಣದ ಮುಖಾಂತರ ಸರ್ಕಾರ ಯಾವ ಯಾವ ಆಶ್ವಾಸನೆಗಳನ್ನು ನೀಡಿದೆ, ಆ ಆಶ್ವಾಸನೆಗಳನ್ನು ಎಷ್ಟರಮಟ್ಟಿಗೆ ಕಾರ್ಯಗತ ಮಾಡಲಿಕ್ಕೆ ಪ್ರಾಮಾಣಿಕ ಪ್ರಯತ್ನವನ್ನು ಈ ಸರ್ಕಾರ ಮಾಡಿದೆ ಎಂಬುದನ್ನು ಪರಿಶೀಲನೆ ಮಾಡಬೇಕಾದುದು ಅತ್ಯಂತ ಅಗತ್ಯವಾಗಿದೆ. ಯಾವುದೇ ರಾಜ್ಯಪಾಲರ ಭಾಷಣದ ಅವಧಿಯಲ್ಲಿ ಚರ್ಚೆ ಮಾಡಬೇಕಾದರೆ, ಈ ಹಿಂದೆ ಇದ್ದಂಥ ಸರ್ಕಾರ ರಾಜ್ಯಪಾಲರ ಭಾಷಣದ ಮುಖಾಂತರ ಯಾವ ಯಾವ ಆಶ್ವಾಸನೆಗಳನ್ನು ಕರ್ನಾಟಕ ರಾಜ್ಯದ ಜನತೆಗೆ ಕೊಟ್ಟಿದೆ, ಆ ಆಶ್ವಾಸನೆಗಳನ್ನು ಎಷ್ಟರ ಮಟ್ಟಿಗೆ ಪ್ರಾಮಾಣಿಕವಾಗಿ ಕಾರ್ಯಗತ ಮಾಡಲಿಕ್ಕೆ ಪ್ರಯತ್ನ ಮಾಡಿದೆ ಎಂಬುದನ್ನು ನಾವು ಪರಿಶೀಲನೆ ಮಾಡಬೇಕಾಗಿದೆ. ಮತ್ತು ಮುಂದಿನ ಸಾಲಿಗೆ ಅಂದರೆ ಈ ಪ್ರಸಕ್ತ ಸಾಲಿನಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ಇಟ್ಟುಕೊಂಡಿದ್ದಾರೆ ಎಂಬ ಬಗ್ಗೆ ತದನಂತರ ಮಾತನಾಡಲಿಕ್ಕೆ ಇಷ್ಟಪಡುತ್ತೇನೆ. ಈ ಎರಡೂ ವರ್ಷಗಳಲ್ಲಿ ಅನೇಕ ಪ್ರಮುಖವಾದ ವಿಚಾರಗಳನ್ನು ರಾಜ್ಯಪಾಲರ ಭಾಷಣದ ಮುಖಾಂತರ ಹೇಳಿಸಿದ್ದಾರೆ. ಎಲ್ಲಾ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಲಿಕ್ಕೆ ಕಾಲಾವಕಾಶ ಇಲ್ಲವೆಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಕೆಲವು ಪ್ರಮುಖವಾದ ವಿಚಾರಗಳನ್ನು ಮಾತ್ರ ನಾನು ಈಗ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಹೋದ ಸಾರಿ ರಾಜ್ಯಪಾಲರ ಭಾಷಣದಲ್ಲಿ ಕೆಲವು ಅಂಶಗಳನ್ನು ಹೇಳಿಸಿದ್ದರು. ಅದರಲ್ಲಿ ಒಂದು, ವಿಶ್ವಾಸಾರ್ಹವಾದ, ಜನತೆಯ ಭಾವನೆಗಳಿಗೆ ಸ್ಪಂದಿಸುವ ಹಾಗೂ ದಕ್ಷ

ಆಡಳಿತವನ್ನು ನೀಡುವ ಒಂದು ಪ್ರಾಮಾಣಿಕ ವಚನವನ್ನು ಸರ್ಕಾರ ನೀಡಿತ್ತು. ಅದರ ಜೊತೆಯಲ್ಲಿ ಆಡಳಿತವನ್ನು ಚುರುಕುಗೊಳಿಸಲು ಅನಪೇಕ್ಷಿತವಾದ ಹಸ್ತಕ್ಷೇಪದಿಂದ ನೈತಿಕ ಬಲ ಕುಂದುವುದನ್ನು ನಿವಾರಿಸಲಿಕ್ಕೆ ಒಟ್ಟಾರೆ ಪ್ರಯತ್ನ ಮಾಡುತ್ತೇನೆ ಎಂದು ಹೇಳಿದ್ದರು.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ನಿಮ್ಮ ಕಾಲದಲ್ಲಿ ಮೌಲ್ಯಧಾರಿತ ರಾಜಕಾರಣ ಮಾಡುತ್ತಿದ್ದರಲ್ಲಾ?

ಶ್ರೀ ಹೆಚ್. ಏಕಾಂತಯ್ಯ : ಮೌಲ್ಯಧಾರಿತ ರಾಜಕಾರಣಕ್ಕೆ ಬರಬೇಕೆಂಬ ಮಾತನ್ನು ಅವರು ಹೇಳುತ್ತಿದ್ದಾರೆ. ಆ ವಿಷಯವನ್ನು ಹೇಳುತ್ತೇನೆ. ಅದಕ್ಕೂ ತಾವು ಅವಕಾಶ ಕೊಡಿ. ನಾವು ಮೌಲ್ಯವನ್ನು ಬಿಟ್ಟಿದ್ದೇವೆ ಎಂಬ ಮಾತನ್ನು ತಾವು ಹೇಳುವುದಾದರೆ ಅದೇ ರೀತಿಯಾಗಿ ತಾವು ಇವತ್ತು ಯಾವ ಮೌಲ್ಯದ ನಂಬಿಕೆಯ ಆಧಾರದ ಮೇಲೆ ಆಡಳಿತವನ್ನು ಮಾಡುತ್ತಿದ್ದೀರಿ ಎಂಬ ಟೀಕೆ ಮಾಡಲಿಕ್ಕೆ ನನಗೆ ಹಕ್ಕಿದೆ ಎಂಬುದನ್ನು ತಾವು ಒಪ್ಪುತ್ತೀರೆಂದು ನಾನು ಭಾವಿಸಿದ್ದೇನೆ. ನಮ್ಮ ಸರ್ಕಾರ ಇದ್ದಾಗ, ನಮ್ಮ ಪಕ್ಷದ ಸರ್ಕಾರ ಇದ್ದಾಗ ನಾವು ಅನೇಕ ಕಾರ್ಯಕ್ರಮಗಳು ಸರಿಯಾಗಿ ಜಾರಿಯಾಗದಿದ್ದರೆ ಅದರ ವೈಫಲ್ಯತೆಯಿಂದಾಗಿ ನಾವು ಅಧಿಕಾರವನ್ನು ಕಳೆದುಕೊಂಡಿದ್ದರೆ ಅದರ ಅರ್ಥ, ನಾವು ವಿರೋಧ ಪಕ್ಷದಲ್ಲಿ ಕುಳಿತು ನೀವು ಮಾಡುವಂಥ ವೈಫಲ್ಯಗಳನ್ನು ತೋರಿಸಬಾರದು ಎಂದು ಅಲ್ಲವಲ್ಲ. ಮಾರ್ಚ್ 15, 1990ರಲ್ಲಿ ನಿಮ್ಮ ಸರ್ಕಾರ ರಾಜ್ಯಪಾಲರ ಭಾಷಣದಲ್ಲಿ ಹೇಳಿಸಿತು. ಏನು ಹೇಳಿಸಿದಿರಿ ಅಂದರೆ, ಆಡಳಿತದಲ್ಲಿ ದಕ್ಷತೆಯನ್ನು ಸುಧಾರಿಸಲು ಮತ್ತು ಆಡಳಿತ ವ್ಯವಸ್ಥೆಯಲ್ಲಿ ಸೇವಾ ಶಿಸ್ತನ್ನು ಕಟ್ಟುನಿಟ್ಟಾಗಿ ಜಾರಿಗೆ ತರಲು ಅನೇಕ ಪ್ರಮುಖವಾದ ಉದ್ದೇಶಗಳನ್ನು ಹೊಂದಿದ್ದೇವೆ ಎನ್ನುವ ಮಾತನ್ನು ಹೇಳಿಸಿದ್ದೀರಿ. ನಂತರ ಒಂದೊಂದಾಗಿ ನಾನು ಹೇಳುತ್ತೇನೆ, ದಕ್ಷತೆ ಪರಿಶೋಧನೆ ಮತ್ತು ಜಾಗೃತ ಮಂಡಳಿಯನ್ನು ರಚನೆ ಮಾಡುತ್ತೇವೆಂದು ಹೇಳಿದಿರಿ. ಪದ್ಧತಿ ಪರಿಶೋಧನಾ ಸಂಸ್ಥೆಯನ್ನು ರಚನೆ ಮಾಡುತ್ತೇವೆಂದು ಹೇಳಿದಿರಿ. ಯಾವ ಯಾವ ಅಧಿಕಾರಿಗಳು ಎಷ್ಟರಮಟ್ಟಿಗೆ ಕೆಲಸ ಮಾಡುತ್ತಾರೆಂದು ಪರಿಶೀಲನೆ ಮಾಡುವುದಕ್ಕೆ ಒಬ್ಬ ನಿವೃತ್ತ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ಪರಿಶೀಲನಾ ಸಮಿತಿ ಮಾಡುತ್ತೇವೆಂದು ಹೇಳಿದ್ದೀರಿ. ಉಳಿದ ವಿಚಾರಗಳನ್ನು ನಂತರ ಪ್ರಸ್ತಾಪ ಮಾಡುತ್ತೇನೆ. ಇವತ್ತಿನ ದಿವಸ ಮುಖ್ಯವಾದಂತಹ ಕೆಲವು ಅಶ್ವಾಸನೆಗಳನ್ನು ಏನು ಕೊಟ್ಟಿದ್ದಾರೆ, ಆ ಆಶ್ವಾಸನೆಗಳನ್ನು ಎಷ್ಟರಮಟ್ಟಿಗೆ ಜಾರಿಗೆ ತರಲಿಕ್ಕೆ ಈ ಸರ್ಕಾರ ಪ್ರಯತ್ನ ಮಾಡಿದೆ ಎಂಬುದರ ಬಗ್ಗೆ ಸ್ವಲ್ಪ ಮಟ್ಟಿಗೆ ನಾನು ವಿಷದವಾಗಿ ಹೇಳುವುದಕ್ಕೆ ಇಷ್ಟ ಪಡುತ್ತೇನೆ. ನಿಜವಾಗಿ ನಮ್ಮ ರಾಷ್ಟ್ರದಲ್ಲಿ, ನಮ್ಮ ರಾಜ್ಯದಲ್ಲಿ ಇವತ್ತಿನ ದಿವಸ ವೆಸ್ಟ್ ಮಿನಿಸ್ಟರ್ ಮಾದರಿಯ ಆಡಳಿತ ಪದ್ಧತಿಯನ್ನು ಸಂಸದೀಯ ವ್ಯವಸ್ಥೆಯನ್ನು ಯಾವುದೇ ಒಂದು ಪಕ್ಷ ಅಧಿಕಾರಕ್ಕೆ ಬಂದ ಮೇಲೆ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದಂಥ ಅನೇಕ ರೀತಿಯ ವಿಚಾರದಲ್ಲಿ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೆ ತರಬೇಕಾದ್ದು ಮುಖ್ಯ ಕರ್ತವ್ಯ. ಆ ಕಾರ್ಯಕ್ರಮವನ್ನು ಜಾರಿಗೆ ತರಬೇಕಾದರೆ ಯಾವ ಒಂದು ಪದ್ಧತಿಯನ್ನು ಅನುಸರಿಸಬೇಕು ಎನ್ನುವುದರ ಬಗ್ಗೆ ಎರಡು ಮಾತು ಉಂಟು. ಮಾನ್ಯ ಪ್ರತಾಪಚಂದ್ರ ಶೆಟ್ಟಿಯವರೇ ಕೇಳಿ, ಒಂದನ್ನು ನಾವೆಲ್ಲರೂ ಒಪ್ಪಿಕೊಂಡಿದ್ದೇವೆ. ಅದು ಏನು ಅಂದರೆ, ಜರ್ಮನ್ ಸೋಶಿಯಲಿಸ್ಟ್ಸ್ ಇದ್ದರು. ಅಥವಾ ಸೋಷಿಯಾಲಜಿಸ್ಟ್ ಇದ್ದರು. ಅವರು ಹೇಳಿದರು ಮಾಕ್ಸ್ ವೆಬೆರ್ ಹೇಳಿದರು. ಅವರು ಹೇಳಿದಂತೆ ಇಂತಹ ಒಂದು ಆಡಳಿತ ಪದ್ಧತಿಯನ್ನು ನಾವು ಏನಾದರೂ ತರುವುದಾದರೆ, ಅದು ರಾಜಕೀಯದಿಂದ ದೂರ ಇರಬೇಕು. ರಾಜಕೀಯ ಹಸ್ತಕ್ಷೇಪ ಇರದಂತಹ ಆಡಳಿತವನ್ನು ತರಬೇಕು, ಇಂತಹ ಒಂದು ಆಡಳಿತದಲ್ಲಿ ಯಾವುದಾದರೂ ಕಾರ್ಯಕ್ರಮಗಳು ಜಾರಿ ಆಗಬೇಕಾದರೆ ಈ ಜಾರಿ ಆಗಬೇಕಾದಂತಹ

ಕಾರ್ಯಕ್ರಮಗಳಲ್ಲಿ ರಾಜಕೀಯ ಹಸ್ತಕ್ಷೇಪ ಇರಬಾರದು ಎಂಬ ಮಾತನ್ನು ಹೇಳಿದರು. ಮತ್ತು ಆಡಳಿತ ಪದ್ಧತಿಯಲ್ಲಿ ಅದಕ್ಷತೆ ಇದೆ, ಭ್ರಷ್ಟಾಚಾರ ಇದೆ, ಇಂತಹ ಅದಕ್ಷತೆ ಮತ್ತು ಭ್ರಷ್ಟಾಚಾರವನ್ನು ಆಡಳಿತಾತ್ಮಕವಾದ ವಿಧಾನಗಳಿಂದ ನಾವು ಬಗೆಹರಿಸಬೇಕು ಎಂಬ ಮಾತನ್ನು ಹೇಳಿದರು. ಇವತ್ತಿನ ದಿವಸ ಕರ್ನಾಟಕ ರಾಜ್ಯದಲ್ಲಿ ಮಾತ್ರವಲ್ಲ, ಇಡೀ ಭಾರತದಲ್ಲಿ ನಾವು ಈ ವ್ಯವಸ್ಥೆಯನ್ನು ಒಪ್ಪಿಕೊಂಡಿದ್ದೇವೆ. ಈ ವ್ಯವಸ್ಥೆಯ ಮುಖಾಂತರ ಈ ಆಡಳಿತ ಪದ್ಧತಿಯ ಮುಖಾಂತರ ನಾವು ನಮ್ಮ ಯಾವುದೇ ಪಕ್ಷದ ಸರ್ಕಾರವು ಅಧಿಕಾರಕ್ಕೆ ಬಂದರೂ ಸಹ ಆ ಸರ್ಕಾರ, ಪಕ್ಷ ನಂಬಿದಂತಹ ಏನು ಕಾರ್ಯಕ್ರಮಗಳು ಇವೆ ಆ ಕಾರ್ಯಕ್ರಮಗಳು ಜರುಗಲಿಕ್ಕೆ ನಾವು ಈ ವಿಧಾನಗಳನ್ನು ಅನುಸರಿಸಬೇಕು ಎಂಬುದನ್ನು ನಾವೆಲ್ಲರೂ ಒಪ್ಪಿಕೊಂಡಿದ್ದೇವೆ. ಆದರೆ ಇವತ್ತಿನ ದಿವಸ ನಾವು ಯಾವ ಕಡೆ ಹೋಗದುತ್ತಿದ್ದೇವೆ? 1828ನೇ ಇಸವಿಗಿಂತ ಹಿಂದೆ ಹೋಗಿದ್ದೇವೆ. 1828ನೇ ಇಸವಿಯಲ್ಲಿ ಅಮೇರಿಕಾದಲ್ಲಿ ಆಂಡ್ರೋ ಜಾಕ್ ಸನ್ ಎಂಬ ಒಬ್ಬ ಅಧ್ಯಕ್ಷರು ಇದ್ದರು. ಅವರ ಕಾಲದಲ್ಲಿ ಒಂದು ಹೊಸ ಪದ್ಧತಿ ಬಂತು. ಅದು ಅವರ ಹೆಸರಿನಲ್ಲಿ ಬಂದಿದೆ. "It is called a spoil system" ಈ ಒಂದು ಪದ್ಧತಿಗೆ ಬದಲಾಗಿ ಮತ್ತೊಂದು ಪದ್ಧತಿ ಅವತ್ತಿನ ದಿವಸ ಬಂದಿತು. ಆ ಪದ್ಧತಿ ಏನು ಅಂದರೆ, ಯಾವುದೇ ಒಂದು ಕಾರ್ಯಕ್ರಮವನ್ನು ರೂಪಣೆ ಮಾಡಿ ಜಾರಿಗೆ ತರುವುದಾದರೆ ಅಲ್ಲಿ ರಾಜಕೀಯ ಹಸ್ತಕ್ಷೇಪ ಅತ್ಯಂತ ಅವಶ್ಯಕ ಮತ್ತು ರಾಜಕೀಯ ಭ್ರಷ್ಟಾಚಾರ ಏನು ಇದೆ ಅದು ಅನ್ ಅಬ್ಜೆಕ್ಟೆಡ್ ಲಿ ಸ್ವಲ್ಪವೂ ಮುಚ್ಚುಮರೆ ಇಲ್ಲದಂತಹ ಒಂದು ಆಡಳಿತ ಪದ್ಧತಿ ಆ ಕಾಲದಲ್ಲಿ ಬಂತು. ಈ ಮಾತನ್ನು ನಾನು ವಿತರ್ಕೋಸ್ಕರವಾಗಿ ಜ್ಞಾಪಕ ಮಾಡಿ ಕೊಳ್ಳುತ್ತಿದ್ದೇನೆಂದರೆ, ಇವತ್ತಿನ ದಿವಸ ನಾವು ಒಪ್ಪಿದಂತಹ ವೆಸ್ಟ್‌ಮಿನಿಸ್ಟರ್, ವೆಬೇರಿಯನ್ ಸಿಸ್ಟಂ ಆಫ್ ಗವರ್ನ್‌ಮೆಂಟ್ ಏನು ಇದೆ, ಅದಕ್ಕೆ ಬದಲಾಗಿ ಸ್ಪಾಯಿಲ್ಸ್ ಸಿಸ್ಟಂ ಎಂದು ಏನು ಹಿಂದೆ ಖ್ಯಾತ ಆಗಿತ್ತು ಅಂತಹ ಒಂದು ಪದ್ಧತಿಯ ಕಡೆಗೆ ನಾವು ಜಾರುತ್ತಿದ್ದೇವೆ. ಇದನ್ನು ನಾನು ಯಾರನ್ನೂ ಕುರಿತು ಹೇಳುವಂತಹ ಮಾತಲ್ಲ. ನಿಜವಾಗಿ ನಮ್ಮ ಕಾರ್ಯಕ್ರಮಗಳನ್ನು ಸರಿಯಾಗಿ ನಾವು ಜಾರಿ ಮಾಡಬೇಕು ಎಂದು ಎನಿಸಿದರೆ, ಈ ಕಾರ್ಯಕ್ರಮಗಳ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಭಾಷಣ ಮಾಡುತ್ತಾ ಹೇಳಿದರು. ಈ ದೇಶದ ಹಣ ಏನು ಖರ್ಚಾಗುತ್ತಿದೆ, ಆ ಖರ್ಚಾಗುವಂತಹ ಹಣದಿಂದ ಪ್ರತಿಫಲ ಏನು ಇದೆ ಆ ಪ್ರತಿಫಲ ಇವತ್ತಿನ ದಿವಸ ಯಾರಿಗೆ ದಕ್ಕಬೇಕೋ ಅವರಿಗೆ ದಕ್ಕದಿದ್ದರೆ ಆ ಜನ ಇವತ್ತಿನ ದಿವಸ ಕ್ರಾಂತಿ ಮಾಡಬಹುದು, ನಮ್ಮ ವ್ಯವಸ್ಥೆಯನ್ನು ತೆಗೆದುಹಾಕಬಹುದು ಎಂಬ ಮಾತನ್ನು ಹೇಳಿದರು. ನಾನು ಒಪ್ಪುತ್ತೇನೆ. ನಿಜವಾಗಿ ತಾವೇನಾದರೂ ಇದೇ ರೀತಿಯಾಗಿ ಆಡಳಿತ ಮುಂದುವರಿಸಿದ್ದೇ ಆದರೆ ಆ ದೇಶದ ಜನ ಕೇವಲ ಒಂದು ವ್ಯವಸ್ಥೆಯನ್ನು ತೆಗೆದುಹಾಕುವುದು ಮಾತ್ರವಲ್ಲ, ಈ ವ್ಯವಸ್ಥೆಯಲ್ಲಿರತಕ್ಕಂಥ ಒಂದು ವಿಶ್ವಾಸ ಸಹ ಹೋಗುವಂತಹ ಒಂದು ಪರಿಸ್ಥಿತಿ ಇವತ್ತಿನ ದಿವಸ ನಮ್ಮ ಕರ್ನಾಟಕ ರಾಜ್ಯದಲ್ಲಿ ಉದ್ಭವವಾಗಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಅದರ ಅರ್ಥ , ಈ ವ್ಯವಸ್ಥೆ ಹಿಂದೆ ಲೋಪದೋಷಗಳು ಇರಲಿಲ್ಲ ಎಂಬ ಮಾತನ್ನು ನಾನು ಹೇಳುತ್ತಿಲ್ಲ. ಹಿಂದಿನ ಆಡಳಿತ ಪದ್ಧತಿಯಲ್ಲಿ ಯಾವುದೇ ಪಕ್ಷದ ಸರ್ಕಾರಗಳು ಇದ್ದರೂ ಸಹ ಈ ವ್ಯವಸ್ಥೆಯಲ್ಲಿ ಆಡಳಿತದ ಲೋಪದೋಷಗಳು ಇತ್ತು. ಆ ಲೋಪದೋಷಗಳನ್ನು ನಿವಾರಣೆ ಮಾಡಲಿಕ್ಕೆ ಎಲ್ಲರೂ ಪ್ರಾಮಾಣಿಕವಾಗಿ ಪ್ರಯತ್ನವನ್ನು ಮಾಡಬೇಕಾಗಿದೆ. ನಿಜ, ಈ ಸರ್ಕಾರ ಬಂದ ತಕ್ಷಣ ಭ್ರಷ್ಟಾಚಾರ ಇರದಂತೆ ಮಾಡುತ್ತದೆ ಎಂಬ ನಂಬಿಕೆ ಇರಲಿಲ್ಲ ಅಥವಾ ನಮ್ಮ ಅದಕ್ಷತೆಯನ್ನು ಪೂರ್ಣವಾಗಿ ನಿವಾರಣೆ ಮಾಡುತ್ತದೆ ಎಂಬ ಮಾತನ್ನು ನಾನು ಹೇಳುತ್ತಿಲ್ಲ. ಆದರೆ ಪ್ರಾಮಾಣಿಕವಾದ ಪ್ರಯತ್ನ ನಮ್ಮಿಂಗದ ಆಗಬೇಕು. ಆಡಳಿತ ಮಾಡುವಂತಹ ಜನ ಯಾರೇ ಇದ್ದರೂ ಸಹ ಈ ಅದಕ್ಷತೆಯನ್ನು,

ಭ್ರಷ್ಟಾಚಾರವನ್ನು ತಪ್ಪಿಸಿ, ಆಡಳಿತವನ್ನು ಸುಧಾರಣೆ ಮಾಡುವುದರ ಮುಖಾಂತರ ತಾವು ಒಪ್ಪಿರುವಂತಹ ಕಾರ್ಯಕ್ರಮಗಳನ್ನು ಜಾರಿಗೆ ತರಲಿಕ್ಕೆ ಪ್ರಾಮಾಣಿಕವಾದ ಪ್ರಯತ್ನ ಮಾಡಬೇಕಾದದ್ದು ಯಾವುದೇ ಸರ್ಕಾರದ ಒಂದು ಆದ್ಯ ಕರ್ತವ್ಯ. ಈ ದಿಸೆಯಲ್ಲಿ ಇವತ್ತಿನ ದಿವಸ ಏನು ಆಗಿದೆ ಎಂಬುದನ್ನು ನಾನು ಒಂದೆರಡು ಮಾತುಗಳಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ಈ ಸರ್ಕಾರ ನಡೆಯುತ್ತಿದೆ. ಶ್ರೀಮಾನ್ ವೀರೇಂದ್ರ ಪಾಟೀಲರ ಸರ್ಕಾರಕ್ಕೂ ಇವರ ಸರ್ಕಾರಕ್ಕೂ ಯಾವುದೇ ವ್ಯತ್ಯಾಸ ಇಲ್ಲ ಎಂದು ನಾನು ತಿಳಿದುಕೊಂಡಿದ್ದೇನೆ. ಅಂದರೆ ಅದೂ ಕಾಂಗ್ರೆಸ್ ಸರ್ಕಾರ, ಇದೂ ಕಾಂಗ್ರೆಸ್ ಸರ್ಕಾರ ಎಂತಲೇ ನನ್ನ ಭಾವನೆ. ಇವತ್ತಿನ ದಿವಸ ಈ ಸರ್ಕಾರ ಏನಿದೆ, ಈ ಸರ್ಕಾರದ ಆಡಳಿತ ಶ್ರೇಣಿ ಏನು ಇದೆ, ನಿಜವಾಗಿ ಅವರೇ ಹೇಳಿದಂತಹ ಮಾತುಗಳನ್ನು ಜಾರಿಗೆ ತರಲಿಕ್ಕೆ ಏನಾದರೂ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರಾ?

4.20 ಪಿ.ಎಂ.

ಆಡಳಿತದಲ್ಲಿ ದಕ್ಷತೆ ಮತ್ತು ಭ್ರಷ್ಟಾಚಾರವನ್ನು ತೆಗೆದು ಹಾಕುವುದಕ್ಕೆ ಏನು ಪ್ರಯತ್ನವನ್ನು ಮಾಡಿದ್ದೀರಿ, ಅದು ಗೊತ್ತಾಗಬೇಕು. ಎಲ್ಲೆಲ್ಲಿ ತಮ್ಮ ಆಡಳಿತಾತ್ಮಕ ಕ್ರಮಗಳಿಂದ ಈ ಭ್ರಷ್ಟಾಚಾರವನ್ನು ನಿವಾರಣೆ ಮಾಡುವುದಕ್ಕೆ ಏನು ಪ್ರಯತ್ನ ಮಾಡಿದ್ದೀರಿ? ಅದಕ್ಕೆ ಒಂದು ಉದಾಹರಣೆಯನ್ನಾದರೂ ಕೊಡುವುದಕ್ಕೆ ನಿಮಗೆ ಸಾಧ್ಯವೇ? ಅದಕ್ಕೆ ಬದಲಾಗಿ, ಅದಕ್ಕೆ ವಿರುದ್ಧವಾದಂತಹ ಉದಾಹರಣೆಗಳನ್ನು ನಾವು ಇವೊತ್ತಿನದಿವಸ ನೋಡಬಹುದು. ಅಂದ ಮಾತ್ರಕ್ಕೆ ಅಂಥ ಕಾರ್ಯವೈಖರಿಗಳು ಅಥವಾ ಪ್ರಕರಣಗಳು ಹಿಂದೆ ಇರಲಿಲ್ಲ ಎಂಬ ಮಾತನ್ನು ನಾನು ಹೇಳುತ್ತಾ ಇಲ್ಲ. ಅಂಥ ಪ್ರಕರಣಗಳು ಹಿಂದೆಯೂ ಇದ್ದುವು. ಅಂಥ ಪ್ರಕರಣಗಳು ಇದ್ದಾಗ ನಾವು ನೀವು ಅವುಗಳನ್ನು ನಿವಾರಣೆ ಮಾಡುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನಗಳನ್ನು ಮಾಡಬೇಕು. ಈ ದೇಶದಲ್ಲಿ ಎಲ್ಲವನ್ನೂ ಸರಿಪಡಿಸುವುದಕ್ಕೆ ನಮ್ಮಿಂದ, ನಿಮ್ಮಿಂದ ಆಗದಿರಬಹುದು. ಆದರೆ ನಮ್ಮ ನಿಮ್ಮ ಇತಿಮಿತಿಯಲ್ಲಿ ನಮಗಿರತಕ್ಕಂಥ ಅಧಿಕಾರವನ್ನು ಉಪಯೋಗಿಸಿಕೊಂಡು ಅಂಥ ಒಂದು ಪದ್ಧತಿಯನ್ನು ನಿವಾರಣೆ ಮಾಡುವುದಕ್ಕೆ ವಿತಕ್ಕೋಸ್ಕರವಾಗಿ ನೀವು ಕ್ರಮ ತೆಗೆದುಕೊಂಡಿಲ್ಲ ಎಂಬ ಮಾತನ್ನು ಇವೊತ್ತಿನ ದಿವಸ ತಮ್ಮಲ್ಲಿ ಕೇಳುವುದಕ್ಕೆ ಇಚ್ಛೆಪಡುತ್ತೇನೆ. ನನ್ನ ಸ್ನೇಹಿತರಿಗೆ ಸ್ವಲ್ಪ ಕೋಪ ಮತ್ತು ಬೇಸರ ಆಗಬಹುದು, ಆದರೂ ಪರವಾಗಿಲ್ಲ. ಇವೊತ್ತಿನ ದಿವಸ ಹಲವಾರು ಪ್ರಕರಣಗಳನ್ನು ನಾನು ಹೇಳಬಲ್ಲೆ. ಎಲ್ಲಾ ಪ್ರಕರಣಗಳಲ್ಲಿಯೂ ಸಹ ಎಲ್ಲಿ ಅಧಕ್ಷರು ಎಂದು ಇದ್ದಾರೆ, ಈಗ ನಾನು ಅಂಥವರ ಹೆಸರನ್ನು ಹೇಳುವುದಿಲ್ಲ. ಎಲ್ಲಾ ವ್ಯವಸ್ಥೆಯಲ್ಲಿಯೂ ಸಹ ಎಲ್ಲಾ ಆಡಳಿತ ಪದ್ಧತಿಯಲ್ಲಿಯೂ ಸಹ ಎಲ್ಲಾ ವೃತ್ತಿಯಲ್ಲಿಯೂ ಸಹ ಅಧಿಕಾರಿಗಳು ಇರಬಹುದು ಅಥವಾ ಅಧಿಕಾರಿಗಳಲ್ಲದವರು ಇರಬಹುದು, ರಾಜಕಾರಣಿಗಳು ಇರಬಹುದು, ರಾಜಕಾರಣಿಗಳಲ್ಲದವರು ಇರಬಹುದು ಯಾರೇ ಆದರೂ ಸಹ ಅವರವರ ಕ್ಷೇತ್ರದಲ್ಲಿ ಎಲ್ಲಾ ಮಟ್ಟದಲ್ಲಿ ಒಳ್ಳೆಯವರು ಇದ್ದಾರೆ ಮತ್ತು ಕೆಟ್ಟವರು ಇದ್ದಾರೆ ಎಂಬುದನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದರೆ ಯಾರು ಕೆಟ್ಟವರು ಇದ್ದಾರೆ, ತಾವುಗಳು ಏನು ಅಂಥವರನ್ನು ಗುರುತಿಸಿದ್ದೀರಿ, ಅಂಥವರಿಗೆ ಸೂಕ್ಷ್ಮವಾದಂಥ ಸ್ಥಾನಗಳನ್ನು ಕೊಡದೇ ಇನ್ನೂ ಹೆಚ್ಚು ಹೆಚ್ಚು ಭ್ರಷ್ಟಾರಾಗುವುದಕ್ಕೆ ಅವಕಾಶವನ್ನು ಕೊಡದೆ ಹೆಚ್ಚು ಹೆಚ್ಚು ಅಧಕ್ಷತೆಯುತವಾದಂಥ ಆಡಳಿತವನ್ನು ಕೊಡಲಿಕ್ಕೆ ಅವಕಾಶವನ್ನು ಕೊಡದೆ , ಅಂಥವರನ್ನು ಎಲ್ಲಿ ಇಡಬೇಕೋ ಅಲ್ಲಿ ಇಡಬೇಕಾದುದು ರಾಜಕೀಯವಾಗಿ ತಾವು ತೆಗೆದುಕೊಳ್ಳಬೇಕಾದಂಥ ಮುಖ್ಯವಾದಂಥ ಕ್ರಮವಾಗಿದೆ. ಈ ರೀತಿಯಾಗಿ ತಾವು ಯಾವುದಾದರೂ ಕ್ರಮ ತೆಗೆದುಕೊಂಡಿದ್ದೀರ? ಯಾರು ಈ ದೇಶದಲ್ಲಿ ಹಾಡುಹಗಲೇ ಭ್ರಷ್ಟಾಚಾರಕ್ಕೆ ತೊಡಗುವ, ಭ್ರಷ್ಟಾಚಾರಿಗಳೆಂದು ಹೆಸರು ವಾಸಿಯಾಗಿರುವ ಅಧಿಕಾರಿಗಳನ್ನು ತಾವು ಸೂಕ್ಷ್ಮವಾಗಿರತಕ್ಕಂಥ ಸ್ಥಾನಗಳಿಗೆ ವರ್ಗಾವಣೆ ಮಾಡಿದರೆ ಅದರ ಅರ್ಥ

ಏನು? ಪ್ರತ್ಯೇಕವಾಗಿ ಅಲ್ಲದಿದ್ದರೂ, ಪರೋಕ್ಷವಾಗಿ ಇಂಥ ಒಂದು ಕ್ರಮಕ್ಕೆ ತಾವು ಜವಾಬ್ದಾರರು ಅಲ್ಲವೆ ಎಂಬುದನ್ನು ಆಲೋಚನೆ ಮಾಡಬೇಕಾಗುತ್ತದೆ. ಇವೊತ್ತಿನ ದಿವಸ ಈ ರಾಜ್ಯದ ಜನತೆಗೆ ತಾವುಗಳು ದೊಡ್ಡ ದೊಡ್ಡ ಮಾತುಗಳನ್ನು ಹೇಳಿದ್ದೀರಿ. ಆ ವಿಷಯಕ್ಕೆ ಅನಂತರ ಬರುತ್ತೇನೆ. ಈ ದೇಶದಲ್ಲಿರುವ ಪರಿಶಿಷ್ಟ ಜಾತಿ ಮತ್ತು ವರ್ಗದವರು ಹೆಚ್ಚು ಹೆಚ್ಚು ಪ್ರಯೋಜನಗಳನ್ನು ಹೊಂದುವಂಥ ಕೆಲಸಗಳನ್ನು ನಾವು ಮಾಡುತ್ತೇವೆ ಎಂಬುದನ್ನು ಹೇಳಿದ್ದೀರಿ. ಈ ದೇಶದಲ್ಲಿರುವಂಥ ಅಲ್ಪಸಂಖ್ಯಾತರಿಗೆ ಹಿಂದುಳಿದ ವರ್ಗದವರಿಗೆ ನಾವು ವಿಶೇಷವಾದಂಥ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ ಎಂದು ಹೇಳಿದ್ದೀರಿ. ಅದಕ್ಕಾಗಿ ನಾನು ನಿಜವಾಗಿಯೂ ನಿಮ್ಮನ್ನು ಅಭಿನಂದಿಸುತ್ತೇನೆ. ಆದರೆ ಅದು ಯಾವಾಗ? ತಾವು ಹಾಕಿಕೊಂಡಂಥ ಕಾರ್ಯಕ್ರಮಗಳು ನಿಜವಾಗಿಯೂ ಯಾರು ಫಲಾನುಭವಿಗಳಿದ್ದಾರೆ ಅವರಿಗೆ ಮುಟ್ಟುವಂಥ ಒಂದು ಆಡಳಿತ ಪದ್ಧತಿ ತಮ್ಮಲ್ಲಿ ಬರಬೇಕು. ಆ ಒಂದು ನಂಬಿಕೆ ಇಲ್ಲದಂಥ ರೀತಿಯಲ್ಲಿ ಮಧ್ಯವರ್ತಿಗಳನ್ನು, ದಳ್ಳಾಳಿಗಳನ್ನು ಸೃಷ್ಟಿ ಮಾಡುವಂಥ ಕಾರ್ಯಕ್ರಮಗಳನ್ನು ಹಾಕಿಕೊಂಡರೆ ಅದರಿಂದ ಏನು ಉಪಯೋಗ? ಅದರಿಂದ ಕೇವಲ ಪುಡಾರಿಗಳನ್ನು ಸೃಷ್ಟಿ ಮಾಡಿದಂತಾಗುತ್ತದೆ. ಈ ಕಾರ್ಯಕ್ರಮಗಳ ಪೂರ್ಣವಾದಂಥ ಲಾಭ ಯಾರು ನಿಜವಾಗಿಯೂ ಸಂಕಷ್ಟಕ್ಕೆ ಈಡಾಗಿದ್ದಾರೆ, ಯಾರು ಶೋಷಣೆಗೆ ಒಳಗಾಗಿದ್ದಾರೆ, ಅಂಥವರಿಗೆ ನೆರವಾಗುವಂಥ ರೀತಿಯಲ್ಲಿ ತಾವು ಆಡಳಿತವನ್ನೂ ಮಾಡಿದರೆ ನಾವು ನಿಜವಾಗಿಯೂ ನಿಮ್ಮನ್ನು ಮೆಚ್ಚುತ್ತೇವೆ. ಆದರೆ ಇವತ್ತು ತಾವು ಏನು ಮಾಡುತ್ತಿದ್ದೀರಿ? ಅದಕ್ಕೆ ತದ್ವಿರುದ್ಧವಾದಂಥ ರೀತಿಯಲ್ಲಿ ಮಾಡುತ್ತಿದ್ದೀರಿ. ಈ ಸರಕಾರಕ್ಕೆ ಒಂದು ನೀತಿ ಇಲ್ಲ, ಅಂಥ ನೀತಿ ಏನಾದರೂ ಇದ್ದರೆ ಅದು ಪುಸ್ತಕದಲ್ಲಿ ಮಾತ್ರ ಇದೆ. ಅದನ್ನು ಕಾರ್ಯಗತಗೊಳಿಸುವುದಕ್ಕೆ ಯಾವ ಯಾವ ಕ್ರಮಗಳನ್ನು ತೆಗೆದುಕೊಂಡಿದ್ದೀರಿ ಎಂಬುದನ್ನು ಒಂದೊಂದಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸರಕಾರಕ್ಕೆ ತನ್ನದೇ ಆದಂಥ, ಒಂದು ನಿರ್ಧಿಷ್ಟವಾದಂಥ ನೀತಿ ಇಲ್ಲ. ಅಕಸ್ಮಾತ್ ಯಾವುದಾದರೂ ನೀತಿ ಇದ್ದರೆ ಹೊರಗಿನ ಒಂದು ಪರೋಕ್ಷವಾದಂಥ ಕಾರಣಗಳಿಂದ ಇವರು ನೀತಿಯನ್ನು ಮಾಡಿದ್ದಾರೆಯೇ ಹೊರತಾಗಿ ಬೇರೆ ಯಾವ ಕಾರಣಕ್ಕಾಗಿಯೂ ಅಲ್ಲ ಎಂಬ ಮಾತನ್ನು ಹೇಳುತ್ತೇನೆ. ಹಾಗಾದರೆ ಈ ಮಾತನ್ನು ಹೇಳುವುದಕ್ಕೆ ಏನು ಕಾರಣ ಎಂಬ ಮಾತನ್ನು ಸಾಮಾನ್ಯವಾಗಿ ತಾವು ಕೇಳಬಹುದು.

ಈ ಸರ್ಕಾರ ಬಂದು ಒಂದೂವರೆ ವರ್ಷವಾದರೂ, ಅದರ ಮುಖ್ಯಸ್ಥರು ಬದಲಾವಣೆಯಾದ ತಕ್ಷಣ ಸರ್ಕಾರದ ನೀತಿ ಬದಲಾವಣೆ ಆಗಬೇಕೆಂದು ಏನಾದರೂ ಇದೆಯೇ? ಏಕೆಂದರೆ, ಇಲ್ಲಿ ಪಕ್ಷದ ಬದಲಾವಣೆಯಾಗಿಲ್ಲ, ಪಕ್ಷದ ನೀತಿಗಳಿಗನುಗುಣವಾಗಿ ಸರ್ಕಾರದ ಮುಖ್ಯಸ್ಥರು ಯಾರೇ ಆದರೂ ಸಹ ನಡೆಸಬೇಕಾದುದು ಅವರ ಹೊಣೆಗಾರಿಕೆ ಮತ್ತು ಅವರ ಕರ್ತವ್ಯ. ಆ ರೀತಿ ತೆಗೆದುಕೊಂಡಾಗ, ಹೊಸ ಸರ್ಕಾರ ಬಂದ ತಕ್ಷಣ ತಾವು ಹಲವಾರು ವರ್ಗಾವಣೆಗಳನ್ನು ಮಾಡಿದಿರಿ. ಆದರೆ ಇನ್ನೊಬ್ಬ ಮುಖ್ಯಮಂತ್ರಿ ಅಥವಾ ಮಂತ್ರಿ ಬಂದ ಮೇಲೆ ಏನೂ ಕಾರಣವಿರದೆ ಮತ್ತೆ ವರ್ಗಾವಣೆ ಮಾಡಿದರು. ಒಂದೆರಡು ಸಂದರ್ಭದಲ್ಲಿ ತಾವು ಹೇಳಬಹುದು. ಆದರೆ ಸಾರ್ವಜನಿಕ ಹಿತದೃಷ್ಟಿಯಿಂದ ಅದು ಅಗತ್ಯ ಎಂಬ ಮಾತನ್ನು ಉಪಯೋಗಿಸಿಕೊಂಡು ತಮಗೆ ಬೇಕಾದ ರೀತಿಯಲ್ಲಿ ಬೇಕಾ ಬಿಟ್ಟಿಯಾಗಿ ವರ್ಗಾವಣೆ ಮಾಡಿದರೆ, ಈ ಸರ್ಕಾರವನ್ನು ನಾವು ಏನೆಂದು ಕರೆಯಬೇಕು?

ಶ್ರೀ ಬಿ. ಬಸವಲಿಂಗಪ್ಪ : ಒಳ್ಳೆಯ ಸರ್ಕಾರ ಎನ್ನಬೇಕು.

ಶ್ರೀ ಹೆಚ್. ಏಕಾಂತಯ್ಯ : ನಾನು ಬಸವಲಿಂಗಪ್ಪನವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಏಕೆಂದರೆ ಅವರ ದೃಷ್ಟಿಯಲ್ಲಿ ಇದೇ ಒಳ್ಳೆಯದು. ಒಳ್ಳೆಯದು ಎನ್ನುವುದಕ್ಕೆ ಬೇರೆ ಅರ್ಥ ಅವರಿಗೆ ಇನ್ನೂ ಸಿಕ್ಕಿಲ್ಲವೆಂದು ನಾನು ಭಾವಿಸಿದ್ದೇನೆ.

ವರ್ಗಾವಣೆಯನ್ನು ಬೇಕಾಬಿಟ್ಟಿ ಮಾಡಿದರೆ ಸರ್ಕಾರ ಒಳ್ಳೆಯದು, ಅದೇ ವಾದ ಮುಂದುವರೆಸಿ ವರ್ಗಾವಣೆ ಮಾಡುವಾಗ ಸಿಕ್ಕಾ ಪಟ್ಟೆ ವಸೂಲು ಮಾಡಿದರೆ ಅದನ್ನೂ ಒಳ್ಳೆಯ ಸರ್ಕಾರವೆಂದು ಕರೆಯಬಹುದು.

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಅಧ್ಯಕ್ಷರೆ ಶ್ರೀಮಾನ್ ಏಕಾಂತಯ್ಯನವರೂ ಪ್ರಜ್ಞಾವಂತರು. ಅವರು ಆಧಾರ ಇಲ್ಲದೆ ಮಾತಾಡುವವರಲ್ಲ. ಆದರೆ ಇಂದು ಏಕೆ ಸ್ವಲ್ಪ ತಿರುಗಿ ತಿರುಗಿ ಮಾತಾಡುತ್ತಿದ್ದಾರೆ.

ಶ್ರೀ ಹೆಚ್. ಏಕಾಂತಯ್ಯ : ನೀವು ಬೇಕಾಬಿಟ್ಟಿ ವರ್ಗಾವಣೆ ಮಾಡಿದರೆ ಅದನ್ನು ಒಳ್ಳೆಯದೆಂದು ಕರೆಯಬೇಕೆಂದು ತಾವು ಹೇಳುವುದಾದರೆ, ಅಂಥ ಬೇಕಾಬಿಟ್ಟಿ ವರ್ಗಾವಣೆ ಮಾಡಿದಾಗ, ತಮಗೆ ಬೇಕಾದ ರೀತಿಯಲ್ಲಿ ವಸೂಲಿ ಮಾಡುವುದಾದರೆ ಅದನ್ನೂ ಸಹ ಒಳ್ಳೆಯ ಸರ್ಕಾರವೆಂದು ನಾವು ಕರೆಯಬೇಕೆ ಎಂದು ಹೇಳಿದನೇ ಹೊರತು ನಾನು ಏನೂ ಆರೋಪ ಮಾಡಲಿಲ್ಲ.

ಶ್ರೀ ಬಿ. ಬಸವಲಿಂಗಪ್ಪ : ಬೇರೆಯವರು ಮಾತಾಡುವುದಕ್ಕೂ ಏಕಾಂತಯ್ಯನವರು ಮಾತಾಡುವುದಕ್ಕೂ ವ್ಯತ್ಯಾಸವಿದೆ ಎಂದೂ ಆಧಾರರಹಿತವಾಗಿ ಮಾತನಾಡುವವರಲ್ಲ. ಆದರೆ ಇವತ್ತು ಆಧಾರರಹಿತವಾಗಿ ಮಾತನಾಡುತ್ತಿದ್ದೀರಿ. ಹೀಗೆ ಆಧಾರರಹಿತವಾಗಿ ಮಾತನಾಡಬೇಡಿ.

ಶ್ರೀ ಹೆಚ್. ಏಕಾಂತಯ್ಯ : ನನಗೆ ಆ ಪ್ರವೃತ್ತಿ ಇಲ್ಲ, ನಾನು ಆ ಮಾತನ್ನು ಹೇಳುತ್ತಲೂ ಇರಲಿಲ್ಲ. ನಾನು ನಿಮ್ಮ ಸರ್ಕಾರವನ್ನು ವರ್ಗಾವಣೆ ಸರ್ಕಾರ ಎಂದು ಮಾತ್ರ ಹೇಳುತ್ತಿದ್ದೆ. ಆದರೆ ನೀವು ನನ್ನನ್ನು ಪ್ರಚೋದನೆ ಮಾಡಿ ಇದು ಕೇವಲ ವರ್ಗಾವಣೆ ಸರ್ಕಾರವಲ್ಲ ವಸೂಲಿ ಸರ್ಕಾರ ಎಂದು ಹೇಳುವ ಮಟ್ಟಕ್ಕೆ ನೀವು ನನ್ನನ್ನು ತಂದಿದ್ದೀರಿ. ವರ್ಗಾವಣೆಯನ್ನು ಬೇಕಾಬಿಟ್ಟಿ ಮಾಡಿದಾಗ ಅದು ಸರಿಯಲ್ಲ ತಪ್ಪಾಗಿರುವುದನ್ನು ಸರಿಪಡಿಸುತ್ತೇನೆ ಎಂದು ನೀವು ಹೇಳಿದ್ದರೆ ನಾನು ಈ ಮಾತು ಹೇಳುತ್ತಿರಲಿಲ್ಲ. ಈ ಸರ್ಕಾರ 1990ರ ರಾಜ್ಯಪಾಲರ ಭಾಷಣದಲ್ಲಿ ಹೇಳಿದ ಆಶ್ವಾಸನೆಯನ್ನು ಈಡೇರಿಸುವಲ್ಲಿ ಸಂಪೂರ್ಣವಾಗಿ ವೈಫಲ್ಯತೆಯನ್ನು ತೋರಿಸಿದೆ. ಅಂದ ಮೇಲೆ ಇವತ್ತಿನ ರಾಜ್ಯಪಾಲರ ಭಾಷಣದಲ್ಲಿ ಹೇಳಿದ ಮಾತುಗಳನ್ನು ನಾವು ಎಷ್ಟರಮಟ್ಟಿನ ಪ್ರಾಮುಖ್ಯತೆಯಿಂದ ನೋಡಬೇಕೆಂಬ ಮಾತನ್ನು ಕೇಳಲಿಕ್ಕೆ ಇಷ್ಟಪಡುತ್ತೇನೆ. ಇನ್ನು ಕೆಲವು ಮುಖ್ಯವಾದ ವಿಚಾರಗಳನ್ನು ಪ್ರಸ್ತಾಪ ಮಾಡಲಿಕ್ಕೆ ಬಯಸುತ್ತೇನೆ. ಮೊದಲನೆಯದಾಗಿ ಈ ರಾಜ್ಯದ ಜನರಿಗೆ ದಕ್ಷವಾದಂತಹ ಆಡಳಿತ ಕೊಡುತ್ತೇವೆ ಎಂದು ಹೇಳಿದುದರಲ್ಲಿ ಈ ಸರ್ಕಾರ ಸಂಪೂರ್ಣವಾದ ವೈಫಲ್ಯತೆಯನ್ನು ತೋರಿಸಿದೆ. ಈ ದೇಶದ ಆಡಳಿತ ಪದ್ಧತಿಯಲ್ಲಿ ಭ್ರಷ್ಟಾಚಾರ ನಿರ್ಮೂಲನ ಮಾಡಲಿಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆಂದು ಹೇಳಿದ್ದರಲ್ಲೂ ಸರ್ಕಾರ ಪೂರ್ಣವಾಗಿ ವಿಫಲವಾಗಿದೆ. ಅದರ ಜೊತೆಯಲ್ಲಿ ಅದಕ್ಕೆ ಇನ್ನೂ ಹೆಚ್ಚು ಹೆಚ್ಚು ಪ್ರೋತ್ಸಾಹ ಕೊಡುವಂಥ ರೀತಿಯಲ್ಲಿ ಸರ್ಕಾರ ತನ್ನ ಆಡಳಿತವನ್ನು ನಿರ್ವಹಿಸುತ್ತಿದೆ ಎಂಬ ಆರೋಪವನ್ನು ಮಾಡಲಿಕ್ಕೆ ನಾನು ತಯಾರಿದ್ದೇನೆ. ಆಮೇಲೆ ಪ್ರತೀಕಾರಾತ್ಮಕ ಕ್ರಮದ ಬದಲು ಕಾನೂನಿನ ಸಹಜ ಕ್ರಮವನ್ನು ನಮ್ಮ ಸರ್ಕಾರ ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತದೆ ಎಂದು ಹೇಳಿದಿರಿ. ಅಂದರೆ ರಾಜಕೀಯವಾಗಿ ಯಾರು ವಿರೋಧಿಗಳಿದ್ದಾರೆ ಅವರ ವಿರುದ್ಧ ಉದ್ದೇಶಪೂರ್ವಕವಾಗಿ ಯಾವುದೇ ಕ್ರಮ ತೆಗೆದುಕೊಳ್ಳುವುದಿಲ್ಲವೆಂದು ಹೇಳಿದಿರಿ. ಅದಕ್ಕೆ ಬದಲಾಗಿ ಒಂದು ಪಕ್ಷ ನಿಮ್ಮ ವಿರೋಧಿಗಳೇನಾದರೂ ತಪ್ಪು ಮಾಡಿದರೆ ಕಾನೂನು ತನ್ನ ಸಹಜವಾದಂಥ ಕ್ರಮವನ್ನು ತೆಗೆದುಕೊಳ್ಳುತ್ತದೆ ಎಂಬ ಆಶ್ವಾಸನೆಯನ್ನು ತಾವು ಕೊಟ್ಟಿರಿ. ಆದರೆ ಇವತ್ತು ಏನು ಮಾಡುತ್ತಿದ್ದೀರಿ?

ನಾನು ಒಂದೋ ಎರಡೋ ಪ್ರಕರಣಗಳನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದು ಚಿತ್ರದುರ್ಗ ಜಿಲ್ಲೆಗೆ ಸಂಬಂಧಪಟ್ಟಿರುವುದು, ಇನ್ನೊಂದು ಕೋಲಾರ ಜಿಲ್ಲೆಗೆ

ಸಂಬಂಧಪಟ್ಟಿರತಕ್ಕಂಥದ್ದು. ಚಿತ್ರದುರ್ಗ ಜಿಲ್ಲೆಯಲ್ಲಿ ಒಂದು ಮಂಡಲ್ ಪಂಚಾಯಿತಿಯ ಸಭೆ ನಡೆಯುತ್ತಿತ್ತು. ಸನ್ಮಾನ್ಯ ಬಸವಲಿಂಗಪ್ಪನವರೇ, ಅಲ್ಲಿ ಸಭೆ ನಡೆದಾಗ ಅಲ್ಲಿ ಆಡಳಿತದಲ್ಲಿ ಇದ್ದಂಥ ಪಕ್ಷಕ್ಕೆ ವಿರೋಧವಾದಂಥ ಸದಸ್ಯರು ತಮ್ಮ ನಡವಳಿಕೆಯ ಪುಸ್ತಕವನ್ನು ಅಧ್ಯಕ್ಷರಿಂದ ಕಸಿದುಕೊಂಡರು, ತೆಗೆದುಕೊಂಡು ಓಡಿ ಹೋದರು. ಪೋಲೀಸರಿಗೆ ಕಂಪ್ಲೇಟನ್ನು ಕೊಟ್ಟೆವು. ಏನು ಮಾಡಬೇಕು ಸ್ವಾಮಿ? ಇವತ್ತಿನವರೆಗೂ ಸಹಾ ಯಾವುದೇ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ. ಏತಕ್ಕೆ ಸಾಧ್ಯವಾಗಿಲ್ಲ? ಅಂದರೆ ಯಾರ ಮೇಲೆ ದೂರನ್ನು ಕೊಟ್ಟಿದ್ದಾರೋ ಅವರು ನಿಮ್ಮ ಪಕ್ಷಕ್ಕೆ ಸೇರಿದಂಥವರು. ನಿಮ್ಮಂಥವರು ಎಂಬುದನ್ನು ಅಂಡರ್ ಲೈನ್ ಮಾಡಿಕೊಳ್ಳಿ. ನಿಮ್ಮಂಥವರ ಬೆಂಬಲವನ್ನು ಹೊಂದಿರತಕ್ಕಂಥ ಜನ. ಇದು ಪ್ರತೀಕಾರಾತ್ಮಕ ಕ್ರಮವಲ್ಲವೇ? ಕಾನೂನಿನ ಸಹಜ ಕ್ರಮವನ್ನು ತೆಗೆದುಕೊಂಡಿದ್ದೀರಾ? ಮತ್ತೊಂದು ಮಂಡಲ ಪಂಚಾಯಿತಿ ಚುನಾವಣೆಯಲ್ಲಿ ಅಲ್ಲಿ ಇದ್ದಂಥ ಒಬ್ಬ ಉಪ ಪ್ರಧಾನರನ್ನು ಅವರು ಬಸ್ ನಿಂದ ಇಳಿದು ಹೋಗಬೇಕಾದರೆ ಅವರನ್ನು ಎಳೆದು ಕೊಂಡು ಕಾರಿನಲ್ಲಿ ಕಿಡ್ ನ್ಯಾಪ್ ಮಾಡಿಕೊಂಡು ಹೋದರು. ಅದರ ಬಗ್ಗೆ ಕಂಪ್ಲೇಟನ್ನು ಕೊಟ್ಟರೆ ಆ ಕಾರನ್ನು ಸೀಜ್ ಮಾಡಲಿಕ್ಕೆ ಸಾಧ್ಯವಾಗಲಿಲ್ಲ. ಆಮೇಲೆ ಚುನಾವಣೆಯಲ್ಲಿ ಅವನು ಬಾಗಿವ್ವಕ್ಕೋಸ್ಕರ ನಿಮ್ಮ ಪಕ್ಷದವರು ಗೆದ್ದರು. ಇದು ತಮ್ಮ ಪ್ರಜಾತಂತ್ರದ ನೀತಿಯಲ್ಲಿ ಪ್ರಜಾಸತ್ತಾತ್ಮಕವಾದಂಥ ನೀತಿಯಲ್ಲಿ ತಮಗೆ ನಂಬಿಕೆ ಇರತಕ್ಕಂಥ ...

ಶ್ರೀ ಬಿ. ಬಸವಲಿಂಗಪ್ಪ : ಒಂದು ನಿಮಿಷ ಕುಳಿತುಕೊಳ್ಳುತ್ತೀರಾ?

ಶ್ರೀ ಹೆಚ್. ಏಕಾಂತಯ್ಯ : ಬೇಕಾದಷ್ಟು ಸಾರಿಯೂ ಕುಳಿತುಕೊಳ್ಳುತ್ತೇನೆ. ನನಗೆ ಅದೇ ಬದುಕು.

ಶ್ರೀ ಬಿ. ಬಸವಲಿಂಗಪ್ಪ : ತಾವು ಉಪಪ್ರಧಾನರ ಬಗ್ಗೆ ಹೇಳಿದ್ದೀರಿ, ಪ್ರದಾನರ ಬಗ್ಗೆಯೂ ಹೇಳಿದ್ದೀರಿ. ಅವರು ಪುಸ್ತಕವನ್ನು ಕಿತ್ತುಕೊಂಡು ಹೋದರು ಎಂದು ಹೇಳಿದ್ದೀರಿ, ನನಗೆ ತಾವು ಒಂದು ಕಾಗದವನ್ನಾದರೂ ಬರೆದಿದ್ದೀರಾ? ನಾನು ಪಂಚಾಯತ್ ರಾಜ್ ಸಚಿವನಾಗಿದ್ದೇನಲ್ಲಾ, ಮೊದಲನೇ ವರದಿ ನನಗೆ ಬರಬೇಕಲ್ಲ. ಅದು ಬರದೇ ಇಲ್ಲಿ ಅಸೆಂಬ್ಲಿಯಲ್ಲಿ ಹೇಳುವುದಕ್ಕೆ ಶುರು ಮಾಡಿದ್ದೀರಿ.

ಶ್ರೀ ಹೆಚ್. ಏಕಾಂತಯ್ಯ : ನನಗೆ ನಿಮ್ಮ ಆಡಳಿತ ಪದ್ಧತಿಯ ವೈಖರಿ ಈಗ ಗೊತ್ತಾಯಿತು. ನಿಮ್ಮ ಸರ್ಕಾರದಲ್ಲಿ ಸಂಬಂಧಪಟ್ಟವರು ಯಾರಿಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಅವರಿಗೆ ನಾವು ಅರ್ಜಿಯನ್ನು ಕೊಟ್ಟರೆ ಅವರಿಗೆ ಏನಾದರೂ ಫಿರ್ಯಾದಿ ಕೊಟ್ಟರೆ ಅದು ಕ್ರಮ ತೆಗೆದುಕೊಳ್ಳುವಂಥ ರೀತಿಯಲ್ಲಿ ಕೇವಲ ನಾವು ತಮ್ಮ ಹತ್ತಿರ ಬಂದು ಕೊಡಬೇಕು. ಸನ್ಮಾನ್ಯ ಬಸವಲಿಂಗಪ್ಪನವರೇ, ಕಾನೂನಿನ ಸಹಜ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ತಮ್ಮ ಬಯಕೆ ಇದ್ದರೆ, ಕಾನೂನಿನ ಸಹಜವಾದಂಥ ಕ್ರಮ ತೆಗೆದುಕೊಳ್ಳಬೇಕು ಎನ್ನತಕ್ಕಂಥ ತಮ್ಮ ಬಯಕೆ ಇದ್ದರೆ , ಅದರಲ್ಲಿ ತಮಗೆ ನಂಬಿಕೆ ಇದ್ದರೆ ನನ್ನ ಅಗತ್ಯ ತಮಗೆ ಇಲ್ಲ, ನಾನು ಬಂದು ನಿಮ್ಮನ್ನು ಕೇಳಬೇಕಾದಂಥ ಅಗತ್ಯವಿಲ್ಲ. ನಾನು ಏತಕ್ಕೋಸ್ಕರ ಹೇಳುತ್ತಿದ್ದೇನೆ ಎಂದರೆ, ಇದರ ಹಿನ್ನೆಲೆಯನ್ನು ದೂರುವುದಕ್ಕೆ ಇಷ್ಟಪಡುತ್ತಿಲ್ಲ. ಇವತ್ತಿನ ದಿವಸ ಇಂಥ ಪ್ರಕರಣಗಳಿಗೆ ಬೆಂಬಲ ಇರುವಂಥ ಯಾವುದೇ ರಾಜಕಾರಣ, ಯಾವುದೇ ಪಕ್ಷಕ್ಕೆ ಸೇರಿರಲಿ, ಅದನ್ನು ಖಂಡಖಂಡವಾಗಿ ಖಂಡಿಸುವಂತಹ ಒಂದು ಪ್ರವೃತ್ತಿ ನಿಮ್ಮಲ್ಲಿ ನಮ್ಮಲ್ಲಿ ಬರಬೇಕು. ಆಗ ತಾವು ಹೇಳಿದಂಥ ಮಾತನ್ನು ನಾನು ಅರ್ಥಮಾಡಿಕೊಳ್ಳುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಸರ್ಕಾರ ಏತಕ್ಕೆ ಕ್ರಮ ತೆಗೆದುಕೊಳ್ಳಬೇಕು? ಅಲ್ಲಿ ಲೋಕಲ್ ಪೋಲೀಸ್ ನವರಿಗೆ ಕಂಪ್ಲೇಂಟ್ ಕೊಟ್ಟನಂತರ ಅವರು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಒಂದು ಮರ್ಡರ್ ಆದರೆ ಪೋಲೀಸ್ ಕಮೀಷನರ್ ಹತ್ತಿರ

ಹೋಗುವುದಲ್ಲ. ನಾವು ಕಂಪ್ಲೇಂಟ್ ತೆಗೆದುಕೊಂಡು ಧರ್ಮಸಿಂಗ್ ರವರ ಹತ್ತಿರ ಬರಬೇಕು. ತಾವು ಈ ರೀತಿ ಹೇಳಿದಂತೆ ಆಯಿತು.

ಶ್ರೀ ಬಿ. ಬಸವಲಿಂಗಪ್ಪ : ಕೋರ್ಟುಗಳು ಇಲ್ಲವೇ? ಒಂದು ಕೇಸ್ ಫೈಸಲ್ ಆದರೆ, ನಿಮಗೆ ಅನಾನುಕೂಲವಾಯಿತು ಎಂದು ಇಟ್ಟುಕೊಳ್ಳೋಣ. ನೀವು ಅಪೀಲು ಹೋಗುವುದಿಲ್ಲವೆ? ಅದೇ ರೀತಿ ಅನಾನುಕೂಲವಾದರೆ ನಮ್ಮ ಹತ್ತಿರ ಅಪೀಲು ಬರಬೇಕು.

ಶ್ರೀ ಹೆಚ್. ಏಕಾಂತಯ್ಯ : ಇನ್ನು ಮೇಲೆ ಬರೋಣವಂತೆ. ನಾನು ಏತಕ್ಕೋಸ್ಕರ ಈ ಮಾತನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ ಎಂದರೆ, ಕಾನೂನಿನ ಸಹಜ ಕ್ರಮವನ್ನು ತೆಗೆದುಕೊಳ್ಳುವ ಬಗ್ಗೆ ತಮಗೆ ನಂಬಿಕೆ ಇದ್ದರೆ ತಮ್ಮ ಆಡಳಿತ ಪದ್ಧತಿಯಲ್ಲಿ ಅಧಿಕಾರಿಗಳು ಈ ರೀತಿ ವರ್ತನೆ ಮಾಡುವುದಕ್ಕೆ ಸಾಧ್ಯವಿರುತ್ತಿರಲಿಲ್ಲ. ತಮ್ಮ ಭಯ, ತಮ್ಮ ಸರ್ಕಾರದ ಭಯ ಇರುತ್ತಿತ್ತು. ಅದಕ್ಕೆ ಭಯ ಇರುತ್ತಿತ್ತು. ಅದಕ್ಕೆ ಬದಲಾಗಿ ಇವತ್ತಿನ ದಿವಸ ಇದಕ್ಕೆ ತದ್ವಿರುದ್ಧವಾದಂಥ ರೀತಿಯಲ್ಲಿ ಅಧಿಕಾರಿಗಳು ವರ್ತನೆ ಮಾಡುತ್ತಿದ್ದಾರೆ ಎಂದರೆ ಎಷ್ಟರಮಟ್ಟಿಗೆ ಆಡಳಿತ ಶಿಥಿಲವಾಗಿದೆ ಎಂಬುದನ್ನು ತಾವು ಅರ್ಥಮಾಡಿಕೊಳ್ಳಬೇಕು. ಇನ್ನು ಮುಖ್ಯವಾದ ಒಂದು ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ. 4-9-90ರಂದು ಶಿಡ್ಲಘಟ್ಟ ಕ್ಷೇತ್ರದಲ್ಲಿ ಒಂದು ಘಟನೆ ಆಯಿತು. ಆ ಘಟನೆಯ ಬಗ್ಗೆ ಒಂದು ದೊಡ್ಡ ಹೋರಾಟವೇ ಪ್ರಾರಂಭವಾಯಿತು. ನಾನು ಎಲ್ಲಾ ವಿಚಾರವನ್ನೂ ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಅದು ಕೋರ್ಟಿನ ಮುಂದೆ ಇದೆ. ಆದರೆ ತಾವು ಏನೋ ಹೇಳುತ್ತೀರಲ್ಲಾ, ಹೇಗೆ ಕೆಲಸ ಮಾಡುತ್ತಿದೆ. ತಮ್ಮ ಇಲಾಖೆ ಅಥವಾ ತಮ್ಮ ಸರ್ಕಾರ ಎನ್ನುವುದಕ್ಕೆ ಒಂದು ನಿದರ್ಶನವನ್ನು ಹೇಳುತ್ತೇನೆ. ಅಲ್ಲಿ ಇಬ್ಬರು ವ್ಯಕ್ತಿಗಳ ಮಧ್ಯೆ ಜಗಳವಾಯಿತು. ಯಾರೋ ಇಬ್ಬರು ವ್ಯಕ್ತಿಗಳು ದೂರನ್ನು ಕೊಟ್ಟರು. ಒಬ್ಬರು ಒಂದು ಗಂಟೆಯಲ್ಲಿ ಒಂದು ದೂರನ್ನು ಕೊಡುತ್ತಾರೆ. ಆವತ್ತಿನ ದಿವಸ ಯಾವ ಆರೋಪವನ್ನು ನನ್ನಂಥವರ ಮೇಲೆ ಮಾಡುವುದಿಲ್ಲ. ಆಮೇಲೆ ನಾಲ್ಕೂವರೆ ಗಂಟೆಯಲ್ಲಿ ಒಂದು ದೂರನ್ನು ತೆಗೆದುಕೊಳ್ಳುತ್ತಾರೆ. ಆ ದೂರಿನಲ್ಲಿ ಎಸ್.ಸಿ. ಮತ್ತು ಎಸ್.ಟಿ. ಪ್ರಿವೆನ್ಷನ್ ಆಫ್ ಅಟ್ರಾಸಿಟೀಸ್ ಆಕ್ಟ್ ಪ್ರಕಾರ ಒಂದು ಕೇಸನ್ನು ದಾಖಲು ಮಾಡಿಕೊಳ್ಳುತ್ತಾರೆ.

ಆದರೆ ಮೇಲ್ನೋಟಕ್ಕೆ ಅದು ರುಜುವಾತಾಗುವುದಿಲ್ಲ. ಸನ್ಮಾನ್ಯ ಬಸವಲಿಂಗಪ್ಪನವರು ಕೇಳಬೇಕು. ನಾವು ಪ್ರತಿಭಟನೆ ಮಾಡಿದಾಗ ನೀವು ಕೋರ್ಟಿಗೆ ಹೋಗಿ ಎಸ್.ಸಿ: ಎಸ್.ಟಿ. ಪ್ರಿವೆನ್‌ಷನ್ ಆಫ್ ಅಟ್ರಾನಿಟೀಸ್ ಆಕ್ಟ್ ಪ್ರಕಾರ ನಮ್ಮ ಮೇಲೆ ದೂರನ್ನು ರಿಜಿಸ್ಟರ್ ಮಾಡಿಕೊಂಡಿದ್ದೀರಿ. ಅಧನ್ನು ತಪ್ಪಾಗಿ ಮಾಡಿಕೊಂಡಿದ್ದಾರೆ. ಅದರಿಂದ ಎಫ್ಐಆರ್ ವಾಪಸ್ ಕೊಡಿ ಎಂದು ಕೋರ್ಟಿಗೆ ಅರ್ಜಿ ಹಾಕಿದ್ದೀರಿ. ಇವತ್ತು ಇದು ಏನು ತೋರಿಸುತ್ತದೆಂದು ತಾವು ಸ್ವಲ್ಪ ಹೇಳಿ.

ಶ್ರೀ ಬಿ. ಬಸವಲಿಂಗಪ್ಪ : ಇನ್ ಅಪೆಕ್ಷನ್ ಪ್ರವೃತ್ತಿ ತೋರಿಸುತ್ತದೆ.

ಶ್ರೀ ಹೆಚ್. ಏಕಾಂತಯ್ಯ : ಇಂತಹ ವೈಯಕ್ತಿಕ ಪ್ರವೃತ್ತಿ ಏನಿದೆ ಅಥವಾ ದ್ವೇಷ ಸಾಧನೆ ಮಾಡಲಿಕ್ಕೆ ಒಬ್ಬ ಸಣ್ಣ ಮಟ್ಟದ ಅಧಿಕಾರಿ I am not bothered about your sub-inspector, I am bothered about the people who are behind this gentleman. ಅದು ಮುಖ್ಯ. ಅವನಿಗೆ ಆ ಶಕ್ತಿ ಬರುತ್ತದೆಯೇ? ಒಬ್ಬ ಮಾಜಿ ಶಾಸಕರ ಮೇಲೆ ನೀವು ಇಂತಹ ಒಂದು ಹಲ್ಲೆಯನ್ನು ಪ್ರಚೋದನೆ ಮಾಡಿ, ಅವನ ಮೇಲೆ ಸುಳ್ಳು ಫಿರ್ಯಾದೆಯನ್ನು ಮೇಲ್ನೋಟಕ್ಕೆ ಕಂಡಂತಹ ರೀತಿಯಲ್ಲಿ ದಾಖಲೆ ಮಾಡಿ ಪುನಃ ಅದೇ ದಾಖಲೆಯನ್ನು ಸುಳ್ಳಾಗಿದೆ ತಪ್ಪಾಗಿದೆ ಸಬ್ ಇನ್ಸ್‌ಪೆಕ್ಟರ್ ಓವರ್ ಸ್ಮಾಟ್ ನಿಂದ ಬರೆದರಂತೆ. ಯಾವಾಗ ಎಂದರೆ ಇಲ್ಲಿ ಗಲಾಟೆ

ಮಾಡಿದ ಮೇಲೆ. ಅದನ್ನು ವಾಪಸ್ಸು ಕೊಡಿ ಎಂದು ಹೇಳಿಬಿಟ್ಟು ತಾವು ಕೋರ್ಟಿಗೆ ಅರ್ಜಿ ಹಾಕುತ್ತೀರಿ. ಕೋರ್ಟಿನಲ್ಲಿ ಹಾಕಿದಂತಹ ಅರ್ಜಿಯನ್ನು ರಿಜೆಕ್ಟ್ ಮಾಡುತ್ತಾರೆ. ಇದು ಸತ್ಯ ಸಂಗತಿ. ಇದನ್ನು ತಾವು ಒಪ್ಪುತ್ತೀರಿ. ನಾನು ಈಗ ಸನ್ಮಾನ್ಯ ಬಸವಲಿಂಗಪ್ಪನವರನ್ನು ಮತ್ತು ಸರ್ಕಾರವನ್ನು ಕೇಳುತ್ತೇನೆ. ಇವತ್ತಿನ ದಿವಸ ಆ ಅಧಿಕಾರಿಯನ್ನು ವರ್ಗ ಮಾಡಿದ್ದೀರಿ. ಆದರೆ ಅವನ ಮೇಲೆ ಏತಕ್ಕೆ ವಿಚಾರಣೆ ಮಾಡಲಿಲ್ಲ? ಏತಕ್ಕೋಸ್ಕರ ಅವನ ಮೇಲೆ ಕ್ರಮ ತೆಗೆದುಕೊಂಡಿಲ್ಲ. ತಾವು ಅವನನ್ನು ಸಸ್ಪೆಂಡ್ ಮಾಡಿ ಕ್ರಮ ತೆಗೆದುಕೊಳ್ಳದೆ ಇದ್ದರೆ ನಾವು ಏನನ್ನು ಭಾವಿಸಬೇಕು. ತಮ್ಮಂತಹವರ ಬೆಂಬಲ ಇದೆ ಎಂದು ಭಾವಿಸಬೇಕೆ ಅಥವಾ ಅನ್ಯಥಾ ಬೇರೆ ಯಾವುದನ್ನು ಭಾವಿಸಬೇಕೆಂದು ತಮ್ಮಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ಇದರಲ್ಲಿ ಏನಾದರೂ ಸ್ವಲ್ಪ ಮಟ್ಟಿಗೆ ಅಸತ್ಯತೆ ಇದ್ದರೆ ನಾನು ಹೇಳಿದಂತಹ ವಿಚಾರ ನಿಜ ಸ್ಥಿತಿಯಿಂದ ದೂರ ಇದ್ದರೆ ನಾನು ನಿಮ್ಮನ್ನು ಕ್ಷಮಾಪಣೆಯನ್ನು ಕೇಳುತ್ತೇನೆ. ಇಲ್ಲದೇ ಹೋದರೆ ನಾನು ಸರ್ಕಾರಕ್ಕೆ ಕೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ನಾನು ಹೇಳಿದಂತಹ ವಿಚಾರ ಏನಿದೆ ಇದು ನಿಜ ಸ್ಥಿತಿ ಎಂದಾದರೆ ಸರ್ಕಾರ ಯಾವ ಕ್ರಮ ತೆಗೆದುಕೊಳ್ಳುತ್ತದೆ ಎಂಬುದರ ಬಗ್ಗೆ ನನಗೆ ವಿವರಣೆ ಬೇಕು. ತಾವು ಒಂದು ಪಕ್ಷ ವಿವರಣೆಯನ್ನು ಕೊಡದೆ ಹೋದರೆ ನಾವು ನಿಜವಾಗಿಯೂ ಸಹ ಈ ಸರ್ಕಾರ ಇಂತಹದ್ದಕ್ಕೆ ಪೂರ್ಣವಾದಂತಹ ಬೆಂಬಲ ನೀಡುತ್ತದೆ, ಅದಕ್ಕೋಸ್ಕರ ಈ ಅಧಿಕಾರಿಗಳು ಅಂತಹ ಒಂದು ಪ್ರವೃತ್ತಿಯನ್ನು ತೋರಿಸುತ್ತಿದ್ದಾರೆ ಎಂದು ಎನ್ನತಕ್ಕದ್ದನ್ನು ಭಾವಿಸಬೇಕೇ ಬೇಡವೇ ಮಹಾಸ್ವಾಮಿ. ಇವತ್ತಿನ ದಿವಸ ನಾನು ಕೇಳುತ್ತಿರುವುದು ಇಷ್ಟೆ. ರಾಜಕೀಯ ಚೆಲ್ಲಾಟಕ್ಕೋಸ್ಕರ ಈ ರೀತಿ ಮಾಡಬೇಡಿ. ನಾಳೆ ದಿವಸ ನೀವು ಈ ಕಡೆ ಬರಬಹುದು, ಈ ಕಡೆ ಏಕೆ ಹೊರಗಡೆಯೇ ಹೋಗಬಹುದು ಯಾರಿಗೂ ಈ ಸ್ಥಳ ಖಾಯಂ ಅಲ್ಲ. ನನಗಾದರೂ ಅಷ್ಟೆ. ಆದರೆ ಎಲ್ಲಿಯವರೆಗೆ ತಾವು ಅಧಿಕಾರದಲ್ಲಿರುತ್ತೀರಿ ಅಲ್ಲಿಯವರೆಗೂ ಸಹ ಕಾನೂನು ಸಹಜವಾದಂತಹ ಕ್ರಮವನ್ನು ತೆಗೆದುಕೊಳ್ಳುವಂತಹ ರೀತಿಯಲ್ಲಿ Rate of law ಎಂದು ಏನು ಹೇಳುತ್ತೀರಿ, ಒಂದೇ ವಿಧವಾದಂತಹ ಕಾನೂನು ಎಲ್ಲರಿಗೂ ಎಲ್ಲಾ ಸಂದರ್ಭದಲ್ಲಿಯೂ ಸಹ ಒಂದೇ ರೀತಿಯಲ್ಲಿ ಅನ್ವಯವಾಗುವ ರೀತಿಯಲ್ಲಿ ತಾವು ಆಡಳಿತ ನಡೆಸುವಂತಹ ಒಂದು ಪ್ರವೃತ್ತಿಯನ್ನು ತಾವು ಬೆಳೆಸಿಕೊಳ್ಳಬೇಕು. ಇಲ್ಲದೇ ಹೋದರೆ ಈ ದೇಶ ಪುಂಡ ಪೋಕರಿಗಳ ಕೈಗೆ ಹೋಗುತ್ತದೆ. ಆಮೇಲೆ ನಿಮಗೂ ಜಾಗ ಇರಲಿಕ್ಕಿಲ್ಲ. ಯಾರು ಬಂಡವಾಳ ಶಾಹಿಗಳು ಇದ್ದಾರೆ, ಯಾರು ಹಣವಂತರಿದ್ದಾರೆ ಅವರ ಕೈಗೆ ಹೋಗುತ್ತದೆ.

ಯಾರು ಪುಂಡ ಪೋಕರಿಗಳು ಇದ್ದಾರೆ ಅವರಿಗೆ ಇವತ್ತಿನ ದಿವಸ ಅಧಿಕಾರ ಹೋಗುತ್ತದೆ. ಅವತ್ತಿನ ದಿವಸ ನಮಗೂ ನಿಮಗೂ ಇಲ್ಲಿ ಬರಲಿಕ್ಕೆ ಜಾಗವಿಲ್ಲ. ಬೇರೆ ಯಾವುದಾದರೂ ಜಾಗವನ್ನು ನೋಡಿಕೊಳ್ಳಬೇಕು. ಇಂತಹ ಒಂದು ಪರಿಸ್ಥಿತಿ ಇವತ್ತಿನ ದಿವಸ ಉದ್ಭವವಾಗುತ್ತಿದೆ. ಇದಕ್ಕೆ ಸೂಕ್ತವಾದಂತಹ ಉತ್ತರವನ್ನು ಸಮಜಾಯಿಷಿಯನ್ನು ಕೊಡುತ್ತಾರೆಂದು ನಾನು ಭಾವಿಸಿದ್ದೇನೆ.

ಉಪಾಧ್ಯಕ್ಷಿಣಿಯವರು : ತಾವು ಶುರು ಮಾಡಿ ಅರ್ಧಗಂಟೆಯಾಯಿತು. ಬೇಗ ಮುಗಿಸಿ.

ಶ್ರೀ ಹೆಚ್. ಏಕಾಂತಯ್ಯ : ನಾನು ನಮ್ಮ ಪಕ್ಷದಿಂದ ಎರಡನೆಯವನು. ಬೇರೆಯವರು ಇನ್ನೂ ಮಾತನಾಡಿಲ್ಲ.

ಉಪಾಧ್ಯಕ್ಷಿಣಿಯವರು : ಇನ್ನು ಬಹಳ ದೊಡ್ಡ ಪಟ್ಟಿ ಇದೆ.

ಶ್ರೀ ಹೆಚ್. ಏಕಾಂತಯ್ಯ : ಅನೇಕ ವಿಚಾರಗಳನ್ನು ನಾನು ಹೇಳಿದೆ. ಹಿಂದಿನ ಎರಡು ರಾಜ್ಯಪಾಲರ ಭಾಷಣಗಳಲ್ಲಿ ಏನು ಪ್ರಸ್ತಾಪ ಮಾಡಿದ್ದಾರೆ, ಆ ಎಲ್ಲಾ ಪ್ರಸಾಪಗಳನ್ನು ನಾನು ಇವತ್ತಿನ ದಿವಸ ಇಲ್ಲಿ ಪರಿಶೀಲನೆ ಮಾಡಲಿಕ್ಕೆ ಅಥವಾ

ಎಷ್ಟರಮಟ್ಟಿಗೆ ಆ ಆಶ್ವಾಸನೆಗಳನ್ನು ಅವರು ಕಾರ್ಯಗತ ಮಾಡಲಿಕ್ಕೆ ಪ್ರಯತ್ನ ಮಾಡಿದ್ದಾರೆ ಎನ್ನುವುದಕ್ಕೆ ನಾನು ಹೋಗುವುದಿಲ್ಲ. ಅದಕ್ಕೆ ಬದಲಾಗಿ ಕೆಲವು ಮುಖ್ಯವಾದ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟ ಪಡುತ್ತೇನೆ. ತಾವು ಹಿಂದೆ ರಾಜ್ಯಪಾಲರ ಭಾಷಣದಲ್ಲಿ ಒಂದು ಮಾತನ್ನು ಹೇಳಿದಿರಿ. ಹಿಂದುಳಿದ ವರ್ಗಗಳ ಆಯೋಗದ ವರದಿ ಬಂದ ಕೂಡಲೇ ಶಿಫಾರಸ್ಸನ್ನು ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುವುದೆಂದು ಹೇಳಿದ್ದೀರಿ. ಏಕೆ ಸ್ವಾಮಿ? ಇಂತಹ ಒಂದು ಸಣ್ಣ ವಿಚಾರದಲ್ಲೂ ಸಹ ನಿಮಗೆ ನಂಬಿಕೆ ಇಲ್ಲದಿದ್ದರೆ ಈ ಮಾತನ್ನು ಏತಕ್ಕೆ ಹೇಳುತ್ತೀರಿ. ಇದೊಂದೇ ಅಲ್ಲ. ಅಲ್ಪಸಂಖ್ಯಾತರ ಆಯೋಗ ಇರಬಹುದು, ಕುಲದೀಪ್ ಸಿಂಗ್ ಆಯೋಗ ಇರಬಹುದು ದಯಾಳ್ ಕಮೀಷನ್ ಇರಬಹುದು, ಇದರ ಬಗ್ಗೆ ಪರಿಶೀಲನೆ ಮಾಡುತ್ತೇವೆ ಎಂಬ ಮಾತನ್ನು ಹೇಳಿದಿರಿ. ಪರಿಶೀಲನೆ ಮಾಡಿ ನಾನೇನು ಬೇಡವೆಂದು ಹೇಳುವುದಿಲ್ಲ. ಆದರೆ ಈ 4-5 ಆಯೋಗಗಳ ಬಗ್ಗೆ ಮಾತ್ರ ತಾವು ಇಲ್ಲಿ ಪ್ರಸ್ತಾಪ ಮಾಡಿದ್ದೀರಿ.

ಇದಕ್ಕೆ ಹೊರತಾದಂಥ ಯಾವುದಾದರೂ ಆಯೋಗಗಳು ಇದಕ್ಕಿಂತಲೂ ತೀವ್ರವಾದಂಥ ಆಪಾದನೆಗಳನ್ನು ಮಾಡಿ ವಿಚಾರಣೆ ಮಾಡಿದಂಥ ಆಯೋಗದ ವರದಿ ತಮ್ಮ ಕೈ ಸೇರಿದೆಯೇ? 1987ನೇ ಇಸವಿಯಲ್ಲಿ ಸದಾನಂದ ಸ್ವಾಮಿ ವಿಚಾರಣಾ ಆಯೋಗದ್ದು ತಮ್ಮ ಕೈಗೆ ಬಂತು ತದನಂತರ ಅದರಲ್ಲಿ ಗುರುತರವಾದಂಥ ಆರೋಪಗಳು ಇತ್ತು. ಸದಾನಂದ ಸ್ವಾಮಿ ಆಯೋಗ ಅನೇಕ ವಿಚಾರಗಳಲ್ಲಿ ತಪ್ಪಿತಸ್ಥರನ್ನು ತೀವ್ರವಾದಂಥ ರೀತಿಯಲ್ಲಿ ಖಂಡಿಸಿಧೆ. ಸಂಬಂಧಪಟ್ಟವರ ಮೇಲೆ ತೀವ್ರವಾದಂಥ ಕ್ರಮವನ್ನು ತೆಗೆದುಕೊಳ್ಳಬೇಕು ಎಂಬ ಮಾತನ್ನು ಹೇಳಿದೆ. ಕೋಟ್ಯಾನುಗಟ್ಟಲೆ ಹಣ ದುರುಪಯೋಗವಾಗಿದೆ, ಇದಕ್ಕೆ ಕಾರಣರಾದವರು ಮೇಲ್ನೋಟಕ್ಕೆ ತಪ್ಪಿತಸ್ಥರಾಗಿದ್ದಾರೆ ಎಂಬ ಮಾತನ್ನು ಹೇಳಿದೆ. ಇವೊತ್ತಿನವರೆಗೂ ಈ ಸರ್ಕಾರಕ್ಕೆ ಸ್ವಲ್ಪ ಮಟ್ಟಿಗಾದರೂ ಸಹ ನಂಬಿಕೆ ಇದ್ದರೆ, ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂಬ ಭಾವನೆ ಇದ್ದರೆ ಅವರಿಗೆ ನಾನು ನೇರವಾಗಿ ಕೇಳುತ್ತೇನೆ. ನಾನು ಈ ಹಿಂದೆ ಇದೇ ಸದನದಲ್ಲಿ ಪ್ರಸ್ತಾಪ ಮಾಡಿದ್ದೆ. ಈ ಒಂದು ಆಯೋಗದ ವರದಿ ಏನಿದೆ ಈ ವರದಿಯನ್ನು ತಾವೇನಾದರೂ ಇವೊತ್ತಾದರೂ ಒಪ್ಪಿಕೊಂಡಿದ್ದೀರಾ? I would like to know whether the Government has specifically accepted the report or rejected the report. ಸುಮಾರು ಎರಡು ವರ್ಷವಾದರೂ ಸಹ ಯಾವುದೇ ತೀರ್ಮಾನವನ್ನು, ನಿರ್ಣಯವನ್ನು ತೆಗೆದುಕೊಳ್ಳಲಾರದಂಥ ಅಸಹಾಯಕ ಪರಿಸ್ಥಿತಿಯಲ್ಲಿ ನಾವು ಇದ್ದರೆ, ತಮ್ಮ ಸರ್ಕಾರ ಈ ದೇಶದಲ್ಲಿ ಇರಬೇಕಾದಂಥ ಅವಶ್ಯಕತೆ ಇದೆಯೇ? ಅದು ತಿಂಗಳೊಳಗಾಗಿ ತಾವು ತೀರ್ಮಾನವನ್ನು ತೆಗೆದುಕೊಳ್ಳಬೇಕು ಎಂದು ಕಾನೂನು ಇದೆ. ಈ ಸದನದ ಮುಂದೆ ಆ ತೀರ್ಮಾನವನ್ನು ಇಡಬೇಕೆಂಬ ಮಾತನ್ನು ಕಾನೂನು ಹೇಳುತ್ತದೆ. ಆದರೆ ತಾವು ಏನು ಮಾಡಿದ್ದೀರಿ ಸ್ವಾಮಿ.ಇವೊತ್ತಿನವರೆಗೂ ವಿಚಾರಣಾ ಆಯೋಗದ ವರದಿಯನ್ನು ಒಪ್ಪಿಕೊಂಡಿದ್ದೀರಾ ಅಥವಾ ಇಲ್ಲವೇ ಎಂಬ ಮಾತನ್ನು ಹೇಳಲಿಲ್ಲ, ತಾವು ಒಪ್ಪಿಕೊಂಡಿದ್ದರೆ, ಯಾವ ಕ್ರಮ ತೆಗೆದುಕೊಂಡಿದ್ದೀರಿ ಎನ್ನುವ ಮಾತನ್ನು ಈ ಸದನದ ಮುಂದೆ ಹೇಳಿ. ಏಕೆಂದರೆ ನಿಮಗೆ ಅದರಲ್ಲಿ ಆಸ್ಥೆ ಇಲ್ಲ. ಅಕಸ್ಮಾತ್ ಆಸ್ಥೆ ಇದ್ದರೆ, ಅದರಲ್ಲಿ ಯಾರು ತಪ್ಪಿತಸ್ಥರು ಇದ್ದಾರೆ , ಇರಬಹುದು ಎಂಬುದನ್ನು ನೋಡಿ, ಅವರನ್ನು ರಕ್ಷಣೆ ಮಾಡುವಂಥ ಪ್ರವೃತ್ತಿ ನಿಮ್ಮ ಸರ್ಕಾರದಲ್ಲಿ ಇದೆ ಎಂದು ನಾವು ಏತಕ್ಕೆ ಭಾವಿಸಬಾರದು. ಮಾನ್ಯ ಹೆಗಡೆಯವರು ಇದ್ದಾರೆ, ಅಥವಾ ಬೇರೆಯವರು ಇದ್ದಾರೆ ಎನ್ನುವ ಕಾರಣಕ್ಕೋಸ್ಕರ ರಾಜಕೀಯವಾಗಿ ಒಪ್ಪದೇ ಇರುವಂಥ ಜನರು ಇದ್ದಾರೆ ಎಂದು ಹೇಳಿ ಕುಲದೀಪ್ ಸಿಂಗ್ ಆಯೋಗದ ಬಗ್ಗೆ ಪ್ರಸ್ತಾಪ ಮಾಡಿದಿರಿ. ದಯಾಳ್ ಆಯೋಗದ ಬಗ್ಗೆ ಇದರಲ್ಲಿ ಪ್ರಸ್ತಾಪ ಮಾಡಿದಿರಿ. ಹಾಗೆಯೇ ಬೇರೆ ಬೇರೆ ಆಯೋಗಗಳ ಬಗ್ಗೆ ಪರಿಶೀಲನೆಯಲ್ಲಿದೆ ಎಂಬ

ಮಾತನ್ನು ಹೇಳಿದಿರಿ, ಆದರೆ ಇದು ತಮ್ಮ ಪರಿಶೀಲನೆಯಲ್ಲಿ ಇಲ್ಲವೆ? ಇದಕ್ಕೆ ತಾವು ಏನು ಕಾರಣ ಹೇಳುತ್ತೀರಿ. ಇವರಿಗೆ ಬೇಕಾದಾಗ ಒಂದು ನೀತಿ, ಬೇಕಿಲ್ಲದಾಗ ಒಂದು ನೀತಿಯನ್ನು ಅನುಸರಿಸುವುದರಿಂದ ತಾರತಮ್ಯವಾದಂಥ ಆಡಳಿತವನ್ನು ಇವರು ಮಾಡುತ್ತಿದ್ದಾರೆ. ಯಾವುದೇ ಪಕ್ಷಪಾತವಿಲ್ಲದೆ ದ್ವೇಷಾರಾಗಗಳಿಗೆ ಬಲಿಯಾಗದಂಥ ರೀತಿಯಲ್ಲಿ ಆಡಳಿತ ಮಾಡುತ್ತೇವೆಂಬ ಪ್ರತಿಜ್ಞೆಯನ್ನು ಮಾಡಿ ಅದಕ್ಕೆ ತದ್ವಿರುದ್ಧವಾಗಿ ಸರ್ಕಾರ ಮಾಡುತ್ತಿದೆ ಎಂದು ಹೇಳದೇ ವಿಧಿ ಇಲ್ಲ. ಅದೇ ರೀತಿ ಇನ್ನೂ ಹಲವಾರು ಆಶ್ವಾಸನೆಗಳನ್ನು ಇವರು ಕೊಟ್ಟಿದ್ದಾರೆ. ಆ ಎಲ್ಲಾ ಆಶ್ವಾಸನೆಗಳನ್ನು ಇವೊತ್ತು ನಾನು ಇಲ್ಲಿ ಹೇಳಲಿಕ್ಕೆ ಹೋಗುವುದಿಲ್ಲ. ಮಾನ್ಯ ಬಸವಲಿಂಗಪ್ಪನವರು ಇರುವುದರಿಂದ, ಕೆಲವು ವಿಚಾರಗಳನ್ನು ಮಾತ್ರ ಪ್ರಸ್ತಾಪ ಮಾಡುತ್ತೇನೆ. ಹಿಂದಿನ ಅರ್ಥ ಸಚಿವರಾದ ಮಾನ್ಯ ರಾಜಶೇಖರ್ ಮೂರ್ತಿಯವರು ಇಲ್ಲಿ ಒಂದು ಹೇಳಿಕೆಯನ್ನು ಮಾಡಿದ್ದರು. ಮಾನ್ಯ ಮೊಯಿಲಿಯವರು ಇದು ಡಿಸಿಷನ್ ಅಲ್ಲ, ಇಧು ಹೇಳಿಕೆ ಅಷ್ಟೆ ಎಂದು ಹೇಳುತ್ತಿದ್ದರು. ನನಗೆ ಗೊತ್ತಿದೆ ತಾವು ಏನು ವಿಧಾನ ಸಭೆಯಲ್ಲಿ ಹೇಳುತ್ತೀರಿ, ಆ ರೀತಿ ಕೇಳಿದಂಥ ಮಾತು ಸರ್ಕಾರದ ತೀರ್ಮಾನವಾಗುತ್ತದೆ. ಆ ತೀರ್ಮಾನದ ಪ್ರಕಾರ ತಾವು ಹೇಳಿದಿರಿ, ಹಿಂದೆ ಇದ್ದಂಥ ಜನತಾ ಸರ್ಕಾರ ಲೂಟಿ ಮಾಡಿದೆ, ಖಜಾನೆ ಖಾಲಿಯಾಗಿದೆ. ನಮ್ಮಲ್ಲಿ ಹಣ ಇಲ್ಲ, ಇವೊತ್ತಿನ ದಿವಸ ನಾವು ಬಂದಿದ್ದೇವೆ. ಎಲ್ಲಾ ಸತ್ಯ ಹರಿಶ್ಚಂದ್ರರು, ಸತ್ಯವಾದಂಥ ನೀತಿಯನ್ನು ಅನುಸರಿಸುವುದರಿಂದ ಕೋಟಿಗಟ್ಟಲೆ ಹಣವನ್ನು ನಾವು ಕೂಡಿ ಹಾಕಿದ್ದೇವೆ. ಅದರಂತೆ ಇವೊತ್ತಿನ ದಿವಸ 550 ಕೋಟಿ ರೂಪಾಯಿಗಳು , 1990-91ನೇ ಇಸವಿಯಲ್ಲಿ ಹೆಚ್ಚುವರಿ ಆದಾಯ ಬರುತ್ತದೆ ಎನ್ನುವ ಮಾತನ್ನು ಹೇಳಿದಿರಿ, ಆ ಪೈಕಿ 320 ಕೋಟಿ ರೂಪಾಯಿಗಳು ಅಬಕಾರಿ ಬಾಬ್ತು ಒಂದರಿಂದಲೇ ಬರುತ್ತದೆ ಎಂಬ ಮಾತನ್ನು ಹೇಳಿದಿರಿ.

ಮಾನ್ಯ ಬಸವಲಿಂಗಪ್ಪನವರೇ, ಆವತ್ತು ಏನು ನಿರೀಕ್ಷೆ ಮಾಡಿತ್ತು ಆ ನಿರೀಕ್ಷೆ ಇವತ್ತು ಏತಕ್ಕೆ ಸುಳ್ಳಾಯಿತು? ನಾನು ಇಲ್ಲಿ ಎರಡು ವಿಚಾರಗಳನ್ನು ಪ್ರಸ್ತಾಪ ಮಾಡಲಿಕ್ಕೆ ಇಚ್ಛೆಪಡುತ್ತೇನೆ. ಮೊದಲನೆಯದಾಗಿ, ತಾವು ಏನು ಒಂದು ಅಸೆಸ್ ಮೆಂಟನ್ನು ಮಾಡಿದಿರಿ ಅದು ಸರಿಯೇ ಅಥವಾ ತಪ್ಪೇ? ಒಂದು ವೇಳೆ ಅದು ತಪ್ಪಾಗಿದ್ದರೆ ಅಂಥ ಸರ್ಕಾರ ಇರಬೇಕಾದ ಅಗತ್ಯವಿಲ್ಲ. ತಾವು ಏನು ನಿರೀಕ್ಷೆ ಮಾಡುತ್ತೀರಿ ಆ ನಿರೀಕ್ಷೆಗೆ ತದ್ವಿರುದ್ಧವಾಗಿ ಆದಾಯ ಹೆಚ್ಚು ಕಡಿಮೆ ಆಗುವುದಾದರೆ ನೀವು ಅಧಿಕಾರದಲ್ಲಿರುವುದಕ್ಕೆ ನಾಲಾಯಕ್ಕಾದ ಜನ ಎಂದು ನಾವು ಹೇಳಬೇಕಾಗುತ್ತದೆ. ಒಂದು ವೇಳೆ ಆ ನೀತಿ ಸರಿ ಎಂದು ಹೇಳುವುದಾದರೆ 320 ಕೋಟಿ ರೂಪಾಯಿಗಳು ಬರುವುದು ಸರಿ ಎಂದು ಹೇಳುವುದಾದರೆ ಅಥವಾ ಅದಕ್ಕೆ ಸ್ವಲ್ಪ ಹೆಚ್ಚೂ ಕಡಿಮೆ ಹತ್ತಿರದಲ್ಲೇ ಬಂದಿದ್ದರೆ ನಾನು ತಮ್ಮನ್ನು ಕೇಳುತ್ತೇನೆ, ಆವತ್ತಿನ ದಿವಸ ತಾವು ಏನು ಈ ಸದನದಲ್ಲಿ ಏನು ಘೋಷಣೆ ಮಾಡಿದಿರಿ, ಈ ದೇಶದ ಜನರಿಗೆ ಏನು ಆಶ್ವಾಸನೆಯನ್ನು ಕೊಟ್ಟಿದ್ದೀರಿ ಆ ಆಶ್ವಾಸನೆಯನ್ನು ಈಡೇರಿಸುವುದಕ್ಕೆ ತಾವು ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ? 320 ಕೋಟಿ ರೂಪಾಯಿಗಳಲ್ಲಿ ಕುಡಿಯುವ ನೀರಿಗೋಸ್ಕರ 25 ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ. ಅದರ ಬಗ್ಗೆ ಬಹಳ ದೊಡ್ಡ ಪಟ್ಟಿಯನ್ನು ಮಾಡುವುದಕ್ಕೆ ನಾನು ಹೋಗುವುದಿಲ್ಲ. ಅವಶ್ಯಕತೆ ಬಂದಾಗ ನಾನು ಹೇಳುತ್ತೇನೆ. ಇವತ್ತಿನ ದಿವಸ ಎಲ್ಲ ಕಾರ್ಯಕ್ರಮಗಳು ಅಂದರೆ ಪಟ್ಟಣದ ಜನರಿಗೆ ನೀರು ಕೊಡುತ್ತೇವೆಂದು ಹೇಳಿದಿರಿ, ಕೊಳಚೆ ಪ್ರದೇಶದ ಜನರಿಗೆ ನೀರು ಕೊಡುತ್ತೇವೆಂದು ಹೇಳಿದಿರಿ, ಎಸ್.ಸಿ., ಎಸ್.ಟಿ. ಹಾಸ್ಟೆಲ್ ಗಳನ್ನು ಕಟ್ಟಿಸುತ್ತೇವೆಂದು ಹೇಳಿದಿರಿ, ಇನ್ನೂ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೇವೆಂದು ಬಹಳ ಜಂಭದಿಂದ ಅವತ್ತು ಹೇಳಿದಿರಿ, ನಿಜ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅವತ್ತಿನ ದಿವಸ ನಿಮಗೆ ಆ ಒಂದು ಹೆಮ್ಮೆ ಇತ್ತು. ನಾವು ಸರಿಯಾಗಿ ಕೆಲಸ

ಮಾಡಲಿಲ್ಲವೆಂದು ಹೇಳಿಕೊಂಡು ತಾವು ಎಷ್ಟು ಚೆನ್ನಾಗಿ ಕೆಲಸಮಾಡಿದ್ದೇವೆಂದು ಹೇಳಿಕೊಳ್ಳುವುದಕ್ಕೆ ತಾವು ಈ ಮಾತನ್ನು ಹೇಳಿದಿರಿ. ನಾನು ತಮ್ಮನ್ನು ಕೇಳುತ್ತೇನೆ, 12-7-90ರಂದು ಈ ಸಭೆಯಲ್ಲಿ ಏನು ಪ್ರಕಟಣೆಯನ್ನು ಮಾಡಿದಿರಿ, ಆ ಪ್ರಕಟಣೆಯನ್ನು ಮಾಡಿದಂಥ ರೀತಿಯಲ್ಲಿ ತಾವು ಏತಕ್ಕೆ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೆ ತರಲಿಲ್ಲ? ಇದು ಜನರಿಗೆ ಮಾಡಿದಂಥ ವಂಚನೆ ಅಲ್ಲವೇ? ಮೋಸ ಅಲ್ಲವೇ? ಎಂದು ನಾನು ತಮ್ಮನ್ನು ಕೇಳಬಯಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಸದಸ್ಯರು ಒಳ್ಳೆಯ ವಾದವನ್ನೇ ಸಭೆಯ ಮುಂದಿಟ್ಟಿದ್ದಾರೆ. ಮಾನ್ಯ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳಾಗಿದ್ದಾಗ ಈ ಒಂದು ಹೇಳಿಕೆಯನ್ನು ಕೊಟಿದ್ದು ನಿಜ. ನಮ್ಮ ನಿರೀಕ್ಷೆಗೆ ಎಕ್ಸೈಸ್ ಬಾಬಿನಲ್ಲಿ ಜಾಸ್ತಿ ಆದಾಯ ಬರುತ್ತದೆ, ಅದರಿಂದ ಹೆಚ್ಚು ಹೆಚ್ಚು ಜನೋಪಕಾರಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ನಾವು ಹೇಳಿದ್ದೂ ನಿಜ. ಆದರೆ ಈಗ ಆದಾಯ ಬರಲಿಲ್ಲ. ಆದಾಯ ಬಾರದೇ ಇದ್ದುದ್ದರಿಂದ ನಾವು ಈ ಸಾರಿ ಈ ಕೆಲಸವನ್ನು ಮಾಡುತ್ತಿದ್ದೇವೆಂದು ಹೇಳುತ್ತಿದ್ದೇವೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಸಂಪೂರ್ಣವಾಗಿ ವಿವರವಾದ ಹೇಳಿಕೆಯನ್ನು ಕೊಡುತ್ತಾರೆಂದು ನಾನು ಹೇಳಿದ್ದೇನೆ. ಆದರೆ ತಾವು ಅದನ್ನೇ ಆಧಾರವಾಗಿಟ್ಟುಕೊಂಡು ಇದನ್ನು ಏತಕ್ಕೆ ಮಾಡಲಿಲ್ಲ ಎಂದು ಕೇಳತಕ್ಕದ್ದು ಅಷ್ಟು ಸಮಂಜಸವಾಗುವುದಿಲ್ಲ.

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಉಪಾಧ್ಯಕ್ಷಿಣಿಯವರೆ, ಮಾನ್ಯ ಬಸವಲಿಂಗಪ್ಪನವರು ಒಂದು ಹೇಳಿಕೆಯನ್ನು ಈಗ ಕೊಟ್ಟರೆ ಅದರ ಅರ್ಥ ಏನು? ತಾವು ಸರ್ಕಾರದ ಪ್ರತಿನಿಧಿಗಳು, ತಾವು ಸರ್ಕಾರದ ಮಂತ್ರಿಗಳಾಗಿರುತ್ತೀರಿ. ಅವತ್ತಿನ ದಿವಸ ಮಾನ್ಯ ರಾಜಶೇಖರ ಮೂರ್ತಿಯವರು ಹಣಕಾಸಿನ ಮಂತ್ರಿಗಳಾಗಿ ಇಲ್ಲಿ ಏನು ಒಂದು ಹೇಳಿಕೆಯನ್ನು ಕೊಟ್ಟರು. it is binding on the Government. Is it not binding!

SRI B.BASAVALINGAPPA : Binding is alright.

SRI H.EKANTHAIAH : I am glad you have agreed. ನನಗೆ ತುಂಬಾ ಸಂತೋಷ. ನಾನಾದರೂ ಕೇಳುವುದಿಷ್ಟೆ. ಅವತ್ತಿನ ದಿವಸ ತಾವು ಯಾವ ಯಾವ ಕಾರ್ಯಕ್ರಮಗಳಿಗೋಸ್ಕರ ಈ 320ಕೋಟಿ ರೂಪಾಯಿಗಳನ್ನು ಹಂಚಿಕೆ ಮಾಡುತ್ತೇವೆಂದು ಹೇಳಿದಿರಿ ಆ ಕಾರ್ಯಕ್ರಮಗಳಲ್ಲಿ ಎಷ್ಟು ಹಣವನ್ನು ಹಂಚಿದ್ದೀರಿ? ಈ 320 ಕೋಟಿ ಅಲ್ಲದಿದ್ದರೂ 50 ಕೋಟಿ ರೂಪಾಯಿಗಳಾದರೂ ನಿರೀಕ್ಷೆಯ ಪ್ರಕಾರ ಬಂದಿರಬೇಕಲ್ಲವೇ? 100 ಕೋಟಿ ರೂಪಾಯಿಗಳಾದರೂ ಬಂದಿರಬೇಕಲ್ಲವೇ? ಅಥವಾ ಏನೇನೂ ಬಂದಿಲ್ಲವೇ? ಅಷ್ಟನ್ನಾದರೂ ತಾವು ಹೇಳಿ. ತಾವು ಅವತ್ತು ಈ ಸದನಕ್ಕೆ ಏನು ಆಶ್ವಾಸನೆಯನ್ನು ಕೊಟ್ಟಿರಿ ಎಂದರೆ, ಈ ಹಿಂದಿನ ಸರ್ಕಾರ ಏನು ಖಜಾನೆಯನ್ನು ಖಾಲಿ ಮಾಡಿದೆ ಅಂಥ ಸರ್ಕಾರ ನಮ್ಮದಲ್ಲ. ನಾವು ಎಲ್ಲ ಸಾಲವನ್ನೂ ತೀರಿಸಿದ್ದೇವೆ. ನಮ್ಮ ಸರ್ಕಾರ ಸುಸ್ಥಿತಿಯಲ್ಲಿದೆ, ಸಂಪತ್ತನ್ನು ಶೇಖರಣೆ ಮಾಡಿದೆ, 550 ಕೋಟಿ ರೂಪಾಯಿಗಳ ಸಂಪನ್ಮೂಲಗಳನ್ನು ನಾವು ಹೆಚ್ಚಿಗೆ ಮಾಡಿದ್ದೇವೆಂದು ಹೇಳಿದಂಥ ಸರ್ಕಾರ ಏನಿದೆ ಅದನ್ನು ನಾನು ಇವತ್ತು ಕೇಳುತ್ತಿದ್ದೇನೆ. ಸುಮಾರು 392 ಕೋಟಿ ರೂಪಾಯಿಗಳನ್ನು ಲೋಕೋಪಯೋಗಿ ಇಲಾಖೆಗೆ ಎಲ್.ಓ.ಸಿ. ಮುಖಾಂತರ ಬಿಡುಗಡೆ ಮಾಡುತ್ತೇರೆಂದು ಹೇಳಿದಿರಿ. ಪ್ರತಿ 3 ತಿಂಗಳಿಗೊಮ್ಮೆ ಕನಿಷ್ಟ ಪಕ್ಷ 94 ಕೋಟಿ ರೂಪಾಯಿಗಳಿಗೆ ಕಡಿಮೆ ಇಲ್ಲದಂತೆ ಹಣವನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿದ್ದೀರಿ. ನಾನು ತಮ್ಮನ್ನು ಇವತ್ತು ಕೇಳುತ್ತಿದ್ದೇನೆ. ಈ 3 ತಿಂಗಳ ಅವಧಿಯಲ್ಲಿ ಅಥವಾ 3ನೇ ಕ್ವಾರ್ಟರ್ ನಿಂದ 4ನೇ ಕ್ವಾರ್ಟರ್ ವರೆಗೆ

ತಾವು ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ? ಈ ಸದನದಲ್ಲಿ ತಾವು ಏನು ಆಶ್ವಾಸನೆಯನ್ನು ಕೊಟ್ಟಿದ್ದೀರಿ. ಯಾರಾದರೂ ಎಲ್.ಓ.ಸಿ. ಇಲ್ಲವೆಂದು ಕೆಲಸವನ್ನು ನಿಲ್ಲಿಸಿದರೆ ನಾನು ಅವರ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಹೇಳತಕ್ಕ ಮಾತನ್ನು ತಾವು ಇಂಜನಿಯರ್‌ಗಳಿಗೆ ಹೇಳಿದ್ದೀರಿ. ಇವತ್ತು ತಾವು ಏನು ಮಾಡಿದಿರಿ? 392 ಕೋಟಿ ರೂಪಾಯಿಗಳನ್ನು ತಾವು ಎಲ್.ಓ.ಸಿ. ಏನು ಬಿಡುಗಡೆ ಮಾಡಬೇಕಾಗಿತ್ತು ಅದನ್ನು ಮಾರ್ಚ್ ತಿಂಗಳೊಳಗೆ ಬಿಡುಗಡೆ ಮಾಡಬೇಕಾಗಿತ್ತು. ನಾನು ತಮ್ಮನ್ನು ಕೇಳುತ್ತೇನೆ, ಇದುವರೆಗೆ ತಾವು ಎಷ್ಟು ಹಣವನ್ನು ಬಿಡುಗಡೆ ಮಾಡಿದ್ದೀರಿ? ಮಾಡಿಲ್ಲದಿದ್ದರೆ ಇಲ್ಲಿ ಭಾಷಣ ಮಾಡುವುದೇ ಒಂದು, ತಮ್ಮ ಕಾರ್ಯಕ್ರಮಗಳನ್ನು ಜಾರಿ ಮಾಡುವಾಗ ಅನುಸರಿಸುವ ನೀತಿಯೇ ಮತ್ತೊಂದು ಎಂದು ನಾನು ಹೇಳಬೇಕಾಗುತ್ತದೆ. ಇದು ನಿಮ್ಮ ಸರ್ಕಾರದ ನೀತಿಯೆ? ಇಂಥಾದ್ದು ಒಂದಲ್ಲ, ಎರಡಲ್ಲ. ಈ ರೀತಿ ಈ ಸರ್ಕಾರ ಈ ಸದನದಲ್ಲಿ ಏನು ಆಶ್ವಾಸನೆಯನ್ನು ಮಾಡಿತ್ತು ಈ ಸದನದಿಂದ ಹೊರಗಡೆ ಈ ರಾಜ್ಯದ ಜನರಿಗೆ ಏನು ಆಶ್ವಾಸನೆಯನ್ನು ಕೊಟ್ಟಿತ್ತು ಆ ಆಶ್ವಾಸನೆಯನ್ನು ಈಡೇರಿಸುವುದಕ್ಕೆ ಯಾವುದೇ ಒಂದು ಪ್ರಾಮಾಣಿಕ ಪ್ರಯತ್ನವನ್ನು ಈ ಸರ್ಕಾರ ಮಾಡಿಲ್ಲ ಎನ್ನತಕ್ಕ ಮಾತನ್ನು ನಾನು ಹೇಳಲಿಕ್ಕೆ ಇಷ್ಟ ಪಡುತ್ತೇನೆ

4.50 ಪಿ.ಎಂ.

ಉಪಾಧ್ಯಕ್ಷಿಣಿಯವರು : ತಾವು 40 ನಿಮಿಷ ಮಾತನಾಡಿದ್ದೀರಿ. 32 ಜನರ ಪಟ್ಟಿ ಇದೆ.

ಶ್ರೀ ಹೆಚ್. ಏಕಾಂತಯ್ಯ : ಇನ್ನೊಂದು 10 ನಿಮಿಷ ಮಾತನಾಡುತ್ತೇನೆ. ಸನ್ಮಾನ್ಯ ಅಧ್ಯಕ್ಷಿಣಿಯವರೆ, ಇನ್ನು ಕೆಲವೇ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುತ್ತೇನೆ. ಈ ಸರ್ಕಾರ ಯಾವುದೇ ಸರ್ಕಾರವಾಗಲಿ, ನಮ್ಮ ಸರ್ಕಾರವೇ ಆಗಲಿ, ಯಾವುದೇ ಜನತಾಂತ್ರಿಕ ವ್ಯವಸ್ಥೆಯಿಂದ ಆರಿಸಿಬಂದಂಥ ಸರ್ಕಾರ ಒಂದು ಮುಖ್ಯವಾದಂಥ ಕೆಲಸವನ್ನು ಮಾಡಬೇಕಾಗುತ್ತದೆ. ಎಲ್ಲಿ ಜನ ಅಧಿಕಾರದಲ್ಲಿದ್ದಾರೆ, ಅವರಿಗೆ ಅಕೌಂಟಬಲಿಟಿ ಇರಬೇಕಾಗಿರತಕ್ಕಂಥಾದ್ದು ಅತ್ಯಂತ ಅವಶ್ಯಕತೆ ಇದೆ. ಯಾವುದೇ ಒಂದು ತಪ್ಪು ಮಾಡಿದರೆ ಆ ತಪ್ಪಿಗೆ ಶಿಕ್ಷೆಯಾಗುತ್ತದೆಂಬ ಮನೋಭಾವ ಬರುವಂಥ ರೀತಿಯಲ್ಲಿ ಅರ್ಥೈಸುವಂತಹ ರೀತಿಯಲ್ಲಿ ಸರ್ಕಾರ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇದನ್ನು ನಾವು ನೀವು ಎಲ್ಲರೂ ಒಪ್ಪುತ್ತೇವೆ. ಆದರೆ ಸರ್ಕಾರದ ಗಮನಕ್ಕೆ ಇಂಥ ಒಂದು ತಪ್ಪುಗಳು ಕಂಡು ಬಂದಾಗ ಯಾವ ಕ್ರಮವನ್ನು ತೆಗೆದುಕೊಂಡಿದ್ದೀರಿ. ಮೊನ್ನೆ ಒಂದು ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದಲ್ಲಿ ಸುಮಾರು 40 ಲಕ್ಷ ರೂಪಾಯಿಗಳಿಗಿಂತ ಹೆಚ್ಚು ಹಣ ದುರುಪಯೋಗವಾಯಿತು. ಇದು ಸಂಬಂಧಪಟ್ಟವರಿಗೆ ಗೊತ್ತಿದೆ. ಆ ಇಲಾಖೆಯಲ್ಲಿ ಯಾರು ಸಂಬಂಧಪಟ್ಟವರು ಇದ್ದಾರೆ ಆ ಮುಖ್ಯಸ್ಥರಿಗೆ ಇದು ಗೊತ್ತಿದೆ. ನಾವು ಇಲ್ಲಿ ಒಂದು ಕಾನೂನನ್ನು ಮಾಡಿಕೊಂಡಿದ್ದೇವೆ. ಯಾವುದೇ ಒಂದು ಇಲಾಖೆಯಲ್ಲಿ ಯಾವುದೇ ಒಂದು ಕಛೇರಿಯಲ್ಲಿ ಇಂತಹ ಒಂದು ದುರುಪಯೋಗವಾದರೆ, ದುರುಪಯೋಗವಾದುದನ್ನು ಸಂಬಂಧಪಟ್ಟವರು ತಕ್ಷಣವೇ ಪೋಲೀಸ್ ನವರಿಗೆ ತಿಳಿಸಬೇಕು. ಆದರೆ ನಾನು ಕೇಳುತ್ತೇನೆ., 40 ಲಕ್ಷ ರೂಪಾಯಿಗಳ ದುರುಪಯೋಗವಾಗಿದೆ ಎಂಬ ವರದಿ ಅಥವಾ ಮಾಹಿತಿ ತಮ್ಮ ಸರ್ಕಾರಕ್ಕೆ ಅಥವಾ ತಮ್ಮ ಸರ್ಕಾರದ ಇಲಾಖೆಯ ಮುಖ್ಯಸ್ಥರಿಗೆ ತಲುಪಿದ ಮೇಲೆ ಸಂಬಂಧಪಟ್ಟವರ ಮೇಲೆ ತಾವು ಪೋಲೀಸ್ ಇಲಾಖೆಗೆ ದೂರು ಕೊಡುವಂಥ ಕೆಲಸವನ್ನು ಮಾಡಿದ್ದೀರಾ? ಮಾಡಲಿಲ್ಲ. ಏಕೆ, ತಮಗೆ ಗೊತ್ತು, ಸ್ವಲ್ಪ ದಿವಸ ಹೋದರೆ ಅಲ್ಲಿರುವ ಅಧಿಕಾರಿ ನಿವೃತ್ತನಾಗುತ್ತಾನೆ, ನಿವೃತ್ತನಾದ ಮೇಲೆ ನೋಡೋಣವೆಂದು ಇದ್ದೀರಿ, ನನ್ನ ಗಮನಕ್ಕೆ ಬಂದಿದೆ, ಕೇವಲ ಈಗ ಮಾತ್ರವಲ್ಲ, ಈ ವ್ಯವಸ್ಥೆ ಈ ದೇಶದಲ್ಲಿ ಜಾರಿಗೆ

ಬಂದ ಮೇಲೆ ನಾವು ಯಾವುದೇ ಅಧಿಕಾರಿಯ ವಿರುದ್ಧ ಕ್ರಮ ತೆಗೆದುಕೊಳ್ಳಬೇಕೆಂಬ ಶಿಫಾರಸನ್ನು ಅಥವಾ ಅಂಥ ಒಂದು ಪ್ರಕರಣ ಬಂದಾಗ ಆ ಅಧಿಕಾರಿ ಸಾಯಬೇಕು ಇಲ್ಲವೇ ನಿವೃತ್ತನಾಗಬೇಕು, ಅಲ್ಲಿಯವರೆಗೆ ಯಾವುದೇ ಕ್ರಮವನ್ನು ತೆಗೆದುಕೊಳ್ಳತಕ್ಕಂಥ ಪ್ರವೃತ್ತಿ ಈ ಸರ್ಕಾರಗಳಲ್ಲಿ ಇದೆ. ಈ ಪ್ರವೃತ್ತಿ ತಪ್ಪಬೇಕು, ಯಾವಾಗ ತಪ್ಪುತ್ತದೆ ಅಂದರೆ ಯಾವಾಗ ಸಂಬಂಧಪಟ್ಟ ಇಲಾಖೆಯ ಮುಖ್ಯಸ್ಥ ಇಂಥ ಕಾನೂನಿಗೆ ಬೆಲೆ ಕೊಟ್ಟು ಕ್ರಮ ತೆಗೆದುಕೊಳ್ಳುವುದಿಲ್ಲವೋ ಆಗ ಅವನ ಮೇಲೆ ಕ್ರಮ ತೆಗೆದುಕೊಳ್ಳುವಂಥ ಒಂದು ಪ್ರವೃತ್ತಿ ನಮ್ಮ ಸರ್ಕಾರಗಳಿಗೆ ಇಲ್ಲ. ಈ ಒಂದು ಹೊಣೆಗಾರಿಕೆಯನ್ನು ಖಚಿತಮಾಡುವಂತ ರೀತಿಯಲ್ಲಿ ತಾವು ಕೆಲಸ ಮಾಡದೇ ಇರುವುದರಿಂದ ಇದು ದಿನೇ ದಿನೇ ಹೆಚ್ಚಾಗುತ್ತದೆ. ಸನ್ಮಾನ್ಯ ಅಧ್ಯಕ್ಷರೆ, ಇವತ್ತಿನ ದಿವಸ ಕೇವಲ 47 ಅಥವಾ 40-50 ಲಕ್ಷ ರೂಪಾಯಿಗಳ ಪ್ರಶ್ನೆಯೆಂದಲ್ಲ ಇನ್ನೂ ಒಂದು ಮುಖ್ಯವಾದ ವಿಷಯವನ್ನು ಪ್ರಸ್ತಾಪ ಮಾಡಿದ್ದೆ. ಮಾನ್ಯ ಮೊಯಿಲಿಯವರು ನಾನು ಆಮೇಲೆ ಹೇಳುತ್ತೇನೆ ಎನ್ನುವ ಮಾತನ್ನು ಹೇಳಿದ್ದರು. ಅದು ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಡೈರೆಕ್ಟರೇಟ್ ಆಫ್ ಟೆಕ್ನಿಕಲ್ ಎಜ್ಯುಕೇಷನ್ ಅಲ್ಲಿ ಇನ್ನೂ ಒಂದು ಕೆಲಸವನ್ನು ಮಾಡುತ್ತಿದ್ದಾರೆ. ಸುಮಾರು ಈ ಎಂ.ಬಿ.ಬಿ.ಎಸ್. ಮತ್ತು ಬಿ.ಇ. ಮುಂತಾದ ತಾಂತ್ರಿಕ ಮೊದಲನೆಯ ತರಗತಿಗಳಿಗೆ ಪರೀಕ್ಷೆ ಮಾಡುತ್ತಾರೆ. ಪರೀಕ್ಷೆ ಮಾಡಬೇಕಾದರೆ ಸುಮಾರು 55 ರೂಪಾಯಿಗಳನ್ನು ಸಾಮಾನ್ಯ ವರ್ಗದವರಿಂದ ಮತ್ತು ಪರಿಶಿಷ್ಟ ಜಾತಿ ಮತ್ತು ಪಂಗಡದವರಿಂದ ಕಡಿಮೆ ಹಣವನ್ನು ವಸೂಲು ಮಾಡುತ್ತಾರೆ. ಈ ರೀತಿ ಲಕ್ಷಾಂತರ ರೂಪಾಯಿಗಳನ್ನು ಪ್ರತಿವರ್ಷ ವಸೂಲು ಮಾಡುತ್ತಾರೆ. ವಸೂಲು ಮಾಡಿದ ಮೇಲೆ ಅಲ್ಲಿ ಒಂದು ಕಮಿಟಿ ಇದೆ. ಆ ಕಮಿಟಿಯ ಹೆಸರು ಕಾಮನ್ ಎಂಟರೆನ್ಸ್ ಟೆಸ್ಟ್ ಕಮಿಟಿ ಎಂದು. ಆ ಕಮಿಟಿಯ ಹೆಸರಿನಲ್ಲಿ ಈ ಹಣ ಇರುತ್ತದೆ. ಅಲ್ಲೊಬ್ಬ ಮೆಂಬರ್ಸ್ ಸೆಕ್ರೆಟರಿ ಇರುತ್ತಾರೆ. ಅವರು ಈ ಹಣವನ್ನು ವ್ಯವಹಾರ ಮಾಡಲಿಕ್ಕೆ ಸರ್ಕಾರ ಅನುಮತಿ ನೀಡಿತು. ಈ ಹಣ ಯಾವ ರೀತಿ ಖರ್ಚಾಗುತ್ತದೆಂದು ನೋಡಲಿಕ್ಕೆ ಈ ರಾಜ್ಯದಲ್ಲಿ ಯಾರಿಗಾದರೂ ಅಧಿಕಾರ ಇದೆಯಾ ನನಗೆ ಗೊತ್ತಿದೆ. ಸರ್ಕಾರದ ಅಧಿಕಾರಿ ತನ್ನ ಸರ್ಕಾರದ ವ್ಯಾಪ್ತಿಯಲ್ಲಿ ಬರಲಿ ಅಥವಾ ಬೇರೆ ಈ ರೀತಿ ಹಣ ಬಂದರೂ ಸಹ ಅದಕ್ಕೆ ಅವರು ಹೊಣೆಗಾರರಾಗಿರುತ್ತಾರೆ. ಅದು ಆಡಿಟ್ ಮಾಡಬೇಕಾದ್ದು ಅವಶ್ಯಕತೆ ಇರುತ್ತದೆ. ಅದು ಹೇಗೆ ಖರ್ಚಾಗಿದೆ ಎನ್ನುವುದನ್ನು ಏನಾದರೂ ಪರಿಶೀಲನೆ ಮಾಡಲಿಕ್ಕೆ ಸಂಬಂಧಪಟ್ಟವರು ಹೋದರೆ ನಿಮ್ಮ ಅಧಿಕಾರಿಗಳು ಇದು ನಿಮ್ಮ ಆಡಿಟ್ ವ್ಯಾಪ್ತಿಗೆ ಬರುವುದಿಲ್ಲ. ನಮ್ಮ ಹಣ ನಾವು ಹೇಗೆ ಬೇಕಾದರೂ ಖರ್ಚು ಮಾಡುತ್ತೇವೆನ್ನುವ ರೀತಿಯಲ್ಲಿ ಹೇಳಿದ್ದಾರೆ. ತಾವು ಏನು ಈ ಒಂದು ಕಾಮನ್ ಎಂಟ್ರೆನ್ಸ್ ಟೆಸ್ಟ್ ಕಮಿಟಿ ಬಗ್ಗೆ ಸರ್ಕಾರದ ಸುತ್ತೋಲೆ ಕಳುಹಿಸಿದ್ದೀರಿ. ಈ ಸುತ್ತೋಲೆ, ಈ ಹಿಂದೆ ಹಣಕಾಸಿನ ಇಲಾಖೆಯವರು ಹೊರಡಿಸಿದ್ದ ಸುತ್ತೋಲೆಗೆ ವಿರುದ್ಧವಾಗಿದೆ. ಅಲ್ಲಿ ಹೇಗೆ ಪ್ರವೃತ್ತಿ ನಡೆಯುತ್ತಿದೆ ಎಂದರೆ, ಅವರಿಗೆ ಇಷ್ಟ ಬಂದಹಾಗೆ ನಡೆಸಬಹುದು. ಹಾಗಾದರೆ ಇಂಥ ಕಾನೂನು, ಇಂಥ ನಿಯಮ ಮಾಡುವಾಗ ಹಣಕಾಸಿನ ಇಲಾಖೆಯ ಒಪ್ಪಿಗೆಯನ್ನು ಪಡೆಯುವಂತಹ, ಒಂದು ನೀತಿಯನ್ನು ಯಾವುದೇ ಸರ್ಕಾರವಾಗಲೀ ಅನುಸರಿಸಬೇಕಾದ ಅಗತ್ಯ ಇಲ್ಲವೇ? ಆ ರೀತಿ ತಪ್ಪು ಮಾಡಿದ್ದು ಕಂಡುಬಂದರೆ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳುವ ಬದಲು ಅವರಿಗೆ ರಕ್ಷಣೆ ಒದಗಿಸುವ ಕೆಲಸವನ್ನು ಈ ಸರ್ಕಾರ ಮಾಡುತ್ತಿದೆ. ಉದ್ದೇಶಪೂರ್ವಕವಾಗಿ ಸಂಬಂಧಪಟ್ಟವರು ನಿವೃತ್ತರಾಗಲಿ ಎಂಬ ದೃಷ್ಟಿಯಿಂದ ಮಾಡಿದ್ದಾರೆಂದು ನಾನು ಭಾವಿಸಿದರೆ ಇದರಲ್ಲಿ ತಪ್ಪೇನಿದೆ? ಆದುದರಿಂದ ನಾನು ಹೇಳುವ ಎಲ್ಲಾ ಪ್ರಕರಣಗಳಲ್ಲಿ ಇವತ್ತಿನ ದಿವಸ ಸರ್ಕಾರ ತನಗೆ ತಪ್ಪುಗಳ ಬಗ್ಗೆ ಮನವರಿಕೆಯಾದಾಗ ಅದನ್ನು ತಿದ್ದಲು ಹೋಗದೆ ರಕ್ಷಣೆ ಕೊಡುವ ಕೆಲಸವನ್ನು ಮಾಡುತ್ತಿದೆ ಎಂದು ಗಂಭೀರವಾಗಿ ಆರೋಪ ಮಾಡುತ್ತಿದ್ದೇನೆ. ಇದಕ್ಕೆ ಬೇಕಾದಷ್ಟು

ರುಜುವಾತುಗಳನ್ನು ಕೊಡುವುದಕ್ಕೆ ನಾನು ತಯಾರಿದ್ದೇನೆ. ಇವತ್ತಿನ ದಿವಸ ಅಷ್ಟೇ ಅಲ್ಲ, ಬಹುಶಃ ಬಸವಲಿಂಗಪ್ಪನವರು ಮಂತ್ರಿಗಳಾಗಿದ್ದರು ಎಂದು ಕಾಣುತ್ತದೆ. ತಾವು ಅಥವಾ ತಮ್ಮ ಸರ್ಕಾರ ಒಂದು ಆಜ್ಞೆಯನ್ನು ಹೋರಡಿಸಿತು, ಗಂಧದ ಕಟ್ಟಿಗೆಯನ್ನು ಹರಾಜು ಮೂಲಕ ಮಾರಾಟ ಮಾಡುತ್ತೇವೆ ಎಂದು 1917ನೇ ಇಸವಿಯಿಂದ ಇದು ನಡೆಯುತ್ತಿರಲಿಲ್ಲ. ನೀವು ಈಗ ಏತಕ್ಕೋಸ್ಕರ ಇದನ್ನು ಮಾಡಿದಿರಿ? ದೇಶದಲ್ಲಿರುವಂತಹ ಕಳ್ಳಸಾಗಾಣಿಕೆಗಾರರು ಏನಿದ್ದಾರೆ ಅವರಿಗೆ ಕಳ್ಳ ಸಾಗಾಣಿಕೆ ಮಾಡಲು ಅನುಕೂಲವಾಗಲಿ ಎಂದು ಮಾಡಿದಿರಾ? ತಾವು ಇಲ್ಲವೆಂದು ಹೇಳುತ್ತೀರೆಂದು ನನಗೆ ಗೊತ್ತಿದೆ.

ಶ್ರೀ ಬಿ. ಬಸವಲಿಂಗಪ್ಪ : ಅದು ಬಹಳ ಊಹೆ.

ಶ್ರೀ ಹೆಚ್. ಏಕಾಂತಯ್ಯ : ಇಲ್ಲವೆಂದು ಹೇಳುತ್ತೀರೆಂದು ನನಗೆ ಗೊತ್ತಿದೆ ಎಂದು ಹೇಳಿದೆ. 1917ರಿಂದ ಇವತ್ತಿನವರೆಗೆ ಬದಲಾವಣೆ ಮಾಡದೆ ಇದ್ದ ನೀತಿಯನ್ನು ಇದ್ದಕ್ಕಿದ್ದ ಹಾಗೆ ಬದಲಾವಣೆ ಮಾಡಿದರೆ ಅದು ಜನತೆಯ ಒಳಿತಿಗಾದರೆ ಅದನ್ನು ನಾನು ಸ್ವಾಗತಿಸುತ್ತೇನೆ. ಅದಕ್ಕೆ ಬದಲಾಗಿ ಜನರ ಮನಸ್ಸಿನಲ್ಲಿ ಈ ಸರ್ಕಾರಿ ಆದೇಶದಿಂದ, ಸರ್ಕಾರದ ನೀತಿ ಏನಿದೆ ಇದರಿಂದ ತಪ್ಪು ಭಾವನೆ ಮಾಡಲಿಕ್ಕೆ ಅವಕಾಶವಾಗುತ್ತದೆ. ಈ ದೇಶದಲ್ಲಿ ಕಳ್ಳಸಾಗಾಣಿಕೆ ಮಾಡುವ ಜನರಿಗೆ ಕಳ್ಳಸಾಗಾಣಿಕೆ ಮಾಡಲಿಕ್ಕೆ ಇದರಿಂದ ಅನುಕೂಲವಾಗುತ್ತದೆ. ತಾವು ಆಜ್ಞೆ ಹೋರಡುವವರೆಗೆ ಏನು ಮಾಡುತ್ತಿದ್ದಿರಿ?

ಶ್ರೀ ಬಿ. ಬಸವಲಿಂಗಪ್ಪ : ಮಾನ್ಯ ಸದಸ್ಯರು ಊಹೆ ಮೇಲೆ ಮಾತನಾಡುತ್ತಿದ್ದಾರೆ. ಅವರು ಈ ರೀತಿ ಎಂದೆಂದೂ ಮಾತನಾಡಿದ್ದು ನಾನು ನೋಡಿಲ್ಲ. ನಾವು ತೀರ್ಮಾನ ತೆಗೆದುಕೊಂಡಿದ್ದು ನಿಜ. ಬಜೆಟ್ ಭಾಷಣದಲ್ಲಿ 3500 ಎಂದು ಬರೆದಿದ್ದಾರೆ, ಅದು ಸುಮಾರು 4500 ಇದೆ ಅದು ಕಳ್ಳತನದ ಮಾಲು, ಶೇಖರಣೆಯಾಗಿದೆ. ಅದನ್ನು ಹಾಗೇ ಇಟ್ಟರೆ ಹಾಳಾಗಿ ಹೋಗುತ್ತದೆ. ಅದನ್ನು ನಾವು ಪಬ್ಲಿಕ್ ಆಕ್ಷನ್ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಇದುವರೆಗೆ ಮಾಡಿಲ್ಲ. ವರ್ಲ್ಡ್ ಟೆಂಡರ್ಸ್ ಕರೆಯಬೇಕೆಂದು ನಮ್ಮ ಸ್ನೇಹಿತರಾದ ಅರಣ್ಯ ಮಂತ್ರಿಗಳು ಹೇಳಿದ್ದಾರೆ. ಅದು ಈ ಹಂತದಲ್ಲಿದೆ. ಉಳಿದದ್ದು ಏತಕ್ಕೆ ಊಹೆ ಮಾಡುತ್ತೀರಿ? ಅದನ್ನು ತೆಗೆದುಕೊಂಡು ನಾವೇನು ಮಾಡಬೇಕು?

ಶ್ರೀ ಹೆಚ್ ಏಕಾಂತಯ್ಯ : ಸರ್ಕಾರ ಆದೇಶ ಮಾಡಿಲ್ಲವೇ? ನಾನು ಅದರ ಕಾಪಿ ಕೊಡಲೇ? ಇವತ್ತಿನ ದಿವಸ ತಮ್ಮ ನೀತಿ ಬದಲಾಗಿದ್ದು....

ಶ್ರೀ ಬಿ. ಬಸವಲಿಂಗಪ್ಪ : ಮಂತ್ರಿಮಂಡಲದ ತೀರ್ಮಾನ ಆದನಂತರ ಈ ಸರ್ಕಾರದ ಹುಕುಂ. ಮಾಡಿದ್ದುದು ನಿಜ. ಅದರಿಂದ ಏನು ತೊಂದರೆ ಇದೆ? ನಿಮ್ಮ ನಿಲುವು ಏನು? ಊಹೆ ಏನು?

ಶ್ರೀ ಹೆಚ್. ಏಕಾಂತಯ್ಯ : ನಾನು ವೈಯಕ್ತಿಕವಾಗಿ ಸಂಬಂಧಪಟ್ಟ ಮಂತ್ರಿಗಳ ಮೇಲೆ ಆರೋಪ ಮಾಡುತ್ತಿಲ್ಲ. ನನ್ನ ಟೀಕೆ ಏನೆಂದರೆ, ಸರ್ಕಾರದ ಈ ನೀತಿಯನ್ನು ಬದಲು ಮಾಡಿರುವುದರಿಂದ ಇದು ಕಳ್ಳಸಾಗಾಣಿಕೆದಾರರಿಗೆ ಅನುಕೂಲವಾಗುತ್ತಿದೆ. ಹೇಗಾಗುತ್ತಿದೆ ಎಂದು ಹೇಳುತ್ತೇನೆ. ಇವತ್ತಿನ ದಿವಸ ಪರ್ಮಿಟ್ ಕೊಡುತ್ತೀರಿ. ಒಂದು ಪರ್ಮಿಟ್ ಕೊಟ್ಟರೆ ಎಷ್ಟು ಸಾರಿ ಹೊಡೆಯಬಹುದೆಂದು ತಮಗೆ ಗೊತ್ತಿದೆ.

ಶ್ರೀ ಬಿ. ಬಸವಲಿಂಗಪ್ಪ : ಅದರಿಂದ ಪ್ರಾರಂಭವಾಗಿಲ್ಲ.

ಶ್ರೀ ಹೆಚ್. ಏಕಾಂತಯ್ಯ : ಪ್ರಾರಂಭವಾಗುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರೋ ಇಲ್ಲವೋ? ಈ ಕಾನೂನು ಪ್ರಕಾರ ಬಹಿರಂಗವಾಗಿ ಹರಾಜು ಮಾಡಿದರೆ, ಹರಾಜು ಮಾಡಿದ ಗಂಧದ ಕಟ್ಟಿಗೆಯನ್ನು ಪರ್ಮಿಟ್ ಮೂಲಕ ಕೇರಳಕ್ಕೆ ಸಾಗಿಸುವುದಕ್ಕೆ

ಪರ್ಮಿಟ್ ಕೊಡುತ್ತೀರೋ ಇಲ್ಲವೋ? ಹಾಗೆ ಕೊಟ್ಟಂಥ ಸಂದರ್ಭದಲ್ಲಿ ಒಂದು ಪರ್ಮಿಟ್ ತೆಗೆದುಕೊಂಡು ಹೋಗುತ್ತಾರೆ, ಮತ್ತೆ ಮಂತ್ರ ಮಾಡಿದರೆ ಅದೇ ಪರ್ಮಿಟ್ ವಾಪಸ್ಸು ಬರುತ್ತದೆ ಒಂದು ಪರ್ಮಿಟ್ ಆಧಾರದ ಮೇಲೆ.....

ಶ್ರೀ ಕೆ.ಹಚ್. ರಂಗನಾಥ್ : ತಮಗೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ ಎರಡು ಗಂಧದ ಎಣ್ಣೆ ತಯಾರುಮಾಡತಕ್ಕಂಥ ಕಾರ್ಖಾನೆಗಳು ಇದ್ದವು. ಅವು ಮುಚ್ಚಿ ಎಷ್ಟು ವರ್ಷವಾಗಿದೆ? ಅವು ಕೆಲಸ ಮಾಡುತ್ತಿವೆಯೇ? ಅದನ್ನು ಸರ್ಕಾರ ಸೋಫ್ ಫ್ಯಾಕ್ಟರಿಗೆ ಕೊಟ್ಟು ಆಗಿದೆ.

ಸರ್ಕಾರದ ಫ್ಯಾಕ್ಟರಿಗಳನ್ನು ತೆಗೆದುಕೊಂಡು ಹೋಗಿ ಸೋಪ್ ಫ್ಯಾಕ್ಟರಿಗೆ ಕೊಟ್ಟಿದ್ದೀರಿ ಆದರೆ ಅದು ಮತ್ತೆ ನಷ್ಟದಲ್ಲಿದೆ. ಈಗ ಮಾನ್ಯ ಗ್ರಾಮೀಣಾಭಿವೃದ್ಧಿ ಮಂತ್ರಿಗಳು ಹೇಳಿದಹಾಗೆ, ಸುಮಾರು 4 ಸಾವಿರ ಟನ್ನೂ ಹೆಚ್ಚಾಗಿ ಗಂಧದ ಮರ ಇದೆ. ಅದನ್ನು ಹಾಗೇ ಇಟ್ಟುಕೊಂಡಿರುತ್ತೀರಾ? ನೀತಿ ಬದಲಾವಣೆ ಮಾಡಿದ್ದು ಸರಿಯೋ ತಪ್ಪೋ ವಿಚಾರ ಮಾಡಿ. ಇವತ್ತು ಹಾಗೇ ಬಿದ್ದಿದೆ. ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಕಮಿಟಿಯವರು ಏನಿದ್ದಾರೆ ಅವರನ್ನು ಈ ನಿಮಿಷದಲ್ಲಿ ಶಿವಮೊಗ್ಗಕ್ಕೆ ಕಳುಹಿಸಿ. ಅಲ್ಲಿ ಗೋಡೌನ್ ಯಾವ ಮಟ್ಟದಲ್ಲಿದೆ, ಸ್ಟಾಕ್ ಹೇಗಿದೆ, ಹೇಗೆ ಹಾಳಾಗುತ್ತಿದೆ, ಅದನ್ನು ವಿಚಾರ ಮಾಡಬೇಕಾಗುತ್ತದೆ. ನೀತಿ ಬದಲಾವಣೆ ಮಾಡುವಾಗ ಮಂತ್ರಿಗಳು ಏನು ವಿಚಾರ ಮಾಡಿದ್ದಾರೋ ಗೊತ್ತಿಲ್ಲ. ಅದನ್ನು ಹಾಗೇ ಉಳಿಸಿಕೊಂಡರೆ ಸ್ಮಗ್ಲರ್ಸ್‌ಗೆ ಅನುಕೂಲವಾಗುತ್ತದೆ ಎಂದರೆ ಅದನ್ನು ಉಪಯೋಗ ಮಾಡಿಕೊಳ್ಳುವುದು ಹೇಗೆ?

(ಮಾನ್ಯ ಅಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ಶ್ರೀ ಡಿ.ಬಿ. ಚಂದ್ರೇಗೌಡ : ಇನ್ನೂ ಅದು ಪುಸ್ತಕದಲ್ಲಿದೆಯೋ ಅಥವಾ ಸ್ಟಾಕ್ ಲೆಕ್ಕ ಸರಿಯಾಗಿದೆಯೋ ಗೊತ್ತಿಲ್ಲ.

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ರಂಗನಾಥ್ ಅವರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಕೆ.ಎಸ್. ಅಂಡ್ ಡಿ.ಎಲ್. ಈ ಗಂಧದ ಕಟ್ಟಿಗೆಯನ್ನು ಉಪಯೋಗಿಸಿಕೊಳ್ಳುವ ಸ್ಥಿತಿಯಲ್ಲಿಲ್ಲ.

ಶ್ರೀ ಕೆ.ಎಚ್. ರಂಗನಾಥ್ : ಸೋಫ್ಸ್ ಅಂಡ್ ಡಿಟರ್ಜೆಂಟ್ಸ್‌ನವರು ಏನಿದ್ದಾರೆ ಅವರು ಸೋಪ್ ಮಾಡುವುದಕ್ಕೆ ಸಾಲ ಕೊಟ್ಟಿದ್ದನ್ನು ವಾಪಸ್ ಕೊಡುತ್ತಿಲ್ಲ.

ಶ್ರೀ ಹೆಚ್. ಏಕಾಂತಯ್ಯ : ಸಂಬಂಧಪಟ್ಟ ಕಾರ್ಖಾನೆಗಲು ನಡೆಯುತ್ತಿಲ್ಲ ಅಂದರೆ ಅದನ್ನು ಅವರಿಗೆ ಕೊಡಿ ಎಂದು ನಾನು ಹೇಳುತ್ತಿಲ್ಲ. ಅದಕ್ಕೆ ಬದಲಾಗಿ ಫಾರೆಸ್ಟ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಮುಖಾಂತರ ಏತಕ್ಕೋಸ್ಕರ ವಿದೇಶಕ್ಕೆ ರವಾನೆ ಮಾಡಬಾರದು ಸ್ವಾಮಿ? ಯೋಚನೆ ಮಾಡುವುದಕ್ಕಿಂತ ಮೊದಲು ಇವೊತ್ತು ತಾವು ಏನು ಹೇಳುತ್ತೀರಿ.....

ಶ್ರೀ ಕೆ.ಹೆಚ್. ರಂಗನಾಥ್ : ನೀವು ಪಾಲಿಸಿ ಪ್ರಶ್ನೆ ಮಾಡುತ್ತಿದ್ದೀರಿ. ಅದಕ್ಕೂ ಇದಕ್ಕೂ ಸಂಬಂಧ ಕಲ್ಪಿಸಬೇಡಿ.

ಶ್ರೀ ಎಚ್. ಏಕಾಂತಯ್ಯ : ನಾನು ಹೇಳಿದ್ದುದು ಈ ನೀತಿಯನ್ನು ಅನುಸರಿಸುವುದರಿಂದ ಕಳ್ಳಸಾಗಣೆದಾರರಿಗೆ ಲಾಭ ಮಾಡುವುದಕ್ಕೆ ಅವಕಾಶವಾಗುತ್ತದೆ ಎಂಬ ಸಂಶಯ ಬರುತ್ತದೆ. I never attributed motives to the Hon'ble Minister. ಸರ್ಕಾರದ ನೀತಿ ಏನಿದೆ ಆ ನೀತಿ ಬದಲಾವಣೆ ಮಾಡಿದ್ದರಿಂದ ದೇಶದಲ್ಲಿರುವ ನಾಲ್ಕು ಸಾವಿರ ಟನ್ ಗಂಧದ ಕಟ್ಟಿಗೆ ಏನಿದೆ....

ಶ್ರೀ ಬಿ. ಬಸವಲಿಂಗಪ್ಪ: ಒಂದು ವಿಚಾರ ಸ್ಪಷ್ಟವಾಗಿ ಹೇಳುತ್ತೇನೆ. 4500 ಟನ್ ಗಂಧದ ಬುಡಗಳು ಇವೆಯಲ್ಲ ಅದು ಕಳ್ಳತನದಿಂದ ಸಾಗಾಣಿಕೆ ಮಾಡುತ್ತಿದ್ದುದನ್ನು

ಹಿಡಿದು ಸ್ಟಾಕ್ ಮಾಡಿರುವುದು ಈ ನೀತಿ ಅನುಸರಿಸುತ್ತಾ ಹೋದರೆ ಅವರು ಕಳ್ಳತನ ಮಾಡುವುದನ್ನು ಬಿಡುತ್ತಾರೆ ಎಂದು ಹೇಗೆ ಹೇಳುತ್ತೀರಿ? ಕಾರ್ಪೊರೇಷನ್ ಮೂಲಕ ಮಾರಬೇಕು ಎಂದು ಯೋಚನೆ ಮಾಡಿದ್ದೇವೆ. ವರ್ಲ್ಡ್ ಟೆಂಡರ್ಸ್ ಕರೆಯಬೇಕು ಎಂದು ಮಾಡಿದ್ದೇವೆ. ಬಹಿರಂಗವಾಗಿ ಹರಾಜು ಮಾಡಬೇಕು ಎಂದು ಮಾಡಿದ್ದೇವೆ. ಆದರೆ ಇವತ್ತಿನವರೆಗೂ ಏನೂ ಮಾಡಿಲ್ಲ. ಸ್ಟಾಕ್ ಹಾಗೆಯೇ ಕೊಳೆಯುತ್ತಾ ಬಿದ್ದಿದೆ. ಅದನ್ನೆಲ್ಲಾ ಮಾರಿದರೆ 80 ಕೋಟಿ ರೂಪಾಯಿ ಆಗುತ್ತದೆ. 80 ಕೋಟಿ ರೂಪಾಯಿನ ಮಾಲು ಹಾಗೇ ಬಿದ್ದಿದೆ. ಅದು ಸುಟ್ಟರೆ ಹಾಳಾದರೆ ಏನು ಗತಿ?

ಶ್ರೀ ಹೆಚ್. ಏಕಾಂತಯ್ಯ : ಸನ್ಮಾನ್ಯ ಅಧ್ಯಕ್ಷರೆ, ಇಲ್ಲಿ ಪ್ರಶ್ನೆ ಏನು ಬಂತು ಎಂದರೆ ಕರ್ನಾಟಕ ರಾಜ್ಯದಲ್ಲಿ ಸುಮಾರು 4 ಸಾವಿರ ಟನ್ ಗಂಧದ ಕಟ್ಟಿಗೆ ಇದೆ. ಇದನ್ನು 1917ನೇ ಇಸವಿಯಿಂದಲೂ ಬಹಿರಂಗವಾಗಿ ಹರಾಜು ಹಾಕುವಂಥ ನೀತಿಯನ್ನು ಯಾವುದೇ ಸರ್ಕಾರ ಇಲ್ಲಿಯವರೆಗೂ ಮಾಡಿರಲಿಲ್ಲ. ಅದಕ್ಕೆ ಬದಲಾಗಿ ಗಂಧದ ಎಣ್ಣೆ ಕಾರ್ಖಾನೆಗಳಿಗೆ ಇದನ್ನು ಕೊಡುವುದು, ವಿದೇಶಕ್ಕೆ ರಫ್ತು ಮಾಡುವುದು. ಈ ಕೆಲಸವನ್ನು ಮಾಡುತ್ತಿದ್ದರು. ಇತ್ತೀಚೆಗೆ ಮೂರನೇ ನವೆಂಬರ್ 1990ರಲ್ಲಿ ಸರ್ಕಾರ ಒಂದು ಆದೇಶ ಹೊರಡಿಸಿದೆ. ಅದರ ಪ್ರಕಾರ 500 ಟನ್ ಗಂಧದ ಕಟ್ಟಿಗೆಯನ್ನು ಹರಾಜು ಹಾಕಬೇಕು ಎಂದು ತೀರ್ಮಾನ ಮಾಡಿತು. ನನ್ನ ಆರೋಪ ಏನೆಂದರೆ, ಸರ್ಕಾರ ಏನು ಈ ನೀತಿಯನ್ನು ಅನುಸರಿಸುತ್ತಿದೆ ಅದನ್ನು ಅನುಸರಿಸಿದರೆ ಈ ಕಳ್ಳಸಾಗಾಣಿಕೆದಾರರಿಗೆ ಸಹಾಯವಾಗುತ್ತದೆ ಎಂದು ಹೇಳಿದೆ. ಒಂದು ಪಕ್ಷ ಹರಾಜಿನಲ್ಲಿ 500 ಟನ್ ತೆಗೆದುಕೊಳ್ಳುತ್ತೇನೆ. 50 ಟನ್ ಅನ್ನು ಕೇರಳಕ್ಕೆ ತೆಗೆದುಕೊಂಡು ಹೋಗುವುದಕ್ಕೆ ಒಂದು ಪರ್ಮಿಟ್ ಕೊಡುತ್ತಾರೆ. ಆ ಒಂದು ಪರ್ಮಿಟ್ಟಿನ ಆಧಾರದ ಮೇಲೆ 500 ಟನ್ ಸಾಗಿಸುತ್ತೇನೆ. ಅಲ್ಲದೆ ಬೇರೆ ಕಳ್ಳ ಮಾಲನ್ನು ಶೇಖರಣೆ ಮಾಡಿ, ಅದನ್ನೂ ಸಹ ಹರಾಜಿನಲ್ಲಿ ಕೊಂಡಿದ್ದು ಎಂಬ ನೆಪದಿಂದ ಈ ದಂಧೆಯನ್ನು ಅವ್ಯಾಹತವಾಗಿ ಮಾಡುವಂಥ ಕೆಲಸಕ್ಕೆ ಈ ಸರ್ಕಾರದ ನೀತಿ ಸಹಾಯವಾಗುತ್ತದೆ. ಆದ್ದರಿಂದ ಸರ್ಕಾರದ ಈ ನೀತಿಯನ್ನು ಬದಲಾಯಿಸಬೇಕು. ಅದಕ್ಕೆ ಬದಲಾಗಿ ಕರ್ನಾಟಕ ಫಾರೆಸ್ಟ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಏನಿದೆ ಅಥವಾ ಬೇರೆ ಏಜೆನ್ಸಿ ಮುಖಾಂತರ ಟೆಂಡರ್ ಕರೆದು ಇದನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಹೇಳುತ್ತೇನೆ.

ಸನ್ಮಾನ್ಯ ಅಧ್ಯಕ್ಷರೇ, ಇದರಲ್ಲಿ ಸರ್ಕಾರ ಕಳ್ಳಸಾಗಾಣಿಕೆದಾರರಿಗೆ ನೆರವಾಗುವ ನೀತಿಯನ್ನು ಅನುಸರಿಸುತ್ತಿದೆ ಎಂದು ಹೇಳಬೇಕಾಗುತ್ತದೆ. ಇವತ್ತು ಮಾನ್ಯ ಮಂತ್ರಿಗಳು 500 ಟನ್ ಇನ್ನೂ ಹರಾಜು ಹಾಕಿಲ್ಲ ಎಂದು ಹೇಳುತ್ತಿದ್ದಾರೆ. ಅವರಿಗೆ ಸದ್ಬುದ್ಧಿ ಬಂದಿದೆ. 500 ಟನ್ ಹರಾಜು ಮುಖಾಂತರ ಮಾರಬೇಕೆಂಬ ಆದೇಶವನ್ನು ಸರ್ಕಾರ ಮಾಡಿದ್ದರೂ ಇವತ್ತಿನವರೆಗೂ ಹರಾಜು ಮಾಡಿಲ್ಲ ಎಂದರೆ ಅವರಿಗೆ ಖಂಡಿತವಾಗಿಯೂ ಸದ್ಬುದ್ಧಿ ಬಂದಿದೆ ಎಂದು ಭಾವಿಸುತ್ತೇನೆ. ಇನ್ನು ಮುಂದಾದರೂ ಸಹ ಜನರ ಕಲ್ಯಾಣಕ್ಕೆ ವಿರುದ್ಧವಾದಂಥ ರೀತಿಯಲ್ಲಿ ಸರ್ಕಾರಿ ಆದೇಶಗಳನ್ನು ಹೊರಡಿಸದೆ ಇದನ್ನು ತಾವು ಫಾರೆಸ್ಟ್ ಇಂಡಸ್ಟ್ರೀಸ್ ಕಾರ್ಪೊರೇಷನ್ ಮುಖಾಂತರ ಗ್ಲೋಬಲ್ ಟೆಂಡರ್ ಮುಖಾಂತರ ಪರದೇಶಕ್ಕೆ ಕಳುಹಿಸಿ ಹಣವನ್ನು ಪಡೆಯುವುದಕ್ಕೆ ತಾವು ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಎ.ಎಂ. ಹಿಂಡಸ್‌ಗೇರಿ : ಮಾನ್ಯ ಸದಸ್ಯರು 1917ನೇ ಇಸವಿಯಿಂದ ಹರಾಜು ಮಾಡಿಲ್ಲ ಎಂದು ಹೇಳುತ್ತಿದ್ದಾರೆ. ಒಂದು ವೇಳೆ ಈ ಮರ ಸುಟ್ಟುಹೋದರೆ, ಹಾಳಾದರೆ ಏನೂ ಸಿಕ್ಕುವುದಿಲ್ಲ. ಆದರೆ ಇವರ ಕಾಲದಲ್ಲಿ ಸಾವಿರಾರು ಎಕರೆ ಜಮೀನನ್ನು, ಶ್ರೀಮಂತರನ್ನು ಹೊರಗಿನಿಂದ ಕರೆಸಿ ಅವರಿಗೆ ಕೊಡುವುದಕ್ಕೆ ತಯಾರು

ಇದ್ದರು. ಬಡವರಿಗೆ ಕೊಡಲು ತಯಾರು ಇರಲಿಲ್ಲ. ಈಗ ಗಂಥದ ಸಲುವಾಗಿ ಎಷ್ಟು ಹೇಳುತ್ತಿದ್ದಾರೆ ನೋಡಿ.

ಶ್ರೀ ಹೆಚ್. ಏಕಾಂತಯ್ಯ : ಅವರಿಗೆ ವಂದನೆಗಳು. ಅವರ ಸಮರ್ಥನೆ ಏನೆಂದರೆ, ನಾವು ಸಾವಿರಾರು ಎಕರೆ ಭೂಮಿಯನ್ನು ಇಲ್ಲಿ ಲೂಟಿ ಮಾಡಿ, ನೂರಾರೂ ಕೋಟಿ ಮಾಡಿಕೊಂಡಿದ್ದೇವೆಯಾದ್ದರಿಂದ ಅವರೂ ಕೂಡ ಸಾವಿರಾರು ಕೋಟಿ ಮಾಡಿ ಕೊಳ್ಳುವುದಕ್ಕೆ ನಮ್ಮಗಳ ಅಭ್ಯಂತರ ಇರಬಾರದು ಎನ್ನುವ ಮಾತನ್ನು ಹೇಳುತ್ತಿದ್ದಾರೆ.

ಶ್ರೀ ಎ.ಎಂ. ಹಿಂಡಸ್‌ಗೇರಿ : ಮಾನ್ಯ ಅಧ್ಯಕ್ಷರೇ, ಜಮೀನು ಹಾಳಾಗುವುದಿಲ್ಲ. ಅದರ ವ್ಯಾಲ್ಯೂ ಇದ್ದೇ ಇರುತ್ತದೆ. ಆದರೆ ಕಟ್ಟಿಗೆಯನ್ನು ಹಾಗೇ ಇಡುವುದಕ್ಕೆ ಆಗುವುದಿಲ್ಲ. ಹೀಗಾಗೇ ತಾವು ಈಗ ಆ ಕಡೆ ಕುಳಿತಿದ್ದೀರಿ.

ಶ್ರೀ ಹೆಚ್. ಏಕಾಂತಯ್ಯ : ನಾವು ಅಧಿಕಾರದಲ್ಲಿ ಇದ್ದಾಗ ಲೋಪ ಮಾಡಿದ್ದರೆ, ಸಂಬಂಧಪಟ್ಟವರ ಮೇಲೆ ತಾವು ಕ್ರಮ ತೆಗೆದುಕೊಳ್ಳುವುದಕ್ಕೆ ಅಧಿಕಾರ ಇದೆ. ತಾವು ಹೀಗೆ ಪದೇ ಪದೇ ಮಾತನಾಡುವ ಬದಲು, ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಿ, ವಿಚಾರಣೆ ಮಾಡಿ, ಜೈಲಿಗೆ ಹಾಕಿ. ಆದರೆ ಆ ನೆಪದಲ್ಲಿ ಲೂಟಿ ಮಾಡುವ ಕೊಳ್ಳೆ ಹೊಡೆಯುವ ಪ್ರವೃತ್ತಿ ಇದ್ದರೆ ಅದಕ್ಕೆ ವಿರೋಧ ಮಾಡುವ ಶಕ್ತಿ ತಮಗೂ ಬೇಕಲ್ಲವೇ?? ಇದನ್ನು ತಾವು ಒಪ್ಪಿಕೊಳ್ಳುತ್ತೀರಾ? ಈ ಕಡೆ ಇರುವ ಜನ ಯಾರಾದರೂ ಇಂತಹ ಆಕ್ರಮದಲ್ಲಿ ತೊಡಗಿ ಏನಾದರೂ ಬಂಡವಾಳ ಮಾಡಿಕೊಂಡಿದ್ದರೆ, ಹಣ ಮಾಡಿಕೊಂಡಿದ್ದರೆ ಖಂಡಿತವಾಗಿ ತಾವು ಕ್ರಮ ತೆಗೆದುಕೊಳ್ಳಿ ಸ್ವಾಮಿ. ಅಧ್ಯಕ್ಷರೇ, ಒಂದು ಮಾತನ್ನು ಹೇಳುತ್ತೇನೆ. ನಿಜ, ಮಂತ್ರಿಗಳಾದವರ ಮೇಲೆ ಆರೋಪ ಬರುತ್ತದೆ. ಮಂತ್ರಿಗಳು ಎಂದಮೇಲೆ ಅವರ ಮನೆ ಮುಂದೆ ಜನಸಾಮಾನ್ಯರು ಅನೇಕ ಕಾರಣಕ್ಕೋಸ್ಕರ ಬರಬಹುದು. ಮಂತ್ರಿಗಳಿಗೆ ಗೊತ್ತಿದ್ದೋ ಗೊತ್ತಿಲ್ಲದೆಯೋ ಅನೇಕ ವಿಧವಾದ ಅಕ್ರಮಗಳು, ಭ್ರಷ್ಟಾಚಾರಗಳು ಈ ವ್ಯವಸ್ಥೆಯಲ್ಲಿ ನಡೆಯುವುದು ಸ್ವಾಭಾವಿಕ. ಆದರೆ ಇವತ್ತು ಒಂದು ಹೊಸ ಪ್ರವೃತ್ತಿ ಬಂದಿದೆ. ಇವತ್ತು ನಾವು ಇವತ್ತು ಯಾವುದೇ ಮಂತ್ರಿಗಳ ಮನೆ ಮುಂದೆ ಹೋದರೂ ಜನರು ಇರುವುದಿಲ್ಲ ಎಂದು ಹೇಳುವುದಿಲ್ಲ, ಅವರು ಇರುತ್ತಾರೆ. ತಮ್ಮ ಸಂಕಷ್ಟ ತೋಡಿಕೊಳ್ಳಲು ಬರುತ್ತಾರೆ. ಆದರೆ ಈ ಮಂತ್ರಿಗಳ ಮನೆ ಮುಂದೆ ಏನು ಜನ ಇದ್ದಾರೆ, ಆ ಜನಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಇವರ ಆಪ್ತ ಸಹಾಯಕರ ಮನೆ ಮುಂದೆ ಜನ ಕ್ಯೂ ನಿಂತಿದ್ದಾರೆ. ಏಕೆ ಈ ರೀತಿ ಜನ ಅಲ್ಲಿ ನಿಲ್ಲುತ್ತಾರೆ ಎಂದು ಇವರು ವಿಚಾರಣೆ ಮಾಡಬೇಕು. ನಾನು ಯಾರ ಹೆಸರನ್ನೂ ಹೇಳುವುದಿಲ್ಲ. ದೇಶದಲ್ಲಿ ಬೀದಿಬೀದಿಯಲ್ಲಿ ಇವತ್ತಿನದಿವಸ ಇದು ನಡೆಯುತ್ತಿದೆ. ಈ ಒಂದು ಸಾಮಾಜಿಕ ವ್ಯವಸ್ಥೆಯಲ್ಲಿ ಯಾವುದೇ ಇಂತಹ ಲೋಪದೋಷ ಇಲ್ಲದ, ಭ್ರಷ್ಟಾಚಾರ ಇಲ್ಲದ ದಕ್ಷತೆಯಿಂದ ಕೂಡಿದ ಆಡಳಿತ ವ್ಯವಸ್ಥೆಯನ್ನು ಕೊಡುವುದಕ್ಕೆ ಸಾಧ್ಯವಿಲ್ಲದೇ ಇರಬಹುದು. ಇವತ್ತಿನದಿವಸ ನಾವು ಏನು ಮಾಡಬೇಕು? ಅನೇಕ ಸಂದರ್ಭಗಳಲ್ಲಿ ನಾನು ಭ್ರಷ್ಟಾಚಾರ ಇದೆ ಎಂದು ಒಪ್ಪಿಕೊಳ್ಳುತ್ತೇವೆ. ಹಿಂದೆ ಕೂಡಾ ಇತ್ತು. ನಮ್ಮ ಅಧಿಕಾರಾವಧಿಯಲ್ಲಿ ಭ್ರಷ್ಟಾಚಾರ ಇರಲಿಲ್ಲ ಎಂದು ನಾನು ಹೇಳುವುದಿಲ್ಲ. ಭ್ರಷ್ಟಾಚಾರ ಇತ್ತು, ಅದು ಗೌಪ್ಯವಾಗಿತ್ತು. ಯಾರೇ ತೆಗೆದುಕೊಳ್ಳುವುದಿದ್ದರೂ ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳಿ. ಅಂತಹ ಅಕ್ರಮ ಆಸ್ತಿಯನ್ನು ಸಂಪಾದನೆ ಮಾಡಿರುವವರ ಮೇಲೆ ತಾವು ಕ್ರಮ ತೆಗೆದುಕೊಳ್ಳಿ. ಆದರೆ ತಾವು ಏನು ಮಾಡುತ್ತಿದ್ದೀರಿ? ಹಾದರ ಮಾಡಿದರೆ ಬೀದಿಯಲ್ಲಿ ಮಾಡಬಾರದು. ಇವರ ಹಾದರ ಬೀದಿಯಲ್ಲಿ ನಡೆಯುತ್ತಿದೆ.

ಶ್ರೀ ಎಂ.ಎಸ್. ಪಾಟೀಲ್ : ಅವರು ಹೇಳಿದ ಪದ ಅನ್‌ಪಾರ್ಲಿಮೆಂಟರಿ ಆಗುತ್ತದೆ. ಅದನ್ನು ತೆಗೆದುಹಾಕಬೇಕು.

ಶ್ರೀ ಹೆಚ್. ಏಕಾಂತಯ್ಯ : ಅನ್‌ಪಾರ್ಲಿಮೆಂಟರಿಯಾದರೆ ಅಧ್ಯಕ್ಷರು ಹೇಳಲಿ. ಅವರು ತೆಗೆದುಹಾಕಿದರೆ ನನ್ನದು ತಕರಾರಿಲ್ಲ.

ಶ್ರೀ ಎಂ.ಎಸ್. ಪಾಟೀಲ್ : ಇದು ಅನ್‌ಪಾರ್ಲಿಮೆಂಟರಿ ಆಗುತ್ತದೆ.

(ಗೊಂದಲ)

ಅಧ್ಯಕ್ಷರು : ಅವರು ವಾಪಸ್ ತೆಗೆದುಕೊಂಡಿದ್ದಾರೆ.

ಶ್ರೀ ಎಂ.ಎಸ್. ಪಾಟೀಲ್ : ಅದನ್ನು ಕಡತದಿಂದ ತೆಗೆದುಹಾಕಿಸಬೇಕು.

ಶ್ರೀ ಹೆಚ್. ಏಕಾಂತಯ್ಯ : ವಾಪಸ್ಸು ತೆಗೆದುಹಾಕಿದರೆ ನನ್ನದು ತಕರಾರು ಇಲ್ಲ.

ಶ್ರೀ ಎಂ.ಎಸ್. ಪಾಟೀಲ್ : ಅವರು ಹಳ್ಳಿ ಜನ ಮಾತನಾಡಿದಹಾಗೆ ಮಾತನಾಡುತ್ತಾರೆ.

ಶ್ರೀ ಹೆಚ್. ಏಕಾಂತಯ್ಯ : ಹಿಂದೆ ಭ್ರಷ್ಟಾಚಾರ ಇರಲಿಲ್ಲವೆಂಬ ಮಾತನ್ನು ನಾನು ಹೇಳುತ್ತಿಲ್ಲ.

ಅಧ್ಯಕ್ಷರು : ನೀವು ಏನು ಭಾವನೆಯನ್ನು ವ್ಯಕ್ತ ಮಾಡಿದ್ದೀರಿ ಅದನ್ನು ಕೊಂಚ......

ಶ್ರೀ ಹೆಚ್. ಏಕಾಂತಯ್ಯ : ಮಾನ್ಯ ಅಧ್ಯಕ್ಷರೆ, ಇದಕ್ಕಿಂತ ಒಳ್ಳೆಯ ಶಬ್ದ ಇವರ ಬಗ್ಗೆ ಹೇಳುವುದಕ್ಕೆ ಸಾಧ್ಯವಿಲ್ಲ. ಅದು ನನ್ನ ಡಿಫಿಕಲ್ಟಿ. ನಮ್ಮನ್ನು ಇವರು ಭ್ರಷ್ಟಾಚಾರಿಗಳೆಂದು, ಕೋಟ್ಯಾಂತರ ರೂಪಾಯಿಗಳನ್ನು ನೆಲವನ್ನು ಮಾರಿ ತೆಗೆದುಕೊಂಡರೆಂದು ಹೇಳುತ್ತಾರೆ. ಇಂತಹ ಆರೋಪ ನಮ್ಮ ಮೇಲೆ ಇದ್ದರೆ ಕ್ರಮ ತೆಗೆದುಕೊಳ್ಳಿ. ಇವತ್ತಿನ ದಿವಸ ತಾವು ಬೀದಿಯಲ್ಲಿ ಹಾದರ ಮಾಡುತ್ತಿದ್ದೀರಿ. ಇದು ಜನರಿಗೆ ಅಸಹ್ಯವಾಗಿದೆ. ಈ ಅಸಹ್ಯದಿಂದ ಜನರು ನಿಮ್ಮ ಮೇಲೆ ಕ್ರಾಂತಿ ಏಳುತ್ತಾರೆ. ಮಾನ್ಯ ಮುಖ್ಯ ಮಂತ್ರಿಗಳು ಅಂಬೇಡ್ಕರ್‌ರವರು ಹೇಳಿದ್ದನ್ನು ಇಲ್ಲಿ ಹೇಳಿದರು. ಈ ದೇಶದಲ್ಲಿ ಯಾರು ಶೋಷಣೆಯಲ್ಲಿದ್ದಾರೆ ಅವರಿಗೆ ಬೇಕಾದಂತಹ ಕಾರ್ಯಕ್ರಮವನ್ನು ರೂಪಿಸಿ ಅದನ್ನು ಜಾರಿಗೆ ಮಾಡದಿದ್ದರೆ ಅವರು ಈ ದೇಶದ ವ್ಯವಸ್ಥೆಯ ಮೇಲೆ ತಿರುಗಿ ಬೀಳುತ್ತಾರೆ ಎಂದು ಹೇಳಿದ್ದಾರೆ. ಇವತ್ತಿನ ದಿವಸ ಆ ಮಾತು ಅವರಿಗೆ ಹೆಚ್ಚು ಹೆಚ್ಚು ಅನ್ವಯವಾಗುತ್ತದೆ ಎಂದು ಹೇಳಬಯಸುತ್ತೇನೆ. ನಿಜವಾಗಲೂ ಪರಿಮಾಮಕಾರಿಯಾಗಿ ಜನರ ಸಂಕಷ್ಟಗಳನ್ನು ನಿವಾರಣೆ ಮಾಡುವ ಉದ್ದೇಶದಿಂದ ಉತ್ತಮವಾದಂತಹ ಆಡಳಿತನ್ನು ಕೊಡುವ ದೃಷ್ಠಿಯಿಂದ ಕೆಲಸ ಮಾಡದಿದ್ದರೆ ಈ ದೇಶದ ಜನ ತಮ್ಮ ಮೇಲೆ ಕ್ರಾಂತಿ ಏಳುತ್ತಾರೆಯೇ ಹೊರತು ನಮ್ಮ ಮೇಲೆ ಅಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಸಂದರ್ಭದಲ್ಲಿ ಕೆಲವು ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಲಿಕ್ಕೆ ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ಇನ್ನೂ ಹೆಚ್ಚಿನ ವೇಳೆ ಇಲ್ಲ ಎಂಬ ಕಾರಣದಿಂದ ಇನ್ನೂ ಅನೇಕ ವಿಚಾರಗಳು ಇದ್ದರೂ ಕೂಡ ಅದನ್ನು ಪ್ರಸ್ತಾಪ ಮಾಡದೇ ಆಯವ್ಯಯ ಚರ್ಚೆ ಕಾಲದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೀರಿ ಎಂದು ಭಾವಿಸಿ ಆ ವಿಚಾರಗಳನ್ನು ಅಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹಾಗೇ ಇಟ್ಟುಕೊಂಡು ನನ್ನ ಮಾತನ್ನು ಮುಗಿಸುತ್ತೇನೆ, ವಂದನೆಗಳು.

+ ಶ್ರೀ ಎ.ಕೆ. ಅನಂತ ಕೃಷ್ಣ (ಶಿವಾಜಿನಗರ) : ಸನ್ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ರಾಜ್ಯಪಾಲರ ಭಾಷಣವನ್ನು ಸ್ವಾಗತಿಸುತ್ತಾ ಈ ಸಂದರ್ಭದಲ್ಲಿ ಕೆಲವು ಮಾತನ್ನಾಡಬೇಕೆಂದು ಆಸೆಪಡುತ್ತೇನೆ. ರಾಜ್ಯಪಾಲರ ಭಾಷಣದಲ್ಲಿ ನಮ್ಮ ಸರಕಾರ

ನಾನಾ ಕ್ಷೇತ್ರಗಳಲ್ಲಿ ಸಮಗ್ರವಾದಂತಹ ಆರ್ಥಿಕ, ಸಾಮಾಜಿಕ, ಪ್ರಕತಿಶೀಲ ಕಾರ್ಯಗಳನ್ನು ಯಾವ ರೀತಿ ಮಾಡುತ್ತದೆ ಎಂದು ಮುನ್ಸೂಚನೆಯನ್ನು ಕೊಟ್ಟಿದೆ. ಆ ವಿಷಯವಾಗಿ ನಿನ್ನೆ ತಾನೇ ನಮ್ಮ ಮುಖ್ಯ ಮಂತ್ರಿಗಳು ಆಯವ್ಯಯ ಪಟ್ಟಿಯನ್ನು ಬಹಳ ಚೆನ್ನಾಗಿ ಕಾರ್ಯಗತ ಮಾಡುವ ಒಂದು ದಿಸೆಯಲ್ಲಿ ನಮ್ಮ ಸಭೆಯ ಮುಂದಿಟ್ಟಿದ್ದಾರೆ. ಅದಕ್ಕೂ ನಾನು ಸ್ವಾಗತ ಮಾಡುತ್ತೇನೆ. ಆದರೆ ನನಗೆ ಮುಖ್ಯವಾಗಿ ಗಮನಕ್ಕೆ ಬರುವುದೇನೆಂದರೆ, ಯಾವುದೇ ಒಂದು ರಾಜಕೀಯ ಪಕ್ಷ ತನ್ನ ಆಡಳಿತದ ವ್ಯಾಪ್ತಿಯಲ್ಲಿ ಪ್ರಗತಿಶೀಲವಾದಂತಹ, ಗುರುತರವಾದಂತಹ ಕಾರ್ಯಕ್ರಮಗಳನ್ನು ಸದುದ್ದೇಶದಿಂದ ಜನತೆಗೆ ಪ್ರಗತಿಯನ್ನು ಸಾಧಿಸಿಕೊಡುವಂತಹ ಕೆಲಸವನ್ನು ಮಾಡುವಾಗ ಅದನ್ನು ಕಾರ್ಯಗತ ಮಾಡಬೇಕಾಗಿದ್ದರೆ ಸಂಪೂರ್ಣವಾಗಿ ಅಧಿಕಾರ ವರ್ಗದ ಮೇಲೆ ಜವಾಬ್ದಾರಿ ಇರುತ್ತದೆನ್ನುವ ಮಾತನ್ನು ಎಲ್ಲರೂ ಒಪ್ಪುತ್ತಾರೆ. ನಾನು ಈ ಒಂದು ವರ್ಷದ ಅನುಭವದಲ್ಲಿ ಈ ಸಭೆ ಸದಸ್ಯನಾಗಿ ಬಹಳ ನೊಂದು ಕೆಲವು ಮಾತನ್ನು ಹೇಳಬೇಕಾಗಿದೆ. ಆಡಳಿತ ಪಕ್ಷ ತನ್ನ ಆಡಳಿತದ ವ್ಯಾಪ್ತಿಯಲ್ಲಿ ಎಷ್ಟೇ ಒಳ್ಳೆ ಕೆಲಸವನ್ನು ಮಾಡಬೇಕೆಂದು ತನ್ನದೇ ಆದಂತಹ ಒಂದು ರೀತಿ ನೀತಿ ನಿಯಮಗಳನ್ನು ಈ ಸದನದಲ್ಲಿ ಘೋಷಣೆ ಮಾಡಿದ್ದರೂ, ಅದಕ್ಕೆ ಸೂಕ್ತ ಕ್ರಮಗಳನ್ನು ವಹಿಸಿದ್ದರೂ ಕೂಡ ಆಡಳಿತದ ಸೂತ್ರ ವಹಿಸಿರುವಂತಹ ಮುಖ್ಯಾಧಿಕಾರಿಗಳು ಈ ರಾಜಕಾರಣಕ್ಕೆ ಸಂಬಂಧಪಟ್ಟಂತಹ ಆಡಳಿತ ಪಕ್ಷದ ಒಂದು ಗುರಿ ಏನು ಇದೆ, ಆ ಗುರಿಯನ್ನು ಸಾಧಿಸುವ ರೀತಿಯಲ್ಲಿ ಏಕ ಮನಸ್ಸಿನಿಂದ ಮುಂದುವರಿದರೆ ಮಾತ್ರ ಕೆಲಸವಾಗುತ್ತದೆ, ಗುರಿ ಸಾಧನೆಯಾಗುತ್ತದೆ.

ಆ ತರಹ ನಡೆಯುತ್ತಿಲ್ಲವೆಂದು ಸಾಕಷ್ಟು ಸ್ನೇಹಿತರು ಮಾತನಾಡಿರುವುದರಿಂದ ಅರ್ಥಮಾಡಿಕೊಂಡಿದ್ದೇನೆ. ಯಾವಾಗ ಆಡಳಿತ ಅಧಿಕಾರಿಗಳು ಅಷ್ಟೇ ಒಂದು ಶಿಸ್ತಿನಿಂದ ನೀತಿ-ನಿಯಮಗಳಿಗೆ ಕಟ್ಟುಬಿದ್ದು ಕೆಲಸವನ್ನು ಮಾಡುತ್ತಾ ಇಲ್ಲವೆಂದು ಈ ಸಭೆಯಲ್ಲಿ ಪ್ರಶ್ನೋತ್ತರ ಕಾಲದಲ್ಲಿ, ಗಮನ ಸೆಳೆಯುವ ಸೂಚನೆಗಳ ಕಾಲದಲ್ಲಿ ಮತ್ತು ಬೇರೆಬೇರೆ ರೂಪದಲ್ಲಿ ಮಾನ್ಯ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಹೇಳುತ್ತಿರಬೇಕಾದರೆ, ಈ ವಿಷಯದಲ್ಲಿ ನಮ್ಮ ಮಂತ್ರಿ ಮಂಡಲ, ಮುಖ್ಯಮಂತ್ರಿಗಳು ಮತ್ತು ಅವರ ಸಹಪಾಠಿಗಳು ಇವರ ಮೇಲೆ ಯಾವ ಕ್ರಮವನ್ನು ಯಾವ ಸಮಯದಲ್ಲಿ ಹೇಗೆ ತೆಗೆದುಕೊಳ್ಳಬೇಕು ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕೆಂದು ನಾನು ಸಂಬಂಧಪಟ್ಟ ಮಂತ್ರಿವರ್ಯರಿಗೆ ಮತ್ತು ಮುಖ್ಯಮಂತ್ರಿಗಳವರಿಗೆ ನಿವೇದನೆ ಮಾಡಿಕೊಳ್ಳುತ್ತಿದ್ದೇನೆ. ಉದಾಹರಣೆಗೆ ಈ ಸದನದಲ್ಲಿ ಸಾಕಷ್ಟು ಸಲ ಬೆಂಗಳೂರು ನಗರದ ಒಂದು ವೈಖರಿಯನ್ನು ಬೆಂಗಳೂರು ನಗರದ ಅಭಿವೃದ್ಧಿ ವಿಷಯದಲ್ಲಿ ಸಾಕಷ್ಟು ಕಾರ್ಯಕ್ರಮಗಳನ್ನು ಸಭೆಯ ಮುಂದೆ ಹೇಳಿದ್ದಾರೆ. ಮತ್ತು ನಗರಸಭೆಯಲ್ಲೂ ಕೂಡ ಇದೇ ವಿಷಯದಲ್ಲಿ ತೀರ್ಮಾನ ಮಾಡಿದ್ದಾರೆ. ಆದರೆ ಬೆಂಗಳೂರು ನಗರಕ್ಕೆ ಯಾವರೀತಿಯ ಪೌರಸೌಲಭ್ಯಗಳನ್ನು ಒದಗಿಸಿಕೊಡಬೇಕು ಎನ್ನುವುದರಲ್ಲಿ ಅಲ್ಲಿ ಸೂಕ್ತವಾದ ಅಧಿಕಾರಿಗಳನ್ನು ಸರ್ಕಾರ ನೇಮಿಸದೇ ಹೋದರೆ ಆ ಕೆಲಸ ಕಾರ್ಯಗಳನ್ನು ಮಾಡಿ ಗುರಿ ಸಾಧನೆ ಆಗುತ್ತದೆಯೇ ಎನ್ನುವುದು ದೊಡ್ಡ ಪ್ರಶ್ನೆಯಾಗಿದೆ. ನನ್ನ ಭಾಷಣದಲ್ಲಿ ನಾನು ಬಹಳಮಟ್ಟಿಗೆ ಬೆಂಗಳೂರು ನಗರದ ಬಗ್ಗೆ ಮಾತ್ರ ಹೇಳಬಯಸುತ್ತೇನೆ. ಬೆಂಗಳೂರು ಮಹಾನಗರಪಾಲಿಕೆಯ ಕಮೀಷನರ್‌ರವರನ್ನು ನೇಮಕ ಮಾಡಬೇಕಾದರೆ ಸರ್ವತೋಮುಖವಾದಂತಹ ಅನುಭವ ಇರುವವರನ್ನು ನಗರದ ಅಭಿವೃದ್ಧಿ ವಿಷಯದಲ್ಲಿ ಸಾಕಷ್ಟು ವಿಷಯವನ್ನು ತಿಳಿದುಕೊಂಡಿರುವವರನ್ನು, ಆಡಳಿತದ ಒಂದು ನಿಯಂತ್ರಣವನ್ನು ಒಂದು ಶಿಸ್ತಿನಿಂದ ಒಂದು ದಕ್ಷತೆಯಿಂದ, ನಿಷ್ಠಾವಂತತನದಿಂದ ನಡೆಸಿಕೊಂಡು ಹೋಗುವಂತಹ ಒಂದು ವ್ಯಕ್ತಿತ್ವವನ್ನು ಹೊಂದಿರಬೇಕು. ಸತ್ಯ, ಧರ್ಮ, ನೀತಿನಿಯಮಗಳನ್ನು ಅನುಸರಿಸಿ ಕೆಲಸ ಮಾಡತಕ್ಕಂದ್ದು ಅವರ ಆಧ್ಯ ಕರ್ತವ್ಯವಾಗಿರುತ್ತದೆ. ನಮ್ಮ ರಾಜ್ಯಪಾಲರ ಭಾಷಣದಲ್ಲಿ ಸಾಕಷ್ಟು ವಿಷಯಗಳನ್ನು ಹೇಳಿದ್ದಾರೆ. ಆಡಳಿತದಲ್ಲಿ ಯಾವ ತರಹದ ದಕ್ಷತೆಯನ್ನು ನಾವು ತರಬಯಸುತ್ತೇವೆ ಎಂದು ಹೇಳಿದ್ದಾರೆ. ಆಡಳಿತದ

ದಕ್ಷತೆ ಕೇವಲ ವಿಧಾನಸೌಧದಲ್ಲಿ ಮತ್ತು ಅದಕ್ಕೆ ಸಂಬಂಧಪಟ್ಟ ಕಛೇರಿಗಳಲ್ಲಿ ಸೆಕ್ರೆಟರಿಯೇಟ್‌ನಲ್ಲಿ ಮಾತ್ರ ಆಗುತ್ತದೆನ್ನುವ ಭಾವನೆ ಇದ್ದರೆ ಅದಕ್ಕಿಂತ ಮಹತ್ತರವಾದ ತಪ್ಪು ಬೇರೆ ಇಲ್ಲ. ಸೆಕ್ರೆಟರಿಯೇಟ್ ಇಡೀ ರಾಜ್ಯದಲ್ಲಿ ನಡೆಯುತ್ತಿರುವಂತಹ ರಾಜ್ಯದ ಅಧಿಕಾರದ ವಿಷಯದಲ್ಲಿ ಸರಿಯಾದ ಸೂಪರ್‌ವಿಷನ್ ಇರುವುದಿಲ್ಲವೋ, ಅವರ ಮೇಲೆ ನಿಯಂತ್ರಣ ಇರುವುದಿಲ್ಲವೋ ಆಗ ನಾವು ಎಷ್ಟೇ ಪ್ರಯತ್ನ ಮಾಡಿದರೂ ಕೂಡ ನಮ್ಮ ಕಾರ್ಯದಲ್ಲಿ ವಿಫಲತೆಯಿರುತ್ತದೆ ಜನತೆಗೆ ತೊಂದರೆಯಾಗುತ್ತದೆ, ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತದೆ. ಆಡಳಿತ ಪಕ್ಷಕ್ಕೂ ಕೂಡ ಕೆಟ್ಟ ಹೆಸರು ಬರುತ್ತದೆ. ನಾವು ಎಷ್ಟೇ ಈ ಸದನದಲ್ಲಿ ಸಮಯವನ್ನು ವ್ಯಯ ಮಾಡಿ ಅದನ್ನು ಸುಧಾರಣೆ ಮಾಡಬೇಕೆಂದು ಪ್ರಯತ್ನಪಟ್ಟರೂ ಕೂಡ ಅದರ ಸುಧಾರಣೆ ಸಾಧ್ಯವಿಲ್ಲದೆ ಹೋಗುತ್ತದೆ. ಈಗತಾನೆ ತಮಗೆ ಹೇಳಿದ ಹಾಗೆ, ಬೆಂಗಳೂರು ನಗರದಲ್ಲಿ ಸುಮಾರು 45 ಲಕ್ಷ ಜನಸಂಖ್ಯೆ ಸೇರಿದೆ. ಅಂದಮೇಲೆ ಶೇಖಡ 10 ರಷ್ಟು ಈ ರಾಜ್ಯದ ಜನಸಂಖ್ಯೆ ಜಾಸ್ತಿಯಾಗಿದೆ. ಇಡೀ ರಾಜ್ಯದಾದ್ಯಂತ ಏನೇ ವಿಷಯ ನಡೆದರೂ ಕೂಡ ಬೆಂಗಳೂರು ನಗರದ ಆಡಳಿತ ಏನಿದೆ ಇಲ್ಲಿ ಯಾವ ಒಂದು ಪ್ರಗತಿಯನ್ನು ನಾವು ಸಾಧಿಸುತ್ತೇವೆ ಆ ಪ್ರಗತಿ ಮಾದರಿಯಾಗಿ ರಾಜ್ಯದಾದ್ಯಂತ ಬೆಳವಣಿಗೆಗೆ ಅನುಕೂಲವಾಗುತ್ತದೆ. ಇಂತಹ ಒಂದು ಕ್ಷೇತ್ರದಲ್ಲಿ ನಾವು ಸರಿಯಾದ ಒಬ್ಬ ಕಮೀಷನರ್ ಅವರನ್ನು, ಡೆಪ್ಯುಟಿ ಕಮೀಷನರ್ ಅವರನ್ನು ಇಂಜನಿಯರ್‌ಗಳನ್ನು ಹೆಲ್ತ್ ಆಫೀಸರ್‌ಗಳನ್ನು ಮತ್ತು ಬೇರೆಬೇರೆ ಅಧಿಕಾರಿಗಳನ್ನು ರಾಜ್ಯದ ಒಂದು ಅಧಿಕಾರ ವ್ಯಾಪ್ತಿಯಿಂದ ನಾವು ನೇಮಕ ಮಾಡದೇ ಹೋದರೆ ನಗರ ನಿರ್ನಾಮವಾಗುವುದಕ್ಕೆ ಅವಕಾಶ ಮಾಡಿಕೊಟ್ಟಹಾಗೆ ಆಗುತ್ತದೆಂದು ನಾನು ಬಹಳ ದುಃಖದಿಂದ ಹೇಳುತ್ತಿದ್ದೇನೆ.

5.20 ಪಿ.ಎಂ

ಹೋದವರ್ಷ ನಾನು ಮಾತನಾಡುವಾಗ ಹೇಳಿದ್ದೆ. ಬೆಂಗಳೂರು ನಗರವನ್ನು ಸುಂದರವಾದ ಪಟ್ಟಣವಾಗಿ, ಯೋಗ್ಯ ಮಟ್ಟದಲ್ಲಿ, ಅಂತರರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿಯನ್ನು ಸಂಪಾದಿಸಿದಂಥ ಒಳ್ಳೆಯ ನಗರವೆಂದು ಹೆಸರು ಏನಿದೆ ಅದನ್ನು ಉಳಿಸಿಕೊಳ್ಳಬೇಕಾಗಿದ್ದರೆ, ಇಂತಹ ಧಕ್ಷತೆಯಿಂದ ಕೂಡಿದ, ನಿಷ್ಠಾವಂತವಾದಂಥ, ಯೋಗ್ಯರಾದಂಥ ಕಮಿಟೆಡ್ ಅಧಿಕಾರಿಗಳನ್ನು ತಾವು ಹಾಕದೇ ಹೋದರೆ we will be converting Bangalore as a junk yard of the State ಎಂದು ನಾನು ಹೇಳಿದ್ದೆ. ಬಹಳ ವರ್ಷಗಳ ಕೆಳಗೆ ನಾನು ಹೇಳಿದ್ದನ್ನು ಮತ್ತೆ ಹೋದವರ್ಷ ಜ್ಞಾಪಿಸಿದೆ. ಈಗ ಇಲ್ಲಿ ಇರುವಂಥ ಅಧಿಕಾರಿಗಳನ್ನು ನೋಡಿದರೆ, ಅವರ ಕಾರ್ಯವೈಖರಿಯನ್ನು ನೋಡಿದರೆ, ನನಗೆ ಇದೇ ಭಯ ಇನ್ನೂ ಹೆಚ್ಚಾಗಿ ಆಗುತ್ತಿದೆ. ನನ್ನದೇ ಆದ ಒಂದು ಅನುಭವವನ್ನು ತಮ್ಮ ಮುಂದೆ, ಸನ್ಮಾನ್ಯ ಮುಖ್ಯಮಂತ್ರಿಗಳಿಗೂ ಮತ್ತು ಪೌರಾಡಳಿತ ಮಂತ್ರಿಗಳಿಗೂ ಕೂಡ ತಿಳಿಸಬಯಸುತ್ತೇನೆ, ಹತ್ತಾರು ಕಾಗದಗಳನ್ನು ನನ್ನ ಕ್ಷೇತ್ರಕ್ಕೆ ಅಭಿವೃದ್ಧಿ ಕಾರ್ಯಗಳ ವಿಷಯದಲ್ಲಿ ಆ ಕಮೀಷನರ್ ಅವರಿಗೆ ಬರೆದಿದ್ದೇನೆ. ಆದರೆ ಒಂದು ಕಾಗದಕ್ಕಾದರೂ ಅವರಿಂದ ಯಾವುದೇ ರಿಪ್ಲೈ ಬಂದಿಲ್ಲ ಅವರು ನಮ್ಮನ್ನು ಕರೆಸಿ ಮಾತನಾಡಿದ್ದಿಲ್ಲ, ಫೋನಿನಲ್ಲಿ ಮಾತನಾಡುವುದೂ ಇಲ್ಲ. ಅವರ ಸಮಯವನ್ನು ಕೇಳಿ, ಮಾತನಾಡಬೇಕು ಎಂದಾಗ ಒಂದೆರಡು ಸಲ ಬಿಟ್ಟರೆ ಮಿಕ್ಕ ಪ್ರತಿ ಸಮಯದಲ್ಲಿ ಕೂಡ, ಕೊಟ್ಟಿದ್ದ ವೇಳೆಗೆ ಅವರು ಪತ್ತೆಯೇ ಇಲ್ಲ. ಎರಡುಸಲ ಇಡೀ ನನ್ನ ಕ್ಷೇತ್ರದಲ್ಲಿ ಪಾದಯಾತ್ರೆ ಮಾಡಿ ಸ್ಥಳ ಪರೀಕ್ಷೆಗಳನ್ನು ಮಾಡಿ ಅಲ್ಲಿ ಆಗಬೇಕಾದ ಒಳ್ಳೆಯ ಕೆಲಸಗಳಿಗೆ ಅಂತ ಹೇಳಿ, ನಾನು ಒಂದು ಟೂರ್ ಪ್ರೋಗ್ರಾಮ್ ಕೂಡ ಹಾಕಿ ಯಾವ್ಯಾವ ಜಾಗಗಳನ್ನು ನೋಡಬೇಕೆಂದು ಕಳಿಸಿಕೊಟ್ಟು ಅವರು ಡೇಟ್ ಫಿಕ್ಸ್ ಮಾಡಿ, ಆ ಡೇಟ್‌ನಲ್ಲಿ ಅವರು ಪತ್ತೆ ಇಲ್ಲದೆ ಹೋಗಿದ್ದಾರೆ. ಒಂದು ಸಲ ನಾನು ಅವರನ್ನು ಬಹಳ ಕೇಳಿಕೊಂಡ ಮೇಲೆ ಒಂದು ದಿನ

ಟೈಮ್ ಕೊಟ್ಟು ಆ ಟೈಮಿಗೆ ಸರಿಯಾಗಿ ಸುಮಾರು 20 ಮುಖ್ಯ ಅಧಿಕಾರಿಗಳೆಲ್ಲ ಸೇರಿ ಶಿವಾಜಿನಗರ ಕ್ಷೇತ್ರದಲ್ಲಿ ಓಡಾಡಬೇಕೆಂದು ಹೇಳಿದಾಗ ನಾವು ಹತ್ತು ಗಂಟೆಗೆ ಹೋಗಿದ್ದರೆ, ನನಗೆ ಹತ್ತೂಮುಕ್ಕಾಲು ಗಂಟೆಗೆ ಮುಖ್ಯಮಂತ್ರಿಗಳ ಹತ್ತಿರ ಮೀಟಿಂಗ್ ಇದೆ, ನಾನು ಬರುವುದಕ್ಕೆ ಆಗುವುದಿಲ್ಲ, ಬೇಕಾದರೆ ಅರ್ಧಗಂಟೆಯಷ್ಟೇ ಬರುತ್ತೇನೆ, ಮತ್ತೆ ಹತ್ತೂಮುಕ್ಕಾಲು ಗಂಟೆಗೆ ಬಿಡುಗಡೆ ಆಗಬೇಕೆಂದು ಹೇಳಿದರು. ನಾನು ಹೇಳಿದೆ, ಹೀಗೆ ಮೀಟಿಂಗ್ ಹಾಕಿಕೊಂಡಿದ್ದೇವೆ ಸ್ವಾಮಿ, ಬೇಡಿ, ಈ ಕ್ಷೇತ್ರದ ತುಂಬಾ ಜನ ಕಾಯುತ್ತಿರುತ್ತಾರೆ, ಎರಡು ಸಹ ಈಗಾಗಲೇ ಜನ ಕಾದಿದ್ದು ಅವರಿಗೆ ನಿರಾಶೆಯಾಗಿದೆ ಮತ್ತು ನಮಗೆ ಅವಮಾನ ಆಗುವಂಥ ರೀತಿಯಲ್ಲಿ ನಡೆದಿದೆ. ಹೀಗೆ ಮಾಡಬೇಡಿ. ಎಂದು ಹೇಳಿದರೆ, 'ಇಲ್ಲ ಆಗುವುದಿಲ್ಲ' ಎಂದು ಹೇಳಿದರು. 'ಸರಿ ಬನ್ನಿ, ಮುಖ್ಯಮಂತ್ರಿಗಳ ಹತ್ತಿರ ಹೋಗೋಣ ಅಲ್ಲಿಂದ ಬಿಡುಗಡೆ ಮಾಡಿಸ್ತೀನಿ' ಎಂದು ಹೇಳಿ ನಾನು 'ಕೃಷ್ಣಾ'ಗೆ ಕರೆದುಕೊಂಡು ಬಂದೆ.

ಶ್ರೀ ಆರ್.ಎಲ್. ಜಾಲಪ್ಪ : ಅಧ್ಯಕ್ಷರೇ, ಸನ್ಮಾನ್ಯ ಅನಂತಕೃಷ್ಣ ಅವರು ವಿಧಾನಸಭೆಯ ಆಡಳಿತಪಕ್ಷದ ಶಾಸಕಾಂಗ ಪಕ್ಷದ ಕಾರ್ಯದರ್ಶಿಯವರು. ಇವರ ಗತಿಯೇ ಹೀಗಾದರೆ, ಇನ್ನು ವಿರೋಧ ಪಕ್ಷದವರ ಮಾತನ್ನು ಅಧಿಕಾರಿಗಳು ಕೇಳುತ್ತಾರೆಯೇ? ಇನ್ನು, ಸಾಮಾನ್ಯ ಮನುಷ್ಯರ ಪಾಡೇನು. ಇದನ್ನು ದಯಮಾಡಿ ಮಾನ್ಯ ಮಂತ್ರಿಗಳು ಗಮನಿಸಬೇಕು.

ಶ್ರೀ ಎ.ಕೆ. ಅನಂತಕೃಷ್ಣ : ನಾನು ಒಬ್ಬ ಪ್ರಜೆಯಾಗಿ ಬಹಳ ದುಃಖದಿಂದ ಹೇಳುತ್ತಿದ್ದೇನೆ. ಇದು ಆಡಳಿತ ಪಕ್ಷದವರು, ಮತ್ತೊಬ್ಬರು ಎಂದು ಅಲ್ಲ. ಸಾಧಾರಣ ನಾಗರೀಕನಿಗೂ ಕೂಡ ಇದು ಆಗಬಾರದು. ನಾಗರೀಕರ ಪ್ರತಿನಿಧಿಯಾಗಿ ನನಗೇನು ಅನುಭವರವಾಗಿದೆ, ಅದನ್ನು ನಾನು ಹೇಳುತ್ತಿದ್ದೇನೆ. 'ಕೃಷ್ಣ'ಗೆ ಬಂದು ಮುಖ್ಯಮಂತ್ರಿಗಳನ್ನು ನೋಡೋಣ ಎಂದು ಹೇಳಿದರೆ 'ನಾನು ಮುಖ್ಯಮಂತ್ರಿಗಳನ್ನು ನೋಡಬೇಕಾಗಿಲ್ಲ, ಅವರ ಹತ್ತಿರ ನನಗೆ ಮೀಟಿಂಗ್ ಇಲ್ಲ, ಅವರ ಸೆಕ್ರೆಟರಿ ಹತ್ತಿರ ಇದೆ' ಎಂದು ಹೇಳಿದರು. ಸೆಕ್ರೆಟರಿ ಹತ್ತಿರ ಕೂಡ ಕರೆದುಕೊಂಡುಹೋದೆ. ಇಲ್ಲಿ ನನಗೆ 15 ನಿಮಿಷ ಟೈಮ್ ಕೊಡಿ ಬರುತ್ತೇನೆ ಎಂದು ಹೇಳಿದರು. 15 ನಿಮಿಷದಲ್ಲಿ ಬರುತ್ತಾರಲ್ಲ ಎಂದು ನಾವು ಪಕ್ಕಕ್ಕೆ ಹೋಗಿ ಬರುವಷ್ಟರೊಳಗೆ ಅವರು ಮತ್ತು ಆ ಸೆಕ್ರೆಟರಿ ಇಬ್ಬರೂ ಸೇರಿ ಎಲ್ಲೋ ಹೊರಟುಹೋಗಿಬಿಟ್ಟರು. ಪತ್ತೆ ಇಲ್ಲ. ಊರು ತುಂಬಾ ಜನರನ್ನು ನಾರು ಕಾಯಿಸಿ ಬಹಳ ಕಷ್ಟ ಪರಿಸ್ಥಿತಿಯಲ್ಲಿರುವ ಜಾಗಗಳಿಗೆ ಅವರನ್ನು ಕರೆದುಕೊಂಡು ಹೋಗಬೇಕೆಂದರೆ ಇಂತಹ ಸೀನಿಯರ್ ಸೂಪರ್ ಟೈಮ್ ಸ್ಕೇಲ್ ಐ.ಎ.ಎಸ್. ಆಫೀಸರ್ ಎಂದು ನಾನು ಭಾವಿಸುತ್ತೇನೆ, ಇಂತಹವರನ್ನು ಇಟ್ಟುಕೊಂಡು ನೀವು ಆಡಳಿತ ಸುಧಾರಣೆ ಹೇಗೆ ಮಾಡುತ್ತೀರಿ? ಜನರಿಗೆ ಸರಿಯಾದ ಆಡಳಿತ ಎಲ್ಲಿ ಕೊಡುತ್ತೀರಿ? ಯಾವ ತರಹ ಪೌರಸೌಲಭ್ಯಗಳನ್ನು ಮಾಡಿಕೊಡುತ್ತೀರಿ? ನೂರು ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ಬಜೆಟ್ಟು ಅವರ ಕೈಗೆ ಕೊಟ್ಟಮೇಲೆ ಆ ಹಣವನ್ನು ಯಾವರೀತಿ ವಿನಿಯೋಗ ಮಾಡಿ ಕೆಲಸ ಮಾಡುವುದಕ್ಕೆ ಸಾಧ್ಯ ಆಗುತ್ತದೆ ಎನ್ನುವುದನ್ನು ಬಹಳ ತೀವ್ರವಾಗಿ ನಾನು ಅರ್ಥಮಾಡಿಕೊಳ್ಳಬೇಕಾಗಿದೆ. ಈ ಬ್ಯೂರೋಕ್ರಸಿ ಎಲ್ಲಿಯವರೆಗೆ ಹೋಗಿದೆ ಎಂದರೆ, ಯಾವುದೇ ಒಬ್ಬ ನಿಷ್ಠಾವಂತ ಪ್ರಜೆಗಳ ಪ್ರತಿನಿಧಿಯೇ ಆಗಲಿ, ಪ್ರಜೆ ಆಗಿರಲಿ ಆತನಿಗೆ ಗೌರವ ಕೊಡುವುದಿಲ್ಲ, ಅವರಿಗೆ ತಪ್ಪು ದಾರಿಗೆ ಹೋಗುವಂಥ ಸಹಪಾಠಿಗಳಾದರೆ ಅವರ ವಿಷಯದಲ್ಲಿ ಸಾಕಷ್ಟು ಗೌರವವನ್ನು ಕೊಟ್ಟು ಅವರ ಜತೆಯಲ್ಲಿ ಕಾಲಕಳೆಯುತ್ತಾರೆ. ಈ ವಿಷಯವನ್ನು ನಾನು ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತಿದ್ದೇನೆ. ಇದು ಒಂದೇ ಅಲ್ಲ, ಇದಕ್ಕೆ ಮೊದಲು ಗುಡಿಸಲುಗಳನ್ನು ಒಡೆದುಹಾಕಲಾಗಿದೆ. ಯಾವ ಗುಡಿಸಲುಗಳನ್ನು 2-3 ವರ್ಷಗಳಿಂದ ಬದಲಾವಣೆ ಮಾಡಬೇಕೆಂದು ಪ್ರಯತ್ನ ನಡೆಯುತ್ತಿದೆ, ಅಂತಹ

ಜಾಗಗಳಲ್ಲಿ ಏಕೆ ಒಡೆಯುತ್ತೀರಿ ಎಂದು ಕೇಳಿದರೆ, ನನಗೆ ಮಂತ್ರಿಗಳು ಹೇಳಿದ್ದಾರೆ, ಆರ್ಡರ್ ಮಾಡಿದ್ದಾರೆ ಒಡೆದುಹಾಕುತ್ತೇವೆ, ಬೇಕಾದರೆ ಅವರನ್ನು ಹೋಗಿ ನೋಡಿ ಎಂದು ದಬಾಯಿಸಿ ಮಾತನಾಡಿದರು. ಈ ವಿಷಯದ ಬಗ್ಗೆ ಮಂತ್ರಿಗಳ ಹತ್ತಿರ ತಿಳಿದುಕೊಂಡಾಗ, ಮಂತ್ರಿಗಳು ಅಂತಹ ಆರ್ಡರ್ ಮಾಡಿಲ್ಲ, ಆದರೆ ಮುಖ್ಯಮಂತ್ರಿಗಳ ಹೆಸರನ್ನು ಹೇಳಿ, ಮಂತ್ರಿಗಳ ಹೆಸರನ್ನು ಹೇಳಿ, ಐ.ಎ.ಎಸ್. ಆಫೀಸರುಗಳಾದಂಥವರು ತಮ್ಮ ಸ್ಥಾನವನ್ನು, ಅಧಿಕಾರವನ್ನು ದುರುಪಯೋಗ ಮಾಡಿಕೊಂಡಿದ್ದಾರೆಂದು ಹೇಳಿದರೆ, ಆಡಳಿತ ವೈಖರಿ ಎಲ್ಲಿಗೆ ಬಂದಿದೆ ಜನಕ್ಕೆ ಯಾವರೀತಿಯಾಗಿ ನಾವು ಸೇವೆ ಮಾಡುವುದಕ್ಕೆ ಸಾಧ್ಯ ಎನ್ನುವ ಮಾತನ್ನು ನಾನು ಬಹಳ ದುಃಖದಿಂದ ಹೇಳುತ್ತೇನೆ. ವೈಯಕ್ತಿಕವಾಗಿ ನನಗೆ ಯಾವ ವೈಷಮ್ಯವೂ ಇಲ್ಲ, ವೈಯಕ್ತಿಕವಾಗಿ ಯಾವ ಕೆಲಸಕ್ಕೂ ಯಾರ ಹತ್ತಿರವೂ ಹೋಗಿಲ್ಲ, ಇದು ಬಹಳ ಜನಕ್ಕೆ ಗೊತ್ತಿದೆ. ನನ್ನ ಸ್ವಾರ್ಥಕ್ಕೆ ಯಾರ ಹತ್ತಿರವೂ ಹೋಗಿಲ್ಲ, ನಮ್ಮ ಸಂಸಾರಕ್ಕಾಗಿ ಹೋಗಿಲ್ಲ. ಆದರೆ, ನನ್ನಂಥವರಿಗೇ ಇಂತಹ ಐ.ಎ.ಎಸ್. ಅಧಿಕಾರಿ ಈ ರೀತಿಯಾಗಿ ನಡೆದುಕೊಳ್ಳುತ್ತಾರೆಂದು ಹೇಳಿದರೆ, ಏನು ಮಾಡಲಿ. ಮತ್ತೊಂದು ಅಲ್ಲಿನ ಕಾರ್ಮಿಕರ ವಿಷಯದಲ್ಲಿ, ನಾನು ಕಾರ್ಮಿಕ ಸಂಘದ ಅಧ್ಯಕ್ಷನಾಗಿದ್ದೆ. ಅವರಿಗೆ ಯಾವುದೋ ಒಂದು ಕಳಕಳಿ ಇತ್ತು, ಅವರ ಡಿಮ್ಯಾಂಡ್ಸ್ ಬಗ್ಗೆ ಮಾತನಾಡಬೇಕೆಂದು ಹೇಳಿದರೆ, ಕರೆಸಿ ಮಾತನಾಡಿ, ಸ್ಪಾಟ್‌ನಲ್ಲಿಯೇ ತೀರ್ಮಾನ ಕೊಟ್ಟು 2 ತಿಂಗಳಾಯಿತು. ಆಗ ತೀರ್ಮಾನ ಮಾಡಿದ್ದನ್ನು, ಈಗ ಮಾಡಬಾರದು ಬ ನಿಲುವು ತೆಗೆದುಕೊಂಡುದ್ದಾರೆ. ಅಂದರೆ, ಇವರು ನಮ್ಮ ಮುಂದೆ ಹೇಳುವುದು ಒಂದು, ಹಿಂದೆ ಮಾಡುವುದು ಒಂದು. ಯಾವರೀತಿಯಾಗಿ ಇವರ ನಡವಳಿಕೆ ಇರುತ್ತದೆ ಎಂದರೆ, ಇಂತಹವರನ್ನು ರಾಜ್ಯಸರ್ಕಾರದಿಂದ ಎರವಲಾಗಿ ನಮ್ಮ ನಗರಸಬೆಗೆ ಕಳುಹಿಸಿಕೊಟ್ಟರೆ, ಆ ನಗರಸಭೆ ಏನಾಗುತ್ತದೆ ಹೇಳಿ. ಹಿಂದೆ ನಾನು ಒಂದು ಪ್ರಶ್ನೆಯನ್ನು ಹಾಕಿದ್ದೆ. ಯಾರನ್ನಾದರೂ ಲೆಂಟ್ ಸರ್ವೀಸ್ ಎಂದು ಕಳುಹಿಸಿಕೊಟ್ಟರೆ, ಅವರ ಮೇಲೆ ಮೇಲಧಿಕಾರಿಗಳು ಏನೂ ಗಮನ ಇಟ್ಟುಕೊಳ್ಳಲಿಲ್ಲವೆಂದು ಹೇಳಿದರೆ, ಯಾವರೀತಿಯಾಗಿ ತಮ್ಮ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದಾರೆ ಎನ್ನುವುದನ್ನುತೀರ್ವವಾಗಿ ತಿಳಿದುಕೊಳ್ಳಬೇಕೆಂಬ ಪ್ರಶ್ನೆ ಹಾಕಿದರೆ, ಅಲ್ಲಿನ ಕಮೀಷನರ್ ನೋಡಿಕೊಳ್ಳುತ್ತಾರೆ ಎನ್ನುವ ಉತ್ತರ ಬಂದಿತ್ತು. ಈಗ ಆ ಕಮೀಷನರೇ ಬೇಲಿಯಾಗಿ ಊರನ್ನು ತಿಂದುಕೊಂಡು ಹೋಗುತ್ತಿದೆ ಎಂದಮೇಲೆ ಅವರ ಮೇಲೆ ಯಾರು ಉಸ್ತುವಾರಿ ಇದ್ದಾರೆ. ಸಂಬಂಧಪಟ್ಟ ಮಂತ್ರಿಗಳೂ ಗಮನ ಇಟ್ಟುಕೊಳ್ಳಲಿಲ್ಲವೆಂದು ಹೇಳಿದರೆ, ಅವರ ಮೇಲೆ ಯಾವ ನಿಯಂತ್ರಣ ಇರುತ್ತದೆ, ಮತ್ತು ಏನಾದೀತು. ಈ 45 ಲಕ್ಷ ಜನಸಂಖ್ಯೆಯ ಗತಿ ಏನು? ಈಗ ಬೆಳಿಗ್ಗೆಯಿಂದ ಸಂಜೆಯವರೆಗೂ ನಾವು ಏನು ಕೇಳುತ್ತಿದ್ದೇವೆ, ನೀರಿನ ವಿಷಯದಲ್ಲಿ ಒಬ್ಬೊಬ್ಬರೂ ತಮ್ಮ ಭವಣೆಯನ್ನು ಹೇಳುತ್ತಿದ್ದಾರೆ, ಇಂತಹ ಅಧಿಕಾರಿಗಳು ಅಲ್ಲಿದ್ದರೆ, ಬೆಂಗಳೂರು ನಗರದ 45 ಲಕ್ಷ ಜನರಿಗೆ ಯಾವ ರೀತಿ ಕುಡಿಯುವ ನೀರನ್ನು ಸರಿಯಾಗಿ ವಿತರಣೆ ಆಗುವ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ? ಜನಮಂಡಲಿ ಇದೆ, ಆದು ನೀರು ಕೊಡುತ್ತದೆ. ಆದರೆ ಹಂಚಿಕೆ ಕೆಲಸ ಏನಿಗೆ, ಇದು ನಗರ ಸಭೆಗೆ ಸೇರಿದ್ದು. ಈ ವಿಷಯದಲ್ಲಿ ಯಾವರೀತಿಯಾಗಿ ಕೆಲಸ ಮಾಡುವುದಕ್ಕಾಗುತ್ತದೆ. ಇವತ್ತು ನನಗೆ ತಿಳಿದಹಾಗೆ, ಬೆಂಗಳೂರು ನಗರದಲ್ಲಿ ಪ್ರಾಪರ್ಟಿ ಟ್ಯಾಕ್ಸ್ ಎಂದು ಏನು ಇದೆ, ಈ ಪ್ರಾಪರ್ಟಿ ಟ್ಯಾಕ್ಸ್ ಕಲೆಕ್ಟ್ ಮಾಡುವುದರಲ್ಲಿ ನಮಗೆ 50 ಪರ್ಸೆಂಟ್ ಕೂಡ ಬರುತ್ತಾ ಇಲ್ಲ. ಎಲ್ಲಾ ಟ್ಯಾಕ್ಸ್ ಇವೇಷನ್ ನಡೆಯುತ್ತಾ ಇದೆ. ಮತ್ತು ಬೇರೆ ಬೇರೆ ರೀತಿಯಲ್ಲಿ ಅಲ್ಲಿರುವ ಅಧಿಕಾರಿಗಳು ತಿಂದುಹಾಕುತ್ತಿದ್ದಾರೆ. ಅವರ ಮೇಲೆ ಉಸ್ತುವಾರಿ ಆಗಬೇಕೆಂದರೆ, ಇಂತಹ ಕಮೀಷನರ್ ಕೈಯಲ್ಲಿ ಸಾಧ್ಯಾ ಉಂಟೇ? ಇಂತಹವರ ಜೊತೆಯಲ್ಲಿರುವ ಡೆಪ್ಯೂಟಿ ಕಮೀಷನರ್ ರವರಿಗೆ ಸಾಧ್ಯತೆ ಉಂಟೇ? ಈ ವಿಷಯವನ್ನು ನಾನು ತೀವ್ರವಾಗಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಐ.ಎ.ಎಸ್.

ಆಫೀಸರು ಎಂದ ತಕ್ಷಣ, ಸೂಪರ್ ಟೈಮ್ ಸ್ಕೇಲ್ಗೆ ರೀಚ್ ಆದರು ಎಂದ ತಕ್ಷಣ, ಇಂದ್ರಲೋಕದಿಂದಲೋ, ಬ್ರಹ್ಮಲೋಕದಿಂದಲೋ ಬಂದಿದ್ದೇವೆ ಎನ್ನುವ ರೀತಿಯಲ್ಲಿ ಈ ನಡವಳಿಕೆ ಏನು ನಡೆಯುತ್ತಿದೆ, ಇದು ಸರಿಯಲ್ಲ ಎನ್ನುವ ಮಾತನ್ನು ಈ ಸದನದ ಮೂಲಕ ಸಂಬಂಧಪಟ್ಟವರ ಗಮನಕ್ಕೆ ತರುತ್ತಿದ್ದೇನೆ. ನನಗೆ ಬಹಳ ದುಃಖವಾಗಿದೆ, ನಾನು 40 ವರ್ಷಗಳಿಗೂ ಮೇಲ್ಪಟ್ಟು ಬೆಂಗಳೂರು ನಗರಕ್ಕೆ ನಿಷ್ಠೆಯಿಂದ ದುಡಿದಿದ್ದೇನೆ, ಈ ಊರಿಗೆ ಸಹಾಯ ಮಾಡಬೇಕೆಂದು ದುಡಿದಿದ್ದೇನೆ. I love my city more than I love anything else in my life.

ಇಂತಹ ನಗರವನ್ನು ನನ್ನ ಕಣ್ಣೆದುರೆ ಹಾಳು ಮಾಡುತ್ತಿದ್ದಾರೆಂದು ಹೇಳಿದರೆ, ಇಂತಹವರಿಗೆ ಈ ರೀತಿಯ ಅವಕಾಶ ಮಾಡಿಕೊಟ್ಟಿರುವುದು ನ್ಯಾಯವೇ. ಎಲ್ಲಿಯವರೆಗೆ ಅವಕಾಶವನ್ನು ಕೊಡುತ್ತಾ ಇರೋಣ. ಪ್ರತಿದಿನ ಸತ್ಯಕ್ಕೆ ದೂರವಾದ ಮಾತುಗಳನ್ನು ಹೇಳಿಕೊಂಡು, ಅದಕ್ಷತೆಯಿಂದ ವರ್ತಿಸತಕ್ಕ ಅಧಿಕಾರಿಗಳನ್ನು ಇಟ್ಟುಕೊಂಡು ಎಷ್ಟು ದಿನ ನಾವು ಕೆಲಸ ಮಾಡುವುದು. ನಾವು ಕೇಂದ್ರದಿಂದ ಒಂದುನೂರು ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಬರುತ್ತೇವೆ. ಅದರಲ್ಲಿ 73 ಕೋಟಿ ರೂಪಾಯಿಗಳಲ್ಲಿ ಫ್ಲೈ ಓವರ್‌ಗಳನ್ನು ಸಬ್‌ವೇಗಳನ್ನು ಮಾಡುತ್ತೇವೆಂದು ಹೇಳಿದ್ದೀರಿ. ಈ ಒಂದು ನೂರು ಕೋಟಿ ರೂಪಾಯಿಗಳನ್ನು ಇಂತಹ ಅಧಿಕಾರಿಗಳ ಕೈಗೆ ಕೊಟ್ಟು ಬೆಂಗಳೂರು ನಗರದಲ್ಲಿ ಇಂತಹ ಮಹತ್ತರವಾದ ಕಾರ್ಯಕ್ರಮಗಳನ್ನು ಸಾಧಿಸುತ್ತೇವೆ ಎಂದು ಹೇಳುವುದಕ್ಕೆ ಸಾಧ್ಯವಾಗುತ್ತದೆಯೇ? What is the seriousness these people have got, what is the commitment these officers have got and what is the honesty and purpose they have got before them.

ಎನ್ನುವ ಮಾತನ್ನು ಯೋಚನೆ ಮಾಡಬೇಕಾಗುತ್ತದೆ. ನಾವು ಸಾವಿರಾರು ಕೋಟಿ ರೂಪಾಯಿಗಳನ್ನು ರಾಜ್ಯದಾದ್ಯಂತ ಖರ್ಚು ಮಾಡಿ, ಜನತೆಗೆ ಆರ್ಥಿಕ, ಸಾಮಾಜಿಕ ಪ್ರಗತಿಯನ್ನು ಸಾಧಿಸಿ ಕೊಡುವಂಥ ಪ್ರಯತ್ನ ಮಾಡುತ್ತಿದ್ದೇವೆ. ಎನ್ನುವ ಕಾಲದಲ್ಲಿ, ಈ ರೀತಿಯ ವ್ಯವಸ್ಥೆಯಾದರೆ, ಯಾರ ಕೈಯಲ್ಲಿ ಮಾಡುವುದಕ್ಕಾಗುತ್ತದೆ?

Who is the one who could handle the instrument of change? It is not just enough that there is a political party which functions as an instrument of change. That also require further instrument to help as catalyst to do the job. ಅದನ್ನು ಹೇಳುವುದಕ್ಕೆ ಶಕ್ತಿ ಇಲ್ಲ ಎಂದರೆ ನಮ್ಮ ಕಷ್ಟ ಏನಾಗುತ್ತದೆ. ನಾನು ಹೆಚ್ಚಾಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಆಡಳಿತದಲ್ಲಿರುವಂತಹ ಅಧಿಕಾರಿಗಳ ಬಗ್ಗೆ ನಾವು ಬಹಳ ಸಲ ಮಾತನಾಡುತ್ತೇವೆ. ನನ್ನ ಸ್ನೇಹಿತರೂ ಹೇಳುತ್ತಾರೆ. ಟೆಲಿಫೋನ್ ಮಾಡಿದರೆ ಲೈನಿಗೆ ಬರುವುದಿಲ್ಲ. ಉದಾಹರಣೆಗೆ ಈ ಸದನದಲ್ಲಿ ಕಾರ್ಯದರ್ಶಿಗಳು ಯಾರೂ ಇಲ್ಲ ಎಂದು ಸಾಕಷ್ಟು ಕೋಲಾಹಲ ಆಯಿತು. ಯಾರನ್ನಾದರೂ ಕರೆಸಿಕೊಳ್ಳಬೇಕೆಂದು ನಾವು ಬಹಳ ಪ್ರಯತ್ನ ಮಾಡಿದೆವು. ಚೀಫ್ ಸೆಕ್ರೆಟರಿಯನ್ನು ಕರೆಸಿಕೊಳ್ಳಬೇಕೆಂದು ನಮ್ಮ ವಿಪ್‌ರವರೂ ಪ್ರಯತ್ನ ಮಾಡಿದರು, ಅವರಿಗೆ ಬೆಲೆ ಸಿಗಲಿಲ್ಲ. ನಾನು ಪ್ರಯತ್ನ ಮಾಡಿದೆ, ಫೋನ್ ಮಾಡಿದರೆ ಲೈನಿನಲ್ಲಿ ಬರುವುದಕ್ಕೆ ಸಾಧ್ಯತೆ ಇಲ್ಲ ಎಂದು ಹೇಳಿದರು. ಅವರ ಪ್ರೈವೇಟ್ ಸೆಕ್ರೆಟರಿಯವರು ಮೀಟಿಂಗ್‌ನಲ್ಲಿದ್ದಾರೆ ಎಂದು ಹೇಳಿದರು. ಮೀಟಿಂಗ್‌ನಲ್ಲಿದ್ದರೂ ಅರ್ಜೆಂಟಾಗಿ ಕರೆಸಿ ಎಂದರೆ ಅಲ್ಲಿಗೆ ಟೆಲಿಫೋನ್ ಇಲ್ಲ ಎಂದು ಹೇಳಿದರು. ಇದು ನನಗೆ ಅರ್ಥ ಆಗುವುದಿಲ್ಲ. ನಮ್ಮ ಅಧಿಕಾರಿಗಳಿಗೆ ಇಷ್ಟು ದುರಹಂಕಾರ ಆಗಿಬಿಟ್ಟರೆ, ಪ್ರಜಾಪ್ರತಿನಿಧಿಗಳು ಇರುವಂತಹ ಕಾಲದಲ್ಲಿ ಯಾರಿಗೆ ನೇರವಾಗಿ ಸೇವೆ ಮಾಡುವುದಕ್ಕೆ ಸಾಧ್ಯ ಇದೆ. They cannot serve through this House they cannot serve through the representatives of the people to whom they serve and in what manner they

serve. ಎನ್ನುವುದು ದೊಡ್ಡ ಪ್ರಶ್ನೆ. ನನ್ನ ಮನಸ್ಸಿಗೆ ಕಾಡುತ್ತಿದೆ. ನಾನು ಕಣ್ಣಾರೆ ಕಂಡಹಾಗೆ ಇವರ ವೈಖರಿ ಎಲ್ಲಿ ಕಾಣುತ್ತದೆ ಎಂದರೆ, ತಾವು ವಿಧಾನಸೌಧದ ಮುಂದೆ ಪೋರ್ಟಿಕೊ ಹತ್ತಿರ ಅರ್ಧ ಗಂಟೆ ನಿಂತುಕೊಂಡರೆ ಸಾಕಾಗುತ್ತದೆ. ಪ್ರತಿದಿನ ನಾನು ಇದನ್ನು ಗಮನಿಸುತ್ತಿದ್ದೇನೆ. ಇವರ ಕಾರ್ಗಳು ಎಷ್ಟು ಸ್ಪೀಡ್‌ನಲ್ಲಿ ಹೇಗೆ ಬರುತ್ತವೆ, ಬಂದ ತಕ್ಷಣ ಇವರು ಇಳಿಯಬೇಕಾದರೆ ಅಲ್ಲಿರುವ ಪೋಲಿಸ್ ಇವರ ಕಾರಿನ ಬಾಗಿಲು ತೆಗೆಯಬೇಕು, ಇವರ ಕೈಯಲ್ಲಿ ಬಾಗಿಲು ತೆಗೆದುಕೊಳ್ಳುವುದಕ್ಕೂ ಸಹ ಸಾಧ್ಯ ಇಲ್ಲ, ಬಾಗಿಲು ತೆಗೆದಮೇಲೆ ಇವರು ಎದ್ದು ಹೊರಗೆ ಬರಬೇಕು. ಪುನಃ ಇವರು ವಾಪಸ್ ಹೋಗುವಾಗ ಕಾರ್ ಬರಬೇಕು, ತಿರುಗಿ ಪೋಲೀಸ್‌ನವರು ಇವರ ಕಾರಿನ ಬಾಗಿಲು ತೆಗೆಯಬೇಕು,. ಇವರು ಒಳಗೆ ಹೋಗಬೇಕು. ಇದು ಇವರ ವ್ಯಕ್ತಿತ್ವದ ವೈಖರಿ. ಇದು ಸಣ್ಣ ಮಾತು ಎಂದು ಅಂದುಕೊಳ್ಳಬೇಡಿ. ಅಂದರೆ small things reflects the inner character of the man. ಇದುವರೆಗೆ ಮಾತನಾಡಿದ ನಮ್ಮ ಸ್ನೇಹಿತರು, ಅಧಿಕಾರಿಗಳು ಯಾರಾದರೂ ಏನೇನು ಮಾಡುತ್ತಾರೆ ಎಂದು ಹೇಳಿದರು. ನಾವು ಅಷ್ಟು ದೂರ ಹೋಗಬೇಕಾಗಿಲ್ಲ. Very small actions of an individual relect the inner core or the character of the individual ಎಂಬ ಮಾತನ್ನು ನಾನು ಹೇಳುತ್ತಿದ್ದೇನೆ ಇದನ್ನು ತಾವು ನಿಲ್ಲಿಸಬೇಕು.

ಆ ಪೋಲಿಸರು ಬಂದು ಕಾರಿನ ಬಾಗಿಲು ತೆಗೆದ ಮೇಲೆ ಇವರು ಒಳಗೆ ಹೋಗುವುದು, ಹೋರಗೆ ಬರುವುದು ಈ ಕೆಲಸ ಇದೆಯಲ್ಲ ಅವರಿಂದ ಅದನ್ನು ನಿಲ್ಲಿಸಿದರೆ ಅ ದುರಭ್ಯಾಸವನ್ನು ದುರಹಂಕಾರವನ್ನು ನಿಲ್ಲಿಸಿದರೆ ಮೇಲುಗಡೆ ಅಧಿಕಾರದ ಖುರ್ಚಿಯಲ್ಲಿ ಕುಳಿತುಕೊಂಡಾಗ ಹೇಗೆ ನಡೆದುಕೊಳ್ಳಬೇಕೆಂದು ಇವರಿಗೆ ಅರ್ಥವಾಗುತ್ತದೆ. ನಮ್ಮ ಅಧಿಕಾರಿಗಳು ನಮ್ಮ ಸದನವನ್ನು ಯಾವತರಹ ಗೌರವದಿಂದ ನೋಡುತ್ತಾರೆ ಎಂದು ಮತ್ತೊಂದು ಮಾತನ್ನು ಹೇಳುತ್ತಿದ್ದೇನೆ. ನಾವು ಪ್ರಶ್ನೆಗಳನ್ನು ಕಳುಹಿಸಿಕೊಡುತ್ತೇವೆ. ಲಿಖಿತ ಮೂಲಕ ಉತ್ತರ ಕೊಡುವ ಪ್ರಶ್ನೆಗಳಿರಬಹುದು ಅಥವಾ ನೇರವಾಗಿ ಇಲ್ಲೇ ಉತ್ತರ ಕೊಡುವ ಪ್ರಶ್ನೆಗಳು ಆಗಿರಬಹುದು. ಅದಕ್ಕೆ ಉತ್ತರಗಳನ್ನು ಕೊಡುವ ಜವಾಬ್ದಾರಿ ಮಂತ್ರಿಗಳದ್ದು ಎಂದು ಒಪ್ಪಿಕೊಳ್ಳುತ್ತೇನೆ. ಆದರೆ ಮಂತ್ರಿಗಳನ್ನು ತಪ್ಪುದಾರಿಗೆ ಎಳೆಯುವಂತಹ ಉತ್ತರಗಳನ್ನು ಬರೆದು ಕೊಡುತ್ತಾರಲ್ಲ ಅದನ್ನು ನೋಡಿದರೆ ಅರ್ಥವಾಗುತ್ತದೆ. How much these Officers are committed to respect the wishes of this House, respect the sentiments of this House or the interest that the House represent as far as the people of this State is concerned. ಈ ರೀತಿಯಾಗಿ ಹೇಳಬಯಸುತ್ತೇನೆ. ಇನ್ನೊಂದು ನಮ್ಮ ಸ್ನೇಹಿತರು ಒಂದು ಸರ್ಕ್ಯುಲರ್ ಓದಬೇಕಾದರೆ ಹೇಳುತ್ತಿದ್ದರು. ಅವರು ಮಾನ್ಯ ಭೈರೇಗೌಡರು ಈ ಸದನದಲ್ಲಿ ಸೆಕ್ರೆಟರಿಗಳು ಇರುವುದಿಲ್ಲ ಎಂದು ಹೇಳಿ ಒಂದು ಸರ್ಕ್ಯುಲರ್‌ನ್ನು ಎಲ್ಲಾ ಅಧಿಕಾರಿಗಳಿಗೂ ಕಳುಹಿಸಿಕೊಟ್ಟಿರುವುದನ್ನು ಹೇಳಿದರು. ಆ ಸರ್ಕ್ಯುಲರ್‌ನಲ್ಲಿ ಒಂದೇ ಒಂದು ಶಬ್ದವನ್ನು ಉಪಯೋಗಿಸಿದ್ದಾರೆ. ಸನ್ಮಾನ್ಯ ಅಧ್ಯಕ್ಷರೇ, ತಾವೇ ಇದಕ್ಕೆ ಅರ್ಥ ಹೇಳಬೇಕು. ತಪ್ಪಾಗಿದ್ದರೆ ಕ್ಷಮಿಸಬೇಕು.

" during the ensuing two weeks,...so oversees the suggestions pertaining to all the Departments"...

MR. SPEAKER: How are you concerned about the Officers in the gallery? You should be immediately concern with the Ministers and not the Officers.

SRI A.K. ANANTHAKRISHNA : That is why I said that the main responsibility is on the Minister.

MR. SPEAKER: It is the Minister who is responsible to this House and not the Officers.

SRI A.K. ANANTHAKRISHNA : I am not saying it.

MR. SPEAKER : The kind of Circular to which you are making a reference has absolutely no relevance.

SRI A.K. ANANTHAKRISHNA :I would not like to question what you say. What I am concerned is, this very Circular says "compulsion of the Officers. "

SRI K. H. RANGANATH : When the Hon'ble Speaker says that the particular Circular is not relevant, but the Hon'ble Member is referring to it. It should be insisted upon by the Hon'ble Speaker not to refer to it.

MR. SPEAKER : That is not relevant. It is something between the Secretary & the Chief Secretary.

SRI A.K. ANANTHAKRISHNA : This Circular is allowed to be read by the Hon'ble Deputy speaker.

SRI K.H. RANGANATH : It should have been said at that time.

SRI A.K. ANANTHAKRISHNA : When Sri Byregowda was reading this circular, I raised a point of order. I was not allowed. When Sri Byre Gowda was mentioning this, I was on my legs.

MR. SPEAKER : As far as this House is concerned, it is the Council of Ministers which is responsible, which is accountable to this House and not the Officers.

SRI A.K. ANANTHAKRISHNA : What I said is this Circular has come within the knowledge of all of us. It says, "....& oversees the suggestions pertaining to all the Departments". That means, an Officer here in the rank of the Secretary or the Deputy Secretary or whoever it is oversees the happennings in this House and reports it to the Chief Secretary. I don't know whether this word "oversees" is relevant on this context. I am only talking about the word used " oversees". How does an Officer oversee like an overseer on the functions of this House? What I want to mention is, to what extent the bureaucracy asserts unto itself the supreme position as against an elected body or anybody else for that matter. That is all what I was trying to say. I mentioned about the number of answers that have been given by the officers taking the House for granted, taking anybody for granted. For that, I do concede that the Minister is responsible and that is why I am suggesting that the Minister or the Chief Minister whoever it is whenever they have got to answer on the Floor of this House, they have to make a little indepth study of the question and the spirit behind putting this question

and answer to this house because the answer is meant for the people of the State and not for just to please or satisfy the whims and functions of Members of this House. This is what I am trying to say because there is lot of reference about improving, rationalising the administration of this Government. So, you cannot thinkd in terms of improving the administration, make it responsible or responsive unless they become reponsible and responsive, even to the question that we raise in this House. This is what I am trying to say. I am not trying to find fault with any individual or individual Minister because, the purpose of being elected and come to this House is to serve the people of our State and individually our own Constituency to the extent that is necessary.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುತ್ತಿದ್ದಾರೆಂದು ನಾನು ಭಾವಿಸಿದ್ದೆ. ಆದರೆ ಅವರು ಮಾತನಾಡುತ್ತಿರುವುದು ನೋಡಿದರೆ ಈ ಸಬ್ಜೆಕ್ಟ್ ಬೇರೆ ಇದ್ದಂತೆ ಕಾಣುತ್ತದೆ. ಅದರಿಂದ ನಮಗೆಲ್ಲಾ ಸ್ವಲ್ಪ ಟೈಮ್ ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : ಅದು ತಮಗೆ ಗೊತ್ತಿಲ್ಲವೇ?

SRI A.K. ANANTHAKRISHNA : I will read what this Governor's Address says for the benefit of my good friend :

" With the object of making the administration more courteous, responsible and responsive, my Govt, will be initiating a pancha Sutra programme comprising the following measures :

Simplication of procedure, delegation of authority, public accountability, monitoring from the village to the State level, Redressal of Public grievances."

I thought I am confining myself only to this part of it. ಮಾನ್ಯ ಅಧ್ಯಕ್ಷರೇ, ನಾನು ನನ್ನ ಕಳಕಳಿಯನ್ನು ತಮ್ಮ ಮೂಲಕ ಈ ಸಭೆಯಲ್ಲಿ ಸಂಬಂಧ ಪಟ್ಟ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡಿದೆ. ನನ್ನದು ಒಂದೇ ಒಂದು ದೃಷ್ಟಿ ಕೋನ. ಚುನಾಯಿತ ಸದಸ್ಯರುಗಳಿಗೆ ಮತ್ತು ಗೌರವಾನ್ವಿತ ನಾಗರೀಕರಿಗೆ ಕೊಡಬೇಕಾದಂತಹ ಗೌರವವನ್ನು ತನ್ನ ಆಡಳಿತ ವ್ಯಾಪ್ತಿಯಲ್ಲಿ ಜನಗಳಿಗೆ ಜನಸ್ತೋಮಕ್ಕೆ ಮಾಡಬೇಕಾದಂತಹ ಸೇವೆಯನ್ನು ಪ್ರಗತಿ, ಗುರಿ ಸಾಧನೆ ಮಾಡುವಂತಹ ಪ್ರಯತ್ನದಲ್ಲಿ ಯಾವ ಅಧಿಕಾರಿಗಳು ಈ ಕೆಲಸ ಮಾಡುವುದಿಲ್ಲವೋ ಅಂತಹ ಅಧಿಕಾರಿಗಳ ಮೇಲೆ ಮೇಲ್ವಿಚಾರಣೆ ಮಾಡತಕ್ಕಂಥಾದ್ದು ಯಾರೇ ಆಗಿರಲಿ ಸೆಕ್ರೆಟರಿ ಆಗಿರಬಹುದು ಮಂತ್ರಿಗಳು ಆಗಿರಬಹುದು, ಮುಖ್ಯಮಂತ್ರಿಗಳು ಆಗಿರಬಹುದು, ಯಾರೇ ಆಗಿರಬಹುದು ಈ ಬಗ್ಗೆ ಹೆಚ್ಚು ಗಮನ ಕೊಡಬೇಕು ಎನ್ನುವ ಮಾತನ್ನು ನಾನು ಬಹಳ ನಿರ್ದಾಕ್ಷಿಣ್ಯವಾಗಿ ತಮ್ಮ ಮುಂದೆ ಹೇಳುವುದಕ್ಕೆ ಆಸೆ ಪಡುತ್ತಿದ್ದೇನೆ. ನಾನು ನನ್ನ ಕ್ಷೇತ್ರದಲ್ಲಿ ಅನುಭವಿಸುತ್ತೇನೆ. ನಾನು ಪದೇ ಪದೇ ಯಾರ ಬಾಗಿಲು ಕಾಯತಕ್ಕಂಥ ಸಂಸ್ಕೃತಿಗೆ ಒಳಪಟ್ಟವನಲ್ಲ. ನಾನು ಕೇಳುವುದನ್ನು ಹೇಳಬೇಕಾಗುತ್ತದೆ.

ಆದರೆ ಏನು ಒಂದು ರೆಸ್ಪಾನ್ಸಿಬಲ್ ಆಗಿರಬೇಕಾಗಿತ್ತೋ ಅದು ಇಲ್ಲವೆಂದು ನಾನು ಒತ್ತಿ ಒತ್ತಿ ಹೇಳುತ್ತಿದ್ದೇನೆ. ನೂರಾರು ಕೋಟಿ ರೂಪಾಯಿಗಳನ್ನು ಬೆಂಗಳೂರು ನಗರ ಪಾಲಿಕೆ ಖರ್ಚುಮಾಡುತ್ತಿದೆ. ಈ ಹಣವನ್ನು ಸರಿಯಾದ ರೀತಿಯಲ್ಲಿ ಖರ್ಚು ಮಾಡದಿದ್ದರೆ ನಗರದ ಜನಕ್ಕೆ ಯಾವ ರೀತಿಯಿಂದ ಸೌಲಭ್ಯ ಕೊಡುವುದಕ್ಕಾಗುತ್ತದೆಂದು ಹೇಳಬಯಸುತ್ತೇನೆ. ಈಗ ಬೆಂಗಳೂರು ನಗರ ಬಹಳ ವೇಗವಾಗಿ ಬೆಳೆಯುತ್ತಿದೆ. ಬೆಂಗಳೂರು ನಗರ ದೇಶದಲ್ಲಿ ಮತ್ತು ಅಂತರ ರಾಷ್ಟ್ರೀಯ ಮಟ್ಟದಲ್ಲೂ ಗಮನ ಸೆಳೆಯುತ್ತಿದೆ. ಇಲ್ಲಿಗೆ ಬೇರೆ ಕಡೆಯಿಂದ ಜನರು ಬಂದು ವಾಸ ಮಾಡುವುದಕ್ಕೆ ಬಯಸುತ್ತಿದ್ದಾರೆ. ವ್ಯಾಪರ ಮಾಡುವುದಕ್ಕೋಸ್ಕರ ಬೇರೆ ಕಡೆಯಿಂದ ಅನೇಕ ಜನ ಬರುತ್ತಿದ್ದಾರೆ. ಹೀಗಿರುವಾಗ ಎಲ್ಲಾ ಸೌಲಭ್ಯಗಳನ್ನು ಕೊಡುವ ಕಡೆ ಮುಖ್ಯವಾಗಿ ಗಮನಹರಿಸಬೇಕು. ಬೆಂಗಳೂರು ನಗರದಲ್ಲಿ ನಿರ್ಗತಿಕರು, ಆರ್ಥಿಕವಾಗಿ, ಸಾಮಾಜಿಕವಾಗಿ ಹಿಂದುಳಿದ ಜನ ಯಾರಿದ್ದಾರೆ ಅಂಥವರಿಗೆ ವಸತಿ ಸೌಲಭ್ಯ ಒದಗಿಸುವುದು, ಪೌರ ಸೌಲಭ್ಯ ಒದಗಿಸುವುದು, ಅವರ ಜನ ಜೀವನ ಮಟ್ಟವನ್ನು ಸುಧಾರಿಸುವುದು ಇಂಥಾ ಕೆಲಸಗಳನ್ನು ಮಾಡುವುದಕ್ಕೆ ಕಾರ್ಯಕ್ರಮಗಳನ್ನು ಹಾಕಿಕೊಂಡು ಅವರೂ ಸಹಾ ಮುಂದುವರಿದಂಥ ಜನತೆಯ ಜೊತೆಯಲ್ಲಿ ಸರಿಸಮಾನವಾಗಿ ಬದುಕುವಂತೆ ಮಾಡಬೇಕು. ಈ ಕೆಲಸ ಮಾಡಬೇಕಾಗಿದ್ದರೆ ಅದಕ್ಕೆ ತಕ್ಕಂತೆ ನೀತಿ ನಿರೂಪಣೆಗಳನ್ನು, ಧ್ಯೇಯಧೋರಣೆಗಳನ್ನು, ಸಿದ್ಧಾಂತಗಳನ್ನು ಚೆನ್ನಾಗಿ ಅರಿತು ಅದಕ್ಕೆ ಸರಿದೂಗುವಂಥ ರೀತಿಯಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಇನ್ನೂ ಒಂದು ವಿಷಯವನ್ನು ತಮ್ಮ ಮುಖಾಂತರ ಈ ಸಭೆಗೆ ಮತ್ತು ಮಾನ್ಯ ಪೌರಾಡಳಿತ ಮಂತ್ರಿಯವರಿಗೆ ತಿಳಿಸಬಯಸುತ್ತೇನೆ. ಬೆಂಗಳೂರು ನಗರದಲ್ಲಿ ಕುಡಿಯುವ ನೀರಿನ ಸಮಸ್ಯೆಗಿಂತ ಹೆಚ್ಚಾಗಿ ಈ ಟ್ರಾಫಿಕ್ ಪ್ರಾಬ್ಲಮ್ ಜಾಸ್ತಿಯಾಗುತ್ತಿದೆ. ಅದು ಎಲ್ಲಿಯವರೆಗೆ ಬರುತ್ತಿದೆಯೆಂದರೆ, ಇನ್ನು ಕೆಲವು ದಿನಗಳಾದ ಮೇಲೆ ಬೆಂಗಳೂರು ನಗರದ ರಸ್ತೆಗಳಲ್ಲಿ ಜನ ನಡೆಯಬೇಕೋ ಅಥವಾ ಬರೀ ವಾಹನಗಳು ಸಂಚಾರ ಇರಬೇಕೋ ಎನ್ನುವ ಮಟ್ಟಕ್ಕೆ ಹೋಗುತ್ತದೆ. ಅದರಲ್ಲೂ ಲಕ್ಷಾಂತರ ಶಾಲಾ ಮಕ್ಕಳು ಮತ್ತು ವೃದ್ಧರು ಬಸ್‌ಗಳಲ್ಲಿ ಓಡಾಡುತ್ತಿದ್ದಾರೆ. ಇವತ್ತಿನ ದಿವಸ ಮಕ್ಕಳುಗಳು ಬಸ್‌ಗಳಲ್ಲಿ ಶಾಲೆಗೆ ಹೋದಮೇಲೆ ಅವರು ವಾಪಸ್ ಬರುವವರೆಗೂ ತಂದೆತಾಯಿಗಳು ಯೋಚನೆ ಮಾಡುತ್ತಿರುತ್ತಾರೆ. ಇಂಥಾ ಕಷ್ಟದ ಪರಿಸ್ಥಿತಿ ಬಂದಿದೆ. ಆದ್ದರಿಂದ, ಇನ್ನು ಮುಂದೆ ವಾಹನಗಳ ಚಾಲನೆ ಏನಿದೆ ಅದರ ಬಗ್ಗೆ ತೀವ್ರವಾದಂಥ ಮತ್ತು ವೈಜ್ಞಾನಿಕವಾದ ನೇರ ಕ್ರಮಗಳನ್ನು ತೆಗೆದುಕೊಳ್ಳದಿದ್ದರೆ ಪರಿಸ್ಥಿತಿ ಇನ್ನೂ ಕಷ್ಟವಾಗುತ್ತದೆ. ಈಗಾಗಲೇ ಪ್ರತಿ ದಿನ ಒಂದು ಎರಡು ಆಕ್ಸಿಡೆಂಟ್‌ಗಳು, ಮರಣಗಳು ಆಗುತ್ತಿರುವುದನ್ನು ಪೇಪರಿನಲ್ಲಿ ನೋಡುತ್ತಿದ್ದೇವೆ. ಮುಂದೆ ನೂರಾರು ಜನ ಸಾಯುವಂತಹ ಕಾಲ ಬರುತ್ತದೆ. ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಬೆಂಗಳೂರು ನಗರದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಕಾನ್‌ವೆಂಟ್‌ಗಳು ಬೆಳೆದುಬರುತ್ತಿದೆ. ಸಹಸ್ರಾರು ಮಕ್ಕಳು ಅಲ್ಲಿಗೆ ಹೋಗುತ್ತಿದ್ದಾರೆ. ಅಲ್ಲಿಗೆ ಹೋಗುವವರು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮುಂದುವರಿದ ಜನರ ಮಕ್ಕಳೇ ಎಂದು ಹೇಳುವುದಕ್ಕಾಗುವುದಿಲ್ಲ. ಎಲ್ಲಾ ತರಹದ ಜನರು ತಮ್ಮ ಮಕ್ಕಳನ್ನು ಅಲ್ಲಿಗೆ ಕಳುಹಿಸುತ್ತಿದ್ದಾರೆ. ಈ ಶಾಲೆಗಳಿಗೆ ಹೋಗುವ ಮಕ್ಕಳನ್ನು ಬಿಡುವುದಕ್ಕೆ ಮತ್ತು ಕರೆದುಕೊಂಡು ಬರುವುದಕ್ಕೆ ಸಾವಿರಾರೂ ವಾಹನಗಳು ಶಾಲೆಗಳ ಹತ್ತಿರ ಹೋಗಿ ನಿಲ್ಲುತ್ತವೆ. ಬಾಲ್ಡ್‌ವಿನ್, ಬಿಷಪ್‌ಕಾಟನ್, ಸೋಫಿಯಾ ಶಾಲೆಗಳ ಮುಂದೆ ಎಷ್ಟು ವಾಹನಗಳನ್ನು ನಿಲ್ಲಿಸುತ್ತಾರೆಂದರೆ ಬೇರೆಯವರು ತಮ್ಮ ಮಕ್ಕಳನ್ನು ಕರೆದುಕೊಂಡು ಹೋಗುವುದಕ್ಕೇ ಆಗುವುದಿಲ್ಲ. ಶಾಲೆಗೆ ಹೋದ ಮಕ್ಕಳು ಹೊರಗೆ ಬರಬೇಕಾದರೆ ಬಹಳ ಕಷ್ಟವಾಗುತ್ತದೆ. ಶಾಲೆ ಬಿಡತಕ್ಕಂಥ ಸಮಯದಲ್ಲಿ ಆ ರಸ್ತೆಯಲ್ಲಿ ಹೋಗಬೇಕಾದ ಬಿ.ಟಿ.ಎಸ್. ವಾಹನಗಳ ಸಂಚಾರವನ್ನು ಬೇರೆ ಕಡೆ ಡೈವರ್ಟ್ ಮಾಡುತ್ತಾರೆ. ಆ ರಸ್ತೆಯಲ್ಲಿ ಜನಗಳು ಹೋಗುವುದಕ್ಕಾಗುವುದಿಲ್ಲ.

ಇದು ಏತಕ್ಕೆ ಆಗುತ್ತಿದೆ? ದೊಡ್ಡ ದೊಡ್ಡ ಅಧಿಕಾರದಲ್ಲಿರುವವರ ಮಕ್ಕಳು ಶ್ರೀಮಂತರ ಮಕ್ಕಳು ವ್ಯಾಪಾರಸ್ಥರ ಮಕ್ಕಳುಗಳು ಆ ಶಾಲೆಗಳಿಗೆ ಹೋಗುತ್ತಾರೆ. ಅವರ ಮಕ್ಕಳುಗಳನ್ನು ಕರೆದುಕೊಂಡು ಬರುವುದಕ್ಕೆ ಅಲ್ಲಿಗೆ ವಾಹನಗಳನ್ನು ಕಳುಹಿಸುತ್ತಾರೆ. ಆ ರಸ್ತೆ ಉದ್ದಕ್ಕೂ ವಾಹನಗಳನ್ನು ನಿಲ್ಲಿಸಿ ಬೇರೆಯವರು ತಮ್ಮ ಮಕ್ಕಳನ್ನು ಕರೆದುಕೊಂಡು ಹೋಗುವುದಕ್ಕೆ ತೊಂದರೆಯಾಗುತ್ತಿದೆ. ಆದುದರಿಂದ, ಆ ಶಾಲೆಯ ಅಕ್ಕ ಪಕ್ಕಗಳ ರಸ್ತೆಗಳಲ್ಲಿ, ' ನೋ ಪಾರ್ಕಿಂಗ್ ' ಬೋರ್ಡ್‌ಗಳನ್ನು ಹಾಕಿ ನಿಯಂತ್ರಣ ಮಾಡಬೇಕು. ಎಲ್ಲೆಲ್ಲಿ ಶಾಲೆಗಳು ಇವೆಯೋ ಅಲ್ಲಿ ಜನ ಸಂದಣಿ, ಶೇಖರಣೆ ಜಾಸ್ತಿಯಾಗುತ್ತದೆ. ಇದರ ಜೊತೆಗೆ ಅಲ್ಲಿ Sky rocketing multi storeyed buildings. ಬರುತ್ತಿವೆ, ಅದರ ಮೇಲೆ ಸರ್ಕಾರ ನಿಯಂತ್ರಣ ಜಾಸ್ತಿ ಹಾಕಬೇಕು. ಅವಕ್ಕೆ ಅವಕಾಶ ಮಾಡಿಕೊಡಬಾರದು. ಈಗೀಗ ಶಾಲಾ ಕಾಲೇಜುಗಳ ಆವರಣಗಳಲ್ಲಿ ದೊಡ್ಡ ದೊಡ್ಡದಾಗಿ ಬಿಲ್ಡಿಂಗ್‌ಗಳನ್ನು ಕಟ್ಟುತ್ತಿದ್ದಾರೆ. ಈಗ ತಾನೆ ನಾನು ಕೇಳಿದೆ, ಬಾಲ್ಡಿನ್ ಗರ್ಲ್ಸ್ ಸ್ಕೂಲ್ ಕಾಂಪೌಂಡ್‌ನಲ್ಲಿ ಒಂದು ದೊಡ್ಡ ಕಾಂಪ್ಲೆಕ್ಸ್ ಕಟ್ಟುವ ಪ್ರಯತ್ನ ಮಾಡುತ್ತಿದ್ದಾರೆ. ಹೀಗಾಗಿ ಶಾಲೆಗಳಲ್ಲಿ ಮಕ್ಕಳು ಬರುವುದಕ್ಕೆ ಹೋಗುವುದಕ್ಕೆ ಬಹಳ ಕಷ್ಟ ಆಗುತ್ತಿದೆ ಎನ್ನುವಂತಹ ಕಾಲದಲ್ಲಿ ರಸ್ತೆಯಲ್ಲಿ ಬಸ್‌ಗಳು ಹೋಗುವುದಕ್ಕೆ ಆಗುವುದಿಲ್ಲ ಎಂದು ಹೇಳುವಂತಹ ಕಾಲದಲ್ಲಿ ಕಾರುಗಳಿಗೆ ಪಾರ್ಕ್ ಮಾಡುವುದಕ್ಕೆ ಸ್ಥಳ ಇಲ್ಲದ ಹಾಗೆ ಮತ್ತಷ್ಟು ದೊಡ್ಡ ದೊಡ್ಡ ಬಿಲ್ಡಿಂಗ್ ಬಂತು ಅಂದರೆ ಮತ್ತೆ ವಾಹನ ಸಂಚಾರ ಹೆಚ್ಚು ಬೆಳೆಯುತ್ತದೆ. ಅಲ್ಲಿ ಜನರಿಗೆ ಎಷ್ಟು ಟ್ರಾಫಿಕ್‌ಹಜಾರ್ಡ್ ಹೆಚ್ಚು ಆಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಸಂಬಂಧಪಟ್ಟ ಮಂತ್ರಿಗಳು ಇದನ್ನು ತೀವ್ರವಾಗಿ ಗಮನಿಸಬೇಕು ಮತ್ತು ಟ್ರಾಫಿಕ್ ಕಂಟ್ರೋಲ್ ಮಾಡುವಂತಹ ಪೋಲೀಸ್ ಇಲಾಖೆಯು ಕೂಡ ಇದರ ಕಡೆಗೆ ಹೆಚ್ಚಿನ ಗಮನವನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಸಭಾಧ್ಯಕ್ಷರವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಶ್ರೀ ವಾಟಾಳ್ ನಾಗರಾಜ್....

ಶ್ರೀ ವಾಟಾಳ್ ನಾಗರಾಜ್ : ಇವತ್ತು ಶುರು ಮಾಡುತ್ತೇನೆ, ನಾಳೆ ಮುಂದುವರಿಸುತ್ತೇನೆ.

ಅಧ್ಯಕ್ಷರು : ನಿಮ್ಮ ಭಾಷಣ ಕೇಳುವುದಕ್ಕೆ ಎಲ್ಲಾ ಬಂದು ಕುಳಿತಿದ್ದಾರೆ. ನನಗೆ ಫೋರ್ಸ್ ಮಾಡುವುದಕ್ಕೆ ಇಷ್ಟು ಇಲ್ಲ. ಶ್ರೀ ಶಿವರಾಮೇಗೌಡರವರೇ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ : ಆರು ಗಂಟೆಯವರೆಗೆ ಮಾತನಾಡುತ್ತೇನೆ.

ಶ್ರೀ ಎಲ್.ಆರ್ . ಶಿವರಾಮೇಗೌಡ : ನೀವು ಮಾತನಾಡದಿದ್ದರೆ ನಾನು ಮಾತನಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ನಾಳೆ ನನಗೆ ಮಾತನಾಡಲು ಅವಕಾಶ ಕೊಡಿ.

+ ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) : ಮಾನ್ಯ ಸಭಾಧ್ಯಕ್ಷರೇ, ರಾಜ್ಯಪಾಲರ ಭಾಷಣವನ್ನು ಸ್ವಾಗತಿಸುತ್ತಾ ನನ್ನ ಮಾತನ್ನು ಮುಂದುವರಿಸುತ್ತೇನೆ. ನಾಲ್ಕು ವರ್ಷಗಳಲ್ಲಿ ಮಾಡದೇ ಇರತಕ್ಕಂಥ ಕೆಲಸವನ್ನು ನಮ್ಮ ಶ್ರೀ ಬಂಗಾರಪ್ಪನವರ ನೇತೃತ್ವದ ಈ ಸರ್ಕಾರ ಕೇವಲ ನಾಲ್ಕು ತಿಂಗಳಲ್ಲಿ ಮಾಡಿದೆ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಬಹುಶಃ ಇದನ್ನು ಹೇಳಿದಾಗ ಈ ಕಡೆಯವರಿಗೆ ಸ್ವಲ್ಪ ಇರುಸು ಮುರುಸು ಆಗುತ್ತದೆ ಎಂದು ಕಾಣುತ್ತದೆ. ಜನಸಾಮಾನ್ಯರಿಗೆ, ರೈತಾಪಿ ವರ್ಗಕ್ಕೆ ತುಳಿತಕ್ಕೆ ಒಳಗಾಗಿರತಕ್ಕ ಜನರಿಗೆ ಸಾಕಷ್ಟು ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುವ ಸರ್ಕಾರ ಎಂದರೆ ಏನೂ ತಪ್ಪಾಗುವುದಿಲ್ಲ. ಪ್ರಜಾತಂತ್ರದಲ್ಲಿ ಒಂದು ಹೊಸ ಸರ್ಕಾರ ಆಡಳಿತಕ್ಕೆ ಅಥವಾ ಅಸ್ತಿತ್ವಕ್ಕೆ ಬಂದ ಮೇಲೆ ಕೊನೆಯಪಕ್ಷ ವಿರೋಧಿ ಪಕ್ಷದವರು

ಆರು ತಿಂಗಳ ಸಮಯವಾದರೂ ಕೊಡಬೇಕಾಗಿತ್ತು ಎಂದು ಹೇಳಿ ನಾನಾದರೂ ಸಹ ಭಾವನೆ ಮಾಡಿಕೊಳ್ಳುತ್ತೇನೆ. ಏಕೆಂದರೆ, ನಮ್ಮ ಹಾಗೆ ಇವರೆಲ್ಲಾ ಹೊಸದಾಗಿ ಬಂದವರೇನೂ ಅಲ್ಲ. ಬಹಳ ದಿವಸ ಅಧಿಕಾರದ ಸವಿಯನ್ನು ಉಂಡವರು. ಅಧಿಕಾರ ನಡೆಸಿದಂತಹ ಜನ ಇವರು. ಕೊನೆಯಪಕ್ಷ ಇವರು ಆರು ತಿಂಗಳ ಸಮಯವಾದರೂ ಅವಕಾಶವಾದರೂ ಈ ಸರ್ಕಾರಕ್ಕೆ ಕೊಡದೇ ಈ ಸರ್ಕಾರ ಸುಡುಗಾಡು ಸರ್ಕಾರ ಎಂದರು. ಭ್ರಷ್ಟ ಸರ್ಕಾರ ಎಂದರು, ಎಕ್ಸೈಜ್ ಸರ್ಕಾರ ಎಂದರು, ಡೋಲು ಬಾರಿಸುವ ಸರ್ಕಾರ ಎಂದರು, ರೈತ ವಿರೋಧಿ ಸರ್ಕಾರ ಎಂದರು, ಇದಕ್ಕೆಲ್ಲಾ ತಾವು ಅವಕಾಶ ಕೊಡುವುದಾದರೆ ಡೋಲು ಏಕೆ ಬಾರಿಸಿದರು, ಎಕ್ಸೈಜ್ ಹೇಗೆ ಆಯಿತು, ರೈತರಿಗೆ ಏನೇನು ಮಾಡಿದ್ದಾರೆ ಎಂದು ಸವಿಸ್ತಾರವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೇವಲ ನಾಲ್ಕು ತಿಂಗಳಲ್ಲಿ ಬಂದಿರತಕ್ಕ ಈ ಸರ್ಕಾರಕ್ಕೆ ಒಳ್ಳೆಯ ಸಲಹೆ ಕೊಟ್ಟು ಈ ಸರ್ಕಾರ ಏನು ಮಾಡಬೇಕು ಎನ್ನತಕ್ಕದ್ದನ್ನು ಹೇಳುತ್ತಾರೆ ಎಂದು ನಾವೆಲ್ಲ ತಿಳಿದುಕೊಂಡಿದ್ದೆವು. ಆದರೆ ಬಹುಶಃ ಇವರು ಮಾಡಿರತಕ್ಕಂಥ ರೀತಿ ನೀತಿ ಇವರಿಗೇ ಸಮಾಧಾನ ತಂದಿಲ್ಲ ಎಂಬುದನ್ನು ಈ ಸಂದರ್ಭದಲ್ಲಿ ನಾನಾದರೂ ಭಾವನೆ ಮಾಡಿಕೊಳ್ಳುತ್ತೇನೆ. ಈ ಸರ್ಕಾರ ಜನಸಾಮಾನ್ಯರಿಗೆ ಬಹಳಷ್ಟು ಸೌಕರ್ಯಗಳನ್ನು ಮಾಡಿರತಕ್ಕ ವಿಚಾರವನ್ನು ಬಜೆಟ್ ಭಾಷಣದಲ್ಲಿ ನೋಡಿದ್ದೇವೆ ಮತ್ತು ಅದೇ ವಿಚಾರವನ್ನು ರಾಜ್ಯಪಾಲರ ಭಾಷಣದ ಮೂಲಕ ಈ ರಾಜ್ಯದ ಜನತೆಗೆ ಈ ಸರ್ಕಾರ ಹೇಳಿದೆ ಎಂದು ಈ ಸಂದರ್ಭದಲ್ಲಿ ನಾನು ಜ್ಞಾಪಕ ಮಾಡುತ್ತೇನೆ.

ಗೃಹ ಇಲಾಖೆ ಬಗ್ಗೆ ಹೇಳುವುದಾದರೆ, ಉದಾಹರಣೆಗೆ 40 ವರ್ಷಗಳಿಂದ ಪುಣ್ಯಾತ್ಮರು ಎಲ್ಲಾ ಸೇರಿ ಈ ರಾಜ್ಯವನ್ನು ಆಳಿಹೋಗಿರುವ ಗೃಹ ಇಲಾಖೆಯು ಯಾವ ಮಟ್ಟದಲ್ಲಿ ಇದೆ ಎಂದರೆ, ನಮ್ಮ ಜನಸಂಖ್ಯೆಗೆ ಅನುಗುಣವಾಗಿ ಇವತ್ತು 1200 ಪೋಲೀಸ್ ಸ್ಟೇಷನ್ಸ್ ಬೇಕು. ಇವತ್ತು ಈ ರಾಜ್ಯದಲ್ಲಿ ಎಷ್ಟು ಪೋಲೀಸ್ ಠಾಣೆಗಳು, ಇವೆ ಅಂದರೆ 667 ಪೋಲೀಸ್ ಠಾಣೆಗಳು ಇವೆ. 320 ಪೋಲೀಸ್ ಸ್ಟೇಷನ್‌ಗಳಲ್ಲಿ 20 ಕಾನ್‌ಸ್ಟೇಬಲ್ ಇರತಕ್ಕ ವ್ಯವಸ್ಥೆಯನ್ನು ನಾವು ನೋಡಿದ್ದೇವೆ. 347 ಪೋಲೀಸ್ ಸ್ಟೇಷನ್‌ಗಳಲ್ಲಿ ಔಟ್‌ಪೋಸ್ಟ್‌ಗಳಲ್ಲಿ ಕೇವಲ ನಾಲ್ಕು ಜನ ಪೋಲೀಸ್ ಕಾನ್‌ಸ್ಟೇಬಲ್ ಇರತಕ್ಕಂಥಹ ಒಂದು ವ್ಯವಸ್ಥೆಯನ್ನು ನಾವು ನೋಡಿದ್ದೇವೆ. ಮಹಾರಾಷ್ಟ್ರದಲ್ಲಿ ಐನೂರು ಜನಕ್ಕೆ ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ ಇದ್ದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ 1400 ಜನರಿಗೆ ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ ಇರತಕ್ಕದ್ದನ್ನು ನಾವು ನೋಡುತ್ತಿದ್ದೇವೆ. ಇಡೀ ರಾಜ್ಯದಲ್ಲಿ 48 ಸಾವಿರ ಪೋಲೀಸ್ ಸ್ಟಾಫ್ ಇರತಕ್ಕದ್ದನ್ನು ನಾವು ನೋಡಿದ್ದೇವೆ. ಇವರು ಇಡೀ ರಾಜ್ಯವನ್ನು ನಿಯಂತ್ರಣ ಮಾಡಬೇಕು, ಕೋಮು ಗಲಭೆ ಆದರೆ ಪೋಲೀಸರು ನಿಯಂತ್ರಣ ಮಾಡಬೇಕು. ಹೋಳಿ ಹಬ್ಬ ಬಂತು ಎಂದರೆ, ಹುಡುಗಿಯರನ್ನು ಚುಡಾಯಿಸಿದರೆ ಪೋಲೀಸರು ಅಲ್ಲಿ ಹೋಗಬೇಕು. ರಾಮ ಜ್ಯೋತಿ ಬರುತ್ತದೆ ಎಂದರೆ ಅಲ್ಲಿ ಪೋಲೀಸರು ಹೋಗಬೇಕು. ಮಸೀದಿ ಒಡೆಯುತ್ತಿದ್ದಾರೆ ಎಂದರೆ ಅಲ್ಲಿ ಪೋಲೀಸರು ಹೋಗಬೇಕು. ಕೋಮು ಗಲಭೆ ರಾಮ ನಗರದಲ್ಲಿ, ಚನ್ನಪಟ್ಟಣದಲ್ಲಿ ಶುರು ಆಯಿತು ಎಂದರೆ ಪೋಲೀಸರು ಹೋಗಬೇಕು. ವಿದ್ಯಾರ್ಥಿಗಳು ಇವತ್ತು ಗಲಾಟೆ ಎಂದರೆ ಪೋಲೀಸರು ಹೋಗಬೇಕು. ಕಾರ್ಮಿಕರು ಇವತ್ತು ಗಲಾಟೆ ಮಾಡುತ್ತಾರೆ ಎಂದರೆ ಪೋಲೀಸರು ಹೋಗಬೇಕು. 40 ವರ್ಷಗಳಿಂದ ಈ ರಾಜ್ಯವನ್ನು ಆಳಿದರು. ಇಷ್ಟೆಲ್ಲಾ ಆಳಿದರೂ ಸಹ ಈ ಒಂದು ಇಲಾಖೆಗೆ ಕಾಯಕಲ್ಪವನ್ನು ಮಾಡಲಿಲ್ಲ. ಪೋಲೀಸರು ಸರಿಯಾಗಿ ಮಾಡಲಿಲ್ಲ, ನಡೆಸಲಿಲ್ಲ ಎನ್ನತಕ್ಕ ದೂರನ್ನು ಹೇಳುತ್ತಿದ್ದಾರೆಯೇ ಹೊರತು ಒಂದು ಪೋಲೀಸ್ ಇಲಾಖೆಗೆ ಎಷ್ಟು ಸಾಮರ್ಥ್ಯವನ್ನು ಕೊಡಬೇಕಾಗಿತ್ತೋ ಅಷ್ಟು ಸಾಮರ್ಥ್ಯವನ್ನು ಕೊಡಲಿಲ್ಲ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ.

ಅಂತರಾಷ್ಟ್ರೀಯ ಮಟ್ಟದಲ್ಲಿ ನಮ್ಮ ರಾಜ್ಯವನ್ನು ಜೆಡ್ ಜೋನ್ ಎಂದು ಹೇಳುತ್ತಾರೆ. ನಮ್ಮ ರಾಜ್ಯವು ಬಹಳ ಶಾಂತಿಪ್ರಿಯವಾಗಿರತಕ್ಕಂಥ ರಾಜ್ಯವೆಂದು ಕೂಡ ಹೇಳುತ್ತಾರೆ. ಯಾವುದೇ ತರಹದ ತಾಪತ್ರಯಗಳಿಲ್ಲದೆ ಇಲ್ಲಿ ಜೀವನ ಮಾಡಬಹುದೆಂದು ಹೇಳುತ್ತಾರೆ. ಹಾಗಾಗಿ ಬಹಳ ಜನರು ಇಲ್ಲಿ ಬಂದು ಉಳಿದುಕೊಳ್ಳಲು ಬಯಸುತ್ತಾರೆ. ಬಹಳ ಜನ ವಿ.ವಿ.ಐ.ಪಿ ಗಳವರು ಇಲ್ಲಿದ್ದಾರೆ. ಮಾನ್ಯಶ್ರೀ ಸಂಜೀವ ರೆಡ್ಡಿಯವರು, ರಾಜಾರಾಮಣ್ಣನವರು, ತಮಿಳುನಾಡಿನ ಮಾಜಿ ರಾಜ್ಯಪಾಲರಾದ ಅಲೆಗ್ಸಾಂಡರ್‌ರವರು, ಈ ನಮ್ಮ ಬೆಂಗಳೂರಿನಲ್ಲಿ ಜೀವನ ಮಾಡುತ್ತಿದ್ದಾರೆ. ಇವರೆಲ್ಲರಿಗೂ ನಮ್ಮಲ್ಲಿನ 48 ಸಾವಿರ ಜನ ಪೋಲೀಸರೇ ರಕ್ಷಣೆ ಕೊಡಬೇಕಾಗಿದೆಯೋ ಹೊರತು ಬೇರೆ ಯಾವ ವ್ಯವಸ್ಥೆ ನಮ್ಮಲ್ಲಿ ಇಲ್ಲ. ಈ ವ್ಯವಸ್ಥೆಯಿಂದ ಶಾಂತಿ ಉಳಿಯುತ್ತದೆಯೆ? ಹಾಗೆ ಉಳಿಯುವುದಕ್ಕೆ ಅವಕಾಶ ಇದೆಯೋ ಎಂಬ ಮಾತನ್ನು ಆಲೋಚನೆ ಮಾಡಬೇಕಾಗಿದೆ. ನಾವುಗಳು ಪೋಲೀಸ್ ವ್ಯವಸ್ಥೆಯ ವಿಚಾರದಲ್ಲಿ ಸುಮಾರು 20 ವರ್ಷಗಳಷ್ಟು ಹಿಂದಿದ್ದೇವೆ. ನಮ್ಮನ್ನು ಬೇರೆ ಮುಂದುವರಿದ ರಾಜ್ಯಗಳಿಗೆ ಹೋಲಿಕೆ ಮಾಡಿನೋಡಿದಾಗ ಇದು ವ್ಯಕ್ತವಾಗುತ್ತದೆ. ಅದಕ್ಕೋಸ್ಕರವಾಗಿ ನಮ್ಮ ಸರಕಾರ 135 ಕೋಟಿ ರೂಪಾಯಿಗಳ ಒಂದು ಮಾಸ್ಟರ್‌ಪ್ಲಾನ್ ಮಾಡಿ ಅದನ್ನು ಹಂತ ಹಂತವಾಗಿ ಐದು ವರ್ಷಗಳಲ್ಲಿ ವರ್ಷಕ್ಕೆ ಇಷ್ಟು ಎಂದು ನಿಗದಿ ಮಾಡಿ ಪೋಲೀಸ್ ಇಲಾಖೆಗೆ ಒಂದು ಕಾಯಕಲ್ಪವನ್ನು ಮಾಡುವುದಕ್ಕೆ ನಮ್ಮ ಸರಕಾರದವರು ಹೊರಟಿದ್ದಾರೆ. ಅದಕ್ಕೆ ಸರಕಾರದವರು ಸೂಕ್ತವಾದ ರೀತಿಯಲ್ಲಿ ಶೀಘ್ರವಾಗಿ ಒಪ್ಪಿಗೆಯನ್ನು ಕೊಟ್ಟು ಆ ಯೋಜನೆಯನ್ನು ಜಾರಿ ಮಾಡಲು ಅವಕಾಶವನ್ನು ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಇನ್ನು ಫೈರ್‌ಸ್ಟೇಶನ್‌ಗಳ ಬಗ್ಗೆ ಹೇಳುವುದಾದರೆ, ನಮ್ಮ ರಾಜ್ಯದಲ್ಲಿ ಒಟ್ಟು 85 ಫೈರ್ ಸ್ಟೇಷನ್‌ಗಳು ಇವೆ. ತಮಿಳುನಾಡಿನಲ್ಲಿ 280 ಇವೆ, ಕೇರಳದಲ್ಲಿ 250 ಇವೆ. ಒಂದು ತಾಲ್ಲೂಕಿಗೆ ಒಂದು ಫೈರ್‌ಸ್ಟೇಶನ್ ಆದರೂ ಇಡಬೇಕಾಗುತ್ತದೆ. ಈಗ 135 ತಾಲ್ಲೂಕುಗಳಲ್ಲಿ ಬರ ಬಂದು ಕಿತ್ತು ತಿನ್ನತಕ್ಕಂಥ ಪರಿಸ್ಥಿತಿ ಇರತಕ್ಕಂಥ ಸಂದರ್ಭದಲ್ಲಿ ಎಲ್ಲೆಲ್ಲೂ ನೀರು ಇರದ ಸಂದರ್ಭದಲ್ಲಿ ಏನಾದರೂ ಒಂದು ಊರಿನಲ್ಲಿ, ಬೆಂಕಿ ಬಿದ್ದರೆ ಅದನ್ನು ಆರಿಸುವ ವ್ಯವಸ್ಥೆ ಇಲ್ಲ. ದೂರದ ಊರಿನ ಮೈಸೂರಿಂದಲೋ, ಬೆಳಗಾವಿಯಿಂದಲೋ ಫೈರ್‌ಇಂಜಿನ್‌ಗಳನ್ನು ತರಿಸಬೇಕಾದ ಪರಿಸ್ಥಿತಿಯು ಸದ್ಯಕ್ಕೆ ಇದೆ. ಸ್ಥಳೀಯವಾಗಿ ಒಂದು ತೊಟ್ಟು ನೀರು ಕೂಡ ಸಿಗುವುದಿಲ್ಲ. ಆದುದರಿಂದ ಸರಕಾರದವರು ತಾಲ್ಲೂಕಿಗೆ ಒಂದು ಫೈರ್‌ಸ್ಟೇಶನ್ನನ್ನು ತೆರೆದು ಅನುಕೂಲ ಮಾಡಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ . ಈಗ ಇರುವ ವ್ಯವಸ್ಥೆಯು ಸರಿಯಾಗಿಲ್ಲ. ಮೈಸೂರಿನಲ್ಲಿ ಗಲಾಟೆಯಾಗಿ ಬೆಂಕಿ ಹಚ್ಚಿದ್ದಾರೆ ಅಂದರೆ ಗುಲ್ಬರ್ಗಾದಿಂದ ಬರಬೇಕು. ಗುಲ್ಬರ್ಗದಲ್ಲಿ ಬೆಂಕಿ ಹಚ್ಚಿದ್ದಾರೆ ಅಂದರೆ ಮೈಸೂರಿನಿಂದ ಫೈರ್‌ಇಂಜಿನ್‌ಗಳು ಹೋಗಬೇಕು. ಈ ವ್ಯವಸ್ಥೆಯನ್ನು ಸಕಾಲದಲ್ಲಿ ಸರಿಪಡಿಸಿ, ಹೆಚ್ಚಿಗೆ ಫೈರ್‌ಇಂಜಿನ್‌ಗಳನ್ನು ಸ್ಥಾಪನೆ ಮಾಡುವುದು ಅವಕಾಶ ಮಾಡಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ. ಇತ್ತೀಚೆಗೆ ಕೋಮುಗಲಭೆಗಳಲ್ಲಿ ನೊಂದವರಿಗೆ ನಮ್ಮ ನೆಚ್ಚಿನ ಮುಖ್ಯಮಂತ್ರಿಗಳವರು ಸ್ವತಃ ಭೇಟಿಕೊಟ್ಟು ಸ್ವಾಂತನ ನೀಡಿ ಹೇಳಿ ಅವರಿಗೆ ಎರಡು ಕೋಟಿ ರೂಪಾಯಿಗಳಷ್ಟು ಪರಿಹಾರವನ್ನು ನೀಡಿರುವುದು ಸ್ವಾಗತಾರ್ಹವಾದ ವಿಚಾರವಾಗಿದೆ.

ಆರೋಗ್ಯ ಇಲಾಖೆಯ ವತಿಯಿಂದ ಇಡೀ ರಾಜ್ಯದ ಬಡಬೋರೆ ಗೌಡನನ್ನು ಆರೋಗ್ಯ ತಪಾಸಣೆಗೆ ಒಳಪಡಿಸುವ ಮತ್ತು ಅವನಿಗೆ ಯಾವ ಕಾಯಿಲೆ ಎಂಬುದನ್ನು ಗುರುತಿಸುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಇವೊತ್ತು ಆರ್ಥಿಕವಾಗಿ ಬಹಳ ಮುಂದಿರುವವರು ಬೆಂಗಳೂರಿಗೆ ಬಂದು ತಪಾಸಣೆ ಮಾಡಿಸಿಕೊಳ್ಳಬಹುದು. ಆದರೆ ಬಡವರು ಎಲ್ಲಿಗೆ ಹೋಗಬೇಕು? ಗ್ರಾಮಾಂತರ ಪ್ರದೇಶದ ಜನರು ಎಲ್ಲಿಗೆ

ಹೋಗಬೇಕು? ಹೀಗಾಗಿ ಅವರಿಗೆ ಯಾವುದಾದರೂ ಕಾಯಿಲೆ ಇದ್ದರೆ ಅದು ಗೊತ್ತಾಗುವುದಿಲ್ಲ. ಕ್ಯಾನ್ಸರ್‌ನಂಥ ಭೀಕರ ಕಾಯಿಲೆ ಇದ್ದರೂ ಕೂಡ ಅದು ಕೊನೆಯ ಹಂತದಲ್ಲಿ ಗೊತ್ತಾಗಿ ಬಡಜನರು ರೋಗಕ್ಕೆ ಬಲಿಯಾಗುವ ಸಂದರ್ಭಗಳು ಇವೆ. ಹೀಗೆ ಆರುತಿಂಗಳಿಗೊಮ್ಮೆ ತಪಾಸಣೆ ಇಡುವುದರಿಂದ ಕನಿಷ್ಟ ಕಾಯಿಲೆ ಇದೆ ಎಂದು ಗೊತ್ತಾದ ಮೇಲೆ ತಾನು ಹೇಗಿರಬೇಕು ಮತ್ತು ಉಪಚಾರವನ್ನು ಹೇಗೆ ತೆಗೆದುಕೊಳ್ಳಬೇಕೆಂಬ ವಿಚಾರದಲ್ಲಿ ರೋಗಿಯು ಜಾಗ್ರತನಾಗಿರುತ್ತಾನೆ. ಅದನ್ನು ಅರ್ಥಮಾಡಿಕೊಂಡು ಅದಕ್ಕೆ ತಕ್ಕಂತೆ ಇರಲು ಮುಂದಾಗುತ್ತಾನೆ. ಆದುದರಿಂದ ಇದೊಂದು ಗ್ರಾಮಾಂತರ ಪ್ರದೇಶದ ಜನರಿಗೆ ಉತ್ತಮವಾದ ಕಾರ್ಯಕ್ರಮ ಎಂದು ಹೇಳಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಸುಮಾರು 600-700 ಜನ ಡಾಕ್ಟರ್‌ಗಳ ಕೊರತೆ ಇರುವುದನ್ನು ಬಹಳ ವರ್ಷಗಳಿಂದ ನಾವು ನೋಡುತ್ತಾ ಇದ್ದೇವೆ. ಸುಮಾರು 590 ಜನ ಡಾಕ್ಟರ್‌ಗಳ ನೇಮಕಾತಿ ಮಾಡತಕ್ಕಂಥ ನಿಟ್ಟಿನಲ್ಲಿ ನಮ್ಮ ಸರಕಾರದವರು ಈಗಾಗಲೇ ಕಾರ್‍ಯಕ್ರಮ ಹಾಕಿಕೊಂಡಿದೆ. ಇದಕ್ಕೆ ಲೋಕಸೇವಾ ಆಯೋಗದವರು ಸೂಕ್ತ ಕ್ರಮ ತೆಗೆದುಕೊಂಡಿದ್ದಾರೆ. ಸದ್ಯದಲ್ಲಿಯೇ ಆ ಹುದ್ದೆಗಳನ್ನು ತುಂಬುವುದಕ್ಕೆ ಎಲ್ಲಾ ವ್ಯವಸ್ಥೆ ನಡೆಯುತ್ತಿದೆ. ನಾಲ್ಕು ವರ್ಷಗಳ ಅವಧಿಯಲ್ಲಿ ಹಿಂದಿನ ಸರಕಾರದವರು ತುಂಬಿರಲಿಲ್ಲ. ಆರು ವರ್ಷಗಳ ಕಾಲ ಅಧಿಕಾರ ಮಾಡಿದವರು ತುಂಬಿರಲಿಲ್ಲ. ಆದರೆ ನಮ್ಮ ಸರಕಾರದವರು ಕೇವಲ ನಾಲ್ಕು ತಿಂಗಳ ಅವಧಿಯಲ್ಲಿ ಈ ಕೆಲಸವನ್ನು ಮಾಡಿದ್ದಾರೆ. ಅಂದರೆ ಇದು ಪ್ರಶಂಸನೀಯವಾದ ವಿಚಾರವಾಗಿದೆ. ಇನ್ನು 400 ಜನ ಹೆಲ್ತ್ ವರ್ಕರ್ಸ್‌ನ್ನು ತೆಗೆದುಕೊಳ್ಳತಕ್ಕಂಥ ಒಂದು ಕಾರ್ಯವನ್ನು ಈ ಸರಕಾರದವರು ಹಾಕಿಕೊಂಡಿದ್ದಾರೆ. ಇವೊತ್ತು ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಆಸ್ಪತ್ರೆಗಳಲ್ಲಿ ಸರಿಯಾದ ಸಿಬ್ಬಂದಿ ವರ್ಗ ಇಲ್ಲ, ಆಸ್ಪತ್ರೆಗಳ ಬೀಗ ತೆಗೆದು ನೆಪಮಾತ್ರಕ್ಕೆ ಅದನ್ನು ಇಟ್ಟಿರುತ್ತಾರೆ. ಆರೋಗ್ಯ ಇಲಾಖೆ ಕೇರಳ ರಾಜ್ಯದಲ್ಲಿ ಬಹಳ ಚೆನ್ನಾಗಿ ಕೆಲಸ ಮಾಡುತ್ತಿದೆ ಎಂದು ಕೇಳಿದ್ದೇನೆ. ಅದೇ ತರನಾಗಿ ನಮ್ಮಲ್ಲಿ ಈ ಒಂದು ಆರೋಗ್ಯ ಇಲಾಖೆಯ ಕಾಯಕಲ್ಪಕ್ಕಾಗಿ 35 ಕೋಟಿ ರೂಪಾಯಿಗಳ ಮಾಸ್ಟರ್‌ಪ್ಲಾನ್ ಮಾಡಿದ್ದಾರೆ ಎಂದು ಹೇಳಿದ್ದಾರೆ. ಇದಕ್ಕೆ ಸರ್ಕಾರ ಶೀಘ್ರವಾಗಿ ಒಪ್ಪಿಗೆ ಕೊಡಬೇಕೆಂದು ಹೇಳುತ್ತೇವೆ. ಗ್ರಾಮಾಂತರ ಪ್ರದೇಶದಲ್ಲಿ ಇರತಕ್ಕಂಥ ಆಸ್ಪತ್ರೆಯನ್ನು ಇನ್ನೂ ಚೆನ್ನಾಗಿ ವ್ಯವಸ್ಥಿತವಾಗಿ ನಡೆಯುವಂತೆ ಮಾಡಿ ಅಲ್ಲಿನ ಜನರಿಗೆ ಉತ್ತಮ ಆರೋಗ್ಯ ಜೀವನವು ದೊರಕುವಂತೆ ಮಾಡಬೇಕಾಗಿ ಕೇಳಿಕೊಳ್ಳುತ್ತೇನೆ.

ಇನ್ನು ವಿದ್ಯಾಭ್ಯಾಸ ಇಲಾಖೆಯ ಕುರಿತು ಹೇಳುವುದಾದರೆ, ನಮಗೆ ಉಪಾಧ್ಯಾಯರನ್ನು ಕೊಡಿ ಎಂದು ಎಂಟು ವರ್ಷಗಳಿಂದಲೂ ಕೇಳಿ ಕೇಳಿ ಸಾಕಾಗಿ ಹೋಯಿತು, ಬಾಯಿ ಬಡಿದುಕೊಂಡಿದ್ದಾಯಿತು. ಆದರೂ ಏನು ಪ್ರಯೋಜನವಾಗಿರಲಿಲ್ಲ. ರಾಜ್ಯದಲ್ಲಿ ಯಾವ ಊರಿಗೆ ಹೋದರೂ ನಮ್ಮಲ್ಲಿ ಮೇಷ್ಟ್ರು ಇಲ್ಲ, ಅಥವಾ ಇದ್ದವರನ್ನು ಬದಲಾವಣೆ ಮಾಡಿಕೊಡಿ ಎಂದು ಕೇಳುತ್ತಾರೆ. ಒಂದಲ್ಲಿ ಒಂದು ಕಾರಣದಿಂದ ರಾಜ್ಯದಲ್ಲಿ ಒಟ್ಟು 20 ಸಾವಿರ ಜನ ಉಪಾಧ್ಯಾಯರುಗಳ ಕೊರತೆ ಇದೆ. ನಮ್ಮ ಸರಕಾರ ಬಂದಮೇಲೆ 11 ಸಾವಿರ ಜನ ಉಪಾಧ್ಯಾಯರನ್ನು ನೇಮಕ ಮಾಡುವುದರ ಮೂಲಕ ಒಂದು ದಿಟ್ಟ ಹೆಜ್ಜೆ ಇಟ್ಟಿದ್ದಾರೆ. ಇವರು ನೇಮಕ ಮಾಡಿಸುವಾಗ ಡಿಎಲ್‌ಆರ್‌ಸಿ ಮಾಡಿಸಿ ಭ್ರಷ್ಟಾಚಾರ ಮಾಡಿಲ್ಲ, ಯಾರು ಟಿಸಿಹೆಚ್ ಮಾಡಿಕೊಂಡು ಮನೆಯಲ್ಲಿ ಕುಳಿತುಕೊಂಡಿದ್ದರೋ ಯಾರ ವಯಸ್ಸು ಮಿತಿಗೆ ಬಂದು ಮುಟ್ಟಿದೆಯೋ ಅಂಥವರನ್ನು ಗುರುತಿಸಿ ಅವರ ಮನೆಗೆ ಆರ್ಡರನ್ನು ಕಳುಹಿಸಿ ಜೂನ್ ಒಂದನೇ ತಾರೀಖಿನಿಂದ ಕೆಲಸಕ್ಕೆ ಹಾಜರಾಗು ಎನ್ನುವಂಥ ಒಂದು ಸ್ತುತ್ಯ ನೇಮಕಾತಿ ಕ್ರಮವನ್ನು ಮಾಡಿದ್ದಾರೆ. ಇದರಲ್ಲಿ ಸ್ವಲ್ಪವೂ ಕೂಡ ಭ್ರಷ್ಟಾಚಾರಕ್ಕೆ ಎಡೆ ಮಾಡಿಕೊಟ್ಟಿಲ್ಲ. 9 ಸಾವಿರ ಜನ ಕಾಂಟ್ರಾಕ್ಟ್ ಉಪಾಧ್ಯಯರನ್ನು ಖಾಯಂಗೊಳಿಸುವ ನಿರ್ಧಾರವನ್ನು

ಮಾಡಿದೆ. ಹಿಂದೆ ಇದ್ದವರು ಕೆಲವರು ಮೈಸೂರಿನಲ್ಲಿ ತುಲಾಭಾರ ಮಾಡಿಸಿಕೊಂಡರು, ಇನ್ನು ಕೆಲವರು ಕಮಲಾಪುರದಲ್ಲಿ ಬೆಳ್ಳಿಗದೆ ಪಡೆದುಕೊಂಡರು. ಆದರೆ ಕೆಲಸವನ್ನು ಮಾತ್ರ ಯಾರೂ ಮಾಡಲಿಲ್ಲ. ಈ ಕಂಟ್ರಾಕ್ಟ್ ಆಧಾರದ ಮೇಲೆ ನೇಮಕವಾದ ಉಪಾಧ್ಯಾಯರು ಕಬ್ಬನ್‌ಪಾರ್ಕ್‌ನಲ್ಲಿ ಹಾಕಿದ್ದ ಷೆಡ್ ಕೂಡ ಕಿತ್ತು ಹೋಯಿತು. ಆದರೆ ನಮ್ಮ ಸರಕಾರ ಅವರ ಬಗ್ಗೆ ಕಣ್ಣುಬಿಟ್ಟು ಅವರ ಕಷ್ಟವನ್ನು ಅರಿತುಕೊಂಡು 9 ಸಾವಿರ ಜನರನ್ನು ಖಾಯಂಗೊಳಿಸಿದ್ದಾರೆ. ಜನ ಮೆಚ್ಚತಕ್ಕಂಥ ಕಾರ್ಯವನ್ನು ಮಾಡಿರುವುದು ದೊಡ್ಡ ಸಾಧನೆಯಾಗಿದೆ. ಹಾಗೆಯೇ 127 ಜನ ಜ್ಯೂನಿಯರ್ ಕಾಲೇಜುಗಳ ಪ್ರಿನ್ಸಿಪಾಲರುಗಳನ್ನು ನೇಮಕ ಮಾಡಿದರು. ಈ ಮೂಲಕ ಗ್ರಾಮಾಂತರ ಪ್ರದೇಶದ ಬಡ ಮಕ್ಕಳಿಗೆ ಅನುಕೂಲ ಮಾಡಿಕೊಟ್ಟಂತಾಗಿದೆ.

ಇನ್ನು ಕಪ್ಪು ಹಲಗೆ ಯೋಜನೆ ಬಗ್ಗೆ ಹೇಳುವುದಾದರೆ, ಗ್ರಾಮಾಂತರ ಪ್ರದೇಶದಲ್ಲಿ ಕೊಠಡಿಗಳ ಕೊರತೆ ಇರುವುದನ್ನು ನಾವೆಲ್ಲರೂ ಮನಗಂಡಿದ್ದೇವೆ. ಅದರ ಸಮಸ್ಯೆ ಎಷ್ಟು ಕಟುತರವಾದುದು ಎಂಬುದನ್ನು ಕಣ್ಣಾರೆ ನೋಡಿದ್ದೇವೆ. ಒಂದು ಕಡೆಯಲ್ಲಿ 21ನೇ ಶತಮಾನಕ್ಕೆ ಹೋಗಬೇಕೆಂದು ಹೇಳುವ ನಾವು ಹಳ್ಳಿಗಳಲ್ಲಿ ಶಾಲೆಗಳ ಪರಿಸ್ಥಿತಿಯನ್ನು ನೋಡಿದರೆ ಬೇಸರವಾಗುತ್ತದೆ. ಅಲ್ಲಿ ಪಾಠ ಮಾಡುವ ವ್ಯವಸ್ಥೆಯನ್ನು ನೋಡಿದರೆ ಯಾರಿಗಾದರೂ ಪರಿಸ್ಥಿತಿಯ ಅರಿವು ಆಗುತ್ತದೆ. ಇದಕ್ಕಾಗಿ ಕಪ್ಪುಹಲಗೆ ಯೋಜನೆಯಡಿಯಲ್ಲಿ ಇವೊತ್ತು 6,700ಶಾಲಾ ಕೊಠಡಿಗಳನ್ನು ಕಟ್ಟಿಸಿಕೊಡತಕ್ಕ ಕೆಲಸವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಮಾಡಿವೆಯೆಂದರೆ ತಪ್ಪಾಗುವುದಿಲ್ಲ. ಈ ಯೋಜನೆಗೆ ರಾಜ್ಯದ ವತಿಯಿಂದ 9 ಕೋಟಿ ರೂಪಾಯಿಗಳ ಮ್ಯಾಚಿಂಗ್ ಗ್ರಾಂಟನ್ನು ರೂಪದಲ್ಲಿ ಕೊಡಬೇಕಾದುದನ್ನು ಸಕಾಲದಲ್ಲಿ ಬಿಡುಗಡೆ ಮಾಡಿದ್ದಾರೆ. ಇದುವರೆಗೂ ಕೊಟ್ಟಿಲ್ಲದುದನ್ನು ಈಗಿನ ಸರಕಾರದವರು ಬಿಡುಗಡೆ ಮಾಡಿದ್ದಾರೆ.

ಮಾನ್ಯ ಶಿಕ್ಷಣ ಸಚಿವರು ಇಂಗ್ಲೀಷ್ ಮಾಧ್ಯಮ ಶಾಲೆಗಳ ಬಗ್ಗೆ ಏನೂ ಕೂಡ ಹೇಳಿಲ್ಲ. ನಮ್ಮ 224 ಜನ ಶಾಸಕರುಗಳಲ್ಲಿ 74 ಜನ ಶಾಸಕರು ಇಂಗ್ಲೀಷ್ ಶಾಲೆ ಯಾರ ಸೊತ್ತೂ ಅಲ್ಲ, ಇಂಗ್ಲೀಷ್ ಕಲಿಯತಕ್ಕಂಥ ಮತ್ತು ಕಲಿಸತಕ್ಕಂಥದ್ದು ಅವರವರ ಪೋಷಕರಿಗೆ ಬಿಟ್ಟಂಥ ವಿಚಾರವೇ ಹೊರತು ವಿಚಾರವಾಗಿದೆ ಕನ್ನಡವನ್ನೇ ಕಲಿಯಬೇಕು ಅಥವಾ ಇಂಗ್ಲೀಷನ್ನೇ ಕಲಿಯಬೇಕೆಂದು ಹೇಳುವ ಹಕ್ಕು ಯಾರಿಗೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಕನ್ನಡ ಭಾಷೆಯ ಒಂದು ಸಾರಿ ವಿರುದ್ಧ ಮಾತನಾಡಿದ್ದಕ್ಕೆ ಒಂದು ನಾಟಕ ಸಮಾರಂಭದಲ್ಲಿ ಜನರೆಲ್ಲರೂ ಸೇರಿ ಇವರನ್ನು ಹಿಡಿದುಕೊಂಡಿದ್ದರು. ಈ ರೀತಿ ಮಾತನಾಡಬಾರದಾಗಿತ್ತು ಎಂದು ನನ್ನ ಹತ್ತಿರ ಹೇಳಿದರು ಹೀಗೆ ಮಾಡಿದರೆ ಅದೇ ಕ್ಷೇತ್ರದಲ್ಲಿ ಅವರನ್ನು ಜನರು ಹಿಡಿದುಕೊಳ್ಳುತ್ತಾರೆ ನಾನು ಎಚ್ಚರಿಕೆ ಕೊಡುತ್ತಿದ್ದೇನೆ. ನೀವು ಬರೇ ವಿಧಾನ ಸಭೆಯಲ್ಲಿ ಕುಳಿತುಕೊಳ್ಳುವುದಿಲ್ಲ. ನಾಗಮಂಗಲಕ್ಕೂ ಹೋಗಬೇಕಾಗುತ್ತದೆ. ಕನ್ನಡದ ವಿರುದ್ಧ ನಿಂತರೆ, ಇಂಗ್ಲೀಷ್ ಪರ ಹೋದರೆ ನಿಮ್ಮ ಸುತ್ತ ಜನರು ಸೇರುತ್ತಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ಇಡೀ ರಾಜ್ಯದಲ್ಲಿ ಕನ್ನಡವನ್ನು ಅಳಿಸಿ ಇಂಗ್ಲೀಷ್ ಮಾಡಬೇಕೆನ್ನುವ ವಾದವನ್ನು ನಾನು ಮಾಡುತ್ತಿಲ್ಲ. ಇಂಗ್ಲೀಷ್ ಕಲಿಯಬೇಕೋ ಬೇಡವೋ ಎಂದು ತೀರ್ಮಾನ ಮಾಡತಕ್ಕಂಥವರು ಜನ್ಮ ಕೊಟ್ಟವರು. ಮಕ್ಕಳ ತಂದೆತಾಯಿಗಳು ಆ ಒಂದು ತೀರ್ಮಾನವನ್ನು ಮಾಡಬೇಕೇ ಹೊರತು ನಾವು ನೀವು ಅಲ್ಲ. ಕನ್ನಡ ಶಾಲೆಯೂ ಇರಲಿ, ಇಂಗ್ಲೀಷ್ ಶಾಲೆಯೂ ಇರಲಿ. ಅವರು ಯಾವುದನ್ನು ಬೇಕಾದರೂ ಆಯ್ಕೆ ಮಾಡಿಕೊಳ್ಳಲಿ. ನಮಗೇಕೆ ಆ ಹಣೆಯಬರಹ.

ಶ್ರೀ ವಾಟಾಳ್ ನಾಗರಾಜ್ : ಈ ರೀತಿಯ ದ್ವಂದ್ವನೀತಿ ಬೇಡ. ಒಂದೇ ಒಂದು ನೀತಿ ಇರಲಿ. ಕನ್ನಡದ ನೀತಿ, ಒಂದು ನೀತಿ ಇರಲಿ.

ಶ್ರೀ ಎಲ್.ಆರ್. ಶಿವರಾಮೇಗೌಡ : ಕನ್ನಡದ ಬಗ್ಗೆ ನಿಮಗಿಂತ ಹೆಚ್ಚು ಅಭಿಮಾನ ನಮಗೂ ಇದೆ. ಆದರೆ ನಾವು ತೋರಿಸಿಕೊಳ್ಳುವುದಿಲ್ಲ. ಆದುದರಿಂದ ಮಾನ್ಯ ಸಚಿವರು ಇಂಗ್ಲೀಷ್ ಶಾಲೆಗಳ ವಿಚಾರದಲ್ಲಿ ಆಯ್ಕೆಯನ್ನು ಪೋಷಕರಿಗೆ ಬಿಟ್ಟು, ಇಂಗ್ಲೀಷ್ ಶಾಲೆಗಳನ್ನು ತೆರೆಯಲು ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿಕೊಂಡು ಆ ಒಂದು ತೀರ್ಮಾನವನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಸಾಕ್ಷರತಾ ಆಂದೋಲನದ ವಿಚಾರದಲ್ಲಿ ಹೇಳುವುದಾದರೆ, ಇಡೀ ದೇಶದಲ್ಲಿ ವಯಸ್ಕರ ಶಿಕ್ಷಣ ಇಲಾಖೆಯ ಕೆಲಸ ಹೇಗೆ ನಡೆಯುತ್ತಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ವಯಸ್ಕರ ಶಿಕ್ಷಣ ಇಲಾಖೆ ಬರೀ ಅಂಕಿಅಂಶಗಳಿಂದ ತುಂಬಿರತಕ್ಕಂಥ ಇಲಾಖೆಯೇ ಹೊರತು ನಿಜವಾಗಿಯೂ ಯಾರು ವಯಸ್ಕರಿದ್ದಾರೆ ಅವರಿಗೆ ಅಕ್ಷರಗಳನ್ನು ಕಲಿಸತಕ್ಕಂಥ ಕಾರ್ಯಕ್ರಮವನ್ನು ಇದುವರೆಗೂ ಮಾಡಲಿಲ್ಲ ಎಂದು ಹೇಳಬೇಕಾಗಿದೆ.

ಅದನ್ನು ಮನಗಂಡು ರಾಜ್ಯಸರ್ಕಾರ ಮತ್ತು ಕೇಂದ್ರ ಸರ್ಕಾರ ಸಹಿತ ಸಾಕ್ಷರತಾ ಆಂದೋಲನ ಮಾಡತಕ್ಕ ರೀತಿಯಲ್ಲಿ ಸಾಕ್ಷರತೆಯನ್ನು ತರಬೇಕು ಎಂದು ಪ್ರಯತ್ನ ಮಾಡಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಇಂಗ್ಲೀಷ್ ಶಾಲೆಗಳು ಬೇಕೆಂದು ಸಹಿ ಹಾಕಿದ 72 ಜನ ಶಾಸಕರಲ್ಲಿ ಇವರೂ ಸಹ ಸಹಿ ಹಾಕಿದ್ದಾರೆಂದು ನಾನು ಕೇಳಿದೆ. ಇವರು ನನ್ನ ಬಹಳ ಆತ್ಮೀಯ ಸ್ನೇಹಿತರು. ನಾನು ಖಂಡಿತವಾಗಿ ಸಹಿ ಹಾಕಿಲ್ಲ ಎಂದು ಹೇಳಿ ಮಂಡ್ಯದಲ್ಲಿ ಜಿಲ್ಲಾಪರಿಷತ್ತಿಗೆ ಹೋಗುವುದಕ್ಕೆ ಮುಂಚೆ ಜನ ಕಾದಿದ್ದರು. ಜಿಲ್ಲಾಪರಿಷತ್ತಿಗೆ ಹೋಗುವುದಕ್ಕೆ ಆಗಲಿಲ್ಲ. ಪ್ರೀತಿಯಿಂದ ಕನ್ನಡವನ್ನು ಬೆಳೆಸಿ, ಕನ್ನಡವನ್ನು ಉಳಿಸಿ, ಕನ್ನಡದ ಬಗ್ಗೆ ಒಂದು ಸರ್ಕಾರದ ನಿಲುವನ್ನು ಹೇಳಿದರೆ ಅವರಿಗೆ ಅನುಕೂಲ ಇಲ್ಲಿ ವಿಧಾನ ಸೌಧದಲ್ಲಿ ಗೇಟ್‌ನಲ್ಲಿರುವವರಲ್ಲಿ 100 ಕ್ಕೆ 90 ಭಾಗ ಜನ ನಾಗಮಂಗಲದವರು. ಆ ಜನವಾದರೂ ಇವರ ಮೇಲೆ ತಿರುಗಿ ಬಿದ್ದಾರು. ಏಕೆಂದರೆ ಅವರ ಬಗ್ಗೆ ನನಗೆ ಬಹಳ ಅಭಿಮಾನ ಇದೆ. ಆದ್ದರಿಂದ ಅವರಿಗೆ ಕನ್ನಡದ ಬಗ್ಗೆ ಬಿದ್ದಾರು. ಏಕೆಂದರೆ ಅವರ ಬಗ್ಗೆ ನನಗೆ ಬಹಳ ಅಭಿಮಾನ ಇದೆ. ಆದ್ದರಿಂದ ಅವರಿಗೆ ಕನ್ನಡದ ಬಗ್ಗೆ ಕಳಕಳಿ ಇರಲಿ. ಇಲ್ಲಿ ಯಾರನ್ನೂ ಮೆಚ್ಚಿಸುವುದಕ್ಕೆ ಇಂಗ್ಲೀಷ ಬಗ್ಗೆ ಹೇಳುವುದು ಬೇಡ, ಮಾನ್ಯ ಮೊಯಿಲಿಯವರಿಗೆ ಮಾನ್ಯ ಅಧ್ಯಕ್ಷರ ಮೂಲಕ ಹೇಳುತ್ತಿದ್ದೇನೆ. ದಯವಿಟ್ಟು ಅವರ ಮಾತನ್ನು ಕೇಳಬೇಡಿ. ಒಂದು ವೇಳೆ ಅವರ ಮಾತು ಕೇಳಿ ತಪ್ಪುದಾರಿಗೆ ಹೋಗಿ ಇಂಗ್ಲೀಷ್ ಬಗ್ಗೆ ಹೇಳಿದರೆ ಅಪಾಯವಾಗುತ್ತದೆ.

ಶ್ರೀ ಎಲ್.ಆರ್. ಶಿವರಾಮೇಗೌಡ : ತಾವು ಹಿರಿಯ ಸ್ನೇಹಿತರಿದ್ದೀರಿ. ತಾವು ಹೇಳಿ ನಾನು ಕೇಳುತ್ತೇನೆ. ಅದರ ಬಗ್ಗೆ ಎರಡನೆಯ ಮಾತಿಲ್ಲ. ಕನ್ನಡದ ಅಭಿಮಾನದ ಬಗ್ಗೆ ನಾನು ಯಾರಿಂದಲೂ ಹೇಳಿಸಿಕೊಳ್ಳಬೇಕಾಗಿಲ್ಲ. ನಾನೊಬ್ಬ ನಿಮ್ಮಷ್ಟೇ ವಿಶ್ವಾಸ ಇರತಕ್ಕಂಥ ಕನ್ನಡದ ಅಭಿಮಾನಿ ಎಂದು ತಾವು ಅರ್ಥ ಮಾಡಿಕೊಳ್ಳಬೇಕು. ಇಂಗ್ಲೀಷ್‌ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳುಹಿಸುವುದು ಬಿಡುವುದನ್ನು ಜನ್ಮ ಕೊಟ್ಟ ತಂದೆತಾಯಿಗಳಿಗೆ ಬಿಡಿ. ಆ ಜವಾಬ್ದಾರಿಯನ್ನು ನಾವು ತೆಗೆದುಕೊಳ್ಳುವುದು ಬೇಡವೆಂದು ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಜನ್ಮ ಕೊಟ್ಟ ತಂದೆತಾಯಿಗಳಿಗೆ ಇಂಗ್ಲೀಷ್ ಇಲ್ಲದೆ ಬೇರೆ ಗತಿನೇ ಇಲ್ಲ ಎಂದು ಕಾಣುತ್ತದೆ. ಕನ್ನಡದಿಂದ ಗತಿ ಸಿಗುವುದಿಲ್ಲವೆಂದು ಕಾಣುತ್ತದೆ. ಬರೀ ಇಂಗ್ಲೀಷ್‌ನಿಂದಲೇ ಅವರಿಗೆ ಜೀವನ ಉದ್ಧಾರ ಅದಕ್ಕೋಸ್ಕರ ಜನ್ಮ ಕೊಡುತ್ತಾರೆಂದು ಕಾಣುತ್ತದೆ. ಇಂಗ್ಲೀಷ್‌ಗೋಸ್ಕರ ಜನ್ಮ ಕೊಡುವುದಾದರೆ ಯಾರೂ ನಮಗೆ ಜನ್ಮ ಕೊಡುವುದು ಬೇಡ.

ಶ್ರೀ ಎಲ್.ಆರ್. ಶಿವರಾಮೇಗೌಡ : ಈಗ ಕಂದಾಯ ಇಲಾಖೆ ಬಗ್ಗೆ ಹೇಳುತ್ತೇನೆ. 7 ಲಕ್ಷ ಎಕರೆ ಜಮೀನನ್ನು ಈ ರಾಜ್ಯದ ರೈತರು ಒತ್ತುವರಿ ಮಾಡಿಕೊಂಡಿದ್ದಾರೆ.

ಅಧ್ಯಕ್ಷರು : ನಾಗಮಂಗಲಕ್ಕೂ ಕಂದಾಯದ ಇಲಾಖೆಗೂ ಬಹಳ ಹತ್ತಿರ ಸೆಂಟಿಮೆನ್ಸ್ .. ಆ ವಿಷಯಕ್ಕೆ ಬನ್ನಿ ಇಂಗ್ಲೀಷ್ ಬಿಟ್ಟುಬಿಡಿ.

ಶ್ರೀ ಎಲ್.ಆರ್. ಶಿವರಾಮೇಗೌಡ : 7 ಲಕ್ಷ ಎಕರೆ ಜಮೀನನ್ನು ರಾಜ್ಯದ ಬಡ ಬೋರೇಗೌಡನಾದ ರೈತ ಉತ್ತುಕೊಂಡಿರುವ ವಿಚಾರ ತಮಗೆಲ್ಲ ಗೊತ್ತಿದೆ. ಬಹಳ ವರ್ಷಗಳಿಂದ ಈ ಕಾನೂನನ್ನು ತರಬೇಕು. ರೈತರಿಗೆ ಇದರಿಂದ ಒಳ್ಳೆಯ ಅವಕಾಶ ಮಾಡಬೇಕು ಎಂದು ಹೇಳಿದ್ದೆವಲ್ಲಾ ಹೇಳಿ ಆಯಿತು. ಈ ಸದನದಲ್ಲಿ ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಮಾನ್ಯ ಬೊಮ್ಮಾಯಿಯವರು ಕಂದಾಯ ಮಂತ್ರಿಯಾಗಿದ್ದ ಕಾಲದಿಂದಲೂ ಸಹ ಅಕ್ರಮವಾಗಿರುವುದನ್ನು ಸಕ್ರಮ ಮಾಡಿಕೊಡಿಬೇಕೆಂದು ಕೇಳುತ್ತಿದ್ದೆವು. ಇದಕ್ಕೆ ಯಾರೂ ಸಹಿತ ತಲೆ ಕೊಡಲಿಲ್ಲ. ಅದಕ್ಕೆ ಇವತ್ತು ಒಂದು ಕಮಿಟಿಯನ್ನು ಮಾಡಿ ಯಾರು ಬಡವರು ಇವತ್ತು ಆ ಜಮೀನನ್ನು ಉತ್ತಿದ್ದಾರೋ ಅವರಿಗೆ ಒತ್ತುವರಿ ಸಕ್ರಮ ಮಾಡುವಂತಹ ಕೆಲಸವನ್ನು ಮಾಡಿದ್ದಾರೆ. ಇದರಿಂದ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ರೈತಾಪಿ ವರ್ಗದ ಜನರಿಗೆ ಒಳ್ಳೆಯದಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ರಾಜ್ಯದ 4 ಲಕ್ಷ ಜನರಿಗೆ ಈ 7 ಲಕ್ಷ ಎಕರೆ ಜಮೀನಿನಿಂದ ಪ್ರಯೋಜನವಾಗುತ್ತದೆ. ರೈತರಿಗೆ ಕೃಷಿ ಪಾಸ್ ಬುಕ್ ಕೊಡಿ ಎಂದು ಶ್ರೀ ವಿ.ಎಲ್.ಪಾಟೀಲರು ಕಂದಾಯ ಮಂತ್ರಿಯಾಗಿದ್ದಾಗಿನಿಂದಲೂ ಜನಗಳು ಕೇಳುತ್ತಿದ್ದರು. ಇವತ್ತಿನ ದಿವಸ ರೈತರ ಹತ್ತಿರ ಒಂದು ಕೃಷಿ ಪಾಸ್ ಬುಕ್ ಇದ್ದರೆ ಒಳ್ಳೆಯದು. ಇವತ್ತು ರೈತರನ ಗೋಳು ಹೇಳತೀರದು. ಎಲ್ಲರೂ ಸಹ ರೈತರ ಹೆಸರನ್ನು ಹೇಳಿ ಈ ವಿಧಾನಸೌಧಕ್ಕೆ ಬರುತ್ತಾರೆ. ರೈತನ ಗೋಳಂತೂ ತಪ್ಪಲೇ ಇಲ್ಲ. ಮುಂಚೆಯೇ ಕೃಷಿ ಪಾಸ್‌ಬುಕ್ ಅನ್ನು ಕೊಟ್ಟಿದ್ದರೆ ರೈತರಿಗೆ ಒಳ್ಳೆಯದಾಗುತ್ತಿತ್ತು. ಆರ್.ಸಿ.ಸಿ ಬರೆಯಬೇಕಾದರೆ ವಿಲೇಜ್ ಅಕೌಂಟೆಂಟ್‌ನ ಮನೆಗೆ ಹೋಗಬೇಕು. ಪಹಣಿ ಬರೆಯಬೇಕಾದರೆ ರೆವಿನ್ಯೂ ಇನ್ಸ್‌ಪೆಕ್ಟರ್ ಮನೆಯ ಮುಂದೆ ಹೋಗಬೇಕು. ಪ್ರತಿ ಹಂತದಲ್ಲಿಯೂ ರೈತನು ತನ್ನ ಜುಟ್ಟನ್ನು ತೆಗೆದುಕೊಂಡು ಹೋಗಿ ಅಧಿಕಾರಿಗಳ ಕೈಗೆ ಕೊಟ್ಟು ರೈತ ಹಾಳಾಗಿ ಹೋಗತಕ್ಕ ಒಂದು ಪರಿಸ್ಥಿತಿ ಇತ್ತು. ಇವತ್ತು ರೈತನಿಗೆ ಕೃಷಿ ಪಾಸ್‌ಬುಕ್ ಕೊಡಬೇಕೆಂದು ತೀರ್ಮಾನ ಮಾಡಿರತಕ್ಕ ಸಂದರ್ಭದಲ್ಲಿ ಪ್ರತಿಯೊಂದು ಅಂಕಿಅಂಶಗಳು ಸಹಿತೆ ಕನ್ನಡಿಯ ಹಾಗೆ ಅಚ್ಚು ಹಾಕಿಸಿದಂತೆ ಅವರ ಇತಿಹಾಸ ಅದರೊಳಗೆ ಇರುತ್ತದೆ. ಅವರು ಯಾವುದೇ ಬ್ಯಾಂಕಿಗೆ ಹೋದರೂ ಸಾಲ ತೆಗೆದುಕೊಳ್ಳಬಹುದು. ಯಾವುದೇ ಬ್ಯಾಂಕ್‌ನಲ್ಲಿ ಸಾಲ ಇದ್ದರೂ ಅದರ ಇತಿಹಾಸ ಇರುತ್ತದೆ. ರೈತರಿಗೆ ಕೃಷಿ ಪಾಸ್ ಬುಕ್ ಕೊಡುವ ಒಳ್ಳೆಯ ಅವಕಾಶವನ್ನು ಇದುವರೆಗೂ ಮಾಡಿರಲಿಲ್ಲ. ಇದನ್ನು ಮಾಡಿರತಕ್ಕದ್ದು ಬಹಳ ಉತ್ತಮವಾದ ಕೆಲಸವೆಂದರೆ ತಪ್ಪಾಗುವುದಿಲ್ಲ.

ಇನ್ನು ತುಂಡು ಭೂಮಿ ಕಾಯಿದೆ ಬಗ್ಗೆ ಬಹಳ ವರ್ಷಗಳಿಂದಲೂ ಕೇಳಿದ್ದಾರೆ. ಹಿಂದೆ ಕಂದಾಯ ಮಂತ್ರಿಗಳಾದಂತಹ ಕೆ.ಹೆಚ್. ಪಾಟೀಲರು ತುಂಡು ಭೂಮಿಯ ಕಾಯಿದೆಯನ್ನು ರದ್ದು ಮಾಡುತ್ತೇವೆಂದು ಹೇಳಿದರು. ಇವತ್ತು ತುಂಡು ಭೂಮಿ ಕಾಯಿದೆ ಎಂದರೆ ಬಹಳ ಜನರಿಗೆ ಅದರ ಅರಿವೇ ಇಲ್ಲವೆಂದು ಕಾಣುತ್ತದೆ. ಈ ತುಂಡು ಭೂಮಿ ಕಾಯಿದೆಯಿಂದ ರೈತರ ಜಮೀನಿಗೆ ಸಿಗುತ್ತಿದ್ದಂತಹ ಬೆಲೆ, ಹಣ ಸಿಗದೆ ಇರುವಂತಹ ಅವ್ಯವಸ್ಥೆಯಾಗಿತ್ತು. ಆದರೂ ಸಹಿತ ರೈತ ಅದರಿಂದ ಉದ್ಧಾರವಾಗುತ್ತಿರಲಿಲ್ಲ. ಆದರೂ ಸಹಿತ ಈ ಒಂದು ತುಂಡು ಭೂಮಿ ಕಾಯಿದೆಯನ್ನು ರದ್ದು ಮಾಡಿದ್ದು ನಿಜಕ್ಕೂ ಸಹಿತ ರೈತರಿಗೆ ಸಂತೋಷ ಉಂಟು ಮಾಡಿದಂತಹ

ವಿಚಾರವಾಗಿದೆ. ಧೀಮಂತ ನಾಯಕರಾದ ದಿವಂಗತ ದೇವರಾಜ್ ಅರಸ್‌ರವರು ರೈತಾಪಿ ವರ್ಗದವರಿಗೆ ಏನು ಮಾಡಬೇಕೆಂದು ಯೋಚನೆಮಾಡಿ ಲ್ಯಾಂಡ್ ಟ್ರಿಬ್ಯೂನಲ್ ಮಾಡಿದರು. ಲ್ಯಾಂಡ್ ಟ್ರಿಬ್ಯುನಲ್ ಬೇಡವೆಂದು ಹೇಳಿ, 1983 ರಲ್ಲಿ ಬಂದ ಹೊಸ ಸರ್ಕಾರದವರು ಅಪರೇಟ್ ಟ್ರಿಬ್ಯುನಲ್ ಮಾಡಿದರು. ಯಾವ ಕೇಸ್‌ಗಳೂ ಸರಿಯಾಗಿ ಇತ್ಯರ್ಥವಾಗಲಿಲ್ಲ. ಕೇಸುಗಳು ಹೈಕೋರ್ಟಿನಿಂದ ಅಪಲೇಟ್ ಟ್ರಿಬ್ಯುನಲ್‌ಗೆ ಹೋಗಿ ನಿಂತುಕೊಂಡವು. ಅದನ್ನು ನಮ್ಮ ಸರ್ಕಾರದವರು ಮನಗಂಡು ಅಪಲೇಟ್ ಟ್ರಿಬ್ಯುನಲ್ ಅನ್ನು ರದ್ದುಮಾಡಿ ಲ್ಯಾಂಡ್ ಟ್ರಿಬ್ಯುನಲ್ ಮಾಡಿದರು. ಇದು ಸಹಿತ ಈ ರಾಜ್ಯದ ಜನರಿಗೆ ರೈತಾಪಿ ವರ್ಗಕ್ಕೆ ಬಹಳ ಹರ್ಷವನ್ನು ಉಂಟುಮಾಡತಕ್ಕ ವಿಚಾರ ಎಂದರೆ ತಪ್ಪಾಗಲಾರದು. ಮಾನ್ಯ ಮಂತ್ರಿಗಳು ಅಥವಾ ಸರ್ಕಾರ ಯೋಚನೆ ಮಾಡಿ ಒತ್ತುವರಿ ಮಾಡಿರತಕ್ಕ ಸಿ ಅಂಡ್ ಡಿ ಫಾರೆಸ್ಟ್ ಲ್ಯಾಂಡ್ ಅನ್ನು ರೈತರಿಗೆ ಬಿಡಿಸಿಕೊಡತಕ್ಕ ಕೆಲಸವನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಇನ್ನು ವಿದ್ಯುಚ್ಛಕ್ತಿ ಇಲಾಖೆ ಬಗ್ಗೆ ಹೇಳುವುದಾದರೆ ಕಳೆದ ಎಂಟು ವರ್ಷಗಳಿಂದ ವಿದ್ಯುಚ್ಛಕ್ತಿ ಇಲಾಖೆ ಸತ್ತು ಹೋಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಇವತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುತ್ತಿರುವುದೇನೆಂದರೆ, ಲೋಡ್ ಶೆಡಿಂಗ್ ಮಾಡುತ್ತೇವೆ, ಲೋಡ್‌ಶೆಡಿಂಗ್ ಮಾಡುತ್ತೇವೆಂದು ಮಾಡಿದರೆ ಹಳ್ಳಿಯಲ್ಲಿರತಕ್ಕ ಜನ ನೀರನ್ನು ಹೇಗೆ ಕುಡಿಯುತ್ತಾರೆ ಎಂದು ಕೇಳುತ್ತಿದ್ದರು. ನಿಜ ಅವರು ಕೇಳತಕ್ಕ ಮಾತು ಬಹಳ ಗಂಭೀರವಾಗಿರುವುದು ನಿಜ. ಇವತ್ತು ನಮ್ಮಲ್ಲಿ 10 ಜನ ಬಂದರೆ ಅವರಿಗೆ ಊಟ ಕೊಡುವ ಶಕ್ತಿ ಇದ್ದರೆ, 100 ಜನರನ್ನು ಕರೆದುಕೊಂಡು ಬಂದು ಊಟ ಕೊಡಿ ಎಂದರೆ ಎಲ್ಲಿಂದ ಕೊಡಲಿಕ್ಕೆ ಆಗುತ್ತದೆ ಹೇಳಿ. 8 ವರ್ಷಗಳಿಂದಲೂ ಆ ವಿದ್ಯುತ್ ಇಲಾಖೆ ಎಷ್ಟು ಹಣ ಖರ್ಚು ಮಾಡಬೇಕಾಗಿತ್ತೋ, ಎಷ್ಟು ಹೊಸ ಯೋಜನೆಗಳನ್ನು ಕಾರ್ಯಗತ ಮಾಡಬೇಕಾಗಿತ್ತೋ, ಅದು ಯಾವುದಕ್ಕೂ ಸಹಿತ ಲಕ್ಷ್ಯ ಕೊಡದೆ, ಇವತ್ತು ಕರೆಂಟ್ ಕೊಡಲಿಲ್ಲ, ಕರೆಂಟ್ ಕೊಡಲಿಲ್ಲ ಎಂದು ಹೇಳತಕ್ಕ ಮಾತು ಬರೀ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ರೈತರ ಪರವಾಗಿ ಮತ್ತು ಹೆಣ್ಣುಮಕ್ಕಳಿಗೋಸ್ಕರ ಮೊಸಳೆ ಕಣ್ಣೀರು ಸುರಿಸುವುದಲ್ಲದೆ ಮತ್ತೇನೂ ಅಲ್ಲ ಎಂದು ಈ ಸಂದರ್ಭದಲ್ಲಿ ನಾವು ಅರ್ಥ ಮಾಡಿಕೊಳ್ಳಬೇಕಾಗಿದೆ. ಈ ಸರ್ಕಾರ ಬಂದಮೇಲೆ, ಈ ವಿದ್ಯುತ್ ಇಲಾಖೆಯ ಕಾಯಕಲ್ಪ ಮಾಡಬೇಕು. ವಿದ್ಯುತ್ ಇಲ್ಲದೇ ಹೋದರೆ ಕೃಷಿ ಕ್ಷೇತ್ರ, ಕೈಗಾರಿಕಾ ಕ್ಷೇತ್ರ ಎಲ್ಲ ಕ್ಷೇತ್ರಗಳು ಕುಂಠಿತವಾಗುತ್ತದೆ ಎನ್ನುವುದನ್ನು ಮನಗಂಡು ಇವತ್ತು ಖಾಸಗಿಯವರಿಗೆ ಕೊಡತಕ್ಕ ವ್ಯವಸ್ಥೆಯನ್ನು ಸರ್ಕಾರ ಮಾಡಿದೆ. ಖಾಸಗಿಯವರಿಗೆ ಕೊಟ್ಟರೆ ಹೆಚ್ಚಿನ ರೀತಿಯಲ್ಲಿ ಅವರು ಸಹಿತ ಬಂಡವಾಳ ಹೂಡಿ ಈ ರಾಜ್ಯದಲ್ಲಿರುವ ವಿದ್ಯುತ್ ಕೊರತೆಯನ್ನು ನೀಗಿಸುವಂತಹ ವಿಚಾರ ಮಾಡುತ್ತಾರೆಂಬ ಆಶಯವನ್ನು ಈ ಸಂದರ್ಭದಲ್ಲಿ ವ್ಯಕ್ತಮಾಡುತ್ತೇನೆ.

ನಾಲ್ಕೈದು ವರ್ಷಗಳಿಂದ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳಿಂದ, ಕಮರ್ಶಿಯಲ್ ಬ್ಯಾಂಕುಗಳಿಂದ ಸಾಲ ತಂದು ಬೋರ್‌ವೆಲ್‌ಗಳನ್ನು ತೋಡಿಸಿರತಕ್ಕ ರೈತ ವಿದ್ಯುಚ್ಛಕ್ತಿ ಇಲಾಖೆಗೆ ಹೋದರೆ ಒಬ್ಬ ಅಧಿಕಾರಿ ಕಂಬ ಇಲ್ಲವೆಂದು ಹೇಳಿದರೆ, ಮತ್ತೊಬ್ಬ ಅಧಿಕಾರಿ ವೈರ್ ಇಲ್ಲವೆಂದು ಹೇಳುತ್ತಾನೆ. ಮಗದೊಬ್ಬ ಅಧಿಕಾರಿ ಕಟ್‌ಔಟ್ ಇಲ್ಲವೆಂದು ಹೇಳುತ್ತಾನೆ. ಪ್ರತಿಹಂತದಲ್ಲಿಯೂ ಸಹಿತ ರೈತ ಇವತ್ತು ಇಕ್ಕಟ್ಟಿನ ಪರಿಸ್ಥಿತಿಗೆ ಸಿಕ್ಕರುವ ಸ್ಪಷ್ಟವಾದ ಚಿತ್ರವನ್ನು ನಾವು ನೋಡುತ್ತಿದ್ದೇವೆ. ಈ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ, ಅದರಲ್ಲಿಯೂ ಬಂಗಾರಪ್ಪನವರು ರೈತಾಪಿ ವರ್ಗಕ್ಕೆ ಮಾಡೇ ಮಾಡಬೇಕೆಂದು ತೀರ್ಮಾನ ಮಾಡಿದ್ದಾರೆ. ಕಳೆದ 5-6 ವರ್ಷಗಳ ಲೆಕ್ಕಾಚಾರವನ್ನು ನೋಡಿದಾಗ 25 ಸಾವಿರ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಕೊಡಲಿಲ್ಲ. ಇವತ್ತು ನಾವು ಹೆಮ್ಮೆಯಿಂದ ಹೇಳಬೇಕಾಗುತ್ತದೆ. 60 ಸಾವಿರ ಪಂಪುಸೆಟ್ಟಗಳಿಗೆ ಇವತ್ತು ಅವಕಾಶ

ಕೊಟ್ಟಿದ್ದಾರೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಹಿಂದೆ 25 ಸಾವಿರ ಮೀರಲಿಲ್ಲ. ಇವತ್ತು 60 ಸಾವಿರ ರೈತರುಗಳಿಗೆ ಏಪ್ರಿಲ್ 30 ರೊಳಗೆ ವಿದ್ಯುಚ್ಛಕ್ತಿಯನ್ನು ಕೊಡತಕ್ಕ ಒಂದು ಕೆಲಸವನ್ನು ನಮ್ಮ ಸರ್ಕಾರ ಮಾಡಿದೆ. ಇದರಿಂದ ರೈತರಿಗೆ ಬಹಳ ಸಂತಸವನ್ನು ಹರ್ಷವನ್ನುಂಟುಮಾಡಿದೆಯೆಂದರೆ ತಪ್ಪಾಗಲಿಕ್ಕಿಲ್ಲ.

ಇನ್ನು ಅಬಕಾರಿ ಬಗ್ಗೆ ಹೇಳುವುದಾದರೆ, ಬಹುಶಃ ನಾಲ್ಕಾರು ದಿವಸಗಳಿಂದ ಅಬಕಾರಿಗೋಸ್ಕರ ಈ ಸರ್ಕಾರ ಸೂರೆಹೋಗಿದೆ ಎನ್ನತಕ್ಕ ಮಾತನ್ನು ಕೇಳಿದ್ದೇವೆ. ನಾನು ತಮಗೆ ಅಂಕಿ ಅಂಶಗಳನ್ನು ಕೊಡುತ್ತೇನೆ. ಮಾನ್ಯ ರಾಜಶೇಖರ ಮೂರ್ತಿಯವರು ಇತಿಹಾಸದಲ್ಲಿ ಇಲ್ಲದೆ ಇರತಕ್ಕ ಅಬಕಾರಿ ಮಂತ್ರಿಗಳಾದರು. ಅವರು ಬಹಳ ಚೆನ್ನಾಗಿ ಕಟ್ಟುನಿಟ್ಟಾಗಿ ಈ ರಾಜ್ಯದ ಅಬಕಾರಿ ನಿಯಂತ್ರಣವನ್ನು ಮಾಡಿದ್ದಾರೆನ್ನುವ ಹೊಗಳಿಕೆ ಮಾತನ್ನು ಈ ಸದನದಲ್ಲಿ ಹೇಳಿದ್ದನ್ನು ನಾವು ಕೇಳಿದ್ದೇವೆ. ಹಣಕಾಸಿನ ಸಚಿವರಾಗಿದ್ದ ಮಾನ್ಯ ರಾಜಶೇಖರ ಮೂರ್ತಿಯವರು ಈ ರಾಜ್ಯದ ಬೊಕ್ಕಸಕ್ಕೆ 555 ಕೋಟಿ ರೂಪಾಯಿಗಳು ಅಬಕಾರಿ ಇಲಾಖೆಯಿಂದ ಬರುತ್ತದೆಂದು ಹೇಳಿದ್ದನ್ನು ಈ ಸಂದರ್ಭದಲ್ಲಿ ನಾನು ಜ್ಞಾಪಿಸಿಕೊಳ್ಳುತ್ತೇನೆ. ರಾಜಶೇಖರ ಮೂರ್ತಿಯವರಿಗೆ ಇನ್ನಾವುದೇ ಅಭ್ಯಾಸವಿಲ್ಲ. ಅವರಿಗೆ ತೆಗೆದುಕೊಂಡೂ ಅಭ್ಯಾಸವಿಲ್ಲ. ಅದರ ಯೋಗ್ಯತೆ ಗೊತ್ತಿಲ್ಲ, ಬಾರ್‌ಗಳಿಗೆ ಹೋದರೆ ಗೊತ್ತಾಗುತ್ತದೆ. ಅಲ್ಲಿ ಕುಡಿದು ಇಷ್ಟು ರೂಪಾಯಿಗಳ ಟ್ಯಾಕ್ಸ್ ಹಾಕಿಸಿದ್ದಾರಲ್ಲ ಎಂದು ಮಾನ್ಯ ರಾಜಶೇಖರ ಮೂರ್ತಿಯವರನ್ನು ಬೈಯುವುದಕ್ಕೆ ನಿಂತುಕೊಂಡರು. ಒಂದು ರೂಪಾಯಿ ಕೊಟ್ಟು ಕುಡಿಯುತ್ತಿದ್ದವರು 20 ರೂಪಾಯಿ ಟ್ಯಾಕ್ಸ್ ಕೊಡುವಂತಹ ಪರಿಸ್ಥಿತಿ ಬಂದಿತ್ತು. ಮೊದಲು 1-2 ತಿಂಗಳು ಅಬಕಾರಿ ಗುತ್ತಿಗೆದಾರರು ಕಿಸ್ತು ಕಟ್ಟಿದರು. 3 ನೇ ತಿಂಗಳಿನಿಂದ ರಾಜಶೇಖರ ಮೂರ್ತಿಯವರು ಹಾಕಿರುವ ಟ್ಯಾಕ್ಸನ್ನು ನಾವು ಕಟ್ಟುವುದಕ್ಕಾಗುವುದಿಲ್ಲವೆಂದು ಅವರೂ ಸಹ ಕೋರ್ಟಿಗೆ ಹೋದರು. ಇವರೆಲ್ಲ ಕೋರ್ಟಿಗೆ ಹೋಗಿ ತಡೆಹಿಡಿದಿರತಕ್ಕ ಹಣ ಸುಮಾರು 68-70 ಕೋಟಿ ರೂಪಾಯಿಗಳು. ಇದು ಬರದೇ ಇರತಕ್ಕ ಹಣ. ಇವೊತ್ತು ಮಾರ್ಚಿ ತಿಂಗಳಿನಲ್ಲಿದ್ದೇವೆ. 352 ಕೋಟಿ ರೂಪಾಯಿಗಳನ್ನು ಈಗಾಗಲೇ ಅಬ್ಕಾರಿ ಇಲಾಖೆಯಿಂದ ವಸೂಲು ಮಾಡಿದ್ದೇವೆ. ಪ್ರತಿ ತಿಂಗಳು ಎಷ್ಟೆಷ್ಟು ವಸೂಲು ಮಾಡಿದ್ದೇವೆ ಎನ್ನುವುದನ್ನು ಹೇಳಬಹುದು. ಈಗ 352 ಕೋಟಿ ರೂಪಾಯಿಗಳನ್ನು ವಸೂಲು ಮಾಡಿ ಇನ್ನು 130-140 ಕೋಟಿ ರೂಪಾಯಿಗಳನ್ನು ಕರೆಂಟ್ ಇಯರ್‌ನಲ್ಲಿ ವಸೂಲು ಮಾಡುತ್ತೇವೆ. ಅದರ ಒಂದು ಟಾರ್ಗೆಟ್‌ರೀಚ್ ಮಾಡುತ್ತೇವೆ ಎನ್ನತಕ್ಕ ಒಂದು ಆಶಯವನ್ನು ಸನ್ಮಾನ್ಯ ಅಬ್ಕಾರಿ ಸಚಿವರು ಮೊನ್ನೆ ಹೇಳಿಕೆಯಲ್ಲಿ ಕೊಟ್ಟಿದ್ದಾರೆ. ಇವೊತ್ತು ಎಕ್ಸೈಜ್ ಲಾಬಿಗೆ ಈ ಸರ್ಕಾರ ಹೋಗಿದೆ ಎಂದರೆ ಏನು ಹೇಳಬೇಕು. ಬರೀ ಜನರಲೈಸ್ ಮಾಡಿ ಮಾತನಾಡತಕ್ಕಂಥಾದ್ದು ಸುಲಭ. ಯಾವುದಾದರೂ ಒಂದು ಗುರುತರವಾದಂಥ ಆರೋಪ ಮಾಡಲಿ, ಬೆಳಿಗ್ಗೆ ಕೆಲವರು ಭಾಷಣ ಮಾಡುವಾಗ ಆ ಸರ್ಕಾರ ಹಾಗೆ ಮಾಡಿದೆ, ಈ ಸರ್ಕಾರ ಹೀಗೆ ಮಾಡಿದೆ ಎಂದು ಹೇಳಿದರು. ನಾನು ಶ್ರೀಮಾನ್ ದೇವರಾಜ್ ಅರಸ್‌ರವರ ಸರ್ಕಾರದಿಂದ ನೋಡುತ್ತಿದ್ದೇನೆ. ಹಳೆಯ ಶ್ರೀಮಾನ್ ವೀರೇಂದ್ರ ಪಾಟೀಲರ ಸರ್ಕಾರವನ್ನು ನೋಡಿದ್ದೇನೆ. ಶ್ರೀಮಾನ್ ಗುಂಡೂರಾವ್ ರವರ ಸರ್ಕಾರವನ್ನು ನೋಡಿದ್ದೇನೆ. ಮಾನ್ಯ ಏಕಾಂತಯ್ಯನವರ ಸರ್ಕಾರವನ್ನೂ ನೋಡಿದ್ದೇನೆ. ಮಾನ್ಯ ಸಿಂಧ್ಯರವರ ಸರ್ಕಾರವನ್ನೂ ನೋಡಿದ್ದೇನೆ. ಯಾವ ಬದಲಾವಣೆಯೂ ಆಗಿಲ್ಲ. ಬೆಳಿಗ್ಗೆ ಭಾಷಣ ಮಾಡುವಾಗ ಕೆಲವರು ನೂರಾರು ಕೋಟಿ ರೂಪಾಯಿ ಪಬ್ಲಿಕ್ ಸೆಕ್ಟಾರ್‌ನಲ್ಲಿ ಹೋಗಿದೆ ಎಂದು ಹೇಳಿದರು, ನಿಜ 1100 ಕೋಟಿ ರೂಪಾಯಿ ಸಾರ್ವಜನಿಕ ಉದ್ದಿಮೆಗಳಲ್ಲಿ ಹೋಗಿದೆ. ನಾನು ಸಹಿತ ಸಾರ್ವಜನಿಕ ಉದ್ದಿಮೆಗಳ ಸಮಿತಿಯನ್ನು ಸದಸ್ಯನಾಗಿ ನಮ್ಮ ಅಳಲನ್ನು ಮೊನ್ನೆ ಪತ್ರಕರ್ತರ ಮುಂದೆ ತೋಡಿಕೊಂಡೆವು. ನಾವು ಒಬ್ಬ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಈ

ಒಂದು ಆಡಳಿತ ವ್ಯವಸ್ಥೆಯನ್ನು ಮಾಡಿರತಕ್ಕಂಥವರು ಆ ರೀತಿಯಲ್ಲಿ ಮಾಡಿ ಕೂರಿಸಿದ್ದಾರೆ. ಕಳೆದ ಅಧಿವೇಶನದಲ್ಲಿ ಅಂದರೆ ಜನತಾ ಸರ್ಕಾರದ ಆಳ್ವಿಕೆ ಏನಿತ್ತು, ಆ ಸಂದರ್ಭದಲ್ಲಿ ಪಬ್ಲಿಕ್ ಅಂಡರ್ ಟೇಕಿಂಗ್ ಕಮಿಟಿಯವರು ಮೈಸೂರು ಮಿನರಲ್ಸ್ ಬಗ್ಗೆ ಕೊಟ್ಟ ತಮ್ಮ 26ನೇ ರಿಪೋರ್ಟ್‌ನಲ್ಲಿ ನಾಲ್ಕು ಜನ ಖದೀಮ ಅಧಿಕಾರಿಗಳು ಕಳ್ಳತನ ಮಾಡಿದ್ದಾರೆ. ಆ ನಾಲ್ಕು ಜನ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದ್ದಾರೆ. ನಾವು ಆ ರಿಪೋರ್ಟ್ ತೆಗೆಸಿ ನೋಡಿ, ಕೇಳಿದಾಗ ಅಧಿಕಾರಿಗಳು ಏನು ಹೇಳುತ್ತಾರೆ ಅಂದರೆ, ಅವರಲ್ಲಿ ಮೂರು ಜನ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದಾರೆ, ಒಬ್ಬರಿಗೆ ಪ್ರಮೋಷನ್ ಕೊಟ್ಟು ಮುಂದಕ್ಕೆ ಕಳುಹಿಸಿದ್ದಾರೆ ನಾವು ಅವರ ಬಗ್ಗೆ ಐದಾರು ಸಭೆಗಳನ್ನು ನಡೆಸಿ ಅವರನ್ನು ಸಸ್ಪೆಂಡ್ ಮಾಡಿ ಎಂದು ಹೇಳಿದರೆ, ಅಧಿಕಾರಿಗಳು ಒಂದಲ್ಲ ಒಂದು ಕಾರಣ ಕೊಟ್ಟು, ನಮ್ಮ ಕೈಗಳಿಂದ ತಪ್ಪಿಸಿಕೊಳ್ಳುವಂಥ ಕೆಲಸವನ್ನು ಮಾಡುತ್ತಾರೆ. ಅಧ್ಯಕ್ಷರೆ, ತಾವು ನಮಗೆ ಕೊಟ್ಟಿರತಕ್ಕಂಥ ಅಧಿಕಾರದ ಅವಧಿ ಕೇವಲ ಒಂದು ವರ್ಷ ಮಾತ್ರ. ಮೇ ತಿಂಗಳು 15ನೇ ತಾರೀಖಿಗೆ ನಮ್ಮ ಅವಧಿ ಮುಗಿಯುತ್ತದೆ. ಆಮೇಲೆ ಅಧಿಕಾರಿಗಳು ನಮ್ಮ ಜುಟ್ಟು ನೀವು ಏನು ಮಾಡಿದಿರಿ ಎಂದು ಕೇಳುತ್ತಾರೆ. ಅಸೆಂಬ್ಲಿಯಲ್ಲಿ ಪ್ರಶ್ನೆ ಹಾಕಿ ನಮ್ಮ ಅಳಲನ್ನು ತಮ್ಮ ಹತ್ತಿರ ತೋಡಿಕೊಂಡಿದ್ದೇವೆ. ಕಿಯಾನಿಕ್ಸ್ ಕಂಪನಿ, ಮೈಸೂರು ಸಾಬೂನು ಕಾರ್ಖಾನೆ, ಮೈಸೂರು ಮಿನರಲ್ಸ್ ಮುಂತಾದ ಸಂಸ್ಥೆಗಳ ಎಲ್ಲ ದುರ್ ವ್ಯವಹಾರವನ್ನು ನಾವು ಬಯಲಿಗೆ ಎಳೆಯ ಬೇಕಾಗುತ್ತದೆ. ಅಧಿಕಾರಿಗಳು ಇವೊತ್ತು ಈ ಮಟ್ಟಕ್ಕೆ ಹೋಗಿದ್ದಾರೆ. ಅಧ್ಯಕ್ಷರೆ, ನಾವು ರಾಜಕಾರಣಿಗಳು ಇದ್ದೇವೆ, ಕೇವಲ 25 ರೂಪಾಯಿಗಳ ಒಂದು ಚೆಕ್ ಅನ್ನು ಒಬ್ಬ ಹೆಣ್ಣುಮಗಳ ಹತ್ತರ ತೆಗೆದುಕೊಂಡರು ಎಂದು ಹೇಳಿ, ರಾಜಕಾರಣದ ಗುರುತರವಾದಂಥ ಸುಳ್ಳು ಆಪಾದನೆಮಾಡಿ ಮಂತ್ರಿಗಿರಿ ಕಿತ್ತುಕೊಂಡು ಈ ಸದನದಿಂದ ಆಚೆಗೆ ಕಳುಹಿಸಿದರು. ಕೋಟ್ಯಾಂತರ ರೂಪಾಯಿಗಳನ್ನು ಹೊಡೆದಂಥ ಅಧಿಕಾರಿ ಇರಬಹುದು. ಸರ್ಕಾರ ಅಂದರೆ ಈ ಸರ್ಕಾರ ಎಂದು ಅಲ್ಲ. ಯಾವುದೇ ಒಂದು ಸರ್ಕಾರ ಐ.ಎ.ಎಸ್, ಐ.ಪಿ.ಎಸ್. ಅವರಿಗೆ ಜೋತುಬೀಳದೇ ಇರತಕ್ಕಂಥದ್ದನ್ನು ನಾವು ನೋಡಲಿಕ್ಕೆ ಆಗಲೇ ಇಲ್ಲ. ಅದು ಏನು ದುರಾದೃಷ್ಟವೋ ದೇವರಿಗೆ ಗೊತ್ತು. ಅವರ ಕೈಯಿಂದ ಬಿಡಿಸಿಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ. ಆದ್ದರಿಂದ, ಈ ಒಂದು ಸಾರ್ವಜನಿಕ ಉದ್ದಿಮೆಗಳ ಸಮಿತಿಗೆ ತಾವು ಬಲ ಕೊಡಬೇಕು. ಯಾವುದೇ ಕಮಿಟಿಯಲ್ಲಿ ಯಾರೇ ಸದಸ್ಯರಿರಲಿ, ಅದನ್ನು ಎರಡು ವರ್ಷ ಮಾಡಿ, ಆ ಒಂದು ಕಮಿಟಿಗೆ ಯಾರು ಉತ್ತರವನ್ನು ಸರಿಯಾಗಿ ಕೊಡುವುದಿಲ್ಲವೊ ಅಂಥ ಅಧಿಕಾರಿಗಳ ಮೇಲೆ, ಕಟ್ಟುನಿಟ್ಟಾದ ಕ್ರಮ ತೆಗೆದುಕೊಳ್ಳುವುದಕ್ಕೆ ತಾವು ಅವಕಾಶ ಮಾಡಬೇಕು ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಚ್ಛಿಸುತ್ತೇನೆ.

ಇನ್ನು ಬಹಳ ವರ್ಷಗಳಿಂದ ಬಾಕಿ ಇದ್ದಂಥ ಡಾ|| ಸರೋಜಿನಿ ಮಹಿಷಿ ಸಮಿತಿಯ ವರದಿಯನ್ನು ಜಾರಿಗೆ ತಂದರು. ನಮ್ಮ ವಾಟಾಳ್ ನಾಗರಾಜ್ ಅವರು ಯಾವಾಗಲೂ ಕನ್ನಡಿಗರು, ಕನ್ನಡಿಗರು ಎಂದು ಹೇಳುತ್ತಾ ಇರುತ್ತಾರೆ. ಆದರೆ ಡಾ || ಸರೋಜಿನಿ ಮಹಿಷಿ ಸಮಿತಿಯ ವರದಿಯನ್ನು ಜಾರಿಗೆ ತಂದಾಗ ಅವರು ಈ ಸರ್ಕಾರಕ್ಕೆ ಭೇಷ್ ಎಂದು ಹೇಳಲೇ ಇಲ್ಲ. ಇವೊತ್ತು ಕನ್ನಡಿಗರಿಗೆ, ಕನ್ನಡದ ಮಣ್ಣಿನ ಮಕ್ಕಳಿಗೆ ಉದ್ಯೋಗ ಸಿಕ್ಕಬೇಕು, ಕೇಂದ್ರ ಹಾಗೂ ರಾಜ್ಯದ ಉದ್ಯಮಗಳಲ್ಲಿ ಇವೊತ್ತು ಬಡ ರೈತರಿಗೆ ಮಕ್ಕಳಿಗೆ, ಗ್ರಾಮಾಂತರ ಪ್ರದೇಶದಲ್ಲಿರತಕ್ಕವರ ಮಕ್ಕಳಿಗೆ ಕೆಲಸ ಸಿಕ್ಕಬೇಕು ಎಂದು ಹೇಳಿದರು. ಈ ಒಂದು ವರದಿಯನ್ನು ಇತ್ತೀಚೆಗೆ ಜಾರಿಗೆ ತಂದು, ಈ ರಾಜ್ಯದ ಮಣ್ಣಿನ ಮಕ್ಕಳಿಗೆ ಒಂದು ಅವಕಾಶ ಮಾಡಿರತಕ್ಕಂಥಾದ್ದು ಎಲ್ಲರಿಗೂ ಸಹಿತ ಒಂದು ಸಂತೋಷವನ್ನು ಉಂಟು ಮಾಡತಕ್ಕಂಥ ವಿಚಾರವಾಗಿದೆ ಅಂದರೆ ತಪ್ಪಾಗಲಿಕ್ಕಿಲ್ಲ. ಇನ್ನು ವಿಜಯನಗರ ಸ್ಟೀಲ್‌ಪ್ಲ್ಯಾಂಟ್ ಬಗ್ಗೆ ಹೇಳುತ್ತೇನೆ.

ಮೊನ್ನೆ ಇದೇ ವಿಧಾನ ಸಭೆಯಲ್ಲಿ ಚರ್ಚೆ ನಡೆಯಿತು. ಯಾವುದೋ ಇಲಾಖೆಗೆ ಒಪ್ಪಿಸಿದ್ದೆವು. ಯಾವುದೋ ಇಲಾಖೆಗೆ ಕೊಟ್ಟುಬಿಟ್ಟಿದ್ದೀರಿ ಎಂದು ಹೇಳಿದರು. ವಿರೋಧ ಪಕ್ಷದವರು ಈ ರೀತಿ ಕೇಳತಕ್ಕಂಥಾದ್ದು ಸಹಜ. ಆದರೆ ಹತ್ತಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದಂಥ ಈ ಒಂದು ವಿಜಯನಗರ ಸ್ಟೀಲ್ ಪ್ಲ್ಯಾಂಟ್ ಸಾವಿರಾರು ಕಾರ್ಮಿಕರಿಗೆ, ಯುವಕರಿಗೆ ಕೆಲಸವನ್ನ ಕೊಡತಕ್ಕಂಥ ಒಂದು ಸ್ಟೀಲ್ ಪ್ಲ್ಯಾಂಟ್ ಇವೊತ್ತು ನಮ್ಮ ರಾಜ್ಯದ ಅದನ್ನು ಉಪಯೋಗಿಸಿಕೊಂಡು ನಮ್ಮ ರಾಜ್ಯಕ್ಕೆ ಒಳ್ಳೆಯ ಹೆಸರನ್ನು ತರತಕ್ಕಂಥ ಈ ಒಂದು ವಿಜಯನಗರ ಸ್ಟೀಲ್ ಪ್ಲ್ಯಾಂಟನ್ನು ಮಾಡಬೇಕೆಂದು ಶ್ರೀಮತಿ ಇಂದಿರಾಗಾಂಧಿಯವರು ಅಸ್ತಿಭಾರವನ್ನು ಹಾಕಿದರು. ಇವೊತ್ತು ಈ ಸರ್ಕಾರ ಬಂದಮೇಲೆ ಒಂದು ಜಂಟಿ ವಲಯದಲ್ಲಿ ಅದನ್ನು ಮಾಡತಕ್ಕಂಥ ವ್ಯವಸ್ಥೆ ಮಾಡಿರತಕ್ಕಂಥಾದ್ದು, ಎಲ್ಲರಿಗೂ ಸಹಿತ ಮೆಚ್ಚುಗೆಯನ್ನು ತರತಕ್ಕಂಥಾದ್ದು, ಮತ್ತು ಎಲ್ಲರೂ ಸಹಿತ ಹೊಗಳತಕ್ಕಂಥಾದ್ದು.

ನಡೆಯುವ ಕಾಲು ಎಡವುತ್ತದೆ ಅದು ಸಹಜ. ಸರ್ಕಾರ ತಪ್ಪು ಮಾಡದೇ ಇರುವುದಿಲ್ಲ. ಅಂಥ ತಪ್ಪುಗಳಾಗಿವೆ. ಆದರೆ ಈ ಸರ್ಕಾರ ಮಾಡಿರತಕ್ಕ ಒಳ್ಳೆಯ ಕೆಲಸಗಳನ್ನು ಯಾರೂ ಕೂಡ ಪ್ರಶಂಸೆ ಮಾಡಲಿಲ್ಲ. ಡೋಲ್ ಬಾರಿಸತಕ್ಕ ಮುಖ್ಯ ಮಂತ್ರಿಗಳು ಎನ್ನತಕ್ಕ ಮಾತನ್ನು ಹೇಳಿದರು. ಅದಕ್ಕೆ ನಾನು ಹೇಳಬೇಕಾಗುತ್ತದೆ, ಯಾರು 60 ಸಾವಿರ ಜನ ರೈತರು ಕರೆಂಟ್ ಇಲ್ಲದವರು ಕರೆಂಟ್ ಹಾಕಿಸಿಕೊಂಡರು ಅವರು ಡೋಲ್ ಬಾರಿಸಿದವರು. ಯಾರು 9 ಸಾವಿರ ಜನ ಕಾಂಟ್ರ್ಯಾಕ್ಟ್ ಉಪಾಧ್ಯಾಯರು ಕೆಲಸ ಖಾಯಂ ಇಲ್ಲದೆ ಒದ್ದಾಡುತ್ತಿದರೋ ಅವರು ಡೋಲ್ ಬಾರಿಸಿದರು. ಶಿಕ್ಷಕರ ತರಬೇತಿಯನ್ನು ಮಾಡಿಕೊಂಡು ಬಾಯಿ ಬಡಿದುಕೊಂಡು ಕುಳಿತಿದ್ದವರ ಮನೆಗೆ ಬಾಗಿಲಿಗೆ ಕೆಲಸದ ಆರ್ಡರ್ ಹೋಯಿತಲ್ಲ ಅವರ ಡೋಲ್ ಬಾರಿಸಿದರು. ಅವರ ಡೋಲ್ ಬಾರಿಸುವಾಗ ಮಾನ್ಯ ಮುಖ್ಯ ಮಂತ್ರಿಗಳು ಆ ಭಾಗಕ್ಕೆ ಹೋದಾಗ, ಬನ್ನಿ ಮುಖ್ಯ ಮಂತ್ರಿಗಳೇ ನೀವೂ ನಮ್ಮ ಜೊತೆ ಡೋಲ್ ಬಾರಿಸಿ, ನೀವು ಡೋಲ್ ಬಾರಿಸತಕ್ಕ ಕೆಲಸವನ್ನು ಮಾಡಿದ್ದೀರಿ ಎಂದು ಡೋಲ್‌ನ್ನು ಬಾರಿಸಿದರು. ಪ್ರತಿಮಾಬೇಡಿಯನ್ನು ಕರೆದುಕೊಂಡು ಬಂದು ಡ್ಯಾನ್ಸ್ ಮಾಡಿಸಲಿಲ್ಲ ಎನ್ನತಕ್ಕ ಮಾತನ್ನು ನಾವು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಆದ್ದರಿಂದ ಈ ಸರ್ಕಾರ ಮಾಡಿರತಕ್ಕ ಒಳ್ಳೆಯ ಕೆಲಸವನ್ನು ದಯವಿಟ್ಟು ಹೇಳಿ ತಪ್ಪಾಗಿದ್ದರೆ ತಿದ್ದತಕ್ಕ ಕೆಲಸವನ್ನು ಮಾಡಬೇಕೆಂದು ನಾನು ಹೇಳಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ, ತಾವು ಟೈಂ ನೋಡುತ್ತಲೇ ಇದ್ದೀರಿ...

ಅಧ್ಯಕ್ಷರು : ನಾನು ನಿಮ್ಮ ಮುಖವನ್ನು ನೋಡುತ್ತಿದ್ದೇನೆ. ಇದು ಏನಾಗಿದೆ ಎಂದರೆ ಆ ಗಡಿಯಾರ ಮತ್ತು ನಿಮ್ಮ ಮುಖ ಎರಡೂ ಕೂಡ ಒಂದೇ ಕಡೆ ಇದೆ...

ಶ್ರೀ ಎಲ್.ಆರ್. ಶಿವರಾಮೇಗೌಡ : ಮಾನ್ಯ ಅಧ್ಯಕ್ಷರೆ, ಕಳೆದ 4 ವರ್ಷಗಳಲ್ಲಿ ಮಾಡದೇ ಇರತಕ್ಕ ಕೆಲಸವನ್ನು ಈ ಸರ್ಕಾರ ಕೇವಲ 4 ತಿಂಗಳಲ್ಲಿ ಮಾಡಿದೆ. ತಾವೂ ಕೂಡ ಆದೇಶವನ್ನು ಕೊಡಬೇಕು. ಇವತ್ತು ಗ್ರಾಮಾಂತರ ಪ್ರದೇಶದಲ್ಲಿ ಬಹಳಷ್ಟು ಅಸ್ತವ್ಯಸ್ತವಾಗಿದೆ. ಜಿಲ್ಲಾ ಪರಿಷತ್ತು ಉಳಿಯಬೇಕೆ, ಮಂಡಲ ಪಂಚಾಯಿತಿ ಇರಬೇಕೆ, ಹೋಗಬೇಕೆ ಎನ್ನತಕ್ಕ ವಿಚಾರದಲ್ಲಿ ಗೊಂದಲ ಇದೆ. ನಾನು ತಮ್ಮ ಮುಖಾಂತರ ಸರ್ಕಾರದಲ್ಲಿ ವಿನಂತಿ ಮಾಡಕೊಳ್ಳುತ್ತೇನೆ. ಇವತ್ತು ನಾವೇನಾದರೂ ಹಳ್ಳಿಗಳಿಗೆ ಹೋಗಬೇಕಾದರೆ ಮೊದಲು ಜಿಲ್ಲಾ ಪರಿಷತ್ತು ಮತ್ತ ಮಂಡಲ ಪಂಚಾಯಿತಿಗಳನ್ನು ರದ್ದು ಮಾಡಬೇಕು. ಇಡೀ ರಾಜ್ಯದ ನೂರಾರು ಕೋಟಿ ರೂಪಾಯಿ ಹಣ ಇವತ್ತು ಮಂಡಲಪಂಚಾಯಿತಿಯ ಸದಸ್ಯರ ಜೇಬಿಗೆ ಹೋಗತಕ್ಕದ್ದು ಇನ್ನೂ ಕೂಡ ತಪ್ಪಿಲ್ಲ. ಜವಾಹರ್ ರೋಜ್‌ಗಾರ್ ಯೋಜನೆಯ ಹಣವನ್ನು ಕಿತ್ತು

ಸ್ಕೋರ್ಷಿಟಿಗೆ ಕೊಟ್ಟಿರಿ ಎಂದು ನಮ್ಮ ನಾಯಕರು ಹೇಳುತ್ತಿದ್ದರು. ನಿಜ. ಮಂಡಲ ಪಂಚಾಯಿತ್ ಸದಸ್ಯರು ಕಂಟ್ರ್ಯಾಕ್ಟ್ ಕೆಲಸವನ್ನು ಮಾಡಕೂಡದೆಂದು ಕಾನೂನು ಇದೆ. ಇವತ್ತು ರಾಜ್ಯಗಳಲ್ಲಿ ಬಹುಶಃ ನೂರಕ್ಕೆ 90 ಜನ ಕಂಟ್ರ್ಯಾಕ್ಟರ್‌ಗಳು ಜವಾಹರ್ ರೋಜ್‌ಗಾರ್ ಯೋಜನೆಯಲ್ಲಿ ಕೆಲಸಮಾಡುತ್ತಿರುವವರು ಮಂಡಲ ಪಂಚಾಯಿತಿ ಸದಸ್ಯರೇ ಹೊರತು ಬೇರೆ ಯಾರೂ ಅಲ್ಲ. ಮಂಡಲ ಪಂಚಾಯಿತ್‌ಗೆ ಸಂಬಂಧಪಟ್ಟಂತೆ ಯಾರು ಆ ಪ್ರಧಾನರಿಗೆ ಓಟು ಕೊಟ್ಟಿದ್ದಾರೊ ಯಾರು ಪ್ರಧಾನರ ಪರವಾಗಿದ್ದಾರೆ ಯಾರು ಪ್ರಧಾನರ ಬ್ಯಾಗನ್ನು ಹಿಡಿದುಕೊಂಡು ಅವರ ಹಿಂದೆ ತಿರುಗುತ್ತಿದ್ದಾರೆ ಅವರ ಜೇಬಿಗೆ ಮಂಡಲ ಪಂಚಾಯಿತಿಯಿಂದ ಹಣ ನೇರವಾಗಿ ಹೋಗುತ್ತಿದೆಯೇ ಹೊರತು ಬೇರೆಯವರಿಗೆ ಹೋಗುತ್ತಿಲ್ಲವೆಂದು ನಾನು ನೇರವಾಗಿ ಹೇಳಬೇಕಾಗುತ್ತದೆ. ಆದ್ದರಿಂದ ಇದರ ಬಗ್ಗೆ ವಿಳಂಬವನ್ನು ಮಾಡದೆ ಶೀಘ್ರವಾಗಿ ಜಿಲ್ಲಾ ಪರಿಷತ್ತು ಮತ್ತು ಮಂಡಲಪಂಚಾಯಿತಿಗಳನ್ನು ವಜಾ ಮಾಡತಕ್ಕ ತೀವ್ರತರವಾದ ಕ್ರಮವನ್ನು ಸರ್ಕಾರ ಕೈಗೊಳ್ಳಬೇಕೆಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಕೈಗಾರಿಕೆ ವ್ಯವಸ್ಥೆಯ ಬಗ್ಗೆ ಹೇಳುವುದಾದರೆ ಇಡೀ ರಾಜ್ಯದಲ್ಲಿ ಯಾವುದೇ ಜಿಲ್ಲೆಗೆ ನಾವು ಹೋಗಿ ನೋಡಿದರೂ ಕೂಡ ಕೈಗಾರಿಕೆಗಳ ವ್ಯವಸ್ಥೆ, ಕೈಗಾರಿಕಾ ಅಭಿವೃದ್ಧಿ ಕ್ಷೇತ್ರ ಸಂಪೂರ್ಣವಾಗಿ ಕುಂಠಿತವಾಗಿದೆ. ಇವತ್ತು ಎಲ್ಲ ಜಿಲ್ಲಾ ಮತ್ತು ತಾಲೂಕು ಕೇಂದ್ರಗಳಲ್ಲಿ ತಾವು ನೋಡಿರಬಹುದು. ಅಲ್ಲಿ ನಿರ್ಮಾಣ ಮಾಡಿರತಕ್ಕ ಷೆಡ್ಡುಗಳೆಲ್ಲಾ ಒಣಗಿ ನಿಂತಿದೆ. ಯಾವ ಷೆಡ್‌ಗಳಲ್ಲೂ ಕೈಗಾರಿಕೆ ಇಲ್ಲ. ಈ ಕೈಗಾರಿಕೆಯ ಬಗ್ಗೆ ಹೊಸ ನೀತಿಯನ್ನು ಏನು ಮಾಡಿದ್ದೀರಿ. ಆ ನೀತಿಯಿಂದಲೇ ಪ್ರಯೋಜನವಾಗುವುದಿಲ್ಲ. ಇವತ್ತೂ ಕೂಡ ಸರ್ಕಾರದವರು ಕೊಡಬೇಕಾಗಿರತಕ್ಕ ಸಬ್ಸಿಡಿಯನ್ನು ಬೇರೆ ರೂಪದಲ್ಲಿ ಕೊಡಬೇಕು. ನೀವು ಸಬ್ಸಿಡಿಯನ್ನು ಏಕೆ ಕೊಡುತ್ತೀರಿ ಎಂದು ಕಳೆದ ಅಧಿವೇಶನದಲ್ಲಿ ಬಹಳ ಒತ್ತಾಯ ಮಾಡಿದೆವು. ನೀವು ಸಬ್ಸಿಡಿಯನ್ನು ಕೊಡುತ್ತೇವೆಂದು ಹೇಳಿದ್ದರಿಂದ ಇವತ್ತು ಹಳ್ಳಿಯಿಂದ ರೈತ ಬಂದು ಒಂದು ಫ್ಯಾಕ್ಟರಿಯನ್ನು ಹಾಕಿದರೆ ಅವನ ಜುಟ್ಟು, ಜನಿವಾರ ಏನೂ ಕೂಡ ಇಲ್ಲದ ರೀತಿಯಲ್ಲಿ ಅವನನ್ನು ಹರಾಜು ಹಾಕತಕ್ಕ ಪರಿಸ್ಥಿತಿ ಬಂದಿದೆ. ಸಬ್ಸಿಡಿ ಕೊಡುವುದಕ್ಕಿಂತ ಅದೇ ಸಹಾಯ ಧನವನ್ನು ಬೇರೆ ರೂಪದಲ್ಲಿ ಅಂದರೆ ಜಮೀನನ್ನು ಅರ್ಧ ಜಮೀನನ್ನು ಅರ್ಧ ಬೆಲೆಯಲ್ಲಿ ಕೊಡುವುದರಲ್ಲೋ, ನೀರನ್ನು ಕೊಡುವುದರಲ್ಲೋ, ವಿದ್ಯುತ್‌ನ್ನು ಕೊಡುವುದರಲ್ಲೂ ಕೊಟ್ಟು ಕೈಗಾರಿಕೆಗಳನ್ನು ಬೆಳೆಸಬೇಕು.

1990 ನೇ ಇಸವಿಯಿಂದ ಸುಮಾರು 90 ಕೋಟಿ ರೂಪಾಯಿಗಳನ್ನು ಸರ್ಕಾರದವರು ಸಬ್ಸಿಡಿ ಹಣವನ್ನು ಕೊಡಬೇಕಾಗಿದೆ. ಈ ರಾಜ್ಯದ ಕೈಗಾರಿಕೋದ್ಯಮಿಗಳಿಗೆ ಅದರಲ್ಲೂ ಕೇವಲ ದೊಡ್ಡವರಿಗೆ ಯಾರಿಗೂ ಇಲ್ಲ.. ಬೆಂಗಳೂರು ನಗರದಲ್ಲಿ, ಮೈಸೂರು ನಗರದಲ್ಲಿರತಕ್ಕ ಕೈಗಾರಿಕೋದ್ಯಮಿಗಳಿಗೆ ಈ ಹಣವನ್ನು ಕೊಡಬೇಕಾಗಿಲ್ಲ. ಗ್ರಾಮಾಂತರ ಪ್ರದೇಶದಲ್ಲಿರತಕ್ಕ ರೈತಾಪಿ ಜನರಿಗೆ ಯಾರು ಹಳ್ಳಿಗಳಿಂದ ಬಂದು ಕೈಗಾರಿಕೆಗಳನ್ನು ಮಾಡಿದ್ದಾರೆ ಅವರಿಗೆ 90 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿದೆ. ಆ 90 ಕೋಟಿ ಹಣವನ್ನು ಕೆ.ಎಸ್.ಎಫ್.ಸಿ.ನಿಂದ ಅಥವಾ ಬೇರೆ ಯಾವುದಾದರೂ ಬ್ಯಾಂಕ್‌ನಿಂದ ಸಾಲವನ್ನು ತಂದಿದ್ದರೆ ಅವರ ಬಡ್ಡಿಯನ್ನೇನೂ ಬಿಟ್ಟಿಲ್ಲ. ಬಡ್ಡಿಯನ್ನು ಚಕ್ರಬಡ್ಡಿಯನ್ನೂ ಸಹಿತ ವಸೂಲು ಮಾಡಿಕೊಂಡಿದ್ದಾರೆ. ಆದರೆ ಸರ್ಕಾರದಿಂದ ಏನು ಸಹಾಯಧನ ಕೊಡಬೇಕಾಗಿತ್ತೋ ಅದಕ್ಕೆ ಬಡ್ಡಿಯೂ ಇಲ್ಲ, ಹಣವನ್ನೂ ಕೂಡ ಕೊಡದೇ ಇರತಕ್ಕ ದುರವಸ್ಥೆ ಇವತ್ತು ಸರ್ಕಾರದಲ್ಲಿದೆ. ಆದ್ದರಿಂದ ದಯವಿಟ್ಟು ಈ ಸಬ್ಸಿಡಿ ಹಣವನ್ನು ಕೊಡತಕ್ಕ ವ್ಯವಸ್ಥೆಯನ್ನು ಬದಲಾವಣೆ ಮಾಡಿ ಮೊದಲು ಎಷ್ಟು ಸಬ್ಸಿಡಿ ಕೊಡಬೇಕೊ ಆ ಸಬ್ಸಿಡಿ ಹಣವನ್ನು ಎಲ್ಲ ಗ್ರಾಮೀಣ ಪ್ರದೇಶದ ಕೈಗಾರಿಕೆಗಳಿಗೆ ಬಿಡುಗಡೆ ಮಾಡಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರದಲ್ಲಿ

ವಿನಂತಿಮಾಡಿಕೊಳ್ಳುತ್ತೇನೆ. ಇವತ್ತು ಮುನಿಸಿಪಾಲಿಟಿಗಳಲ್ಲಿ ಪೊರಕೆ ತೆಗೆದುಕೊಳ್ಳಲು ಸಹಿತ ಹಣವಿಲ್ಲ. ಯಾವುದೋ ಒಂದು ಮುನಿಸಿಪಾಲಿಟಿಯಲ್ಲಿ ಇಂಟ್ರೀಮ್ ಮಂಡಲ ಎಂದು ಮಾಡಿದರು. ಅವಕ್ಕೆ ಯಾರು ಹೇಳುವವರು ಇಲ್ಲ, ಕೇಳುವವರು ಇಲ್ಲ. ಜಿಲ್ಲಾಪರಿಷತ್‌ನಲ್ಲಿ ಅದಕ್ಕೆ ಹಣವಿಲ್ಲ. ಉದಾಹರಣೆಗೆ ತಮಗೆ ಚೆನ್ನಾಗಿ ಗೊತ್ತಿದೆ. ನಾಗಮಂಗಲ-ಬೆಳ್ಳೂರು ಎರಡು ಸಹಿತ ಮುಂಚೆ ಮುನಿಸಿಪಾಲಿಟಿಗಳಾಗಿದ್ದವು. ಮಾನ್ಯ ಅಧ್ಯಕ್ಷರೇ, ಬೆಳ್ಳೂರು ನಾಗಮಂಗಲದ ವಿಚಾರ ಹೇಳುತ್ತಿದ್ದೇನೆ. ಏತಕ್ಕೆಂದರೆ ತಮಗೆ ಬಹಳ ಹತ್ತಿರವಾಗಿ ಗೊತ್ತಿರತಕ್ಕಂಥ ವಿಚಾರ. ಬೆಳ್ಳೂರು ನಾಗಮಂಗಲ ಎರಡೂ ಸಹಿತ ಈಗ ಇಂಟ್ರೀಮ್ ಮಂಡಲಗಳಾಗಿವೆ. ಇವತ್ತು ಬೆಳಿಗ್ಗೆ ಎದ್ದರೆ ಒಬ್ಬ ಹೆಣ್ಣುಮಗಳು, ಇಷ್ಟುದ್ದ ಗುಂಡಿ ಒಳಗೆ ಇಳಿದು ನೀರನ್ನು ತೆಗೆದುಕೊಳ್ಳಬೇಕು. ಜಿಲ್ಲಾಪರಿಷತ್‌ನವರನ್ನು ಕೇಳಿದರೆ, ಹೇಳುತ್ತಾರೆ ನಮಗೆ ಏಕ್‌ದಂ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ ಸಾಧ್ಯವಾದರೆ ಅಲ್ಲಿ ಬೋರ್‌ವೆಲ್‌ಗಳನ್ನು ಹಾಕಿಕೊಡುತ್ತೇವೆ ಎನ್ನುತ್ತಾರೆ.. 18 ಸಾವಿರ ಜನಸಂಖ್ಯೆ ಇರತಕ್ಕಂಥ ನಾಗಮಂಗಲ ಟೌನ್‌ಗೆ ಎರಡೋ-ಮೂರೋ ಬೋರ್‌ವೆಲ್‌ಗಳನ್ನು ಹಾಕಿಸಿದರೆ ಪ್ರಯೋಜನವಾಗುವುದಿಲ್ಲ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರನ್ನು ಕೇಳಿದರೆ ಆಮ್ಲಜನಕವನ್ನು ಕೊಡುವಹಾಗೆ ನಾನು ಬರೀ ಆಮ್ಲಜನಕ ಕೊಡುತ್ತೇನೆಯೇ ಹೊರತು ಪರ್ಮನೆಂಟ್ ಸೋರ್ಸ್ ಮಾಡಲಿಕ್ಕೆ ಆಗುವುದಿಲ್ಲವೆಂದು ಹೇಳುತ್ತಾರೆ. ರಾಜ್ಯಸರ್ಕಾರವನ್ನು ಕೇಳಿದರೆ ಅದು ಮುನಸಿಪಾಲಿಟಿ ಅಲ್ಲ ಇಂಟರೀಮ್ ಮಂಡಲಿ ಎಂದು ಹೇಳುತ್ತಾರೆ. ಈ ಒಂದು ಅವ್ಯವಸ್ಥೆಯನ್ನು ತಾವು ದಯವಿಟ್ಟು ಸರ್ಕಾರದವರು ಮನಗಂಡು ಈಗಾಗಲೇ ಅದನ್ನು ಮುನಸಿಪಾಲಿಟಿ ಮಾಡುತ್ತಾರೆನ್ನುವ ಮಾತನ್ನು ಮಾನ್ಯ ಬಸವಲಿಂಗಪ್ಪನವರು ಹೇಳಿದ್ದಾರೆ. ಅದನ್ನು ಶೀಘ್ರವಾಗಿ ಮಾಡಿ ಇಂಟರೀಂ ಮಂಡಲಿ ಏನು ಕುಡಿಯುವ ನೀರು ಮತ್ತು ಚರಂಡಿ ವ್ಯವಸ್ಥೆಯಲ್ಲಿ ದುಸ್ಥಿತಿಗೆ ಇಳಿದಿದೆ ಅದನ್ನು ಸರಿಪಡಿಸುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕೆಂದು ಹೇಳಿ ನನಗೂ ಸಹಿತ ಇಷ್ಟು ಹೊತ್ತು ರಾಜ್ಯಪಾಲರ ಭಾಷಣದಮೇಲೆ ಮಾತನಾಡಲಿಕ್ಕೆ ಅವಕಾಶವನ್ನು ಕೊಟ್ಟಿದ್ದಕ್ಕೆ ತಮಗೆ ವಂದಿಸಿ ಮಾನ್ಯ ರಾಜ್ಯಪಾಲರ ಭಾಷಣವನ್ನು ಬೆಂಬಲಿಸಿ. ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ. ಜೈಹಿಂದ್

ಅಧ್ಯಕ್ಷರು : ಈಗ ಸದನ ಮುಂದುವರಿದ ನಾಳೆ ಬೆಳಿಗ್ಗೆ ೧೧೦೦ ಗಂಟೆಗೆ ಮತ್ತೆ ಸಮಾವೇಶವಾಗುತ್ತದೆ.

(ಸದನವು 6ಗಂಟೆ 20 ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ 13-3-1991ರ ಬುಧವಾರ ಬೆಳಿಗ್ಗೆ 11-00 ಗಂಟೆಗೆ ಸೇರಲು ನಿಶ್ಚಯಿಸಿತು.)

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣೆ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ).